# ನಿರಂಜನರ ಕಾದಂಬರಿಗಳಲ್ಲಿ ಚರಿತ್ರೆಯ ಪರಿಕಲ್ಪನೆ

(ಮೃತ್ಯುಂಜಯ, ಚಿರಸ್ಮರಣೆ ಕಾದಂಬರಿಗಳನ್ನು ಅನುಲಕ್ಷಿಸಿ)

# EXPLORATION OF THE IMPLICATION OF HISTORY IN THE SELECTED NOVELS OF NIRANJANA


**ಪ್ರಧಾನ ಸಂಶೋಧಕರು**

**ಡಾ. ರಾಜಶೇಖರ**

ಸಹಾಯಕ ಕನ್ನಡ ಪ್ರಾಧ್ಯಾಪಕರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜು

ಉಜಿರೆ–574240



ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ

ನವದೆಹಲಿ

ಇವರ ನೆರವಿನಿಂದ ಸಲ್ಲಿಸಲಾದ ಕಿರು ಸಂಶೋಧನ ಪ್ರಬಂಧ

2015

# ಘೋಷಣಾ ಪತ್ರ

ಡಾ. ರಾಜಶೇಖರ ಎನ್ನುವ ನಾನು, **March 2013,** ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ನೆರವಿನಿಂದ ಪತ್ರ ಸಂಖ್ಯೆ **MRP (H)- 0189/12-13/KAMA009/UGC-SWRO** dated **29 ಅನ್ವಯ ನಿರಂಜನರ ಕಾದಂಬರಿಗಳಲ್ಲಿ ಚರಿತ್ರೆಯ ಪರಿಕಲ್ಪನೆ** (ಮೃತ್ಯುಂಜಯ, ಚಿರಸ್ಮರಣೆ ಕಾದಂಬರಿಗಳನ್ನು ಅನುಲಕ್ಷಿಸಿ) **EXPLORATION OF THE IMPLICATION OF HISTORY IN THE SELECTED NOVELS OF NIRANJANA** ಎಂಬ ವಿಷಯದ ಮೇಲೆ ಕಿರು ಸಂಶೋಧನ ಅಧ್ಯಯನ (**MRP)** ವನ್ನು ಕೈಗೊಂಡಿದ್ದೇನೆ. ಈ ಸಂಶೋಧನ ಅಧ್ಯಯನಕ್ಕೆ ಬಳಿಸಿದ ಆಕರ ಪರಿಕರಗಳು ನಿರ್ದಿಷ್ಟ ಮೂಲದಿಂದ ಸಂಗ್ರಹಿಸಿದ್ದು, ಇಲ್ಲಿ ಬಳಕೆಯಾದ ಬರಹ, ಅಭಿಪ್ರಾಯಗಳು ನನ್ನ ವೈಯಕ್ತಿಕ ಅಧ್ಯಯನದ ಫಲವಾಗಿದ್ದು, ಯವುದೇ ಗ್ರಂಥ ಅಥವಾ ಪತ್ರಿಕೆಯಲ್ಲಿ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ;

**ಡಾ. ರಾಜಶೇಖರ**

**ಪ್ರಧಾನ ಸಂಶೋಧಕರು**

## ಕೃತಜ್ಞತೆಗಳು

ಈ ಸಂಶೋಧನೆಯನ್ನು ಕೈಗೊಳ್ಳಲು ಅವಕಾಶ ಕಲ್ಪಿಸಿದ, ನನ್ನ ಗುರು ಸಮಾನರಾದ ಮಾನ್ಯ ಪ್ರಾಚಾರ್ಯ ಡಾ. ಬಿ. ಯಶೋವರ್ಮ ಅವರಿಗೆ ಎಂದುಗೂ ಋಣಿಯಾಗಿದ್ದೇನೆ. ಅವರ ದೂರದೃಷ್ಟಿ ಚಿಂತನೆ, ಸಂಶೋಧನೆಯ ಒಳನೋಟಗಳು, ಚರ್ಚೆಗಳು ನನ್ನ ಬರವಣಿಗೆಯ ಮೇಲೆ ಪ್ರಭಾವ ಬೀರಿವೆ.

ಕನ್ನಡ ವಿಭಾಗ ನನ್ನ ತಾಯಿ. ನನ್ನನ್ನು ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಿದೆ. ಮುಖ್ಯಸ್ಥರಾದ ಡಾ. ಬಿ. ಪಿ. ಸಂಪತ್ ಕುಮಾರ್ ಅವರು ನನ್ನೆಲ್ಲ ಸಾಧನೆಯ ಹಿಂದೆ ಇದ್ದಾರೆ. ಸದಾ ಬೆನ್ನು ತಟ್ಟಿ, ಪ್ರತಿ ಹಂತದಲ್ಲೂ ತಿದ್ದಿ ತೀಡಿ ಪ್ರೋತ್ಸಾಹಿಸಿ ಬದುಕಿನ ಉತ್ಸಾಹ ಕಳೆದುಕೊಳ್ಳದಂತೆ ನಿಗಾ ವಹಿಸುತ್ತಾರೆ. ಹಿರಿಯ ಶ್ರೇಣಿ ಪ್ರಾಧ್ಯಾಪಕರಾದ ಡಾ. ಕೆ.ವಿ. ನಾಗರಾಜಪ್ಪನವರು ಸ್ವಂತ ಮಗನಂತೆ ನೋಡಿಕೊಂಡಿದ್ದಾರೆ. 'ನೀನಿನ್ನು ಎತ್ತರಕ್ಕೆ ಬೆಳಿಬೇಕು ಮಾರಾಯ' ಎಂದು ಹೇಳುತ್ತಿರುತ್ತಾರೆ. ಪ್ರಾಧ್ಯಾಪಕರಾದ ಶ್ರೀಮತಿ ಬೋಜಮ್ಮ ಅವರು ಸೋದರನಂತೆ ಕಾಣುತ್ತಾರೆ. 'ಎಲ್ಲಾ ಇರಲಿ, ನೀನಿಷ್ಟು ಹೆಂಡತಿಯನ್ನು, ಮಕ್ಕಳನ್ನು ಸರಿಯಗಿ ನೋಡಿಕಪ್ಪ. ಅಂತ ಹೆಂಡತಿಯನ್ನು ಪಡೆಯಲು ಪುಣ್ಯ ಮಾಡಿದ್ದೀಯ' ಎಂದು ಸಂಸಾರದ ಬಗ್ಗೆ ಎಚ್ಚರಿಸುತ್ತಾರೆ. ನನ್ನ ಮೇಲೆ ಪ್ರೀತಿಯ ಅಭಿಮಾನವನ್ನು ಹೊಂದಿದ್ದಾರೆ. ಗೆಳೆಯ ಡಾ. ಕೆ. ದಿವಾಕರ ಅವರ ಶ್ರದ್ಧೆ, ಶಿಸ್ತು ನನಗೊಂದು ಎಂದಿಗೂ ಮಾದರಿಯೆ. ನನ್ನೆಲ್ಲ ಮರಗುಳಿತನವನ್ನು ಸಹಿಸಿಕೊಂಡು ನನ್ನ ಆಗು ಹೋಗುಗಳಲ್ಲಿ ಇದ್ದಾನೆ. ಇವರೆಲ್ಲರು ನನ್ನ ಬದುಕನ್ನು ಹೂವಿನಂತೆ ಮಾಡಿದ್ದಾರೆ. ಇವರ ವಿಶ್ವಾಸ, ನಂಬಿಕೆಗೆ ಶಿರ ಬಾಗಿ ನಮಿಸುವೆ.

ಹಾಮನಾ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಎಸ್. ಡಿ. ಶೆಟ್ಟಿ ಅವರ ವಿದ್ವತ್ತು ನನ್ನನ್ನು ಪ್ರಭಾವಿಸಿದೆ. ಅವರೊಂದಿಗೆ ನಡೆಸಿದ ಚರ್ಚೆಗಳು ನನ್ನ ಸಂಶೋಧನೆಗೆ ಸಹಾಯಕವಾಗಿವೆ. ಅವರಿಗೆ ವಂದನೆಗಳು

ಆತ್ಮೀಯ ಸಂಗಾತಿಗಳಾದ ಡಾ. ಮಿಥುನ್ ಚಕ್ರವರ್ತಿ, ಪ್ರೊ. ಕೇಶವಹೆಗ್ಡೆ ಕೊರ್ಸೆ ಅವರ ಒಡನಾಟ, ಚರ್ಚೆ ನನ್ನ ಬರವಣಿಗೆಗೆ ಹೊಸ ದಿಕ್ಕು ಸೂಚಿಸಿದೆ. ಅವರ ನಿರ್ಮಲ ಪ್ರೀತಿಗೆ ಹೃದಯಪೂರ್ವಕ ನಮನ.

ಕಾಲೇಜಿನ ಗ್ರಂಥಾಲಯ ನನಗೊಂದು ವರದಾನ. ನನ್ನ ಅಧ್ಯಯನಕ್ಕೆ ಬೇಕಾದ ಎಲ್ಲಾ ಗ್ರಂಥಗಳನ್ನು ಅಲ್ಲಿಯ ಸಿಬ್ಬಂದಿಯವರು ಒದಗಿಸಿಕೊಟ್ಟಿದ್ದಾರೆ. ನನ್ನ ಕೈಹಿಡಿದು ನಡೆಸುತ್ತಿರುವ ಗ್ರಂಥಾಲಯಕ್ಕೆ ಕೈ ಮುಗಿವೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಹಣಕಾಸು ನೆರವು ನೀಡಿ, ಅಧ್ಯಯನಕ್ಕೆ ಅವಕಾಶ ಒದಗಿಸಿದೆ. ಆಯೋಗಕ್ಕೆ ಕೃತಜ್ಞತೆಗಳು.

ಡಾ.ರಾಜಶೇಖರ

ಸಂಶೋಧಕ

# ಪರಿವಿಡಿ

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಎರಡು : ಪ್ರಗತಿಶೀಲ ಸಾಹಿತ್ಯ ಮತ್ತು ನಿರಂಜನರು

ಅಧ್ಯಾಯ ಮೂರು : ಸಾಹಿತ್ಯ ಮತ್ತು ಚರಿತ್ರೆಯ ಅಂತರ್ ಸಂಬಂಧ

ಅಧ್ಯಾಯ ನಾಲ್ಕು : ಮೃತ್ಯುಂಜಯ ಕಾದಂಬರಿಯಲ್ಲಿ ಚರಿತ್ರೆಯ ಪರಿಕಲ್ಪನೆ

ಅಧ್ಯಾಯ ಐದು : ಚಿರಸ್ಮರಣೆ ಕಾದಂಬರಿಯಲ್ಲಿ ಚರಿತ್ರೆಯ ಪರಿಕಲ್ಪನೆ

ಅಧ್ಯಾಯ ಆರು : ಸಮಾರೋಪ

# ಅಧ್ಯಾಯ ಒಂದು : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಇಂದು ಮನುಷ್ಯನ ಆಲೋಚನ ಮಾದರಿಗಳು ಬಹಳ ಸೂಕ್ಷ್ಮಾತಿಸೂಕ್ಷ್ಮವಾಗಿ ಬೆಳೆದಿವೆ. ಮನುಷ್ಯನ ಎಲ್ಲಾ ಕ್ರಿಯಾ ಚಟುವಟಿಕೆಯನ್ನು ಸೀಳಿ ಸೀಳಿ ಅಧ್ಯಯನಕ್ಕೆ ಒಳಪಡಿಸಲಾಗುತ್ತಿದೆ. ಈ ಶೋಧನೆಗೆ, ಹುಡುಕಾಟಕ್ಕೆ ಪ್ರಕೃತಿಯು ಹೊರತಾಗಿಲ್ಲ. ಮನುಷ್ಯನು ಪ್ರಕೃತಿಯ ಅಂಗವಾಗಿದ್ದರು ಆತನಿಗಿರುವ ಬುದ್ಧಿಶಕ್ತಿಯಿಂದ ಭಿನ್ನವಾಗುತ್ತಾನೆ. ಪ್ರಕೃತಿಯ ಭಾವಾಗಿದ್ದೇ ಪ್ರಕೃತಿಯನ್ನು ಶೋಧಿಸಿ, ಅದರಂತೆ ಪರ್ಯಾಯ ರೂಪಿಸುವ ಮಟ್ಟ ಅವನದಾಗಿದೆ. ಮನುಷ್ಯ ವಿಕಾಸಗೊಂಡಂತೆಲ್ಲ ಅವನ ಜ್ಞಾನವು ವಿಕಾಸಗೊಂಡಿದೆ. ತನ್ನ ಜ್ಞಾನವನ್ನು ವಿಸ್ತರಿಸಿ ಮಂಡಿಸುವಾಗ, ಜ್ಞಾನವನ್ನು ಅಧ್ಯಯನದ ಅನುಕೂಲಕ್ಕೆ ವಿವಿಧ ಶಾಖೆಗಳನ್ನಾಗಿ ಒಡೆದಿದ್ದಾನೆ. ಮಾನವಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ರಾಜ್ಯಶಾಸ್ತ್ರ, ವಿಜ್ಞಾನ, ಸಾಹಿತ್ಯ, ಕ್ರೀಡೆ, ಕಲೆ, ಧರ್ಮ, ಭಾಷೆ, ಸಮೂಹ ಮಾಧ್ಯಮಗಳು ಮುಂತಾಗಿ ಜ್ಞಾನಶಾಖೆಗಳು ಬೆಳೆದಿವೆ. ಪ್ರತಿಯಂದು ಜ್ಞಾನಶಾಖೆಯು ಅಧ್ಯಯನ ಶಿಸ್ತಾಗಿ ಬೆಳೆದು, ಮತ್ತೆ ಅವುಗಳಲ್ಲಿಯೆ ಒಳಪ್ರಕಾರಗಳು ಹುಟ್ಟಿಕೊಂಡು ಸೂಕ್ಷ್ಮ ಅಧ್ಯಯನಕ್ಕೆ ಒಳಪಡುತ್ತಿವೆ.

ಮನುಷ್ಯನ ಆಲೋಚನೆ, ಬುದ್ಧಿಶಕ್ತಿ, ತಾಂತ್ರಿಕ ಶೋಧಗಳು ಎಷ್ಟು ಅಧ್ಯಯನ ಮಾಡಿದರು ಮುಗಿಯದಷ್ಟು ಪ್ರಮಾಣದಲ್ಲಿ ಜ್ಞಾನ ಶಾಖೆಗಳು ಬೆಳೆದು ನಿಂತವೆ. ಎಲ್ಲಾ ಜ್ಞಾನಶಾಖೆಗಳನ್ನು ಆಸಕ್ತಿಗನುಗುಣವಾಗಿ ಅಧ್ಯಯನ ಮಾಡಲಾಗುತ್ತಿದೆ. ಒಂದು ವಿಷಯವನ್ನು ತೆಗೆದುಕೊಂಡು ಅಧ್ಯಯನ ಮಾಡುತ್ತೇವೆ ಎಂದಾಗಲು ಮತ್ತೊಂದು ವಿಷಯ ಪ್ರವೇಶ ಆ ವಿಷಯದಲ್ಲಾಗಿರುತ್ತದೆ. ಅದು ಉದ್ದೇಶಪೂರ್ವಕವಾಗಿಯಲ್ಲದಿದ್ದರೂ ಪರೋಕ್ಷ ರೀತಿಯಲ್ಲಿರುತ್ತದೆ. ಉದಾಹರಣೆಗೆ ಭಾಷೆಯ ಬಗ್ಗೆ ಅಧ್ಯಯನ ಮಾಡುತ್ತೇವೆ ಎಂದಾಗ, ಏಕಕಾಲಕ್ಕೆ ಬಾಷೆಯನ್ನಾಡುವ ಜನಾಂಗ ಮತ್ತು ಸಂಸ್ಕೃತಿಯ ಅಧ್ಯಯನವೂ ಆಗುತ್ತದೆ.

ಮನುಷ್ಯ ಅಧ್ಯಯನದ ಅನುಕೂಲಕ್ಕಾಗಿ ಅನೇಕ ಜ್ಞಾನಶಾಖೆಗಳನ್ನು ರೂಪಿಸಿಕೊಂಡಿದ್ದರೂ ಒಂದು ಜ್ಞಾನಶಾಖೆಯನ್ನು ಅಧ್ಯಯನ ಮಾಡುವಾಗ ಗೊತ್ತಿಲ್ಲದೆ ಬೇರೆ ಜ್ಞಾನಶಾಖೆಯಲ್ಲಿ ಹೋಗಿರುತ್ತೇವೆ. ಹೀಗಾಗಿ ಪ್ರತಿಯೊಂದು ಜ್ಞಾನಶಾಖೆಯನ್ನು ಎಷ್ಟೇ ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿದರು ಪರಸ್ಪರ ಪರೋಕ್ಷ ಪ್ರಭಾವದಲ್ಲಾದರೂ ಸಂಬಂಧ ಹೊಂದಿರುತ್ತವೆ. ಏಕೆಂದರೆ, ಪ್ರತಿಯೊಂದು ಜ್ಞಾನಶಾಖೆಯ ಆಕರ ಮನುಷ್ಯನೇ ಆಗಿದ್ದಾನೆ.

ಅಭಿವ್ಯಕ್ತಿಯ ಮಾಧ್ಯಮವಾಗಿ ಭಾಷೆ ಇದೆ. ಯಾವುದೇ ವಿಷಯವಿರಲಿ ಭಾಷೆಯ ಮೂಲಕವೆ ಅಭಿವ್ಯಕ್ತಿ ಪಡೆಯುತ್ತದೆ. ಭಾಷೆಯೇ ಕಲೆಯಾಗಿರುವದರಿಂದ ಎಲ್ಲಾ ವಿಷಯಗಳು ಕಲೆಯ ಪರಧಿಯೊಳಗೆ ಬರುತ್ತವೆ. ಚರಿತ್ರೆ ಮತ್ತು ಸಾಹಿತ್ಯವು ಕಲೆಯ ಪರಧಿಯ ಹೊರಗಡೆ ಇಲ್ಲ. ಇತಿಹಾಸದ ಪಿತಮಹನಾದ ಹೆರೋಡೊಟಸ್ 'ಚರಿತ್ರೆಯನ್ನು ಜನರಿಗೆ ತಿಳಿಯುವಂತೆ

ಅರ್ಥವಾಗುವಂತೆ ಕಲಾತ್ಮಕವಾಗಿ ಹೇಳಬೇಕು' ಎಂದಿದ್ದಾನೆ. ಚರಿತ್ರೆಯನ್ನು ನಿರೂಪಿಸುವಾಗ ಸಾಹಿತ್ಯದ ಅಂಶಗಳನ್ನು ಚರಿತ್ರೆಕಾರ ಪಡೆಯುತ್ತಾನೆ. ಚರಿತ್ರೆಯ ಆಶ್ರಯ ಸಾಹಿತ್ಯಕ್ಕಿದ್ದರೆ ಸಾಹಿತ್ಯದ ಆಶ್ರಯ ಚರಿತ್ರೆಗಿದೆ. ನಿರಂಜನರ ಕಾದಂಬರಿಗಳನ್ನು ಕೇಂದ್ರವಾಗಿಟ್ಟುಕೊಂಡು ಚರಿತ್ರೆ ಮತ್ತು ಸಾಹಿತ್ಯಕ್ಕಿರುವ ಅಂತರ್ ಸಂಬಂಧವನ್ನು ಶೋಧಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ನಿರಂಜನರು ಕನ್ನಡದ ಬಹುದೊಡ್ಡ ಸೃಜನಶೀಲ ಲೇಖಕರು. ಕಾದಂಬರಿ ಕ್ಷೇತ್ರವನ್ನು ವಿಸ್ತಾರಗೊಳಿಸಿದವರು. ಸಾಮನ್ಯರ ಬದುಕಿನ ವಿನ್ಯಾಸವನ್ನೇ ಕಥನವಾಗಿಸಿದವರು. ತಮ್ಮ ಕಥನದಲ್ಲಿ ರೈತರ, ಕೂಲಿಕಾರರ, ಬಡವರ, ನಿರ್ಗತಿಕರ, ಅಸಹಾಯಕರ, ಕಾರ್ಮಿಕರ ಬದುಕು–ಬವಣೆಯನ್ನು ಕಲಾತ್ಮಕವಾಗಿ ತಂದವರು. ಕಥನ ಪರಂಪರೆಯಲ್ಲಿ ಈ ರೀತಿಯ ಜೀವನಕ್ರಮವನ್ನು ಮತ್ತೊಬ್ಬ ಲೇಖಕ ತಂದಿಲ್ಲ. ಸ್ವತಃ ಚಳುವಳಿಗಾರರಾದ ನಿರಂಜನರು ಜನರ ಜೊತೆ ನೇರ ಒಡನಾಡಿದವರು. ಅವರ ದಯನೀಯ ಬದುಕಿಗೆ ಕಾರಣಗಳನ್ನು ಶೋಧಿಸುತ್ತಾ ಹೋದವರು. ಉಳ್ಳವರ ಹುನ್ನಾರಗಳನ್ನು ಆಳವಾಗಿ ಅರಿತವರು. ಉಳ್ಳವರ ಮತ್ತು ಇಲ್ಲದವರ ನಡುವಿನ ಬಿಕ್ಕಟ್ಟುಗಳನ್ನು, ಸಂಘರ್ಷಗಳನ್ನು ಚಾರಿತ್ರಿಕ ನೆಲೆಯಲ್ಲಿ ಕಟ್ಟಿಕೊಡುವುದು ಅವರ ವೈಶಿಷ್ಟ್ಯ. ಸಮಾನತೆಯಲ್ಲಿ ಅಪಾರ ನಂಬಿಕೆ ಹೊಂದಿದ ನಿರಂಜನರು ಅದರ ಆಶಯಗಳನ್ನು ಕಾದಂಬರಿಯಲ್ಲಿ ತಂದರು. ಅವು ವಾಸ್ತವವಾದಿ ಮಾದರಿಯಲ್ಲಿದ್ದವು. ಆ ವಾಸ್ತವ ಮನುಷ್ಯನ ಅಂತರಂಗಕ್ಕಿಂತ ಬಾಹ್ಯ ಸಾಮಾಜಿಕ ಸ್ತರವನ್ನು ಹೊಂದಿತ್ತು. ಅಂದರೆ, ಅವರ ಸಮಾನತೆಯ ಸೈದ್ಧಾಂತಿಕತೆಯ ಆಯಾಮಗಳು ವರ್ಗ ಸಂಘರ್ಷಗಳ ಮುಖೇನ ಪಾತ್ರಗಳಲ್ಲಿ ರೂಪ ಪಡೆಯುತ್ತಿತ್ತು. ಇವರ ಕಥನ ಸಾಮನ್ಯರ ಬದುಕನ್ನು ಚಾರಿತ್ರಿಕತೆಯೊಂದಿಗೆ ಮುಖಾಮುಖಿಯಾಗುವುದು. ಚರಿತ್ರೆಯನ್ನು ಅಪಾರವಾಗಿ ಅಧ್ಯಯನ ಮಾಡಿದ ಅವರು ಅದನ್ನು ಕಥನದೊಂದಿಗೆ ಬೆರೆಸುವ ಹೊಸ ನಿರುಪಣಾ ಮಾದರಿಯನ್ನು ಶೋಧಿಸಿದ್ದರು."ನಿರಂಜನರ ಕೃತಿಗಳಲ್ಲಿ ಚಾರಿತ್ರಿಕ ಮೂಲ ರೂಪಗಳನ್ನು ಹುಡುಕುವ ಒಂದು ಹಟ ಇದೆ. ಪ್ರತಿ ಸಂದರ್ಭದಲ್ಲೂ ಸಾಮನ್ಯ ವೇಶ್ಯೆಯ ಬಗ್ಗೆ ಬರೆಯುತ್ತಿದ್ದರು ಅದು ವ್ಯಕ್ತವಾಗುವುದು ಪ್ರವಾದಿಯ ಮಾತುಗಾರಿಕೆಯ ಧಾಟಿಯಲ್ಲಿ. ನಿರಂಜನರ ಪ್ರತಿ ಪಾತ್ರದಲ್ಲಿ ಚರಿತ್ರೆ ತನ್ನ ಎಲ್ಲಾ ಭಾರದೊಂದಿಗೆ ಕೂತಿರುತ್ತದೆ. ಅದನ್ನು ದಾಟಬೇಕಿದ್ದರೆ ಲಂಕೇಶರ 'ಮುಸ್ಸಂಜೆಯ ಕಥಾಪ್ರಸಂಗ' ಬರಬೇಕಾಯಿತು. ಮೃತ್ಯುಂಜಯ ಮತ್ತು ಮುಸ್ಸಂಜೆಯ ಕಥಾಪ್ರಸಂಗವನ್ನು ಹೋಲಿಸಿದಾಗ ಎರಡನೆಯದರಲ್ಲಿನ ಆಣೆಬಡ್ಡಿ ರಂಗಮ್ಮನಂತವರಿಗೆ ಚರಿತ್ರೆಯ ಯಾವುದೇ ವಿಧವಾದ ನೇರವಾದ ಭಾರ ಇಲ್ಲ. ನಿರಂಜನರ ಬರವಣಿಗೆಯ ರೀತಿ ಯಾವುದೆಂದರೆ ಅವರ ಕೊನೆಯ ಗಿರಾಕಿಯ ಬಗ್ಗೆ ಮಾತಾಡುವಾಗ ಆ ಇಡೀ ಕಥೆಗೆ 'ಮೃತ್ಯುಂಜಯ' ದಂಥ ಆಕೃತಿ ಇದೆ. ಒಂದು ಸಮಾಜವಾದಿ

ಪುರಾಣದ ಆಕೃತಿ ಇದೆ  ಅನ್ನುವುದು ತಿಳಿಯುತ್ತದೆ. ಸಾಹಿತ್ಯವನ್ನು ಅದರ ವಾಸ್ತವತೆಯಿಂದ ಮೇಲೆತ್ತಿ ಮಹಾನ್ ರೂಪಕವಾಗಿ, ಮಿತ್ ಆಗಿ, ಮಹೋನ್ನತಿಯನ್ನಾಗಿ ಬರೆಯುವ ಛಲ ಇದೆ. (ಸಮಾಜವಾದಿ ಬರಹಗಾರರಿಗೆಲ್ಲ ಇದು ಸಾಮನ್ಯ. ಯುರೋಪಿನಲ್ಲಿ ಗಾರ್ಕಿಯವಂತವರು ಇತ್ಯದಿ.) ನಿರಂಜನರ ಈ ಸಮಾಜವಾದಿ ಛಲಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ ರೀತಿಯ ಅಖಂಡ ಶೈಲಿ ಇರುವವರು ನಿರಂಜನೊಬ್ಬರೆ." (ಕನ್ನಡ ಕಾದಂಬರಿಯಲ್ಲಿ ನಿರಂಜನರ ಸ್ಥಾನ, ಡಾ. ಡಿ.ಆರ್. ನಾಗರಾಜ, ಪು.339, ನಿರಂಜನ ಅಭಿನಂದನ, ಸಂ.ಬೋಳಂತಕೊಡಿ ಈಶ್ವರಭಟ್ಟ,) ಈ ಅನನ್ಯತೆಯೊಂದಿಗೆ ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ನಿರಂಜನರ ವಿಭಿನ್ನತೆಯನ್ನು ಗುರುತಿಸಿಲಾಗಿದೆ.

ಚರಿತ್ರೆಯನ್ನು  ರಾಜರ ಜೀವನವಿಧಾನ ನೆಲೆಯಲ್ಲಿ ನಿರೂಪಿಸಲಾಗಿದೆ. ಅಲ್ಲಿ ಸಾಮನ್ಯರ ಜೀವನ ವಿಧಾನಗಳು ಇಲ್ಲ. ಅವರ ಬದುಕಿನ ಯಾವ ಕುರುಹುಗಳು ಇಲ್ಲ. ಸಾಮನ್ಯರನ್ನು ಚರಿತ್ರೆಯಲ್ಲಿ ತರುವ ಪ್ರಮೇಯವೆ ಚರಿತ್ರೆಗಾರರಿಗೆ ಇಲ್ಲ. ಹೀಗಾಗಿ, ಅವರ ಬದುಕಿನ ಸಂಗತಿಗಳು ಚರಿತ್ರೆಯಲ್ಲಿ ಮುಖ್ಯ ಸ್ಥಾನವನ್ನು ಪಡೆಯುವದಿಲ್ಲ. ಯಾವ ಮಾನ್ಯತೆಗೂ ಒಳಗಾಗುವದಿಲ್ಲ. ಅವರನ್ನು ಗುರುತಿಸುವುದು ಆ ಕುರಿತು ಅಧ್ಯಯನ ಮಾಡುವುದು ಚರಿತ್ರೆಕಾರನ ನೈತಿಕ ಜವಬ್ದಾರಿಯೆಂದು ಭಾವಿಸಲಾಗಿದೆ. ದೈನಂದಿನ ಬದುಕಿನ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರಧಾರಿಗಳಾದ ಅವರನ್ನು ರಾಜರಷ್ಟೇ ಮುಖ್ಯವೆಂದು ಪರಿಗಣಿಸಬೇಕಿದೆ. ಅವರು ಜೀವನದಲ್ಲಿ ಎದುರಿಸುವ ಬವಣೆಗಳು ಸ್ವಯಂಭೂ ಆಗಿರುವದಿಲ್ಲ. ಅವು ವರ್ಗ ಮತ್ತು ಪ್ರಭುತ್ವದ ನೆಲೆಯನ್ನು ಪಡೆದಿರುತ್ತವೆ. ಕನ್ನಡದ ಯಾವುದೆ ಕಥನವನ್ನು ಪರಿಶೀಲಿಸಿದರು ಈ ಅಂಶ ಕಾಣುತ್ತದೆ. ಆದ್ದರಿಂದ ಸಾಮನ್ಯರ ಚರಿತ್ರೆಯನ್ನು ಬರೆಯಲು ಕಥನವನ್ನು  ಅವಲಂಬಿಸುವುದು ಮುಖ್ಯವಾಗಿದೆ. ಅಂದರೆ ಕಾದಂಬರಿಯನ್ನು ಕೇವಲ ಆಕರವಾಗಿ ಕಾಣಲಾಗುವದಿಲ್ಲ. ಅದು ದೈನಂದಿನ ಬದುಕಿನ ವಿನ್ಯಾಸದೊಂದಿಗೆ ನಡೆಸುವ ಸಂವಾದವನ್ನು ಗಮನಿಸಲಾಗಿದೆ. ಅದರ ಕಲಾತ್ಮಕ ಅಂಶ ಮತ್ತು ವಾಸ್ತವದ ರಚನೆಯನ್ನು ಮುನ್ನೋಟದ ನೆಲೆಯಲ್ಲಿ ನೋಡಲಾಗಿದೆ.

ಕಾದಂಬರಿಯಲ್ಲಿ ಬರುವ ಜೀವನ ಕ್ರಮವನ್ನು ಚರಿತ್ರೆಯ ಒಂದು ಭಾಗವಾಗಿ ನೋಡುವ ಬಗೆಯನ್ನು ಶೋಧಿಸಲಾಗಿದೆ. ಚರಿತ್ರೆಯಲ್ಲಿ  ಕಾಣೆಯಾದ ಬದುಕಿನ ಆಯಾಮಗಳನ್ನು ಕಾದಂಬರಿಗಳು ಮರು ರಚಿಸುತ್ತವೆ ಎಂದು ನಂಬಲಾಗಿದೆ. ಮುಖ್ಯವಾಗಿ ಲೇಖಕರ ದೃಷ್ಟಿಕೋನವು ಕಾದಂಬರಿಯನ್ನು ಕಟ್ಟುವಲ್ಲಿ ನಿರ್ವಹಿಸಿದ ರೀತಿಯನ್ನು ಗಮನಿಸಲಾಗಿದೆ.

ವಾಸ್ತವದ ಬದುಕಿವ ಕ್ರಮಗಳು ಚರಿತ್ರೆಯನ್ನು ನೋಡುವ ದೃಷ್ಟಿಕೋನವನ್ನು ರೂಪಿಸುತ್ತಿರುತ್ತದೆ. ಪ್ರಭುತ್ವ ಸೃಷ್ಟಿಸುವ ಬಿಕ್ಕಟ್ಟುಗಳನ್ನು, ಶೋಷಣೆಯ ಬಗೆಯನ್ನು ಅರಿಯಲು, ಈಗಾಗಲೆ

ರೂಪಿಸಲ್ಪಟ್ಟಿರುವ ಚರಿತ್ರೆಯ ಬರವಣಿಗೆಯಿಂದ ಸಾಧ್ಯವಿಲ್ಲ. ಅದಕ್ಕಾಗಿ ಹೊಸಬಗೆಯ ಚರಿತ್ರೆಯ ವಿನ್ಯಾಸವನ್ನು ಕಂಡುಕೊಳ್ಳಬೇಕಿದೆ. ನಿರಂಜನರು ತಮ್ಮ ಕಥನದಲ್ಲಿ ಚರಿತ್ರೆಯ ಸಂಗತಿಗಳನ್ನು ಸಾಮನ್ಯರ ಭೂಮಿಕೆಯಲ್ಲಿ ಬಿಂಬಿಸುವ ಪ್ರಯತ್ನ ಮಾಡುತ್ತ ಬಂದವರು. ಆದ್ದರಿಂದ ಅವರ ಎರಡು ಕಾದಂಬರಿಗಳನ್ನು ಕೇಂದ್ರವಾಗಿಟ್ಟುಕೊಂಡು ಸಾಮನ್ಯರ ಚರಿತ್ರೆಯನ್ನು ಶೋಧಿಸುವ ಉದ್ದೇಶ ಈ ಸಂಶೋಧನೆಗಿದೆ.

ಸಂಗ್ರಹಿಸಿ ಹೇಳುವುದಾದರೆ

- ಚರಿತ್ರೆ ಮತ್ತು ಸಾಹಿತ್ಯಕ್ಕಿರುವ ಅಂತರ್ ಸಂಬಂಧವನ್ನು ಅನ್ವೇಷಿಸುವುದು
- ಚರಿತ್ರೆಯ ನಿರ್ಮಾಣದಲ್ಲಿ ಸಾಹಿತ್ಯಕ್ಕಿರುವ ಅನನ್ಯತೆಯನ್ನು ಕಂಡುಕೊಳ್ಳುವುದು
- ನಿರಂಜನರ ಸಾಧನೆಯನ್ನು ಸಾಹಿತ್ಯ ಪರಂಪರೆಯ ದಾರಿಯಲ್ಲಿ ನೋಡುವುದು
- ಪ್ರಗತಿಶೀಲ ಸಾಹಿತ್ಯದಲ್ಲಿ ನಿರಂಜನರ ಕಥನ ಮಾದರಿಯ ವಿಶಿಷ್ಟತೆಯನ್ನು ಮನಗಾಣುವುದು
- ನಿರಂಜನರ ಚರಿತ್ರೆಯ ಮನೋಭಾವವನ್ನು ಶೋಧಿಸುವುದು
- ಸಾಹಿತ್ಯ ಮುಖೇನ ಸಾಮನ್ಯರ ಚರಿತ್ರೆಯನ್ನು ರಚಿಸುವುದು

****

## ಅಧ್ಯಾಯ ಎರಡು: ಚರಿತ್ರೆ ಮತ್ತು ಸಾಹಿತ್ಯದ ಅಂತರ್‌ಸಂಬಂಧ

ಇಂದು ಎಲ್ಲಾ ಜ್ಞಾನ ಶಾಖೆಗಳು ಮರು ಪರಿಶೀಲನೆಗೆ ಒಳಗಾಗುತ್ತಿವೆ. ಏಕೆಂದರೆ ಜಗತ್ತಿನ ಬದುಕಿನ ಚಲನೆಯ ಕ್ರಮಗಳು ಅತಿ ವೇಗವಾಗಿ ಚಲಿಸುತ್ತಿವೆ. ಅತಿ ಶೀಘ್ರದಲ್ಲಿಯೇ ಸಂವಹನ ಸಾಧ್ಯವಾಗುತ್ತಿದೆ. ತಂತ್ರಜ್ಞಾನದ ಅವಿಷ್ಕಾರವು ಬಹುದೊಡ್ಡ ಪಲ್ಲಟಗಳನ್ನು ಸೃಷ್ಟಿಸಿದೆ. ಪರಸ್ಪರ ಜಗತ್ತಿನ ಮಾನವೀಯ ನೆಲೆಗಳು ಏಕತಾನತೆಯನ್ನು ಪಡೆಯುತ್ತಿವೆ. ಆರ್ಥಿಕ ಶಕ್ತಿಗಳೇ ಮುನ್ನೆಲೆಗೆ ಬಂದು ಜ್ಞಾನಗಳು ಕೂಡ ಬಲಾಢ್ಯರ ಭಾಗವಾಗುತ್ತಿವೆ. “ತಂತ್ರಜ್ಞಾನದ ಉತ್ಪಾದನಾಶಕ್ತಿ ಬಹುಗಣಿತವಾಗಿ ಹೆಚ್ಚುತ್ತಿರುವಂತೆ ಸಾಮಾಜಿಕ ಸ್ಥಿರತೆಯನ್ನು ಕಾಪಾಡುವ ಇದರ ಶಕ್ತಿ ಗಣನೀಯವಾಗಿ ಕ್ಷೀಣವಾಗುತ್ತಿದೆ. ಎಂದರೆ ತಾಂತ್ರಿಕತೆಯಿಂದಾಗಿ ಉಂಟಾದ ಬೆಳವಣಿಗೆಯು ಸಾಮಾಜಿಕ ಅಭಿವೃದ್ಧಿಯನ್ನುಂಟುಮಾಡುವ ಶಕ್ತಿಯನ್ನು ನಿಧಾನವಾಗಿ ಕಳೆದುಕೊಳ್ಳುತ್ತಾ ನವತಂತ್ರಾಜ್ಞಾನದಿಂದ ಸಂಪತ್ತಿಗಿಂತ ಆಪತ್ತೇ ಹೆಚ್ಚು ಎಂಬ ಭಾವನೆ ಜನಸಾಮನ್ಯರಲ್ಲಿ ಮೂಢತೊಡಗಿದೆ. ಇಂದು ಹೊಸ ಸಾಮಾಜಕ್ಕೆ ಲಭ್ಯವಿರುವ ಎಲ್ಲಾ ಮಾಹಿತಿಯ ಅಗತ್ಯವೇ ಎಂಬ ಶಂಕೆಯು ಉಂಟಾಗಿದೆ. ಹೊಸ ಕಲಿಕೆಯ ಯುಗದಲ್ಲಿ ದೈಹಿಕ  ಸುಖಗಳು ಹೆಚ್ಚುತ್ತಿರುವ ಹಾಗೆಯೆ ಸಾಂಸ್ಕೃತಿಕ ಮೌಲ್ಯಗಳು, ಸಾಮಾಜಿಕ ಸಂಸ್ಥೆಗಳಾದ ಕುಟುಂಬ, ಶಿಕ್ಷಣ, ವಿವಾಹ, ರಕ್ತಸಂಬಂಧಗಳ ಬಂಧಗಳು ಶಿಥಿಲವಾಗುತ್ತಿವೆ. ಹೊಸಕಲಿಕೆಯ ಯುಗದಲ್ಲಿ ಹಿಂದೆಂದು ಕಂಡಿರದ ಊಹಿಸಲು ಅಸಾಧ್ಯವಾದ ಮಾಹಿತಿಯ ರಾಶಿಯನ್ನು, ಜೊತೆಗೆ ಅತ್ಯಂತ ಆಳವಾದ ಸಾಮಾಜಿಕ ಸಾಂಸ್ಕೃತಿಕ ಚಿಂತನೆಯ ಸ್ಥರಗಳನ್ನು ಜಗತ್ತು ಕಂಡಿದೆ. ಆದರೆ ತಂತ್ರಜ್ಞಾನ ಮೌಲ್ಯಗಳ ನಿರಂತರ ಬದಾವಣೆಯಿಂದಾಗಿ ಮಾನವ ಸಮಾಜ ಬೇರೂರಿ ನಿಲ್ಲದೆ ಸದಾ ಓಡುತ್ತಿರುವ ರಚನೆಯಾಗಿ ಬಿಡಬಹುದೇ, ಮನುಷ್ಯರೆಲ್ಲರೂ ಒಂದೇ ಮಾದರಿಯ ಪಡಿಯಚ್ಚುಗಳಾಗಿ ಮಾನವ ಸಮಾಜದ ವೈವಿಧ್ಯತೆ ಮಾಯಾವಾಗಿ, ಜೀವನದಲ್ಲಿ ಏಕತಾನತೆಯೊಂದೇ ನಿಶ್ಚಲವಾಗಬಹುದೇ”[1] ಈ ರೀತಿಯ ವಾತವರಣವೊಂದು ನಾವಿಂದು ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನವಿಕಗಳು ಯಾವ ನಿಟ್ಟಿನಲ್ಲಿ ಸಾಗಬೇಕು ಎಂಬುದನ್ನು ಗಂಭೀರವಾಗಿ ಯೋಚಿಸಬೇಕಿದೆ.

‘ಚರಿತ್ರೆ ’ ಎಂಬ ಪರಿಕಲ್ಪನೆಯು ವಸಾಹತುಶಾಹಿ ನೀಡಿದ ಅನೇಕ ಪ್ರಜ್ಞೆಗಳಲ್ಲಿ ಒಂದು. ಅವರು ನಿರೂಪಿಸಿದ ನೆಲೆಯಲ್ಲೇ ಚರಿತ್ರೆಯನ್ನು ಗ್ರಹಿಸುತ್ತಾ ಬರಲಾಗಿದೆ. ಸಾಕ್ಷಿಯಾಧಾರಿತ ಸಂಗತಿಗಳನ್ನು ಕೇಂದ್ರವಾಗಿಟ್ಟುಕೊಂಡು ಹಿಂದಿನ, ಈಗಾಗಲೇ ಕಳೆದು ಹೋದ ಕಾಲವನ್ನು ಮರು ರೂಪಿಸುವುದು ಚರಿತ್ರೆ ಎಂದು ನಂಬಲಾಗಿದೆ. ಆ ಹಿನ್ನಲೆಯಲ್ಲಿಯೇ ಚರಿತ್ರೆಯನ್ನು ಬರೆಯಲಾಗಿದೆ. ರಾಜರು ಭಾರತವನ್ನು ಆಳಿರುವದರಿಂದ ತಮಗೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಿಡಲಾಗಿತ್ತು. ಅದನ್ನು ಮೂಲ ಆಕರವನ್ನಾಗಿಟ್ಟುಕೊಂಡು ಚರಿತ್ರೆಯನ್ನು ರಚಿಸಿದರು. ವಸಾಹತು ಸಂದರ್ಭದ

ವಿದೇಶಿ ವಿದ್ವಾಂಸರು ಶಾಸನಗಳು, ಹಸ್ತಪ್ರತಿಗಳು, ದೇವಾಲಯಗಳು, ಪ್ರಾವಾಸಿಕಥನಗಳನ್ನು ನಂಬಿಕೊಂಡು ಚರಿತ್ರೆಯನ್ನು ಕಟ್ಟದರು.

"ಹತ್ತೊಂಬತ್ತನೆಯ ಶತಮಾನದ ಪಾಶ್ಚತ್ಯ ಚರಿತ್ರೆ ಲೇಖನದಲಿ ಅಂತರ್ಗತವಾಗಿದ್ದ ಮೂಲಭೂತ ಕಲ್ಪನೆ ಎಂದರೆ ನಿಜವನ್ನು ಸಾಧಿಸುವುದು. ಗತಕಾಲದ ಸಂಗತಿಗಳನ್ನು ಅವು ಹೇಗಿದ್ದವೋ ಹಾಗೆ ಗ್ರಹಿಸುವುದು ಈ 'ನಿಜ'ವಾಗಿದೆ. ಈ ರೀತಿಯ ನಿಜಗಳನ್ನು ಕಂಡುಹಿಡಿಯಲು ವಸ್ತುನಿಷ್ಠತೆ ಅಗತ್ಯವಾಗಿದೆ. ವ್ಯಕ್ತಿಯ ಪೂರ್ವಗ್ರಹದಿಂದ ಬಿಡುಗಡೆ ಹೊಂದುವುದು ವಸ್ತುನಿಷ್ಠತೆ ಎನಿಸಿಕೊಳ್ಳುತ್ತದೆ. ಈ ವಸ್ತುನಿಷ್ಠತೆಯನ್ನು ಸಾಧಿಸಲು ವೈಜ್ಞಾನಿಕ ವಿಧಾನಗಳನ್ನು ಹಾಕಿಕೊಳ್ಳಲಾಯಿತು ಹಾಗು ಇತಿಹಾಸ ಒಂದು ವಿಜ್ಞಾನ ಎಂದು ಸಾರಲಾಯಿತು. ಚರಿತ್ರೆಯೆಂಬುದು ಒಂದು ಸತ್ಯ ಶೋಧನೆಯಾಗಿದ್ದರೂ ಪೂರ್ವಗ್ರಹಗಳಿಂದಾಗಿ ಸತ್ಯವನ್ನು ಸಾಧಿಸಲು ಚರಿತ್ರೆಕಾರರು ವಿಫಲರಾಗುತ್ತಾರೆ. ಹಾಗಾಗಿ ಚರಿತ್ರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ನಿರಂತರವಾಗಿ ಸತ್ಯ ಶೋಧನೆ ನಡೆಯುತ್ತಿರಬೇಕು."[2]

ಈ ಚರಿತ್ರೆಯ ಕ್ರಮವು ರಾಜಕೀಯ ಸಂಗತಿಗಳನ್ನು ಮಾತ್ರ ನಿರೂಪಿಸುತಿತ್ತು. ರಾಜರ ವಂಶಾಡಳಿತ, ಸಾಧನೆ, ಯುದ್ಧಗಳು, ಆಡಳಿತ ನೀತಿಗಳು, ಅವರು ಕಟ್ಟಿಸಿದ ಕಟ್ಟಡಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು ಚರಿತ್ರೆಕಾರರಿಗೆ ಆಕರವಾಗಿ ದೊರೆತವು. ಇವು ಏನನ್ನು ಪ್ರತಿಬಿಂಬಿಸುತ್ತಿದ್ದವು ಎಂಬುದನ್ನು ಗಮನಿಸಿದರೆ ಅವು ಅಧಿಕಾರದ ಪ್ರಭುತ್ವ ಕೇಂದ್ರಿತ ಮೌಲ್ಯವಾಗಿದ್ದವು. ಭೂತಕಾಲದ ರಾಜರ ಜೀವನಕ್ರಮವನ್ನು ಮರುರೂಪಿಸುವುದು ಚರಿತ್ರೆಯ ಬಹು ದೊಡ್ಡ ಕರ್ತವ್ಯ ಎಂದು ತಿಳಿಯಲಾಗಿತ್ತು. ಅಂದರೆ ಹಿಂದೆ ಆಗಿ ಹೊದ ಘಟನೆಗಳನ್ನು ಒಗ್ಗೂಡಿಸುವುದೇ ಮುಖ್ಯವಾದುದು ಎಂದು ಭಾವಿಸಲಾಗಿತ್ತು. ಶ್ರೇಷ್ಟ ವ್ಯಕ್ತಿಗಳ ಸಾಧನೆಗಳನ್ನು ಚಿತ್ರಿಸುವುದು ಅದರ ಉದ್ದೇಶವಾಗಿತ್ತು. ಈ ಉದ್ದೇಶಕ್ಕೆ ದಾಖಲೆಗಳೇ ಆಧಾರ.

ಮುಖ್ಯವಾಗಿ ಗಮನಿಸಬೇಕಾದುದು ದಾಖಲೆಗಳನ್ನು ಶೋಧಿಸುವ ಚರಿತ್ರೆಕಾರನ ಮನೋಭಾವ ಇಲ್ಲಿ ಪ್ರಧಾನವಾಗಿರುತ್ತದೆ. ವರ್ತಮಾನವನ್ನು ಗಮನಿಸದೆ ಕೇವಲ ಭೂತಕಾಲವನ್ನು ಮಾತ್ರ ಪ್ರತಿನಿಧಿಸಿದರೆ ಅದು ಪರಿಪೂರ್ಣತೆಯನ್ನು ಪಡೆಯುವದಿಲ್ಲ ಎಂಬ ಆಲೋಚನೆಗಳು ಬೆಳೆದವು." ಚರಿತ್ರೆಗೆ ನಿಜವನ್ನು ಕಂಡುಹಿಡಿಯುವದು ಅಸಾಧ್ಯ. ಏಕೆಂದರೆ ಚರಿತ್ರೆಕಾರ ಬೇರೆ, ಚರಿತ್ರೆ ಬೇರೆಯಲ್ಲ. ಅದೇ ರೀತಿ ವರ್ತಮಾನದ ಕಾರ್ಯಕ್ರಮಗನ್ನು ಐರೋಪ್ಯ ದೃಷ್ಟಿಯಿಂದಲೇ ಗ್ರಹಿಸುವ ಈ ಚರಿತ್ರೆ ಉಳಿದ ಸಮಾಜಗಳಿಗೆ ಹಿಂಸಾತ್ಮಕವಾಗಿ ಪರಿಣಮಿಸಿದೆ. ಐರೋಪ್ಯ ಚರಿತ್ರೆ ತಾವು ಗತಕಾಲದ ನಿಜವನ್ನು ಕಟ್ಟುವವರು ಎಂದು ಪ್ರತಿಷ್ಠಾಪಿಸಿಕೊಂಡು ಅನ್ಯ ಸಂಪ್ರದಾಯಗಳ ಚರಿತ್ರೆಯೊಂದನ್ನೇ ಅಲ್ಲ, ಅನ್ಯ ಜಗುತ್ತಗಳನ್ನೇ ಅನಧಿಕೃತ ಎಂದು ನಾಶಮಾಡುತ್ತಿದೆ."[3] ಎಂದು ಚಿಂತಿಸಲಾಯಿತು.

ಇವು ವಸಾಹತುಶಾಹಿ ತನ್ನ ಆಡಳಿತವನ್ನು ಗಟ್ಟಿಗೊಳಿಸಲು ಅನುಸರಿಸಿದ ಮಾರ್ಗವಾಗಿದೆ. ಅಂದರೆ "ಪೂರ್ವದ ಅನೇಕ ದೇಶಗಳನ್ನು ವಶಪಡಿಸಿಕೊಂಡ ನಂತರ ಅವುಗಳ ಸಂಪನ್ಮೂಲವನ್ನು ಅರಿಯಲು ಕಂದಾಯ ವ್ಯವಸ್ಥೆ, ಕಾನೂನು ವ್ಯವಸ್ಥೆಯನ್ನು ನಿಭಾಯಿಸಲು, ಅಭಿವೃದ್ಧಿ ಸಾಧಿಸಲು. ಅಲ್ಲಿನ ಜನರ ಮನೋಭಾವನೆ, ನಂಬಿಕೆ ಇತಿಮಿತಿಗಳನ್ನು ಅರಿಯಲು ಪೌರಾತ್ಯ ಅಧ್ಯಯನದ ಅಗತ್ಯ ಉಂಟಾಗಿದ್ದರಿಂದ ವಸಾಹತು ಸರ್ಕಾರವೇ ಇಂಥ ಅಧ್ಯಯನಗಳನ್ನು ಪ್ರೋತ್ಸಾಹಿಸಿತು. ಈ ಅಧ್ಯಯನಗಳು ಸರ್ಕಾರಿ ಕಾರ್ಯಕ್ರಮಗಳಿಗೆ ಪ್ರಾಯೋಗಿಕ ಸಲಹೆಗಳನ್ನು ರೂಪಿಸುವ ದೃಷ್ಟಿಯನ್ನು ಹೊಂದಿದ್ದರಿಂದ ಐರೋಪ್ಯ 'ಯುಟಿಲಿಟೇರಿಯನ್' ಹಾಗು 'ಲಿಬಿರಲ್' ದೃಷ್ಟಕೋನದಿದಂದ ಭಾರತೀಯ ಸಮಾಜವನ್ನು ಅವರು ನಿಷ್ಕರಿಸಿ ಯಾವ ನಿಟ್ಟಿನ ಸುಧಾರಣೆಗಳನ್ನು ಇಲ್ಲಿ ಮಡಬೇಕಾಗಿದೆ ಎಂಬುದನ್ನು ಸೂಚಿಸಿದರು."[4] ಇದರಿಂದ ಇವರು ಭಾರತದ ಚರಿತ್ರೆಯನ್ನು ನಿರೂಪಿಸುವ ನೆಲೆಯಲ್ಲಿ ತಮ್ಮತನವನ್ನು ಸ್ಥಾಪಿಸುವ ಪ್ರಯತ್ನ ಮಾಡಿದರು.

ಇವರು ಗ್ರಹಿಸಿದ ಚರಿತ್ರೆಯನ್ನು ಈ ರೀತಿ ನೋಡಬಹುದು.

"1.ಭಾರತದಲ್ಲಿ ವಿವಿಧ ಭಾಷಾ ಜನಾಂಗಗಳಿದ್ದು, ಅವರಲ್ಲಿ ಆರ್ಯರು ಮೂಲತಃ ಐರೊಪ್ಯ ಜನಾಂಗಗಳ ಪೂರ್ವಜರಾಗಿದ್ದರು. ಭಾರತದಲ್ಲಿ ಆರ್ಯ ಆಕ್ರಮಣಗಳು ನಡೆದು ದ್ರಾವಿಡರು ದಕ್ಷಿಣಕ್ಕೊತ್ತಲ್ಪಟ್ಟರು.

2. ಭಾರತೀಯರು ಆಧ್ಯಾತ್ಮಿಕ ಒಲವುಳ್ಳ ಜನರಾಗಿದ್ದು, ಭೌತಿಕ ನಾಗರಿಕತೆಯತ್ತ ವಿಮುಖತೆಯನ್ನು ಹೊಂದಿದ್ದರು.

3. ಭಾರತೀಯ ಮತ ಹಾಗು ಸಂಸ್ಕೃತಿ ಮಾನವಕುಲದ ವಿಕಾಸದ ಪ್ರಾರಂಭಿಕ ಅವಸ್ಥೆಯನ್ನು ಇಂದೂ ಜೀವಂತವಾಗಿ ಇರಿಸಿಕೊಂಡಿದೆ.

4. ಭಾರತೀಯ ಸಂಸ್ಕೃತಿಯನ್ನು ಅರ್ಥೈಯಸಲಿಕ್ಕೆ ಅಲ್ಲಿನ ಪಠ್ಯಗಳನ್ನು ಓದುವುದು ಅತ್ಯವಸ್ಯಕ. ಏಕೆಂದರೆ ಸಂಸ್ಕೃತಿಗಳ ವರ್ತನೆಗಳು ಪಠ್ಯ ನಿರ್ದೇಶನವನ್ನು ಆಧರಿಸಿರುತ್ತವೆ. ಭಾರತದ ಸಂಸ್ಕೃತಿ ಈ ರೀತಿ ಸಂಸ್ಕೃತಿ ಪಠ್ಯಗಳನ್ನೇ ಪ್ರಧಾವಾಗಿ ಆಧರಿಸಿ ರೂಪಗೊಂಡಿದೆ."[5]

ಈ ರೀತಿಯ ಚಾರಿತ್ರಿಕ ನೋಟಗಳು ಭಾರತವನ್ನು ಒಳಗುಮಾಡಿಕೊಳ್ಳುವ ಪ್ರಕ್ರಿಯೆಯನ್ನು ಒಳಗೊಂಡಿತ್ತು. ವಸಾಹತು ಚರಿತ್ರೆಕಾರರು ಭಾರತೀಯ ಬದುಕನ್ನು ತಮ್ಮ ಆಡಳಿತಕ್ಕೆ ತಕ್ಕಂತೆ ಮರು ರಚಿಸಿರುವುದನ್ನು ಕಾಣುತ್ತೇವೆ. ಅದು ಆಯ ಸಂದರ್ಭಕ್ಕೆ ಮಾತ್ರ ಸೀಮಿತವಾಗಿರುವದಿಲ್ಲ. ಕಾಲಾಂತರದಲ್ಲಿ ಅನೇಕ ರೀತಿಯಲ್ಲಿ ಬೆಳೆಯುತ್ತಿರುತ್ತದೆ. ವಸಹತುವಾದದ ಮೂಲ ಮನೋಭಾವವೇ ತಮ್ಮ ಅಧೀನದಲ್ಲಿರುವ ದೇಶಗಳನ್ನು ಧಮನಗೊಳಿಸುವುದು. ತನ್ನನ್ನು ಶ್ರೇಷ್ಟವೆಂದು ಬಿಂಬಿಸಿಕೊಳ್ಳುವುದು. ಎಲ್ಲಾ ಕ್ಷೇತ್ರಗಳಲ್ಲಿ ಆ ದೇಶಗಳನ್ನು ಅವಲಂಬಿತವನ್ನಾಗಿಸುವುದು.

"ಯುರೋಪಿಯನ್ ಪುನರುಜ್ಜೀವನ ಘಟ್ಟ ಹಾಗು ಬಂಡವಾಳಶಾಹಿ ಯುಗದ ಆರಂಭದಲ್ಲಿ ರೂಪಗೊಂಡ ವಸಾಹತುವಾದ ಮೂಲತಃ ಯಜಮಾನಿಕೆಯ ವ್ಯವಸ್ಥೆ ಹಾಗು ನೋಟಕ್ರಮ. ಇದು ನಿರ್ದಿಷ್ಟ ಸಂಕಥನಗಳು, ಪರಿಭಾಷೆ, ಧರ್ಮ, ಸಂಸ್ಕೃತಿ, ಯಜಮಾನಿಕೆ, ವ್ಯಾಪಾರ, ಶಿಕ್ಷಣ, ಆಧುನಿಕ ವಿಜ್ಞಾನ, ಅದೃಶ್ಯ ನಿಯಂತ್ರಣ ಇವೆಲ್ಲವೂ ಕೂಡಿ ರೂಪಗೊಂಡ ವ್ಯವಸ್ಥೆ. ಆದ್ದರಿಂದ ಚರಿತ್ರೆಯುದ್ದಕ್ಕೂ ನಡೆದಿರುವ ಅನ್ಯ ದೇಶಗಳ ಆಕ್ರಣಮಕ್ಕೂ, ಒಂದು ನಾಡಿನ ಎಲ್ಲ ಅಂಗಗಳನ್ನು ವ್ಯಾಪಿಸುವ ಆಧುನಿಕ ವಸಾಹತುಕರಣಕ್ಕೂ ವ್ಯತ್ಯಾಸವಿದೆ. ಹೀಗಾಗಿ ವಸಾಹತುಗಳು ಸ್ವತಂತ್ರವಾದ ಮಾತ್ರಕ್ಕೆ ವಸಾಹತುಗಾರ ಹಾಗು ವಸಾಹತುಗೊಂಡವನ ಪ್ರಜ್ಞೆ ಅಥವಾ ಮನಸ್ಸನ್ನು ನಿಯಂತ್ರಿಸುವ ವಸಾಹತುವಾದ ಕೊನೆಗೊಳ್ಳುವದಿಲ್ಲ. ಕಾರಣ ಸಾಮ್ರಾಜ್ಯವಾದ ವಸಾಹತುವಾದಗಳೆರಡೂ ಕೇವಲ ನಿರ್ದಿಷ್ಟ ಪ್ರಾಂತಗಳನ್ನು ರಾಜಕೀಯವಾಗಿ ನಿಯಂತ್ರಿಸುವ ಸಾಧನಗಳಷ್ಟೇ ಅಲ್ಲ. ವಸಾಹತೋತ್ತರದಲ್ಲೂ ವಸಾಹತುವಾದಿ ಮಾದರಿಗಳು ನಿರಂತರವಾಗಿ ಮುಂದುವರಿಯುತ್ತಲೇ ಇರುತ್ತವೆ. ಆಧುನಿಕ ಅಭಿವೃದ್ಧಿ ಪಥಗಳಲ್ಲಿ, ಆಧುನಿಕ ಮೌಲ್ಯಗಳಲ್ಲಿ, ಆಧುನಿಕ ಸಂಸ್ಥೆಗಳಲ್ಲಿ, ಸಂಸ್ಕೃತಿಯ ವ್ಯಾಖ್ಯಾನಗಳಲ್ಲಿ, ಅಲ್ಲಿ ಹುಟ್ಟುವ ಕಲಾಕೃತಿಗಳಲ್ಲಿ ಹಾಗೂ ವಸಾಹತುವಾದಿ ಸನ್ನಿವೇಶದಲ್ಲಿ ಹುಟ್ಟಿದ ಆಧುನಿಕತೆ ಹಾಗೂ ಪರಂಪರೆಗಳ ನಿರಂತರ ಮುಖಾಮುಖಿಗಳಲ್ಲಿ ವಸಾಹತುವಾದಿ ರಚನೆಗಳು ಹಾಗೂ ನೋಟಕ್ರಮಗಳು ತಮ್ಮ ಇರುವನ್ನು ಪ್ರಕಟಿಸುತ್ತಲೇ ಇರುತ್ತವೆ."[6] ವಸಾಹತು ಧಮನಕ್ಕೆ ಒಳಗಾದ ದೇಶಗಳು ತಮ್ಮ ಚರಿತ್ರೆಯನ್ನು ತಮ್ಮತನದ ನೆಲೆಯಿಂದ ಕಟ್ಟಿಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನೂ ಕೂಡ ವಸಾಹತುಶಾಹಿಯ ನಿಯಾಮವಳಿಯನ್ನೇ ಅನುಸರಿಸುವದರಿಂದ ಚರಿತ್ರೆಯನ್ನು ನಮ್ಮದಾಗಿ ರಚಿಸಿಕೊಳ್ಳುವುದು ಹೇಗೆ ಎಂಬ ಚಿಂತನೆಗಳು ನಡೆಯುತ್ತಿವೆ. ವಸಾಹತುವಾದ ಹುಟ್ಟುಹಾಕಿದ ಚರಿತ್ರೆಯ ಪರಿಕಲ್ಪನೆಯನ್ನು ಮರುಪರಿಶೀಲಿಸಿ ಆಲೋಚಿಸುವ ಕ್ರಮಗಳು ಬೆಳೆಯುತ್ತಿವೆ. ಗತವನ್ನು ವೈಭವಿಕರಿಸುವ ಚರಿತ್ರೆಯ ನೋಟಗಳನ್ನು ವಿವಿಧ ಮಾನವಿಕ ನೆಲೆಗಳಲ್ಲಿ ಹಾಗು ಜ್ಞಾನಶಾಖೆಗಳ ಪರಸ್ಪರ ವಿನಿಯೋಗದಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ. ಹೀಗಾಗಿ ಚರಿತ್ರೆಯೆಂಬುದು ಗತದ ಪರಿಕಲ್ಪನೆಯಾಗಿ ಮಾತ್ರ ಉಳಿದಿಲ್ಲ. ಅದಕ್ಕೊಂದು ವಾಸ್ತವದ ಆಯಾಮವನ್ನು ನೀಡಲಾಗುತ್ತಿದೆ. ವಸಾಹತು ಅಧೀನಕ್ಕೆ ಒಳಗಾದ ದೇಶಗಳಿಗೆ ಚರಿತ್ರೆಯ ಪ್ರಜ್ಞೆಯೇ ಇರಲಿಲ್ಲ ಎಂಬ ಸೈದ್ಧಾಂತಿಕತೆಯನ್ನು ಅಲ್ಲಗಳೆದು ಈ ದೇಶಗಳ ಚಾರಿತ್ರಿಕ ಸಂಗತಿಗಳು ಯಾವುವು ಎಂಬುದನ್ನು ಅರಿಯುವ ಚಿಂತನಕ್ರಮವನ್ನು ಕಾಣುತ್ತಿದ್ದೇವೆ.

ಕೆ. ಮೋಹನಕೃಷ್ಣ ರೈ ಅವರು "ಮಾನವ ತನ್ನ ಬದುಕನ್ನು ರೂಪಿಸಿಕೊಳ್ಳುವುದಕ್ಕಾಗಿ ನಡೆಸಿದ ಹೋರಾಟ ಹಾಗು ಹೊಂದಾಣಿಕೆಗಳ ಕಥನವೇ ಚರಿತ್ರೆ. ಇದಕ್ಕೆ ಗತ ಹಾಗು ವರ್ತಮಾನಗಳೆಂಬ

ಗಡಿಗಳು ಇರುವದಿಲ್ಲ. ಇದೊಂದು ನಿರಂತರ ಪ್ರಕ್ರಿಯೆ." ಎಂದಿದ್ದಾರೆ. ಮುಂದುವರೆದು "ರಾಜಪ್ರಭುತ್ವ ಹಾಗು ಧಾರ್ಮಿಕ ಪ್ರಭುತ್ವಗಳಿಗೆ ಸಂಬಂಧಿಸಿದ ಬರವಣಿಗೆಗಳು ಸಮಾಜವನ್ನು ಇಡಿಯಾಗಿ ಪ್ರಭಾವಿಸಿ ಅದೇ ಅಂದಿನ ಸಂದರ್ಭದ ಚರಿತ್ರೆ ಎಂಬ ಭದ್ರ ಛಾಪನ್ನು ಒದಗಿಸಿದವು. ಹೀಗಾಗಿ ಚರಿತ್ರೆಯುದ್ದಕ್ಕೂ ಈ ಎರಡು ಪ್ರಭುತ್ವಗಳು ಮೂಡಿಸಿದ ಛಾಪು ಮುಂದುವರಿದುಕೊಂಡು ಹೋಯಿತು."[7] ಎಂದು ಹೇಳುತ್ತಾರೆ. ಚರಿತ್ರೆಯು ಹಿಂದಿನ ಸಂಗತಿಗಳನ್ನು ದಾಖಲಿಸುತ್ತದೆ ಎಂಬುದು ಇಂದಿನ ಸಂಗತಿಗಳನ್ನೇ ಅವಲಂಬಿಸಿರುತ್ತದೆ ಎಂಬುದನ್ನು ಗಮನಿಸಬೇಕು. "ಚರಿತ್ರೆಯೆನ್ನುವುದು ಎಲ್ಲ ನಿನ್ನೆಗಳ ಇಂದಿನ ವರ್ತಮಾನದಲ್ಲಿ ಬದುಕುವುದೆಂದರ್ಥ. ಮನುಷ್ಯ ಮತ್ತು ಭವಿಷ್ಯ ಮುಖಾಮುಖಿಯಾದರೂ ಅವನು ಚರಿತ್ರೆಯ ಶಿಸುವಾಗಿಯೇ ಉಳಿಯುತ್ತಾನೆ. ಹೇಗೆ ಇಂದು, ಈ ಕ್ಷಣವೆನ್ನುವುದು ಎಲ್ಲ ನಿನ್ನೆಗಳ ಮತ್ತು ಗತಿಸಿದ ಕ್ಷಣಗಳ ಮೊತ್ತವೋ ಹಾಗೆಯೆ ಇವತ್ತಿನ ಮನುಷ್ಯ ಎಲ್ಲ ಹಿಂದಿನ ತಲೆಮಾರುಗಳ ಪ್ರತಿನಿಧಿ"[8]. ಎಂದು ಅರ್ಥೈಸಲಾಗುತ್ತಿದೆ.

ಚರಿತ್ರೆಯನ್ನು ಕುರಿತು ಹೊಸದಾಗಿ ಆಲೋಚಿಸುತ್ತಿರುವ ಚಿಂತಕರು ಸಾಹಿತ್ಯವನ್ನು ಆಕರವಾಗಿ ಬಳಸುವಾಗ ಸಾಹಿತ್ಯವನ್ನು ಮೀಮಾಂಸೆಯ ನೆಲೆಯಲ್ಲಿ ಮಾತ್ರ ಕಾಣುವದಿಲ್ಲ. ಅದನ್ನು ಸ್ವತಂತ್ರ ಘಟಕ ಎಂದು ಪರಿಗಣಿಸುವದಿಲ್ಲ. ಅದಕ್ಕೆ ಬೇರೆಯದೇ ವ್ಯಾಖ್ಯಾನ ನೀಡಿ ಸಾಹಿತ್ಯವನ್ನು ಚರಿತ್ರೆಯ ಜ್ಞಾನಶಾಖೆಯಿಂದ ಪ್ರತ್ಯೇಕಿಸುವದಿಲ್ಲ. "ಸಾಹಿತ್ಯವನ್ನು ಸೌಂದರ್ಯಮೀಮಾಂಸೆಯ ಹಿನ್ನಲೆಯಲ್ಲಿ ನೋಡುತ್ತಿದ್ದ ನೋಟ ಬಹಳ ಹಿಂದಿನದು. ಆದರೆ ಅದನ್ನು ಇಂದು ಸಾಂಸ್ಕೃತಿಕ ಸಂರಚನೆಗಳ ಮೊತ್ತವಾಗಿಯು ಗ್ರಹಿಸಿ ವಿಶ್ಲೇಸಿಸುವ ಪರಿಪಾಠವು ಬೆಳೆದು ನಿಂತಿದೆ. ಇದನ್ನು ಮನವರಿಕೆ ಮಾಡಿಕೊಟ್ಟವರು ನವ ಚರಿತ್ರೆಕಾರರು. ಸಾಹಿತ್ಯ ಕೃತಿಯನ್ನು ಚರಿತ್ರೆಯೊಂದಿಗೆ ಮೇಳೈಸಿ ನೋಡುವ ನೋಟವನ್ನು ಹುಟ್ಟು ಹಾಕಿದ್ದರಿಂದಲೇ ಅದನ್ನು ಸಂವಾದ ರೂಪಿಯಾಗಿ ಗ್ರಹಿಸಲು ಸಾಧ್ಯವಾಯಿತು. ಹೀಗಾಗಿ ಪ್ರತ್ಯೇಕಿಸಿ ಭಿನ್ನವಾಗಿ ನೋಡುತ್ತಿದ್ದ ನೋಟಗಳ ಮಿತಿಗಳು ಅರಿವಿಗೆ ಬಂದವು. ನವ ಚಾರಿತ್ರಿಕವಾದದ ತಿರುಳು ಅಡಗಿರುವುದು ಅದು ಇತರ ಜ್ಞಾನಶಿಸ್ತುಗಳನ್ನು ನೊಡುವ ಗ್ರಹಿಸುವ ಹೊಸ ಕ್ರಮದಲ್ಲಿ. ಅಂದರೆ ನವಚರಿತ್ರಕಾರರು ಸಾಹಿತ್ಯ ಮತ್ತು ಸಾಹಿತ್ಯೇತರ ಎಂಬ ವಾದಸರಣಿಯನ್ನು ವಿರೋಧಿಸುತ್ತಾರೆ. ಬದಲಾಗಿ ಅವುಗಳ ಸಾಂಸ್ಕೃತಿಕ ಮಹತ್ವಕ್ಕೆ ಹೆಚ್ಚಿನ ಗಮನ ನೀಡುತ್ತಾರೆ. ಹೀಗಾಗಿ ಚರಿತ್ರೆಯು ಕೇವಲ ಗತವನ್ನು ಗ್ರಹಿಸುವ ಮೊತ್ತವಾಗಿ ಮಾತ್ರ ಅನಾವರಣಗೊಂಡಿಲ್ಲ. ಅಂತೆಯೇ ಕೇವಲ ವಾಸ್ತವಿಕತೆಯನ್ನು ಹೇಳುವ ಶಿಸ್ತು ಅಲ್ಲ ಎಂಬುದು ಮನವರಿಕೆಯಾಯಿತು. ಇದೊಂದು ನಿರಂತರತೆಯ ಪ್ರಕ್ರಿಯೆಯು ಹೌದು. ಚರಿತ್ರೆಯನ್ನು ಹೊಸದಾಗಿ ನೋಡಿ ಗ್ರಹಿಸಿ ವಿಶ್ಲೇಸಿಸುವ ಚಿಂತನೆಯನ್ನು ನವಚರಿತ್ರಕಾರರು ಹುಟ್ಟುಹಾಕಿದರು. ಇದರಿಂದ ಸಾಹಿತ್ಯ ಮತ್ತು ಚರಿತ್ರೆಯ ಅಂತರ್‌ಶಿಸ್ತೀಯ ನೆಲೆಗಳು ಸಹ ಅಸ್ತಿತ್ವಕ್ಕೆ ಬಂದವು. ಅಷ್ಟೇ ಅಲ್ಲದೇ

ಪಠ್ಯವೊಂದನ್ನು ಬಹುಮುಖಿನೆಲೆಗಳಿಂದಲೂ ಪರಿಭಾವಿಸಲು, ಅನುಸಂಧಾನಗೊಳಿಸಲು ಸಾಧ್ಯ ಇದೆ ಎಂಬುದು ಅನುಭವಕ್ಕೆ ಬಂದಿತು."[9] ಚರಿತ್ರೆಯನ್ನು ಹೊಸದಾಗಿ ಬರೆಯುತ್ತಿರುವ ಚಿಂತಕರು ಸಾಹಿತ್ಯ ಪಠ್ಯಗಳನ್ನು ಒಂದು ಚೌಕಟ್ಟಿಗೆ ಕಟ್ಟಿ ಹಾಕುವದಿಲ್ಲ. ಅದನ್ನು ಅವಾಸ್ತವಿಕ ಎಂದು ನೋಡುವದಿಲ್ಲ." ಚರಿತ್ರೆಯನ್ನು ಕೇವಲ ಖಚಿತತೆಯ ಚೌಕಟ್ಟಿಗೆ ಜೋಡಿಸದೆ ಅದನ್ನು ಪ್ರಾತಿನಿಧಿಕವಾಗಿ, ಸಂವಾದರೂಪಿಯಾಗಿ ಅನುಸಂಧನಗೊಳ್ಳುವ ನೆಲೆಯಲ್ಲಿ ಮಂಡಿಸುತ್ತಾರೆ. ಜಾತಿ, ವರ್ಗ, ಸಂಘರ್ಷ, ಜನಾಂಗ, ಪ್ರಭುತ್ವ ಮೊದಲಾದುವುಗಳನ್ನು ನವಚರಿತ್ರೆಕಾರರು ತಮ್ಮ ವಿಶ್ಲೇಷಣೆಗಳ ಮುಖೇನ ಪರಿಶೀಲನೆ ಮಾಡಿದ್ದಾರೆ. ಅಧಿಕಾರದ ಸ್ತರಗಳ ಮೂಲಕ ಚರಿತ್ರೆಯು ಇನ್ನಿತರೆ ಚಹರೆಗಳನ್ನು, ಸ್ತರಗಳನ್ನು ತಿಳಿದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ ಎಂಬುದು ಇವರ ನಿಲುವು. ಪರಿಚಿತವಾದ ಅರ್ಥಗಳಿಂದ ಹೊರತುಪಡಿಸಿಯು ಚರಿತ್ರೆಯನ್ನು ನೋಡಲು ಸಾಧ್ಯವಿದೆ ಎಂಬುದೇ ಇವರ ಅಚಲವಾದ ನಂಬಿಕೆ."[10]

ಸಾಹಿತ್ಯ ಪಠ್ಯವನ್ನು ಕತೃವಿನ ದೃಷ್ಟಿಯಿಂದ, ಕಾಲದ ದೃಷ್ಟಿಯಿಂದ ಪರಿಶೀಸುವ ಕ್ರಮವನ್ನು ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಓದುಗನ ನೆಲೆಯಲ್ಲಿ ಅದನ್ನು ನೋಡುವುದು ಮುಖ್ಯ ಎಂದು ಬಾವಿಸಲಾಗುತ್ತಿದೆ. "ಒಂದು ಕೃತಿಯ ಓದು ಅಂದರೆ ಎಲ್ಲವನ್ನು ಕಳಿಚಿ ಓದುವ ನಿರ್ಲಿಪ್ತ ಕ್ರಮ ಅಲ್ಲ ಎಂಬುದು ನವ ಚರಿತ್ರಕಾರರ ವಾದ. ಅಂದರೆ ಓದುಗನ ಐಡಿಯಲಾಜಿಗಿಂತ ಭಿನ್ನವದ ದೃಷ್ಟಿಕೋನವನ್ನು ಹೊಂದಿರುವ ಲೇಖಕನ ಕೃತಿಯೊಂದನ್ನು ಓದುವಾಗ ಅದರಲ್ಲಿನ ವಿಚಾರಗಳನ್ನು ಈಗಾಗಲೇ ಅಂತರ್ಗತವಗಿರುವ ತನ್ನ ಸಂಸ್ಕೃತಿಯ ಪೂರ್ವಗ್ರಹಿಕೆಗಳಿಗೆ ಹೊಂದಿಸಿಕೊಂಡು, ಓದಿ ವ್ಯಾಖ್ಯಾನಿಸಿಕೊಳ್ಳುವ ಕ್ರಮ ಎಂಬುದು ಇವರ ವಾದ. ಇಲ್ಲಿ ಎಲ್ಲ ಪ್ರದೇಶ, ಕಾಲಗಳಿಗೂ ಅನ್ವಯವಾಗುವ ಮಾನವೀಯ ಮೌಲ್ಯಗಳು ಪ್ರಾತಿನಿಧಿಕವಾಗಿ ಓದಿಸಿಕೊಂಡು ಹೋಗುವ ಪರಿಪಾಠವನ್ನು ಓದುಗ ಹೊಂದಿರುತ್ತಾನೆ. ಆದರೆ ಇದ್ದದ್ದನ್ನು ಇದ್ದ ಹಾಗೆಯೇ ನಿರ್ಲಿಪ್ತವಾಗಿ ವ್ಯಾಖ್ಯಾನಿಸಿಲು ಸಾಧ್ಯ ಎಂಬುದನ್ನು ಮಾನವತವಾದಿ ಆದರ್ಶೀಕರಣದ ಭ್ರಮೆ ಎಂತಲೇ ಇವರು ವಾದಿಸುತ್ತಾರೆ. ಏಕೆಂದರೆ ಲೇಖಕನಂತೆ ಓದುಗನು ಕೂಡ ತನ್ನ ಕಾಲದ ಸಾಮಾಜಿಕ ಸನ್ನಿವೇಶ ಐಡಿಯಲಾಜಿಗಳಿಂದಲೇ ರೂಪತಳಿಯುತ್ತಿರುತ್ತಾನೆ."[11] ಸಾಹಿತ್ಯ ಪಠ್ಯವನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಅದನ್ನು ಕೇವಲ ಲೇಖಕನ ಸೃಷ್ಟಿ ಎಂದು ಮಾತ್ರ ಬಾವಿಸುವದಿಲ್ಲ. ಅದು ಕಾಲಾಂತರದೊಳಗೆ ಬೆಳೆಯುವ ಪ್ರಕ್ರಿಯೆ ಎಂದು ತಿಳಿಯುತ್ತಾರೆ. ಇದರಿಂದ ಚರಿತ್ರೆಯನ್ನು ಕಟ್ಟುವಿಕೆಗೆ ಹೊಸ ವಿನ್ಯಾಸವೊಂದು ದೊರೆಯುತ್ತದೆ.

"ಭೂತಕಾಲದ ಪಠ್ಯಗಳನ್ನು ವಿಮರ್ಶಿಸುವಾಗ ವರ್ತಮಾನವನ್ನು ಜೋಡಿಸಿ ಕೊಟ್ಟು ತೆಗೆದುಕೊಳ್ಳುವ ಅನುಸಂಧಾನ ಪ್ರಕ್ರಿಯೆಯನ್ನು ನವಚರಿತ್ರೆಕಾರರು ಅನುಸರಿಸುವುದುಂಟು ಇದರಿಂದ ಹಿಂದಿನ

ಪಠ್ಯಗಳ ವ್ಯಾಖ್ಯಾನದ ಮೂಲಕವೇ ಸಮಕಾಲೀನ ಸನ್ನಿವೇಶದ ಜಾತಿ, ಲಿಂಗ, ವರ್ಣ ಮೊದಲಾದ ಸಮಾಜದ ವಿಭಿನ್ನ ಅಧಿಕಾರದ ವಿನ್ಯಾಸಗಳನ್ನು ಗ್ರಹಿಸಲು ಸಾಧ್ಯ. ಉದಾಹರಣೆಗೆ ಹಿಂದಿನ ರಾಜಪ್ರಭುತ್ವಗಳನ್ನು ಇಂದಿನ ಹೊಸ ಸರಕಾರಗಳೊಂದಿಗೆ ಹೋಲಿಸಿ ನೋಡುವಂತದು."[12] ಯಾವುದೋ ಕಾಲದಲ್ಲಿ ರಚನೆಯಾದ ಪಠ್ಯಯೊಂದನ್ನು ವಾಸ್ತವದ ಸಂದರ್ಭಗಳಿಗೆ ಸಮೀಕರಿಸುವ ಚಾರಿತ್ರಿಕ ಕ್ರಮವೂ ಮುನ್ನೆಲೆಗೆ ಬರುತ್ತಿದೆ. ಪಠ್ಯವನ್ನು ಸಾಂಸ್ಕೃತಿಕ ರಚನೆಯಾಗಿ ಕಾಣಲಾಗುತ್ತಿದೆ. ಅದೊಂದು ಭಾಷಿಕ ಆಯಾಮ. ಭಾಷಿಕ ಸೃಷ್ಟಿಯ ಸಂದರ್ಭಗಳು ಕಾಲವನ್ನು ಕಟ್ಟಿಕೊಡುವ ಸಂಗತಿಗಳು ಆಗಿರುತ್ತವೆ. ಆದ್ದರಿಂದ ಪಠ್ಯವೊಂದು ಕಾಲಾತೀತವಾದ ಸಂವಾದವನ್ನು ಹೊಂದಿರುತ್ತದೆ. ಅದು ಚರಿತ್ರೆಯ ನಿರ್ಮಾಣಕ್ಕೆ ಹೊಸ ಹೊಳುವುಗಳನ್ನು ನೀಡುತ್ತದೆ.

"ಇಂದು ಪಠ್ಯದ ಚಾತ್ರಿರಿಕತೆ ಹಾಗು ಚಾರಿತ್ರಿಕ ಪಠ್ಯಾತ್ಮಕತೆಯ ಸಿದ್ಧಸೂತ್ರಗಳು ಚಾಲ್ತಿಯಲ್ಲಿವೆ. ಭಾಷೆ ಹಾಗು ಸಮಾಜದ ಸಂಬಂಧಗಳು ಸಹಿತ್ಯದ ಪರಿಭಾಷೆಯನ್ನು ಚಲನಶೀಲವನ್ನಾಗಿಸುವುದರ ಜೊತೆಗೆ ಒಂದು ಸಂಕಥನವನ್ನೇ ಹುಟ್ಟುಹಾಕಿವೆ. ಇತ್ತೀಚಿನ ವಿಮರ್ಶಾ ನೆಲೆಗಳು ಸಾಂಸ್ಕೃತಿಕ ಸಂಕಥನದ ಜೊತೆಗೆ ಸಮಾಜಿಕ ಚಳುವಳಿಗನ್ನು ಸಹ ಹುಟ್ಟು ಹಾಕುವಷ್ಟರ ಮಟ್ಟಿಗೆ ಪ್ರಬಲತೆ ಹೊಂದಿರುವಂತದ್ದು. ಹೀಗಾಗಿ ಸಹಿತ್ಯದ ಸಾಮಾಜಿಕ ನೆಲೆಗಳ ಪರಿಣಾಮ ಏಕಮುಖಿ ನೆಲೆಯದ್ದಲ್ಲ ಎಂಬುದನ್ನು ಋಜುವಾತುಪಡಿಸಿದೆ. ಅಂದರೆ ಬರಹ, ಓದು ಹಾಗೂ ಗ್ರಹಿಕೆಯ ಸನ್ನಿವೇಶಗಳು ಸಮಾಜದಿಂದ ಪ್ರಭಾವಕ್ಕೆ ಒಳಗಾಗುತ್ತಿರುತ್ತವೆ. ಆದ್ದರಿಂದ ಚಾರಿತ್ರಿಕ ಸಂದರ್ಭ, ಸಮಾಜ ಹಾಗು ವಿಮರ್ಶಾ ವಿಧಾನಗಳ ವಿಶ್ಲೇಷಣೆಯ ಮೇಲೆ ಪ್ರಭಾವ ಬೀರುವಷ್ಟರಮಟ್ಟಿಗೆ ಗಾಢವಾಗಿರುತ್ತದೆ ಎಂಬುದನ್ನು ಇತ್ತೀಚಿನ ನವ ಚಾರಿತ್ರಿಕವಾದದ ಚಿಂತಕರು ನಿರೂಪಿಸಿದ್ದಾರೆ."[13] ಹೀಗಾಗಿ ಸಾಹಿತ್ಯ ರಚನೆಯು ಲೇಖಕನ ಸೃಷ್ಟಿ ಮಾತ್ರ ಆಗಿರುವದಿಲ್ಲ. ಸಮಾಜಿಕ ಚಾರಿತ್ರಿಕ ಅಂಶಗಳು ಕೂಡ ಪಠ್ಯದ ರಚನೆಯಲ್ಲಿ ಪ್ರಭಾವಕಾರಿ ಅಂಶಗಳಾಗಿರುತ್ತವೆ. ಸಾಹಿತ್ಯವು ಆಯ ಕಾಲದ ವಾಸ್ತವಾಂಶಗಳನ್ನು ಹೀರಿಕೊಂಡು ಕಲ್ಪನೆಯ ವಿಲಾಸದಲ್ಲಿ ರೂಪಗೊಂಡಿರುವದನ್ನು ಗಮನಿಸಬೇಕು. ಅದು ಚರಿತ್ರೆಯ ರಚನೆಗೆ ಸಹ ಸಂಗಾತಿಯಾಗಿರುತ್ತದೆ. ಹಾಗೆ ಅದನ್ನು ನೇರವಾಗಿ ಬಳಿಸಿಕೊಳ್ಳುವಾಗ ಅದರ ಸಾಂಸ್ಕೃತಿಕ ಅಂಶಗಳನ್ನು ನೊಡಬೇಕು. ಜಾತೀಯತೆಯ ಸಮಾಜದಲ್ಲಿ ಕೆಲವು ಸಂದರ್ಭದಲ್ಲಿ ವಸ್ತುನಿಷ್ಟ ಮಾದರಿಗಿಂತ ಜಾತಿನಿಷ್ಟ ಮಾದರಿಯನ್ನು ಅನುಸರಿಸಿ ಚರಿತ್ರೆಯ ರಚನೆಗೆ ತೊಡಕನ್ನುಂಟುಮಾಡಬಹುದು. ಚರಿತ್ರೆಯನ್ನು ರಚಿಸುವವರು ತಮ್ಮ ಪೂರ್ವಗ್ರಹಗಳಿಂದ ಹೊರಬಂದು ಪಠ್ಯವನ್ನು ನೋಡಬೇಕಾಗುತ್ತದೆ. ಯಾಕೆಂದರೆ ಭಾರತದಲ್ಲಿ ಸಾಹಿತ್ಯ ಪಠ್ಯಗಳೇ ಚರಿತ್ರೆಯ ಕ್ರಿಯೆಯನ್ನು ನೆರವೇರಿಸಿವೆ. ಆದ್ದರಿಂದ ಚರಿತ್ರೆಯನ್ನು ಸಾಹಿತ್ಯದ ಮುಖೇನ ಕಟ್ಟಿಕೊಳ್ಳುವಾಗ ಪಠ್ಯಗಳನ್ನು ಸೂಕ್ಷ್ಮವಾಗಿ ಶೋಧಿಸಬೇಕಾಗುತ್ತದೆ.

“ಭಾರತ ಬಹುದೊಡ್ಡ ಬೌದ್ಧಿಕ ಸಂಪತ್ತನ್ನು ಸೃಷ್ಟಿಸಿದೆ. ವೇದಗಳು, ಉಪನಿಷತ್ತುಗಳು, ಪುರಾಣಗಳು, ಬೌದ್ಧ ಸಾಹಿತ್ಯ, ಜೈನ ಸಾಹಿತ್ಯ, ನೂರಾರು ಭಾಷೆಗಳು, ಶಾಸನಗಳು ಹೀಗೆ ಬಹುಶಃ ಜಗತ್ತಿನ ಬೇರಾವ ನಾಗರೀಕತೆ, ರಾಷ್ಟ್ರಗಳು ಸೃಷ್ಟಿಸಲಾರದಷ್ಟು ಸಂಪತ್ತನ್ನು ಸೃಷ್ಟಿಸಿದೆ. ಸುಲಭವಾಗಿ ಯಾವುದೇ ಸೃಜನಶೀಲ ಪ್ರತಿಭೆಗೆ ಊಹಿಸಲು ಚಿತ್ರಿಸಿಕೊಳ್ಳಲು ಮತ್ತು ಕ್ಷಿತಿಜಕ್ಕೆ ತಂದುಕೊಳ್ಳಲು ಸಾಧ್ಯವಾಗದ ವೇದಗಳು, ಮಹಾಭಾರತ ರಾಮಾಯಣಗಳು ಸೃಷ್ಟಿಯಾಗಿವೆ. ಭಾರತ ಪ್ರಾಚೀನ ಕೃತಿಗಳನ್ನು ಚರಿತ್ರೀಕರಿಸುವ ಬೌದ್ಧಿಕ ಕಸರತ್ತುಗಳು ನಡೆಯುತ್ತಿದ್ದರೂ ಅದು ನಮ್ಮ ವೈಜ್ಞಾನಿಕ ಕ್ರಮದ ಮೂಲಕ ಕಲ್ಪನೆಗೆ ದಕ್ಕಬಹುದಾದ ಚರಿತ್ರೆಯೆ ವಿನಃ ಯುರೋಪ್ ನಿರ್ವಚಿಸಿದ ಚರಿತ್ರೆ ರಚನಾಕ್ರಮದ ಆಧಾರದ ಮೇಲೆ ಬಂದ ಕೃತಿಗಳಾಗುವದಿಲ್ಲ.[14] ಸಾಹಿತ್ಯದ ಒಳಗಡೆ ಚರಿತ್ರೆಯ ಸಂಗತಿಗಳು ಯಾವ ರೀತಿಯಲ್ಲಿ ಅಡಕಗೊಂಡಿವೆ ಎಂಬುದನ್ನು ಈಗಾಗಲೇ ಶೋಧಿಸಲಾಗಿದೆ. ಅವೆಲ್ಲವು ಕೂಡ ರಾಜತ್ವದ ವಿದ್ಯಮಾನಗಳನ್ನೇ ಹೆಚ್ಚಾಗಿ ನಿರೂಪಿಸುತ್ತವೆ. ಸಾಮನ್ಯರ ಜೀವನ ವಿವರಗಳು ಯಾವ ನೆಲೆಯಲ್ಲಿ ನಿರೂಪಿತಗೊಂಡಿವೆ ಎಂಬುದನ್ನು ಗಮನಿಸಿ ಚರಿತ್ರೆಯನ್ನು ರಚಿಸಬೇಕಾಗುತ್ತದೆ. ಏಕೆಂದರೆ ಸಾಮನ್ಯರ ನೆಲೆಯಲ್ಲಿ ಚರಿತ್ರೆಯನ್ನು ರೂಪಿಸಲಾಗಿಲ್ಲ.

“ಭಾರತೀಯರು ಪುರಾಣಪ್ರಿಯರು. ವಾಸ್ತವವನ್ನು ಪುರಾಣೀಕರಣಗೊಳಿಸುವ ಮನೋಧರ್ಮದ ಕಾರಣದಿಂದಲೇ ಪಶ್ಚಿಮದವರಂತೆ ಚರಿತ್ರೆಯನ್ನು ನೋಡುವ ಕ್ರಮವಿರಲಿಲ್ಲ. ಇವರು ಬದುಕಿದ್ದು, ಬದುಕನ್ನು ಕಟ್ಟಿಕೊಂಡ ಬಗೆಯನ್ನು ದಾಖಲಿಸಿದ್ದು ಪ್ರಮುಖವಾಗಿ ಮೌಖಿಕಕ್ರಮದಲ್ಲಿ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಧಾರ್ಮಿಕ ವಿಚಾರಗಳಿಗೆ ಕಥನಗಳಿಗೆ ಕೃತ, ತ್ರೇತ , ದ್ವಾಪಾರ, ಕಲಿಯುಗಗಳನ್ನು ಯುಗಗಳ ಪರಿಕಲ್ಪನೆಯಲ್ಲಿ ಅರ್ಥೈಸಿಕೊಂಡರು. ಪ್ರತಿ ಯುಗವು ವಿಭಿನ್ನ ಬಗೆಯ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಸಣ್ಣ ಸಣ್ಣ ಕ್ರಿಯೆಗಳಲ್ಲಿ ಅನಾವರಣಗೊಳ್ಳುವ, ತೆರೆದುಕಳ್ಳುವ ಬದುಕನ್ನು ದಾಖಲಿಸಿಬೇಕೆಂಬ ಹಂಬಲ ಅದಕ್ಕೆ ಬಾರದಿದ್ದನ್ನು ಗಮನಿಸಬಹುದು. ಆದರೆ ಅಕ್ಷರ ಸಮುದಾಯದಿಂದ ಹೊರಗುಳಿವ ಸಮುದಾಯಗಳು ತಮ್ಮ ಬದುಕನ್ನು ದಾಖಲಿಸಿಕೊಂಡದ್ದು ತಮ್ಮ ಮೌಖಿಕ ಪರಂಪರೆಯಲ್ಲಿ. ದೊಡ್ಡ ಪ್ರಮಾಣದಲ್ಲಿ ಸಂಚಿತಗೊಂಡ ಈ ಪರಂಪರೆಯ ಆಳ ತುಂಬಾ ವಿಸ್ತಾವದುದು. ವಿಭಿನ್ನ ಕಾಲಘಟ್ಟಗಳಲ್ಲಿ ಚರಿತ್ರೆಗೆ ಮುಖಾಮುಖಿಯಾಗಿಯೇ ರೂಪುಗೊಂಡ ಪ್ರಕಾರವಿದು. ಅದರಲ್ಲಿ ವಾಸ್ತವದ ನೆಲೆಗಳಿವೆ. ಆದರೆ ಅವುಗಳನ್ನು ಸರಿಯಾಗಿ ಅರ್ಥೈಯಿಸಿಕೊಳ್ಳಲು ಈಗಿರುವ ಚರಿತ್ರೆಯ ಸಂಶೋಧನಾ ವಿಧಾನದಿಂದ ಸಾಧ್ಯವಾಗುವದಿಲ್ಲ.”[15] ಮೌಖಿಕತೆಯನ್ನು ಚರಿತ್ರೆಯ ನಿರ್ಮಾಣದಲ್ಲಿ ಮುಖ್ಯವೆಂದು ಪರಿಗಣಿಸಲಾಗುತ್ತಿದೆ. ಯಾವುದನ್ನು ಅಮುಖ್ಯವೆಂದು ಬಾವಿಸಲಾಗುತ್ತಿತ್ತೋ ಅದನ್ನೇ ಆಕರವನ್ನಾಗಿಸುವ ಯತ್ನಗಳು ನಡೆಯುತ್ತಿವೆ. ಇದು ವೇಗವಾಗಿ ಬೆಳೆಯುತ್ತಿರುವ ಜೀವನ

ಗತಿಯನ್ನು ನಿರೂಪಿಸಲು ಮತ್ತು ಸಾಮಜಿಕವಾಗಿ ಅಂಚಿನಲ್ಲಿರುವವರಿಗರೆ ಸಾಂಸ್ಕೃತಿಕ ಪ್ರಾತಿನಿಧ್ಯವನ್ನು ತಂದುಕೊಡಲು ಚರಿತ್ರೆಯ ಮರುರಚನೆಯಲ್ಲಿ ಮೌಖಿಕತೆಯನ್ನು ಪರಿಗಣಿಸಬೇಕಾಗುತ್ತದೆ.

"ಚರಿತ್ರೆಯನ್ನು ರಚಿಸುವಾಗ ಚರಿತ್ರೆಕಾರರು ಲಿಖಿತ ಗ್ರಂಥಗಳು, ಪತ್ರಗಳು, ಪತ್ರಿಕೆಗಳು, ದಿನಚರಿಗಳು, ಸರ್ಕಾರಿ ದಾಖಲೆಗಳು, ಅಲ್ಲದೆ ಸ್ಮಾರಕಗಳು, ಮ್ಯೂಸಿಯಂ ಇತ್ಯಾದಿಯನ್ನು ಆಧರಿಸುತ್ತಾರೆ. ಅಂದರೆ ಎಲ್ಲಾ ಐತಿಹಾಸಕ ಬರಣಿಗೆಗೆ ಹಿಂದಿನಿಂದ ಉಳಿದು ಬಂದ ಮಾಹಿತೆಯನ್ನೇ ಆಧರಿಸಲಾಗುತ್ತದೆ. ಹಾಗೆಯೇ ಸ್ಮರಣೆಲ್ಲಿ ಉಳಿದ ಅಥವಾ ಜನರ ಬಾಯಿಂದ ಹರಿದು ಬಂದ ವಿಚಾರಗಳು ಉತ್ತಮವಾದ ಮಾಹಿತಿಯನ್ನು ನೀಡುತ್ತವೆ ಎನ್ನುವುದನ್ನು ಮರೆಯಲಾಗದು. ಅವರ ಸ್ಮರಣೆಯಲ್ಲಿ ಉಳಿದ ವಿಚಾರವನ್ನು ಇತಿಹಾಸವಾಗಿ ರೂಪಾಂತರಗೊಳಿಸುವ ನಡುವಿನ ಪ್ರಕ್ರಿಯೆಯೆ ಮೌಖಿಕ ಇತಿಹಾಸ. ಆದ್ದರಿಂದ ಮೌಖಿಕ ಇತಿಹಾಸ ಚರಿತ್ರೆಯ ಒಂದು ಪ್ರಕಾರವಾಗದೆ ಆಧಾರಗಳಲ್ಲಿನ ಒಂದು ಬಗೆಯಾಗುತ್ತದೆ.  ಮೌಖಿಕ ಇತಿಹಾಸ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಉಳಿದ ಬಗೆಗಳಂತಲ್ಲದೆ ಅದು ಬದುಕಿರುವ ವ್ಯಕ್ತಿಗಳೊಡನೆ ವ್ಯವಹರಿಸುತ್ತದೆ. ಮೌಖಿಕ ಇತಿಹಾಸ ಚರಿತ್ರೆಗೆ ಮಾತ್ರವಲ್ಲದೆ ಜಾನಪದ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜೀವನ ಚರಿತ್ರೆ ಮುಂತಾದ ಶಾಸ್ತ್ರಗಳ ರಚನೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ."[16]

ಅನಕ್ಷರಸ್ತರನ್ನು ನಮ್ಮ ಜ್ಞಾನಶಾಖೆಯಲ್ಲಿ ಮುಖ್ಯವೆಂದು ಬಾವಿಸುವದಿಲ್ಲ. ಅವರು ಒಡಮೂಡಿಸುವ ಸಂಗತಿಗಳು ಮುಖ್ಯವಾಗುವದಿಲ್ಲ. ಇಂದು ಅವರ ಮನೋಭವದ ಅಭಿವ್ಯಕ್ತಿಗಳು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಲಿಖಿತ ದಾಖಲೆಗಳ ಜೊತೆಗೆ ಅಲಿಖಿತ ಆಕರಗಳು ಕೂಡ ಚರಿತ್ರೆಯ ರಚನೆಗೆ ಅಗತ್ಯವಾಗುತ್ತವೆ ಎಂಬುದನ್ನು ಮನಗಾಣಲಾಗುತ್ತಿದೆ. ಅಲಿಖಿತವಾದುವು ಮೌಖಿಕ ಸ್ವರೂಪಲ್ಲಿರುತ್ತವೆ. ಅವುಗಳನ್ನು ಶೋಧಿಸಿ ಚರಿತ್ರೆಯ ರಚನೆಗೆ ಬಳಿಸಿಕೊಳ್ಳುವ ಚಿಂತನೆಗಳು ಬೆಳೆಯುತ್ತಿವೆ. ಇವು ಸಾಹಿತ್ಯಿಕ ಅಂಶಗಳನ್ನು ಒಳಗೊಂಡಿರುತ್ತವೆ. ಇದು ಸಾಮಾಜಿಕ ಸಂವೇದನೆಯ ಸಂಬಂಧವನ್ನು ಹೊಂದಿರುತ್ತದೆ.

"ಯಾವುದೇ ಚರಿತ್ರೆಯ ರಚನೆಗೆ ಮೂಲಭೂತವಾಗಿ ಸಾಮಾಜಿಕ ಅಗತ್ಯವಿರಬೇಕು. ಸಮಾಜದಿಂದ ದೂರವಾದ, ಅದಕ್ಕೆ ಬೇಡವಾದ ವಿಚಾರವೊಂದರ ಅಧ್ಯಯನದ ಫಲವಾದರು ಏನ? ಚರಿತ್ರೆಯ ರಚನೆಗೆ ಸಾಮಾಜಿಕ ಅಗತ್ಯವಿರುವದರಿಂದ ಚರಿತ್ರೆಕಾರರು ಹಲವು ಬಾರಿ ಅತೀ ಎಚ್ಚರಿಕೆ ವಹಿಸುವುದು ಅಥವಾ ಆವೇಶಭರಿತವಾಗುವುದು ಕೂಡ ಕಂಡುಬರುತ್ತದೆ. ಇಂತಹ ಇತಿಹಾಸ ರಚನೆಗೆ ಪೂರಕವಾದ ಸಾಮಗ್ರಿಯಾಗಿ ನಿಲ್ಲಬಲ್ಲ ಮೌಖಿಕ ಇತಿಹಾಸ ಸಮಾಜಮುಖಿಯಾದುದು.

ಸಮಾಜದಲ್ಲೇ ಹುಟ್ಟಿ ಸಮಾಜವನ್ನೇ ತಲುಪುವ ಇದು ಸಮಾಜದ ನಾಡಿ ಮಿಡಿತವನ್ನು ಅರಿಯುವ ಪ್ರಯತ್ನ ಮಾಡಿತ್ತದೆ."[17]

ಸಾಮಾಜಿಕ ವಿನ್ಯಾಸವನ್ನು ಮರುರೂಪಿಸುವುದು ಚಾರಿತ್ರಿಕವಾಗಿ ಮುಖ್ಯವಾದುದು. ಚರಿತ್ರೆಯಲ್ಲಿ ಸಾಮಾಜಿಕ ಅಂಶಗಳು ಮುಖ್ಯವಾಗಿ ಕಾಣಿಸಿಕೊಳ್ಳುವುದಿಲ್ಲ. ಅವು ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮಾಜಿಕವಾದ ವಾಸ್ತವವೊಂದು ಸಾಹಿತ್ಯದಲ್ಲಿ ಅನಾವರಣಗೊಳ್ಳುವುದರಿಂದ ಅದು ಚರಿತ್ರೆಯ ರಚನೆಗೆ ಅಗತ್ಯ ಮಾಹಿತಿಯಾಗುತ್ತದೆ. ಸಾಹಿತ್ಯ ರಚನೆಯು ಚರಿತ್ರೆಯ ರಾಜಕೀಯ ಸಂಗತಿಗಳಿಂದ ಪ್ರೇರಿತವಾಗಿದ್ದರೂ ಅದರ ನಿರೂಪಣೆಯ ವಿಧಾನವು ಹೊಸ ಹೊಳವನ್ನು ನೀಡುತ್ತದೆ. "ಈವರೆಗೆ ಚರಿತ್ರೆಕಾರ ಕತೆ ಹೇಳುವವನಾಗಿದ್ದು ಚರಿತ್ರೆಯಲ್ಲಿ ಆಧಾರಗಳ ಪರವಾಗಿ ತಾನೆ ಮಾತನಾಡುತ್ತಾ ಹೋಗುತ್ತಿದ್ದ. ಮೌಖಿಕ ಚರಿತ್ರೆಯಲ್ಲಿ ಮೊದಲು ಕೇಳುಗನಾಗುತ್ತಾನೆ. ಅನಂತರ ತಾನು ಕೇಳಿದ ನಿರೂಪಣೆಯನ್ನು ವಿಶ್ಲೇಷಿಸಿ ಚರಿತ್ರೆಯ ನಿರ್ಮಾಣಕ್ಕೆ ತೊಡಗುತ್ತಾನೆ. ಕೇಳುವ ವಿಚಾರ ವ್ಯಕ್ತಿಯೊಬ್ಬನ ವೈಯಕ್ತಿಕ ಬದುಕಿನ ಇಲ್ಲವೆ ಸಾಮಾಜಿಕ ಬದುಕಿನ ಅನುಭವವಾಗಿರುತ್ತದೆ. ಅನುಭವಗಳಲ್ಲಿ ಜೀವಂತಿಕೆ ತುಂಬಿರುತ್ತದೆ. ಎಲ್ಲರೂ ತಮ್ಮ ಬದುಕಿನ ಅನುಭವಗಳನ್ನು ಬರೆದಿಡಲಾರರು. ಬರೆಯಬಲ್ಲವರು ಸಹ ತಮಗೆ ಹೇಳಿಕೊಳ್ಳಬೇಕೆನಿಸುವ ವಿಚಾರಗಳನ್ನು ಮಾತ್ರವೇ ಬರೆದಿಡುತ್ತಾರೆ. ಬರವಣಿಗೆಯ ಸಂದರ್ಭದಲ್ಲಿ ಹೇಳಲಾಗದ್ದನ್ನು ಮಾತಾಡುವಾಗ ನೈಜವಾಗಿ ಹೇಳಬಲ್ಲರು. ಇಲ್ಲಿ ಚರಿತ್ರೆಕಾರನ ಬರವಣಿಗೆ ಜೀವಂತಿಕೆಯನ್ನು ಮೈಗೂಡಿಸಿಕೊಳ್ಳಬಹುದು." [18]

ಜನರ ದೈನಂದಿನ ಜೀವನ ಕ್ರಮವೊಂದು ಎಲ್ಲಿಯು ದಾಖಲಾಗದೆ ಹೋಗುತ್ತದೆ. ವೇಗವಾಗಿ ಚಲಿಸುವ ಜೀವನವನ್ನು ಒಂದೆಡೆ ದಾಖಲಿಸುವುದು ಸವಾಲಿನ ಸಂಗತಿಯೆ. ಮರೆಯಾಗುವ ಜೀವನಕ್ರಮವನ್ನು ದಾಖಲಿಸುವುದರ ಅಗತ್ಯ ಆಯಾ ಸಮುದಾಯಗಳಿಗೆ ಅನನ್ಯತೆಯನ್ನು ತಂದುಕೊಡುವುದೆ ಆಗಿದೆ. ಅದು ಮೌಖಿಕ ಆಕರಗಳಿಂದ ಸಾಧ್ಯವಾಗಬಹುದು. ಆ ರಿತೀಯ ಪ್ರಯತ್ನಗಳು ನಡೆಯುತ್ತಿವೆ. "ಸಾಮಾನ್ಯರ ಸಾಮಾಜಿಕ ಬದುಕಿನ ಅತಿಮಾನುಷ ಅಭಿವ್ಯಕ್ತಿಯೇ ಮೌಖಿಕ ಇತಿಹಾಸ. ಸಮಾಜದಲ್ಲಿ ತಾವು ಅನುಭವಿಸುವ ದೈನಂದಿನ ಸುಖದುಃಖಗಳೆನ್ನೆಲ್ಲ ಬೇರೆ ಬೇರೆ ಪಾತ್ರಗಳಲ್ಲಿ, ಘಟನೆಗಳಲ್ಲಿ, ಹಳೆಯ ಕಥನಗಳಲ್ಲಿ, ಆಚರಣೆಗಳಲ್ಲಿ ಜನಪದರು ಪ್ರತಿಸೃಷ್ಟಿಸಿಕೊಳ್ಳುವುದು ಸಾಮನ್ಯ ಸಂಗತಿ. ಹೀಗೆ ಖಾಸಿಗಿ ಬದುಕಿನ ಎಲ್ಲ ಸೋಲು- ಗೆಲುವು, ಆಶೆ-ನಿರಾಶೆ, ಕನಸು-ಆಶಯಗಳನ್ನೆಲ್ಲ ಸಾರ್ವಜನಿಕವಾಗಿ ಹಾಡಿಕೊಳ್ಳುತ್ತಲೇ ಜನಪದರು ಪುರಾಣ-ಐತಿಹ್ಯ-ಆಚರಣೆಗಳ ಪರಕಾಯ ಪ್ರವೇಶವನ್ನು ಮಾಡಿ ತಮ್ಮ ಒಡಲ ಕಿಚ್ಚನ್ನು ಪರಿಹರಿಸಿಕೊಳ್ಳುತ್ತಾರೆ. ಖಾಸಗಿಯಾದುದ್ದನ್ನೆಲ್ಲ ಜನಪದರು ತಮ್ಮ ಮೌಖಿಕ ಪರಂಪರೆಯ ನಿರೂಪಣೆಗಳಿಗೆ ವರ್ಗಾಯಿಸಿ ಅವುಗಳಲ್ಲಿ ಪರಕಾಯ ಪ್ರವೇಶ ಮಾಡುವುದರಿಂದ ಅವರು ಚರಿತ್ರೆಯ ಜೊತೆಗೆ

ಮುಖಾಮುಖಿಯಾಗುತ್ತಿರುತ್ತಾರೆ. ನಿನ್ನೆಯ ಮಹಿಳೆಯ ದುರಂತ  ಕಥನ ಗೀತೆಗಳಲ್ಲಿ ವರ್ತಮಾನದ ಮಹಿಳೆಯರು ಹೀಗೆಯೇ ಪ್ರವೇಶಗೊಂಡು ನಿನ್ನೆಯ ಇತಿಹಾಸದ ದುರಂತದ ಜೊತೆಗೆ ತಮ್ಮ ಮೌನ ಆಕ್ರಂದನವನ್ನು ಪ್ರತಿಧ್ವನಿಸುತ್ತಾರೆ. ಕೆರೆಗೆ ಹಾರವಾದ ಭಾಗೀರಥಿ ಇಲ್ಲಿ ಕೇವಲ ಒಂದು ಬೃಹತ್ ರೂಪಕ. ಆದರೆ ಇಂತಹ ಅಸಂಖ್ಯಾತ ಜೀವಂತ ರೂಪಕಗಳು ಅಥವಾ ನಿರೂಪಕರು ನಿನ್ನೆಯ ಚರಿತ್ರೆಯನ್ನು ವರ್ತಮಾನದ ಅನುಭವದಿಂದ ಪುನರ್ ಅಭಿನಯಿಸುತ್ತಿರುತ್ತಾರೆ. ಹೀಗಾಗಿ ಗತಕಾಲದ ಪುನರ್ ಅಭಿನಯವೇ ಮೌಖಿಕ ಇತಿಹಾಸವಾಗಿ ಕಾಣುವುದು."[19]

ಮಾತಿನಲ್ಲಿರುವ ಸಾಕ್ಷಿಗಳು ವಾಸ್ತವದೊಂದಿಗೆ ಜೀವಂತಿಕೆಯನ್ನು ಪಡೆದಿರುತ್ತವೆ. ಅವು ಸಾಹಿತ್ಯದೊಂದಿಗೆ ಬೆರೆತುಕೊಂಡಿರುತ್ತವೆ. ಏಕಕಾಲಕ್ಕೆ ಭೂತ–ವರ್ತಮಾನ–ಭವಿಷತ್ ಕಾಲವನ್ನು ಸಮೀಕರಿಸಿಕೊಂಡಿರುತ್ತವೆ. ಜೊತೆಗೆ ಸಮಷ್ಟಿಯನ್ನು ಒಳಗೊಂಡಿರುತ್ತವೆ. ಇದರಿಂದ ಮಾತಿನ ಸಂಕಥನಗಳು ರಾಜತ್ವದ ನೆಲೆಯಿಂದ ಸ್ಥಳೀಯ ನೆಲೆಯನ್ನು ಹೊಂದಿರುತ್ತವೆ. "ಇತಿಹಾಸದ ರಚನೆಗೆ ಬೇಕಾದುದು ಕೇವಲ ಆಧಾರಗಳು ಮಾತ್ರವೇ ಅಲ್ಲ. ಗತಕಾಲದ ಪ್ರಜ್ಞೆಯು ಸಾಕ್ಷಿಗಿಂತಲು ಮಿಗಿಲು. ಲಿಖಿತ ಆಧಾರಗಳು ವ್ಯಕ್ತಿನಿಷ್ಠವಾದುವು. ಮೌಖಿಕ ಸಾಕ್ಷ್ಯವು ಸಮಷ್ಟಿಯಾದುದು. ಹಾಗಯೇ ಲಿಖಿತಾಧಾರಗಳು ಮೃತಸ್ಥಿತಿಯಿಂದ ಗತವನ್ನು ನೆನಪಿಸಿದರೆ, ಮೌಖಿಕ ಆಧಾರಗಳು ಜೀವಂತವಾಗಿ ಬದುಕಿನ ಭಾವನೆಗಳಲ್ಲಿ ಬೆರೆತು ಹೋಗಿರುತ್ತವೆ. ಹಾಗೆಯೇ ಜನಪದರ ದೈನಂದಿನ ಚಟುವಟಿಕೆಗಳ ಭಾಗವಾಗಿರುತ್ತವೆ. ಜೀವಂತ ಸಾಕ್ಷ್ಯವೇ ಅತ್ಯುತ್ತಮ ಆಧಾರ. ಮೌಖಿಕ ಇತಿಹಾಸವು ಹೀಗೆ ಜೀವಂತ ವಿಧಾನಗಳನ್ನು ರೂಢಿಸಿಕೊಂಡಿರುವುದರಿಂದ ಚರಿತ್ರೆಯು ಅವರಿಗೆ ಯಾವತ್ತು ದೈನಂದಿನ ಕ್ರಿಯೆ. ಹೀಗೆ ದೈನಂದಿಕವಾದುದು ಚರಿತ್ರೆ ಹೇಗಾದಿತು ಎಂಬ ಅನುಮಾನ ಗುಣಾತ್ಮಕವಾದುದಲ್ಲ. ರಾಜನ ಶಾಸನಗಳನ್ನು ನಂಬುವದಕ್ಕಿಂತ ಬದುಕಿರುವ ಜನರ ಮೌಖಿಕ ಕಥನಗಳನ್ನು ವಿಶೇಷವಾಗಿ ವಿಶ್ವಸವಿಡುವುದು ತಪ್ಪಲ್ಲ. ಮೌಖಿಕ ಚರಿತ್ರೆಯಲ್ಲಿ ಸಾಕ್ಷಿಪ್ರಜ್ಞೆಯೆ ದೊಡ್ಡದು. ಅಂದರೆ ಜನಪದರ ಸಾಕ್ಷಿಯು ಭೌತಿವಾದುದಲ್ಲ. ಭೌತಿಕವಾದುದ್ದನ್ನು ಮೀರಿದ್ದು ಸಾಕ್ಷಿಪ್ರಜ್ಞೆ, ಇಂತಹ ಸಾಕ್ಷಿ ಪ್ರಜ್ಞೆಯಲ್ಲಿ ಮನುಷ್ಯ ಸಂಬಂಧಗಳನ್ನು ಮೌಖಿಕ ಚರಿತ್ರೆಯು ನಿರೂಪಿಸುತ್ತದೆ."[20]

ಸಾಹಿತ್ಯವು ಕೂಡ ಚಾರಿತ್ರಿಕ ಸನ್ನಿವೇಶಗಳನ್ನು ಒಳಗುಮಾಡಿಕೊಂಡು ಕಲಾರೂಪವನ್ನು ಪಡೆಯುತ್ತದೆ. ಹಾಗೆ ಪಡೆಯುವಾಗ ಭೌತಿಕ ವಿವರಗಳ ಜೊತೆಗೆ ತಾತ್ವಿಕ ಚಿಂತನೆಗಳನ್ನು ಒಳಗೊಂಡಿರುತ್ತದೆ. ಸಿದ್ದ ಮಾದರಿಯ ಚರಿತ್ರೆಯ ಚೌಕಟ್ಟು ಮೀರಿ ನೆಲಮೂಲದ ನೆಲೆಯಲ್ಲಿ ಅಭಿವ್ಯಕ್ತಿಯಾಗುತ್ತಿರುತ್ತದೆ. ಅಂದರೆ ಬದುಕಿನ ಲಯಗಾರಿಕೆಯನ್ನು ನಿಸರ್ಗ ಸಾತತ್ಯ ಮತ್ತು ಮಾನವಧರ್ಮದ ತುಯ್ತದೊಂದಿಗೆ ಶೋಧಿಸುವ ಆಲೋಚನೆ ಮಾಡುತ್ತಿರುತ್ತದೆ. ಇದು ಚರಿತ್ರೆಯ ಬರವಣಿಗೆಗೆ ಸಿದ್ದ ಮಾದರಿಯ ಆಕರವಾಗುವದಿಲ್ಲ. ಆದರೆ ಚರಿತ್ರೆ ಕಟ್ಟಿಕೊಡುವ ಕಾಲಬದ್ದ

ಸಂಗತಿಗಳಿಗಿಂತ ಭಿನ್ನವಾದ ಬದುಕಿನ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಚರಿತ್ರೆಯ ಕಲ್ಪನೆಯು ನಮ್ಮಲ್ಲಿ ಸಾಹಿತ್ಯದೊಂದಿಗೆ ಬೆರೆತಿರುತ್ತದೆ. "ನಮ್ಮ ದೇಶದಲ್ಲಿ ಇತಿಹಾಸವೆಂದರೆ ಮನುಷ್ಯನ ಸಂಕಲ್ಪ ಶಕ್ತಿಯಾಗಿ ಬರುವ ಪ್ರಕ್ರಿಯೆಯಲ್ಲ. ನಮ್ಮಲ್ಲಿ ಮಾನುಷ ಕರ್ಮ ಕೇವಲ ಮನುಷ್ಯನ ಸಂಕಲ್ಪದ ಬೆಳೆವಳಿಗೆಯಲ್ಲ. ಮನುಷ್ಯನ ಕರ್ಮದಲ್ಲಿ ದೈವದ ಅಂಶ ಸೇರಿಕೊಂಡು ಕರ್ಮದ ಹೊಣೆಗಾರಿಕೆಯ ಅರ್ಥವನ್ನು ಹೆಚ್ಚು ಜಟಿಲವನ್ನಾಗಿ ಮಾಡುತ್ತದೆ. ಮನುಷ್ಯನ ಕರ್ಮ ಅವರ ದೈವದಂತೆ ಪ್ರವರ್ತಿಸುವುದು ನಮ್ಮಲ್ಲಿ ಸಾಮನ್ಯವಾಗಿದೆ."[21] ಇಂತಹ ಮನೋಭಾವಗಳನ್ನು ಸಾಹಿತ್ಯ ಶೋಧಿಸುತ್ತಿರುತ್ತದೆ. ಬದಲಾಗುತ್ತಿರುವ ಮಾನವನ ಬದುಕಿನ ವಿಧಾನಗಳನ್ನು ನಿರೂಪಿಸುವ ವಿಧಾನವು ಆಗಿರುತ್ತದೆ. ಆದ್ದರಿಂದ ಕಾಲದ ಹಂಗಿಲ್ಲದೆ ಚಲಿಸುತ್ತಿರುತ್ತದೆ. "ಅಲಿಖಿತ ಇತಿಹಾಸಕ್ಕೆ ಇರುವ ಮುಕ್ತವಾದ ಸ್ವರೂಪ ಬರೆದ ಇತಿಹಾಕ್ಕೆ ಇರುವದಿಲ್ಲ. ಬರೆದ ಇತಿಹಾಸದ ರೂಪರೇಖೆಗಳು ಅದಕ್ಕೊಂದು ಅರ್ಥವನ್ನು ನೀಡುವಂತೆ ಅದರ ಮೌಲ್ಯವನ್ನು ನಿಯಂತ್ರಿಸುತ್ತದೆ."[22] ಇಂತಹ ಸೂಕ್ಷ್ಮಗಳನ್ನು ಚರಿತ್ರೆಕಾರ ಗಮನಿಸಬೇಕಾಗುತ್ತದೆ.

ವಸಾಹತು ಪ್ರೇರಿತ ಚರಿತ್ರೆಯು ನಿಯಂತ್ರಣದ ಧಮನಕಾರಿ ಸ್ಥಿತಿಯನ್ನು ಪ್ರಕಟಿಸುವದಿಲ್ಲ. ಆದ್ದರಿಂದ ಸಾಹಿತ್ಯವು ಚರಿತ್ರೆಯಷ್ಟೇ ಮುಖ್ಯವಾಗಿ ಆಗಿಹೋದ ಕಾಲವನ್ನು ಪ್ರತಿಬಿಂಬಿಸುತ್ತದೆ. ಚರಿತ್ರೆಯ ಗಮನಕ್ಕೆ ಬರದ ಕಾಲಮಾನವನ್ನು ತನ್ನೊಳಗೆ ಅಡಗಿಸಿಕೊಂಡಿರುತ್ತದೆ. ಇದು ಚರಿತ್ರೆಕಾರರಿಗೆ ಬಹುದೊಡ್ಡ ಆಕರವಾಗುತ್ತದೆ. ಸಾಹಿತ್ಯವು ಚರಿತ್ರೆಯ ಜೊತೆಗೆ  ಒಂದು ನಂಟನ್ನು ಹೊಂದಿರುತ್ತದೆ. ಅದು ಚರಿತ್ರೆಯನ್ನು ಸಾಹಿತ್ಯದೊಂದಿಗೆ ಸಮೀಕರಿಸುತ್ತದೆ. ಚಾರಿತ್ರಿಕ  ಪ್ರಜ್ಞೆಯು ಖಚಿತ ನೆಲೆಯಲ್ಲಿ ಬರದಿದ್ದರು ಅಂತರ್ಗತವಾಗಿರುತ್ತದೆ. ಆರಂಭದ ಕನ್ನಡ ಸಾಹಿತ್ಯವು ಪುರಾಣ ಪ್ರೇರಿತವಾದುದನ್ನು ಕಾಣುತ್ತೇವೆ." ಪುರಾಣಗಳ ಚೌಕಟ್ಟಿನೊಳಗೆ ಕಂಡೂ ಕಾಣದ ಹಾಗೆ ಗೌಪ್ಯವಾಗಿರುವಂತದ್ದು. ಪುರಾಣ ಕಲ್ಪಕತೆಯಲ್ಲಿ ಇತಿಹಾಸದ ವಸ್ತುವನ್ನು ಅಡಕವಾಗಿಸುವ ಕಲೆ ನಮ್ಮ ಕವಿಗಳಿಗೆ ಅಚ್ಚು ಮೆಚಿನ ವಿಧಾನವಾಗಿದೆ. ಪುರಾಣ, ಕಾವ್ಯ ಹಾಗೂ ಇತಿಹಾಸ ಇವುಗಳನ್ನು ಬಂಧಿಸುವ ಕಲೆಯನ್ನು ಅರಿತ ಕವಿ ವಸ್ತವವಾಗಿ ಅತ್ಯುತ್ತಮ ಕಲೆಗಾರನು ಇತಿಹಾಸ ದಾರ್ಶನಿಕನೂ ಆಗಿರುತ್ತಾನೆ"[23]

ಕನ್ನಡದ ಹಳೆಗನ್ನಡ ಕವ್ಯಗಳು ಪುರಾಣ ಪ್ರೇರಿತವಾದರು ಆಯ ಕಾಲವನ್ನು ಸಾಂಸ್ಕೃತಿಕವಾಗಿ ಅಭಿವ್ಯಕ್ತಿಸುತ್ತವೆ. ಅವು ಚರಿತ್ರೆಯನ್ನು ರಾಜಕೀಯವಾಗಿ  ನಿರೂಪಿಸುತ್ತಿದ್ದರು ಅದರೊಳಗೆ ಬದುಕಿನ ಹಲವು ಆಯಾಮಗಳ ಸಂವೇದನೆಗಳು ಇವೆ. ಕಾವ್ಯದ ನಾಯಕನೊಂದಿಗೆ ತಮಗೆ ಆಶ್ರಯ ನೀಡಿದ ರಾಜನನ್ನು  ಸಮೀಕರಿಸಿ ಕೀರ್ತಿಸುವ ಪರಂಪರೆಯೊಂದನ್ನು ಪಂಪ ಹುಟ್ಟುಹಾಕಿದ್ದಾನೆ. ಅದು ಕೇವಲ ರಾಜನನ್ನು ಕೀರ್ತಿಸುವುದಕ್ಕೆ ಮಾತ್ರ ಸೀಮಿತವಾಗುವದಿಲ್ಲ. "ಅರಿಕೇಸರಿ–ಅರ್ಜುನ ಇವರ ಸಮೀಕರಣ ರಾಜನನ್ನು ಕೀರ್ತಿಸುವ ಕಾರಣಕ್ಕಾಗಿಯೆ ರೂಪಗೊಂಡಿದ್ದೆಂದು ಭಾವಿಸಲು

ಕಾರಣವಿಲ್ಲ. ಪಂಪನ ಸೃಜಶೀಲತೆಯ ಭಾಗವಾಗಿ ಅರಿಕೇಸರಿಯ ಆಳ್ವಿಕೆಯ ಕಥಾನಕ ಹೊರಡುವುದರಿಂದ ಪಂಪ ಈ ಕಥಾನಕವನ್ನು ತನ್ನ ಓದುಗ ಕೇಳುಗರ 'ಭಾವಪ್ರಚೋಧಕ'ವನ್ನಾಗಿ ಸ್ವೀಕರಿಸಿದ್ದಾನೆ. ಇಂಥ ಸ್ಥಿತಿಯಲ್ಲಿ ನಡೆದಿರುವ ಅವನ ಸಮೀಕರಣ ಆ ಶತಮಾನದ ಪ್ರಬುದ್ಧ ಚಾರಿತ್ರಿಕ ಪ್ರಜ್ಞೆಯ ದ್ಯೋತಕವೋ ಆಗಿದೆ."[24]

ಪಂಪನ ಕೃತಿಗಳು ಚರಿತ್ರೆಯನ್ನು ವಿಶಿಷ್ಟ ಬಗೆಯಲ್ಲಿ ಅಭಿವ್ಯಕ್ತಿಸುತ್ತವೆ. ಹತ್ತನೆಯ ಶತಮಾನದ ಕಾಲವನ್ನು ತನ್ನ ಕೃತಿಯಲ್ಲಿ ಪಂಪ ಕಟ್ಟಿಕೊಡುತ್ತಾನೆಂದರೂ ಆ ಬದುಕು ಎಲ್ಲಾ ಕಾಲವನ್ನು ಮನಗಾಣಿಸುವ ಮೌಲ್ಯವನ್ನು ಒಳಗೊಂಡಿರುವಂತದ್ದು. "ಮನುಷ್ಯನ ಬದುಕಿಗೆ ಸಮೀಪವೆ ಆಗಿದ್ದ ರಾಜಮನೆತನಗಳ ಒಳಹೊರಗುಗಳ ಕಥಾನಕ ಒಂದು ಸಂಸ್ಕೃತಿ ಆಪೇಕ್ಷೆ ಪಡುವಂಥವೇ ಆಗಿದ್ದವು. ಈ ಎರಡು ಕೃತಿಗಳು ಅವನ ಕಾಲದ ಅತ್ಯಂತ ಸೂಕ್ಷ್ಮವೂ, ದಟ್ಟವೂ ಆದ ಮಾನಸಿಕ ಕಂಪನಗಳನ್ನು, ಸಂಬಂಧಗಳನ್ನು ಒಳಗೊಂಡ ಕೃತಿಗಳು. ಪ್ರಾಚೀನ ಕರ್ನಾಟಕದ ಬದುಕಿನ ಎಲ್ಲಾ ನೆಲೆಗಳನ್ನು ವಿಶಿಷ್ಟ ದೃಷ್ಟಿಕೋನಕ್ಕೆ ಒಳಪಡಿಸಿಕೊಂಡು ನೋಡಿದ್ದರಿಂದಲೇ ಆ ಎರಡು ಕಾವ್ಯಗಳು ಶೋಧಾನಾತ್ಮಕ ನೆಲೆಗಳನ್ನು ಒಳಗೊಳ್ಳುವಂತಾದದ್ದು. ಮಾನವತವಾದಿಯಾದ ಪಂಪ ಪ್ರಾಚೀನವನ್ನು ಮತ್ತು ಪ್ರಸ್ತುತವನ್ನು ಶೋಧಿಸಿದ್ದರಿಂದಲೇ ಆ ಕೃತಿಗಳೆರಡಕ್ಕೂ ಚಾರಿತ್ರಿಕ ದೃಷ್ಟಕೋನ ಸಹಜವಾಗಿಯೇ ಏರ್ಪಟ್ಟಿದೆ."[25]

ಪಂಪನನ್ನು ಅನುಸರಿಸಿದ ಮುಂದಿನ ಕವಿಗಳು ಧಾರ್ಮಿಕನೆಲೆಯಲ್ಲಿ ಚರಿತ್ರೆಯೊಂದಿಗೆ ಮುಖಾಮುಖಿಯಾದರು. ರಾಜತ್ವದ ಮಿತಿಗಳನ್ನು ಮೀರಿ ಬದುಕಿನ ಹಲವು ಸಾಧ್ಯತೆಗಳನ್ನು ಶೋಧಿಸುವಲ್ಲಿ ಪಂಪನಷ್ಟು ಸಾಮರ್ಥ್ಯವನ್ನು ಹೊಂದಿರಲಿಲ್ಲ. ಅಂದರೆ ಚರಿತ್ರೆಯನ್ನು ಮರುಶೋಧಿಸಿ ಅದಕ್ಕೊಂದು ಹೊಸದಿಕ್ಕನ್ನು ತೋರಿಸುವುದು ಸಾಧ್ಯವಾಲಿಲ್ಲ. ಇದನ್ನು ಮುಂದಿನ ವಚನಕಾರರು ಮಡಿದರು."ಪಂಪ ಮತ್ತು ವಚನಕಾರರು– ತಮ್ಮ ಹಿಂದಿನ ಕಾಲಮಾನವನ್ನು ಶೋಧಿಸುತ್ತಲೇ– ಆವರಿಸಿಕೊಂಡಿರುವ ತಮ್ಮ ಕಾಲದ ಚರಿತ್ರೆಯನ್ನು ಬಯಲುಗೊಳಿಸುತ್ತಾರೆ. ಇವರು ತಮ್ಮ ಕೃತಿಗೆ ತಮ್ಮ ಹಿಂದಿನ ಕಾಲವನ್ನು ಭಿತ್ತಿಯನ್ನಾಗಿ, ಸಾಕ್ಷಿತ್ವವನ್ನಾಗಿಸಿಕೊಳ್ಳುವುದರಿಂದ ಅವರಿಗೆ ವರ್ತಮಾನವನ್ನು ಹೆಚ್ಚು ಅರ್ಥಪೂರ್ಣವಾಗಿ ನೋಡುವುದು ಸಾಧ್ಯವಾಯಿತು. ಈ ಹಿನ್ನಲೆ ಮುಂದಿನ ಮಧ್ಯಕಾಲೀನ ಕವಿಗಳಿಗೆ ಚರಿತ್ರೆಯ ನಿರ್ದಿಷ್ಟ ನೆಲೆಗಳಲ್ಲಿ ಹೆಚ್ಚು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ಕಾರಣವಾಯಿತು. ಇಂಥ ರಚನೆಗಳ ಅಭ್ಯಾಸದ ಸಂದರ್ಭದಲ್ಲಿ ಪರಿಕಲ್ಪನೆಗಳ ಬಗೆಗೆ ಆ ಕವಿಗಳ ಆಲೋಚನೆಯನ್ನು ಸಹಾನುಭೂತಿಯಿಂದ ಪರಿಶೀಲಸಬೇಕಾಗುತ್ತದೆ. ಆಗ ಮಾತ್ರ ಆ ಕೃತಿಗಳಲ್ಲಿ ಪ್ರಕಟಗೊಂಡಿರುವ ಚಾರಿತ್ರಿಕ ಪ್ರಜ್ಞೆಯ ಸ್ವರೂಪವನ್ನು ತಿಳಿಯಲು ಸಾಧ್ಯ. ಮಿತಿಯನ್ನು ಗುರುತಿಸಬೇಕೆಂದು ಆತುರಪಡುವವರು ಸಾಹಿತ್ಯ ಕೃತಿಯ ಮಿತಿ ಮತ್ತು ಒಂದು ಕಾಲದ ಸಾಂಸ್ಕೃತಿಕ

ಸಂದರ್ಭದ ಮಿತಿ ಇವುಗಳ ಬಗ್ಗೆ ಸ್ಪಷ್ಟತೆ ಹೊಂದುವುದು ಅತ್ಯಂತ ಅಗತ್ಯ. ಇಂಥ ಸ್ಪಷ್ಟತೆ ಕಾವ್ಯದ ಹೊರಗಿನ ಮತ್ತು ಒಳಗಿನ ನೆಲೆಗಳ ಸೂಕ್ಷ್ಮ ಅಭ್ಯಾಸದಿಂದ ಮಾತ್ರ ಕಲಿಯಲು ಅಥವಾ ತಿಳಿಯಲು ಸಾಧ್ಯವೆಂದು ಭಾವಿಸಲಾಗಿದೆ."[26] ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡುವುದರ ಮೂಲಕ ಸಾಹಿತ್ಯವನ್ನು ರಚಿಸಿದರೆ ಚರಿತ್ರೆಗೆ ಅನೇಕ ಒಳನೋಟಗಳು ದೊರೆಯುತ್ತವೆ. ಆ ರೀತಿಯ ಪ್ರಯತ್ನಗಳನ್ನು ಪ್ರಾಚೀನ ಕವಿಗಳು ಮಾಡಿದ್ದಾರೆ.

ಮಧ್ಯಕಾಲೀನ ಸಾಹಿತ್ಯವು ಮತ್ತೊಂದು ರೀತಿಯಲ್ಲಿ ಚಾರಿತ್ರಿಕ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತದೆ. ಅದು ಹೊಸ ಚರಿತ್ರೆಯ ನಿರ್ಮಾಣದ ಬಗ್ಗೆ ಚಿಂತಿಸುತ್ತದೆ. ಚರಿತ್ರೆ ನಿರೂಪಿಸುವ ಮಾನದಂಡಗಳನ್ನು ನಿರಾಕರಿಸುವುದರ ಮೂಲಕ ನವ ಮಾದರಿಯ ಚರಿತ್ರೆಯನ್ನು ಹುಟ್ಟುಹಕುತ್ತದೆ."ಮಧ್ಯಕಾಲೀನ ಯುಗ ಕನ್ನಡ ಸಂಸ್ಕೃತಿಯಲ್ಲಿ ಹೊಸಜೀವನ್ನು ಕಟ್ಟಬೇಕೆಂದು ಹಾತೊರೆದ ಯುಗ. ಚರಿತ್ರೆಯನ್ನು ಅರಿಯುವ ಹಾಗು ಕಟ್ಟುವ ಆಶಯ ಹೊಂದಿದ ವಚನಕಾರರು ಈ ಯುಗದ ಪ್ರಾರಂಭ ಮಾಡಿದರೆನ್ನಬೇಕು. ವಚನಕಾರರು ಪುರಾಣ ಕಥನಕ್ರಮದ ಮಾದರಿಯನ್ನು ತಮ್ಮ ಅಭಿವ್ಯಕ್ತಿಯ ಕ್ರಮದಿಂದ ಸಂಪೂರ್ಣವಾಗಿ ತೆಗೆದು ಹಾಕಿದರು. ಪುರಾಣದ ಆಕೃತಿಯಲ್ಲಿ ಚರಿತ್ರೆಯನ್ನು ಮರೆಮಾಡಿ ಇಡುವ ಕ್ರಮವು ನಿಷ್ಕ್ರಿಯವೆಂದು ಇವರಿಗೆ ಅನಿಸಿರಲು ಸಾಧ್ಯ. ಸಾಮಾಜಿಕ ಮನುಷ್ಯನನ್ನು ನೇರವಾದ ಅಭಿವ್ಯಕ್ತಿ ವಚನಕಾರರ ವಚನಗಳಲ್ಲಿ ಕಾಣುವ ಮುಖ್ಯ ಸ್ವರೂಪವಾಗಿದೆ. ಪುರಾಣಗಳ ಕಥನ ಕ್ರಮದಲ್ಲಿ ಸಾಮನ್ಯ ನೆಲೆಯಿಂದ ಜಿಗಿತ ಹೊಂದಿದ ನಾಯಕನ ಕಲ್ಪನೆಗೆ ಪ್ರಾಧನ್ಯತೆ ಇರುವುದು. ಇಂಥ ನಾಯಕನ ಕಲ್ಪನೆಗೆ ವಚನಗಳ ಅಭಿವ್ಯಕ್ತಿಯಲ್ಲಿ ಸ್ಥಾನವಿಲ್ಲ. ವಚನಗಳಲ್ಲಿ ಅಭಿವ್ಯಕ್ತಿಗೊಳ್ಳುವ ಹೊಸ ಸಾಮಾಜಿಕ ಮನಸ್ಸು ಮತ್ತು ಅನುಭಾವಿಕ ಮನುಷ್ಯ ಇವೆರಡು ಪರಸ್ಪರ ಗಾಢ ಸಂಬಂಧವಿರುವ ಹಂತಗಳಾಗಿವೆ. ಆದ್ದರಿಂದಲೇ ಹೊಸ ಆಚರಣೆ, ನಂಬಿಕೆ ಹಾಗು ಸಾಮಾಜಿಕ ಪರಿಕಲ್ಪನೆಗಳಿಗೆ ಇಲ್ಲಿ ಹೆಚ್ಚು ಒತ್ತು ಕೊಡಲಾಗಿದೆ. ವರ್ಣ ಪರಿಕಲ್ಪನೆಯನ್ನು ಮೀರಿದ ಸಾಮಾಜಕ ಮನುಷ್ಯ ತನ್ಮೂಲಕ ಹೊಸ ನಂಬಿಕೆ ಹಾಗು ಆಚರಣೆಗಳಿಗೆ ಬದ್ಧನಾಗುತ್ತಾನೆ."[27]

ಹೀಗಾಗಿ ವಚನಸಾಹಿತ್ಯವನ್ನು ಚರಿತ್ರೆಕಾರರು ವಿನೂತನ ಬಗೆಯಲ್ಲಿ ನೋಡಿದರು. ಅಲ್ಲಿ ಅಭಿವ್ಯಕ್ತಿಗೊಂಡಿರುವ ಸಾಮಾಜಿಕ ಮಾದರಿಗಳನ್ನು ಚರಿತ್ರೆ ಕಟ್ಟುವಿಕೆಯಲ್ಲಿ ಬಳಿಸಿಕೊಳ್ಳುವ ಚಿಂತನೆ ಮಾಡಿದರು. ರಾಜಕೀಯ ಆಯಾಮದಲ್ಲಿ ಮಾತ್ರ ಚರಿತ್ರೆಯನ್ನು ನೋಡುತ್ತಿದ್ದ ಚರಿತ್ರೆಕಾರರಿಗೆ ಈ ಕಾಲ ಹೊಸ ಹೊಳುವನ್ನು ನೀಡಿತು. "ಕನ್ನಡ ಪ್ರದೇಶಗಳಲ್ಲಿ ವಚನ ಸಾಹಿತ್ಯವನ್ನು ಚರಿತ್ರೀಕರಿಸಿ ನೋಡುವ ಪ್ರಯತ್ನಗಳು ನಡೆದಿವೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಸಂಘರ್ಷಗಳು ಮಾನವ ಅಸ್ತಿತ್ವದ ಆಯಾಮಗಳು, ಹೆಣ್ಣು ಗಂಡಿನ ಸಂಬಂಧಗಳ ತಾತ್ವಿಕ ನೆಲೆಗಟ್ಟುಗಳು

ಮುಂತಾದ ಪ್ರಮುಖ ಅಂಶಗಳ ಬಗೆಗೆ ವಚನ ಸಾಹಿತ್ಯ ಬೆಳಕನ್ನು ಚೆಲ್ಲುತ್ತದೆ. ಗದ್ಯವನ್ನೇ ಕಾವ್ಯಾತ್ಮಕವಾಗಿ ದುಡಿಸಿಕೊಂಡ ವಚನಕಾರರು ತಮ್ಮ ಕಾಲದ ಸಾಮಾಜಿಕ ಚಲನಶೀಲತೆಯ ಆಯಾಮಗಳನ್ನು ಕಟ್ಟಿ ಕೊಟ್ಟಿದ್ದಾರೆ. ಬೇರೆ ಬೇರೆ ಸಾಮಾಜಿಕ ಹಿನ್ನಲೆಗಳಿಂದ ಬಂದ ವಚನಕಾರರು ಅವರ ಕಾಲದ ಸಾಮಾಜಿಕ ಆಯಾಮಗಳ ಬಗೆಗೆ ಭಿನ್ನ ಸಂವೇದನೆಗಳನ್ನು ಪ್ರಕಟಿಸುತ್ತಾರೆ. ಅವೆಲ್ಲವೂ ಮನುಷ್ಯಮುಖಿ ನೆಲೆಯಂದ ರೂಪುಗೊಂಡಿವೆ. ಬಸವಣ್ಣ, ಅಲ್ಲಮಪ್ರಭು ಅಕ್ಕಮಹಾದೇವಿ, ಮಾದಾರ ಚಹೆನ್ನಯ್ಯ, ಜೇಡರ ದಾಸಿಮಯ್ಯ ಮುಂತಾದವರು ತಮ್ಮ ವಚನಗಳ ಮೂಲಕ ಶೋಷಣೆಯ ಎಲ್ಲಾ ಆಯಾಮಗಳನ್ನು ವಿರೋಧಿಸಿದ್ದಾರೆ. ವಚನಗಳು ಚರಿತ್ರೆಯ ಸ್ವರೂಪದ ಕಥನಗಳಲ್ಲದಿದ್ದರೂ ಚರಿತ್ರೆಯನ್ನೇ ಮುಖಾಮುಖಾಯಾಗಿರಿಸಿಕೊಂಡವು ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ."[28]

ಇವು ಒಂದು ರೀತಿಯಲ್ಲಿ ಸ್ಥಳೀಯತೆಯನ್ನು ಅಭಿವ್ಯಕ್ತಿಸುತ್ತವೆ. ಚರಿತ್ರೆಯ ರಚನೆಯಲ್ಲಿ ಸ್ಥಳೀಯತೆಗೆ ಪ್ರಾಧನ್ಯತೆ ದೊರೆತಿಲ್ಲ. ಇಲ್ಲಿ ಸಾಂಸ್ಕೃತಿಕ ಚಿತ್ರಗಳೇನು ಬರುವದಿಲ್ಲ. ಆದರೆ ಸಾಮಾಜಿಕ ಸಂದರ್ಭವನ್ನು ಅಭಿವ್ಯಕ್ತಿಸುವ ಚಿಂತನೆಯನ್ನು ಕಾಣುತ್ತೇವೆ. ಇದರಿಂದಾಗಿ ಇವು ಸ್ಥಳೀಯ ಚರಿತ್ರೆಯಾಗಿ ಕಾಣುತ್ತವೆ." 'ಸ್ಥಳೀಯ ಚರಿತ್ರೆಗಳು' ವಿಶ್ವಾತ್ಮಕ ಸ್ವರೂಪವನ್ನು ಪಡೆಯುವಂತವು. ಇಂತವು ಸಂರಚನೆಗೊಳ್ಳುವುದು ಸಾಹಿತ್ಯದ ಮೂಲಕವೇ. ಇದರಿಂದ ಸಾಂಸ್ಕೃತಿಕ ಅನುಸಂಧಾನ ಸಾಧ್ಯ. ವಸಾಹತುಶಾಹಿ ಸ್ಥಿತ್ಯಂತರಗಳು ಕೇವಲ ಮನೋ ಚಟುವಟಿಕೆಗಳನ್ನು ನಾಶಪಡಿಸದೆ, ಸಂಸ್ಕೃತಿಗಳನ್ನು ನಾಶಮಾಡಿದವು. ತಮ್ಮ ಅನುಭವಜನ್ಯ ಗ್ರಹಿಕೆಯ ಮೂಲಕ ಮತ್ತೆ ಅವುಗಳನ್ನು ಹೊಸದಾಗಿ ರೂಪಿಸುವದು ಸಹ ನವಚರಿತ್ರೆಕಾರರ ಆಶಯವಾಗಿದೆ."[29]

ಸಾಹಿತ್ಯ ಪಠ್ಯವು ಸೃಷ್ಟಿಯಾದ ಸನ್ನಿವೇಷದಲ್ಲಿ ವೈವಿಧ್ಯಮಯವಾದ ಧ್ವನಿಗಳನ್ನು ಅಂತರ್ಗತ ಮಾಡಿಕೊಂಡೇ ಹುಟ್ಟಿರುತ್ತದೆ. ಈ ಧ್ವನಿಗಳು ಆಯಾ ಸನ್ನಿವೇಶಕ್ಕೆ ಕೆಲವು ಪ್ರತಿರೋಧಗಳಿಗೆ ಕಲಾತ್ಮಕ ಪರಿಹಾರಗಳನ್ನು ಸೂಚಿಸುವುದರ ಮುಖಾಂತರ ಸಂತಸವನ್ನುಂಟುಮಾಡಿರುತ್ತವೆ. ಇಂತಹ ಮರೆಮಾಚಿದ ಸಂಘರ್ಷಾತ್ಮಕ ಅಲಕ್ಷಿತ ಧ್ವನಿಗಳನ್ನು ಗುರುತಿಸಸುವ ಅಗತ್ಯವಿದೆ. ಸಾಹಿತ್ಯವು ಇಂತ ಧ್ವನಿಗಳಿಗೆ ಹೊಸ ಕಾಣ್ಕೆಯನ್ನು ನೀಡುತ್ತದೆ. ಇಂತ ರಚನೆಗಳನ್ನು ಮಾಡುವಾಗ ಚಾರಿತ್ರಿಕ ಸಂಗತಿಗಳನ್ನು ಕೂಡ ಸಾಹಿತ್ಯ ಅವಲಂಬಿಸಿರುತ್ತದೆ. ಅದು ವಾಚ್ಯದ ನೆಲೆಯನ್ನು ಪಡೆದರೆ, ಸಾಹಿತ್ಯ ನಿರಂತರ ಆವಿಷ್ಕಾರದ ಸಾಧ್ಯತೆಯನ್ನು ಸೃಷ್ಟಿಸುವದಿಲ್ಲ. ಸಾಹಿತ್ಯವು ತನ್ನ ಬರವಣಿಗೆಗೆ ಚರಿತ್ರೆಯನ್ನು ಆಕರವಾಗಿ ಬಳಿಸಿಕೊಂಡಿದೆ." ಸಾಹಿತ್ಯ ಬರವಣಿಗೆಗೆ ಚರಿತ್ರೆ ಊರಣವಾಗಿ ಒದಗಿ ಬಂದಿರುವ ಬಗೆಯನ್ನು ನಾವು ಒಂದೇ ನಿಟ್ಟಿನಲ್ಲಿಯೂ ಗ್ರಹಿಸಬೇಕಾಗಿಲ್ಲ. ಇದರಲ್ಲಿ ಹಲವು ಬಗೆಯ ದಾರಿಗಳನ್ನು ಕನ್ನಡ ಕವಿಗಳು ಹಿಡಿದಿದ್ದಾರೆ. ಅವನ್ನು ಹೀಗೆ ಗುರುತು ಮಾಡಿಕೊಳ್ಳಬಹುದು.

- ಕಾವ್ಯ ಸಂಗತಿಯೊಳಗೆ ಚರಿತ್ರೆಯನ್ನು ಕಟ್ಟುವ ಬಗೆ– ಕವಿರಾಜ ಮಾರ್ಗ
- ಪುರಾಣ ಕತೆಯೊಂದಿಗೆ ಚರಿತ್ರೆಯ ಸಂಗತಿಗಳನ್ನು ಒಳಗುಮಾಡಿ ನೋಡುವ ಬಗೆ– ವಿಕ್ರಮಾರ್ಜುನ ವಿಜಯ, ಸಹಾಸಭೀಮ ವಿಜಯ ಇತ್ಯಾದಿ
- ಚರಿತ್ರೆಯ ಸಂಗತಿಗಳನ್ನು ಪುರಾಣವಾಗಿಸುವ ಬಗೆ– ಮಹಾದೇವಿಯಕ್ಕನ ರಗಳೆ, ಬಸವರಾಜದೇವರ ರಗಳೆ, ಪ್ರಭುಲಿಂಗಲೀಲೆ ಇತ್ಯದಿ
- ಪುರಾಣ ಸಂಗತಿಯೊಳಗೆ ನಿರ್ದಿಷ್ಟವಾದ ಕಾಲ ಮತ್ತು ಅವಕಾಶ(ದೇಶ)ವನ್ನು ಕಾಣುವ ಬಗೆ– ಆದಿಪುರಾಣ, ಕರ್ಣಾಟಕ ಭಾರತ ಕಥಾಮಂಜರಿ, ಯಶೋಧರ ಚರಿತೆ, ಭರತೇಶ ವೈಭವ ಇತ್ಯಾದಿ
- ಚರಿತ್ರೆಯ ಸನ್ನಿವಾಶವನ್ನು ಊರಣ ಮಾಡಿಕೊಂಡು ಹೊಸಕಾಲದ ಸಾಹಿತ್ಯ ಬರವಣಿಗೆಯ ಮಾದರಿಗಳ ಬಗೆ.–ಕವಿತೆ, ಕಾದಂಬರಿ, ನಾಟಕ, ಕತೆ ಇತ್ಯಾದಿ.”[30]

ಹೀಗೆ ಸಾಹಿತ್ಯವು ಚರಿತ್ರೆಯ ಸಂಗತಿಗಳನ್ನು ವಸ್ತುವನ್ನಾಗಿ ಮಡಿಕೊಂಡಿದ್ದರು ಅಲ್ಲಿ ಘಟನೆಗಳನ್ನು ಮಾತ್ರ ನಿರೂಪಿಸುವದಿಲ್ಲ. ಅದರೊಂದಿಗೆ ತಮ್ಮದೇ ತಿಳಿವಳಿಕೆಯೊಂದನ್ನು ಅಭಿವ್ಯಕ್ತಿಸಲಾಗುತ್ತದೆ. ಅದು ಚರಿತ್ರೆಯ ಘಟನೆಗಳನ್ನು ಕಲಾತ್ಮಕ ಅಂಶಗಳೊಂದಿಗೆ ನಿರೂಪಿಸುತ್ತದೆ ಎಂಬುದನ್ನು ಗಮನಿಸಬೇಕು. ಇಲ್ಲಿ ಸಾಮಾಜಿಕ ಸನ್ನಿವೇಶಗಳ ಪರಿಣಾತ್ಮಕ ಸಂಘರ್ಷದ ನೆಲೆಗಳು ಕಂಡುಬರುತ್ತವೆ. ಅವು ಭೂತ ಮತ್ತು ವಾಸ್ತವವನ್ನು ಮುಖಾಮುಖಿಗೊಳಿಸುತ್ತವೆ.

ಚರಿತ್ರೆಯ ಬರವಣಿಗೆಯಲ್ಲಿ ಸಾಹಿತ್ಯವನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಚರಿತ್ರೆ ಬರೆಯವವರ ಮನೋಭಾವಕ್ಕಣುಗುಣವಾಗಿ ಸಾಹಿತ್ಯವನ್ನು ಸಾಕ್ಷಿಯಾಗಿಸಿದ್ದಾರೆ. ಇವರು ಸಾಹಿತ್ಯ ಸಾಮಗ್ರಿಯನ್ನು ಸೂಕ್ಷ್ಮವಾಗಿ ಗಮನಿಸದೆ ಅದರಲ್ಲಿ ದಾಖಲಾದ ರಾಜಕೀಯ ಮತ್ತು ಆಡಳಿತಾತ್ಮಕ ಸಂಗತಿಗಳನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಇದರಿಂದ ಸಾಹಿತ್ಯದ ಓದು ಚರಿತ್ರೆಗೆ ಮಾಹಿತಿಯಾಗುವ ಸಂದರ್ಭದಲ್ಲಿ ಸೀಮಿತತೆಯನ್ನು ಪಡೆದುಕೊಂಡಿದೆ. ಅಂದರೆ ಚರಿತ್ರೆ ಬರೆಯುವವರು ಸಾಹಿತ್ಯದ ಬಹು ಸಾದ್ಯತೆಗಳನ್ನು ಗುರಿತಿಸುವ ಕಡೆ ಗಮನ ಕೊಡಲಿಲ್ಲ. ಅದು ಅವರ ಉದ್ದೇಶವು ಆಗಿರಲಿಲ್ಲ. ಇದರಿಂದ ಮತ್ತೊಮ್ಮೆ ಚರಿತ್ರೆಯನ್ನು ಸಾಹಿತ್ಯದ ನೆಲೆಯಲ್ಲಿ ಕಟ್ಟಿಕೊಡುವ ಚಿಂತನೆಯನ್ನು ಮಾಡಬೇಕಿದೆ. ಚರಿತ್ರೆಯಲ್ಲಿ ಬಿಟ್ಟು ಹೋದ ಸಂಗತಿಗಳನ್ನು ಸಾಹಿತ್ಯದ ಮುಖೇನ ತುಂಬಿಕೊಳ್ಳುವ ಸಾದ್ಯತೆಗಳನ್ನು ಶೋಧಿಸಬೇಕಿದೆ. ಸಾಹಿತ್ಯವನ್ನು ಓದುವವರು ಕೂಡ ಚರಿತ್ರೆ ಗ್ರಹಿಸಿದ ರೀತಿಯಲ್ಲಿ ಸಾಹಿತ್ಯವನ್ನು ಅಧ್ಯಯನ ಮಾಡುತ್ತಾರೆ. ಈ ನೆಲೆಗಟ್ಟು ಹೊಸ ನೋಟವನ್ನು ಪಡೆಯಬೇಕಿದೆ. “ಚರಿತ್ರೆಯ ಒಂದು ಕಾಲದಲ್ಲಿ ಇದ್ದ (ಚರಿತ್ರೆಯೆಂದರೆ ಕಾಲವನ್ನನುಸರಿಸಿದ ಸಂಗತಿಗಳ ಜೋಡಣೆ)

ವ್ಯಕ್ತಿಗಳನ್ನು, ನಿರ್ದಿಷ್ಟ ರಾಜಕೀಯ ಇಲ್ಲವೇ ಸಾಮಾಜಿಕ ಸನ್ನಿವೇಶಗಳನ್ನು ಮುಖ್ಯ ಮಾಡಿಕೊಂಡು ಅನೇಕ ಕಾದಂಬರಿಗಳು, ನಾಟಕಗಳು, ಕತೆಗಳು, ಕವಿತೆಗಳು ಹುಟ್ಟು ಪಡೆದಿವೆ. ಹೀಗೆ ಮೈತಳೆಯುವ ಬರವಣಿಗೆಗಳು ಈ ಮೂಲಕ ತಮ್ಮ ಬದುಕಿನ ಸನ್ನಿವೇಶದ ಸಂಕಟಗಳಿಗೆ ಯಾವ ಬಗೆಯಲ್ಲಿ ಎದರಾಗುತ್ತಿರುತ್ತವೆ ಎಂಬ ಕೇಳ್ವಿವು ಮುಖ್ಯವಾಗುತ್ತದೆ. ಇದು ಚಾರಿತ್ರಿಕ ನಿಜ ಮತ್ತು ಸಾಹಿತ್ಯಿಕ ನಿಜಗಳನ್ನು ಪ್ರಮಾಣಿಸುವ ಕೇಳ್ವಿಯು ಆಗುತ್ತದೆ."[31]

ಚರಿತ್ರೆ ಜಾತಿ ಧರ್ಮಗಳ ಕಟ್ಟುಗಳಿಗೆ ಒಳಗಾಗುವ ಅಪಾಯಗಳನ್ನು ಕೂಡ ಗುರುತಿಸಲಾಗುತ್ತಿದೆ. ಅಂಚಿನಲ್ಲಿರುವ ಸಮುದಾಯಗಳು ತಮ್ಮ ಗುರುತುಗಳಿಗಾಗಿ ಸಾಹಿತ್ಯದಲ್ಲಿ ಆಗಿ ಹೋಗಿರುವ ವ್ಯಕ್ತಿತ್ವಗಳನ್ನು ಮಾದರಿಯಾಗಿ ಮಾಡಿಕೊಳ್ಳುತ್ತಿವೆ. ಇದರಿಂದ ಆಯಾ ಸಮುದಾಯಗಳಿಗೆ ಸಾಮಾಜಿಕವಾದ ಅನನ್ಯತೆ ದೊರೆಯುತ್ತದೆ ಎಂದು ಬಾವಿಸಲಾಗಿದೆ. ಅದೊಂದು ರಾಜಕೀಯ ವಿದ್ಯಮಾನವು ಆಗುತ್ತದೆ. ಮತ್ತೆ ಚರಿತ್ರೆಯನ್ನು ವಿಘಟನೆಯ ನೆಲೆಯಲ್ಲಿ ನೋಡಿದಂತಾಗುತ್ತದೆ ಎಂಬ ಆತಂಕವು ವ್ಯಕ್ತವಾಗುತ್ತಿದೆ."ಚರಿತ್ರೆಯಲ್ಲಿನ ವ್ಯಕ್ತಿಯ ಚಹರೆಗಳನ್ನು ಇವತ್ತಿನ ಸಾಮಾಜಿಕ ಬದುಕಿನಲ್ಲಿ ಒಂದು ನಿರ್ದಿಷ್ಟ ಜಾತಿ, ಕುಲ, ನಡಾವಳಿ(ಧರ್ಮ)ಯ ಗುಂಪುಗಳು ತಮ್ಮ ಸಾಂಸ್ಕೃತಿಕ ನಾಯಕತ್ವದ ಸಂಕೇತವಾಗಿ ಗುರಿಯಾಗಿಸಿಕೊಂಡಿವೆ. ಬಸವಣ್ಣ, ಕನಕದಾಸ ಮೊದಲಾದ ಚಾರಿತ್ರಿಕ ವ್ಯಕ್ತಿಗಳನ್ನು ಇದಕ್ಕೆ ಎತ್ತುಗೆಯಾಗಿ ನೋಡಬಹುದು. ಇದರಿಂದಾಗಿ ಯಾವುದೇ ಜಾತಿ-ಕುಲ ಗುಂಪಿನ ಚಹರೆಗಳನ್ನು ಆಯಾ ಗುಂಪುಗಳು ಚಾರಿತ್ರಿಕ ವ್ಯಕ್ತಿಗಳಲ್ಲಿ ಕಾಣಲು ತೊಡಗಿದಾಗ ಒಟ್ಟು ಸಾಮಾಜಿಕ ಸನ್ನಿವೇಶವನ್ನು ನೋಡುವ ನೋಟದಲ್ಲಿಯೇ ಬೀಳುಗಳು ಬೆಳೆಯುತ್ತವೆ. ಇಂತಹ ಬೇರೆ ಎನ್ನುವ ಬೀಳುಗಳನ್ನು ನಮ್ಮ ಸನ್ನಿವೇಶದಲ್ಲಿ ಜಾತಿ-ಜನಾಂಗ-ಕುಲ ಧರ್ಮಗಳ ಜಾಡು ಹಿಡಿದು, ಕಟ್ಟಿಕೊಳ್ಳುತ್ತಿರುವುದು ತಂಬಾ ಜೋರಾಗಿ ನಡೆಯುತ್ತಿರುವ ಕೆಲಸವೇ ಆಗಿದೆ."[32]

ಸಾಹಿತ್ಯ ಸೃಷ್ಟಿಸುವ ದಾರ್ಶನಿಕರು ಮತ್ತು ಸಾಹಿತ್ಯದಲ್ಲಿ ಬರುವ ವಿವರಗಳು ಹೀಗೆ ಜಾತಿ, ದರ್ಮಗಳ ನೆಲೆಯನ್ನು ಪಡೆದರೆ ಮತ್ತೆ ಚರಿತ್ರೆಯು ಬಲಾಢ್ಯರ ನಿರೂಪಣೆಯಾಗುತ್ತದೆ. ಸಾಹಿತ್ಯ ಮತ್ತು ಚರಿತ್ರೆಯನ್ನು ಓದುವ ಕ್ರಮ ವಸಾಹತು ನೆಲೆಯನ್ನು ಮೀರಿ ಬೆಳೆಯುವದಿಲ್ಲ. ಶಕ್ತಿಯಿರುವವರ ದಾಳವಾಗಿ ಓದು ಮತ್ತು ಬರವಣಿಗೆ ರೂಪಾಂತರಗೊಳ್ಳುತ್ತದೆ."ಇದನ್ನು ಒಂದು ನಿಟ್ಟಿನಿಂದ ಕನ್ನಡ ಸಮಾಜವನ್ನು ಕುರಿತ ಓದುಗಳಲ್ಲಿಯೂ ಆಗು ಮಾಡಿಕೊಳ್ಳಲಾಗಿದೆ. ಜಾತಿ, ಜನಾಂಗಗಳನ್ನು ಕುರಿತ ಓದುಗಳು ಇಂತವಾಗಿವೆ. ಇಂತಹ ಒಂದು ಶುರುವನ್ನು ಬ್ರಾಹಣ, ಜೈನ, ವೀರಶೈವದ ಗುರುತುಗಳಲ್ಲಿ ನಡೆಸಿದ ಸಾಹಿತ್ಯ ಮತ್ತು ಚರಿತ್ರೆಯ ಓದುಗಳಲ್ಲೇ ಗಮನಿಸಿಕೊಳ್ಳಬಹುದಾಗಿದೆ. ಜೊತೆಗೆ ಇದಕ್ಕೆ ಬೆಂಬಲವಾಗಿ ನಮ್ಮ ಆಡಳಿತ ವ್ಯವಸ್ಥೆಗಳು ಇರುವುದನ್ನು ಅವು ಮಠಮಾನ್ಯಗಳಿಗೆ ನೀಡುತ್ತಿರುವ ದೇಣಿಗೆಗಳು, ಕನ್ನಡ ತಿಳುವಳಿಕೆಯ ನೆಪದಲ್ಲಿ ಪ್ರಕಟಿಸುತ್ತಿರುವ ಜಾತಿ ಕೇಂದ್ರಿತ ಬರವಣಿಗೆಗಳು,

ಆಡಳಿತ ಮಾಡುತ್ತಿರುವ ಜಾತಿ ನಾಯಕರ ಬೆಂಬಲದಿಂದ ನಡೆಸುತ್ತಿರುವ ಸಮಾವೇಶಗಳು ಮೊದಲಾದ ಆಚರಣೆಗಳಲ್ಲಿ ನಿಖರವಾಗಿ ಗುರುತಿಸಬಹುದಾಗಿದೆ. ಈ ದಾರಿಗಳಲ್ಲಿ ಆಯ ಜಾತಿ ಜನಾಂಗಗಳೇ ಪ್ರಕಟಿಸುವ ಸಾಹಿತ್ಯ ಮತ್ತಿತರೆ ಬರವಣಿಗೆಗಳು ಇಂತಹ ಗುರುತುಗಳ ಮೂಲಕ ತಮ್ಮ ಜಾತಿ ಬಲವನ್ನು ಗಟ್ಟಿಮಾಡಿಕೊಳ್ಳುವಲ್ಲಿ ತೊಡಗಿರುವ ನಿರಂತರ ಪ್ರಯತ್ನಗಳೇ ಆಗಿವೆ. ಹೀಗಾಗಿ ಒಟ್ಟು ಜನಬದುಕಿನ ಒಂದಂಗವಾಗಿ ಗ್ರಹಿಸುವ ಬರವಣಿಗೆಗಳನ್ನು ಈ ಗುರುತುಗಳಲ್ಲಿಯು ಪರಿಶೀಲನೆಗೆ ಒಳಪಡಿಸಿ ತಕರಾರು ತೆಗೆಯುತ್ತಿರುವುದು ಬಹು ಹಿಂದಿನಿಂದಲೇ ನಡೆಸಿಕೊಂಡು ಬಂದಿರುವ ಸಂಗತಿಯಾಗಿದೆ. ಇದು ಕೆ.ವಿ. ನಾರಾಯಣ ಹೇಳುವಂತೆ 'ಸಾಹಿತ್ಯದ ಚರಿತ್ರೆ ಎಂಬ ವಿವರ ಕೂಡ ಸಾಹಿತ್ಯದ ಮೂಲಕ ಕಂಡ ಚರಿತ್ರೆ ಎಂಬ ನೆಲೆಗೆ ಒಯ್ಯಬಹುದು".[33]

ಚರಿತ್ರೆಯನ್ನು ಪರಿಬಾವಿಸುವುದು ಕೂಡ ಒಮ್ಮುಖದ ನೆಲೆಯಿಂದಲೆ. ಯಾವುದೆ ಕಾಲವನ್ನು ಕಟ್ಟಿಕೊಡುವಾಗ ಸಮಗ್ರವಾಗಿ ಅದಕ್ಕೆ ಸಂವಾದಿಯಾಗಿರುತ್ತದೆ ಎನ್ನಲಾಗುವದಿಲ್ಲ. ಅದು ಸಾದ್ಯವು ಇಲ್ಲ. ವಾಸ್ತವದ ಸಂದರ್ಭಗಳ ಬದಲಾವಣೆಯೊಂದಿಗೆ ಚರಿತ್ರೆಯನ್ನು ನೋಡುವ ಕ್ರಮಗಳು ಕೂಡ ಬದಲಾಗುತ್ತ ಹೋಗುತ್ತವೆ. ಆದ್ದರಿಂದ ಚರಿತ್ರೆ ರಚನೆಯಲ್ಲಿ ಕೆಳಸ್ತರದವರ ವಿವರಗಳು ಎಲ್ಲಿವೆ ಎಂಬ ಪ್ರಶ್ನೆಗಳು ಎದರಾಗುತ್ತಿವೆ. ಭಾರತದ ಚರಿತ್ರೆಯ ಸ್ವರೂಪ ರಾಜರ ಸಂತತಿಯ ವಿಜ್ರಂಭಣೆ, ಸಾಧನೆ, ಸಿದ್ದಿಗಳನ್ನು ಒಳಗೊಂಡಿದೆ. ಇದು ಸಾಮನ್ಯರ ಬದುಕನ್ನು ನಿರೂಪಿಸುವದಿಲ್ಲ. ಸಾಹಿತ್ಯವು ರಾಜಕೀಯ ವಿನ್ಯಾಸವನ್ನು ಒಳಗೊಳ್ಳವುದರ ಜೊತೆಗೆ ಸಾಂಸ್ಕೃತಿಕ ಬದುಕನ್ನು ಪ್ರತಿಬಿಂಬಿಸುತ್ತದೆ. ಈ ಬದುಕಿನ ಸಂಗತಿಗಳನ್ನು ಚರಿತ್ರೆಯ ನೆಲೆಯಲ್ಲಿ ಗ್ರಹಿಸುವುದು ಮುಖ್ಯವಾದುದು.

ಬದಲಾಗುತ್ತಿರುವ ಬದುಕಿನ ವಿನ್ಯಾಸಗನ್ನು ಸಾಹಿತ್ಯ ಕಟ್ಟಿಕೊಡುತ್ತಿರುತ್ತದೆ. ಬಹಳ ಮುಖ್ಯವಾಗಿ ಸಾಮನ್ಯರ ಬಾಳಿನ ವಿವರಗಳು ನಿರೂಪಣೆಗೊಂಡಿರುತ್ತವೆ. ಒಂದು ರೀತಿಯಲ್ಲಿ ಸಾಹಿತ್ಯವು ಸಾಂಸ್ಕೃತಿಕ ಚರಿತ್ರೆಯಾಗಿಯು ಕಾಣಿಸುತ್ತದೆ. ಇದನ್ನು ಗಮನಿಸಿ ಚರಿತ್ರೆಯನ್ನು ನಿರೋಪಿಸುತ್ತಾ ಹೋದರೆ ಚರಿತ್ರೆಗೆ ಹೊಸ ಆಯಾಮ ದೊರೆಯಬಹುದು. ಸಾಮನ್ಯರ ನೆಲೆಯಲ್ಲಿ ನಿಂತು ಚರಿತ್ರೆಯನ್ನು ನೋಡುವುದು ಮುಖ್ಯವಾದುದು. ವಾಸ್ತವದಲ್ಲಿ ದಿನ ದಿನ ಸಮನ್ಯರ ಬದುಕು ಕುಸಿಯುತ್ತಿರುವುದನ್ನು ಕಾಣುತ್ತಿದ್ದೇವೆ. ರಾಜಕೀಯ ಅಧಿಕಾರ ದೈನಂದಿನ ಬಾಳನ್ನು ಯಾವ ಹಂತಕ್ಕೆ ತಲುಪಿಸಿದೆ ಎಂಬುದನ್ನು ನೋಡುತ್ತಿದ್ದೇವೆ. ಹೀಗಾಗಿ ಚರಿತ್ರೆಯಲ್ಲಿ ಸಾಮನ್ಯರ ಬಾಳಿನ ಸಂಗತಿಗಳು ವಿಶ್ಲೇಷಣೆಗೆ ಒಳಗಾಗಬೇಕು. ಅವರ ಚರಿತ್ರೆಯು ಕೂಡ ಮಹರಾಜರ ಚರಿತ್ರೆಯಷ್ಟೇ ಮುಖ್ಯವಾಗಬೇಕು.

ನಾವು ರಾಜರ ಚರಿತ್ರೆಯನ್ನು ಬರೆಯುವಾಗ ಅವರ ಮೆಲ್ನೋಟದ ಸಂಗತಿಗಳನ್ನು ಮಾತ್ರ ಗಮನಿಸುತ್ತೇವೆ. ಇಂತ ರಾಜ ಅನೇಕ ಯುದ್ದಗಳನ್ನು ಗೆದ್ದ ಎಂದು ಹೇಳುವಾಗ ಅಲ್ಲಿ ಯುದ್ಧದಲ್ಲಿ

ಸೈನಿಕರ, ಮಹಿಳೆಯರ, ಮಕ್ಕಳ, ಬಲತ್ಕಾರದ, ಹಿಂಸೆಯ ವಿವರಗಳು ಬರುವದಿಲ್ಲ. ಆದರೆ ಅದು ಸೃಷ್ಟಿಸುವ ಭಯಾನಕ ಸಂಗತಿಗಳನ್ನು ಸಾಹಿತ್ಯ ತುಂಬಾ ಪರಿಣಾಮತ್ಮಕವಾಗಿ ನಿರೂಪಿಸುತ್ತದೆ. ರಣರಂಗದ ಗೋಳುಗಳು, ಮಡಿದವರ ಆಕ್ರಂದನಗಳು, ಅನಾಥರಾದವರ ಸಂಕಟಗಳು, ಸಾಮೂಹಿಕವಾಗಿ ಹತ್ಯೆಯಾಗುವ ಸೈನಿಕರು, ರಕ್ತಪಾತ, ಹಿಂಸೆಯ ವಿವರಗಳು ಹಾಗು ಸೋತವರ ಮೇಲನ ದೌರ್ಜನ್ಯಗಳು ಕರುಳಿರುವಂತೆ ಬರುತ್ತವೆ. ಈ ಸಂಗತಿಗಳು ಚರಿತ್ರೆಯ ನಿರೂಪಣೆಯಲ್ಲಿ ಬರುವದಿಲ್ಲ. ಅಂದರೆ ಚರಿತ್ರೆಯು ಕಾಣಿಸಲಾರದ ಸತ್ಯಗಳನ್ನು ಸಾಹಿತ್ಯ ಕಾಣಿಸುತ್ತದೆ. ಅದು ಒಮ್ಮುಖದ ನೆಲೆಯಲ್ಲಿ ಇರುವದಿಲ್ಲ. ಇಂತ ವಿವರಗಳನ್ನು ಅಭಿವ್ಯಕ್ತಿಸುವಾಗ ಸಾಹಿತ್ಯವು ಚರಿತ್ರೆಯ ಸಂಗತಿಗಳನ್ನು ಅವಲಂಬಿಸಿರುತ್ತದೆ. ಹೀಗಾಗಿ ಚರಿತ್ರೆ ಮತ್ತು ಸಾಹಿತ್ಯದ ನಡುವೆ  ಅಂತರ್ ಸಂಬಧ ಏರ್ಪಡುತ್ತದೆ.

ಚರಿತ್ರೆ ಮತ್ತು ಸಾಹಿತ್ಯದ ನಡುವೆ ಇರುವ ಪ್ರಮುಖ ವ್ಯತ್ಯಾಸವೆಂದರೆ ಚರಿತ್ರೆಕಾರನ ನಿರ್ಮಾಣ ಕಾರ್ಯ ಸಂಗತಿಗಳ ಸಮಕಾಲೀನ ಪಾಠಗಳಲ್ಲಿ ಸೀಮಿತವಾಗಿದ್ದರೆ, ಸಾಹಿತಿಯ ಸೃಜಶೀಲ ಕ್ರಿಯೆ ಸಾರ್ವಕಾಲಿಕವಾಗಿರುತ್ತದೆ. “ಇತಿಹಾಸದ ಕಾಲ ಮತ್ತು ಸ್ಥಳಗನ್ನು ವರ್ಜಿಸಿದರೆ ಅದು ಸಾಹಿತ್ಯಕ್ಕೆ ಸಾರ್ವತ್ರಿಕ ವಸ್ತುವಾಗಿ ಪರಿಣಮಿಸಬಹುದು.”[34] ಚರಿತ್ರೆಕಾರನಿಗೂ ಕವಿಗೂ ಇರುವ ಭೇದವು ಒಬ್ಬನು ಗದ್ಯದಲ್ಲಿಯೂ ಇನ್ನೊಬ್ಬನು ಪದ್ಯದಲ್ಲಿಯೂ ಬರೆಯುದರಲ್ಲಿಲ್ಲ. ಹೆರೊಡೋಟಸ್‌ನ ಕೃತಿಯನ್ನು ಪದ್ಯ ರೂಪಕ್ಕೆ ಪರಿವರ್ತಿಸಬಹುದು. ಆಗಲೂ ಅದು ಗದ್ಯದಲ್ಲಿರುವಂತೆಯೆ ಪದ್ಯದಲ್ಲಿಯು ಚರಿತ್ರೆಯ ಒಂದು ಪ್ರಕಾರವಾಗಿ ಉಳಿಯುತ್ತದೆ. ಈ ಭೇದವು ವಸ್ತುತಃ ಇರುವುದು ಇಲ್ಲಿ: “ಒಂದು ಸಿದ್ಧ ವಸ್ತುವನ್ನು ನಿರೂಪಿಸುತ್ತದೆ. ಇನ್ನೊಂದು ಸಾದ್ಯ ವಸ್ತುವನ್ನು ನಿರೂಪಿಸುತ್ತದೆ. ಆದ್ದರಿಂದ ಕಾವ್ಯವು ಚರಿತ್ರೆಗಿಂತ ತಾತ್ವಿಕವೂ ಗಂಭೀರಾರ್ಥಕವೂ ಆದುದು. ಏಕೆಂದರೆ ಅದರ ವಾಕ್ಯಗಳು ವಿಶ್ವಮಾನ್ಯ ಗುಣದವು. ಚರಿತ್ರೆದ್ದಾದರೋ ವೈಯಕ್ತಿಕವಾದುವು”[35] ‘ಇತಿಹಾಸ ವಾಸ್ತವ ಘಟನೆಯ ಕಥನವಾದರೆ, ಕಲೆ ಸಂಭವನೀಯವಾದುದರ ಕಥನವಾಗುತ್ತದೆ. ಇವೆರಡಕ್ಕು ಮೂಲವಾಗಿರುವದು ಜೀವನ ಒಂದೆ.’ ಎಂದು ಕ್ರೋಚೆ ಹೇಳಿದ್ದಾನೆ.

‘ಚರಿತ್ರೆ’ ಮತು  ‘ಸಾಹಿತ್ಯ’ ಎಂಬ ಪರಿಕಲ್ಪನೆಗಳು ಮನುಷ್ಯಕೇಂದ್ರಿತವಾಗಿದ್ದು ಅವನ ಒಳಿತೇ ಇವೆರಡು ಅಧ್ಯಯನಗಳ ಉದ್ದೇಶವಾಗಿರುವದರಿಂದ ಸಂಬಂಧ ಪಡೆದಿವೆ. ಪೂರ್ವ ಕಾಲದಿಂದಲು ಚರಿತ್ರೆ ಮತ್ತು ಮನುಷ್ಯ ಬೆಳವಣಿಗೆಗಳನ್ನು ನೋಡಿದರೆ ಒಂದಕ್ಕೊಂದು ಆಶ್ರಯಿಸಿ ರೂಪಗೊಂಡಿವೆ. ಒಬ್ಬ ಲೇಖಕ ಚರಿತ್ರೆಯಿಂದ ಪ್ರತ್ಯೇಕನಾಗಿರುವದಿಲ್ಲ. ಭೂತ ವರ್ತಮಾನಗಳೊಂದಿಗೆ ತನ್ನದೇ ಆದ ಸಂಬಂಧವನ್ನು ಏರ್ಪಡಿಸಿಕೊಂಡಿರುತ್ತಾನೆ. ಈ ಸಂಬಂಧದ ಮುಖಾಂತರವೇ ನಮ್ಮನ್ನು ತನ್ನ

ಸಮಕಾಲೀನರು ಹಾಗೂ ಪೂರ್ವಿಕರತ್ತ ಕೊಂಡೊಯ್ಯುತ್ತಾನೆ. ಹೀಗಾಗಿ ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ ಮೂಲಭೂತವದುದು.

ಸಾಹಿತ್ಯದ ಬೆಳವಣಿಗೆಯು ಚರಿತ್ರೆಯ ಬೆಳವಣಿಗೆಯು ಆಗುತ್ತದೆ. ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿ, ರಾವ್ ಬಹದ್ದೂರ್, ಚದುರಂಗ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಚಂದ್ರಶೇಖರ ಕಂಬಾರ, ದೇವನೂರು ಮಹಾದೇವ ಮುಂತಾದ ಲೇಖಕರು ಸೃಷ್ಟಿಸಿದ ಸಾಹಿತ್ಯ ತನ್ನಷ್ಟಕ್ಕೆ ತಾನೆ ಚರಿತ್ರೆಯನ್ನು ಬರೆದುದಾಗಿದೆ. ಈ ಚರಿತ್ರೆ ಸಾರ್ವಕಾಲಿಕ ಮೌಲ್ಯವುಳ್ಳದ್ದಾಗಿದೆ. ಚರಿತ್ರೆಯ ಭಗವಾಗದ ಸಮುದಾಯಗಳು ಸ್ಮೃತಿಯೆಡೆಗೆ ಚಲಿಸಿರುವಾಗ, ಸಾಹಿತ್ಯ ಸಮುದಾಯಗಳ ಸ್ಮೃರತಿಯನ್ನೇ ನಂಬಿಕೊಂಡು ಸೃಷ್ಟಿಯಾಗುವದರಿಂದ ಇವೆರಡರ ಸಂಬಂಧ ತೀರ ಹತ್ತಿರವಾದುದು. ಸಾಹಿತ್ಯದ ಮುಖೇನ ಕಾಣುವ ಬದುಕಿನ ವಿನ್ಯಾಸವು ತಾತ್ವಿಕವಾಗಿ ಚರಿತ್ರೆಯಾಗದಿದ್ದರೂ ವಾಸ್ತವ ಮತ್ತು ಗತವನ್ನು ಮುಖಾಮುಖಿಯಾಗಿಸುತ್ತದೆ. ಈ ಮುಖಾಮುಖಾಯಲ್ಲಿ ಬದುಕಿನ ಚಲನೆಗಳಿರುವುದನ್ನು ಗಮನಿಸಬೇಕು. "ವಾಸ್ತವವಾದಿ ಕಾದಂಬರಿಯು ವಾಸ್ತವದಲ್ಲಿ ಜನ ಬದುಕುವುದನ್ನು ವಿವರಿಸುತ್ತದೆ. ತಾನು ಬಂದಿರುವ ವರ್ಗವು ಬದುಕನ್ನು ಕುರಿತ ಧೋರಣೆಯನ್ನು ಪ್ರಕಟಪಡಿಸುತ್ತದೆ. ಆದರೆ ಅಷ್ಟಕ್ಕೆ ನಿಲ್ಲದೆ ವಾಸ್ತವ ಮತ್ತು ವಾಸ್ತವನ್ನು ಕುರಿತ ಧೋರಣೆಯನ್ನು ಪ್ರಕಟಿಸುವ ಸಾಮಾಜಿಕ ಗುಂಪು ಇವೆರಡನ್ನು ಕುರಿತ ಚಾರಿತ್ರಿಕ ತಿಳುವಳಿಕೆಯನ್ನು ಕಾದಂಬರಿಯು ಮೂಡಿಸುತ್ತದೆ."[36]

ಒಟ್ಟಾರೆ, ಯಾವುದೇ ದೇಶದ ಸಾಹಿತ್ಯ ಚರಿತ್ರೆ ಆ ದೇಶದ ಪ್ರತಿಭೆ ಮತ್ತು ಸ್ವಭಾವದ ಅಭಿವ್ಯಕ್ತಿಯ ದಾಖಲೆ. ಸಾಹಿತ್ಯ ಚರಿತ್ರೆಯ ಪಾಲಿಗೆ ಅತ್ಯಂತ ಮುಖ್ಯವಾದ ಅಭಿವ್ಯಕ್ತಿ ವಿಧಾನ. "ಚರಿತ್ರೆ ಮುಖ್ಯವಾಗಿ ಒಂದು ಜನಾಂಗದ ಬಾಹ್ಯ ನಾಗರಿಕತೆಗೆ ಸಂಬಂಧಿಸಿ ಅವರ ಅಸ್ತಿತ್ವದ ರೀತಿಯನ್ನು ಚಿತ್ರಿಸುತ್ತದೆ. ಮತ್ತು ಅವರ ಜಗತ್ತಿನ ವಾಸ್ತವ ಕಾರ್ಯದಲ್ಲಿ ಏನು ಸಾಧಿಸಿದರು ಏನು ಸಾಧಿಸಲಿಲ್ಲ ಎಂಬುದನ್ನು ತಿಳಿಸುತ್ತದೆ. ಆದರೆ, ಅವರ ಮಾನಸಿಕ, ನೈತಿಕ ಗುಣ ವಿಶೇಷಗಳನ್ನು ಅರಿಯಬೇಕಾದರೆ, ಅವರು ಆಂತರಿಕ ಕ್ರಿಯಾಜಗತ್ತಿನಲ್ಲಿ ಹುಡುಕಿದ್ದೇನು? ಪಡೆದಿದ್ದೇನು ಎಂಬುದನ್ನು ತಿಳಿಯಬೇಕಾದರೆ ಸಾಹಿತ್ಯಕ್ಕೆ ಶರಣು ಹೋಗಬೇಕು."[37]

## ಅಡಿಟಿಪ್ಪಣಿಗಳು

1. **ಎನ್.ವಿಘ್ನೇಶ ಭಟ್, ಹೊಸ ಕಲಿಕೆಯ ಯುಗ: ಪ್ರಮುಖ ದೃಷ್ಟಿಕೋನಗಳು,** ಪು. 188, **ಚರಿತ್ರೆ ಬರವಣಿಗೆಯ ಕ್ರಮಗಳುಮತ್ತು ಸಂಶೋಧನ ವಿಧಾನ**. ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 2010
2. **ರಾಜರಾಮ ಹೆಗಡೆ, ಆಧುನಿಕ ಭಾರತದ ಚರಿತ್ರೆ ಲೇಖನ ಮತ್ತು ಸಿದ್ಧಾಂತಗಳು,** ಪು.441 **ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ**. ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 2010
3. ಅದೇ, ಪು. 443
4. ಅದೇ ಪು. 446
5. ಅದೇ, ಪು. 447
6. **ಆಫ್ರಿಕನ್ ಹಾಗು ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಡಾ. ನಟರಾಜ್ ಹುಳಿಯಾರ್**, ಪು.9, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
7. **ಕೆ. ಮೋಹನಕೃಷ್ಣ ರೈ, ಚರಿತ್ರೆ ನಿರ್ಮಾಣದಲ್ಲಿ ಅನುಷಂಗಿಕ ಆಕರಗಳು,** ಪು 554, ಚರಿತ್ರೆ ಬರವಣಿಗೆಯ ಕ್ರಮಗಳುಮತ್ತು ಸಂಶೋಧನ ವಿಧಾನ. ಸಂ.ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 2010
8. **ಅಶ್ವಥನಾರಾಯಣ, ಅಮೂರ್ತದಿಂದ ಮೂರ್ತದೆಡೆಗೆ – ಆರಂಭಿಕ ಚರಿತ್ರೆ ಲೇಖನ ಪರಂಪರೆಗಳೊಂದಿಗೆ ಅನುಸಂಧಾನ,** ಪು.1 ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ, ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2010
9. **ಸಿ.ಆರ್. ಗೋವಿಂದರಾಜು, ನವಚಾರಿತ್ರಿಕವಾದ : ತಾತ್ವಿಕ ನೆಲೆಗಳು,** ಪು.192 ಚರಿತ್ರೆಯ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ ಸಂ. ವಿಜಯ್ ತಂಬಂಡ ಪೂಣಚ್ಚ, 2010

19\. ಅದೇ ಪು.200

11\. ಅದೇ, ಪು.201

12\. ಅದೇ, ಪು. 201

13\. ಅದೇ, ಪು. 209

14. **ಅಶ್ವಥನಾರಾಯಣ, ಅಮೂರ್ತದಿಂದ ಮೂರ್ತದೆಡೆಗೆ –ಆರಂಭಿಕ ಚರಿತ್ರೆ ಲೇಖನ ಪರಂಪರೆಗಳೊಂದಿಗೆ ಅನುಸಂಧಾನ,** ಪು.4 ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ, ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2010

15. ಅದೇ. ಪು. 55

16. **ಎಂ.ವಿ. ವಸು. ಮೌಖಿಕ ಇತಿಹಾಸ : ತಾತ್ವಿಕತೆ ಮತ್ತು ಬರವಣಿಗೆ ಕ್ರಮ,** ಪು.307 ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ, ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2010

17. ಅದೇ ಪು.307

18. ಅದೇ, ಪು.309

19. **ಮೊಗಳ್ಳಿ ಗಣೇಶ್, ಮೌಖಿಕ ಇತಿಹಾಸದ ತಾತ್ವಿಕ ನೆಲೆ,** ಪು.328 ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ, ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2010

20. ಅದೇ, ಪು.328

21. **ಕೀರ್ತಿನಾಥ ಕುರ್ತುಕೋಟಿ, ಉರಿಯ ನಾಲಗೆ,** ಪು.124, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, 2006

22. ಅದೇ, ಪು. 125

23. **ಬಸವರಾಜ ಕಲ್ಗುಡಿ, ಮಧ್ಯಕಾಲೀನ ಸಾಹಿತ್ಯ ಚರಿತ್ರೆ ಮತ್ತು ಪುರಾಣಗಳ ಅಂತರ್ ಸಂಬಂಧ,** ಪು.93, ನಕ್ಷೆ–ನಕ್ಷತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010

24. **ಕಿ.ರಂ. ನಾಗರಾಜ ಪಂಪ: ಮಾರ್ಗ ದೇಶಿ ಚಾರಿತ್ರಿಕ ಪ್ರಜ್ಞೆ,** ಸಂಚಯ, ಪು.34 ಸಂ. ಡಿ. ವಿ. ಪ್ರಹ್ಲಾದ

25. ಅದೇ, ಪು.36

26. ಅದೇ, ಪು.37

27. **ಬಸವರಾಜ ಕಲ್ಗುಡಿ, ಮಧ್ಯಕಾಲೀನ ಸಾಹಿತ್ಯ ಚರಿತ್ರೆ ಮತ್ತು ಪುರಾಣಗಳ ಅಂತರ್ ಸಂಬಂಧ,** ಪು.94 ನಕ್ಷೆ–ನಕ್ಷತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010

28. **ಅಶ್ವಥನಾರಾಯಣ, ಅಮೂರ್ತದಿಂದ ಮೂರ್ತದೆಡೆಗೆ –ಆರಂಭಿಕ ಚರಿತ್ರೆ ಲೇಖನ ಪರಂಪರೆಗಳೊಂದಿಗೆ ಅನುಸಂಧಾನ,** ಪು.61 ಚರಿತ್ರೆ ಬರವಣಿಗೆಯ ಕ್ರಮಗಳು ಮತ್ತು

ಸಂಶೋಧನ ವಿಧಾನ, ಸಂ. ವಿಜಯ್ ಪೂಣಚ್ಚ ತಂಬಂಡ ವಿರೂಪಾಕ್ಷ ಪೂಜಾರಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2010

29. **ಸಿ.ಆರ್.ಗೋವಿಂದರಾಜು, ನವಚಾರಿತ್ರಿಕವಾದ : ತಾತ್ವಿಕ ನೆಲೆಗಳು,** ಪು.209, ಚರಿತ್ರೆಯ ಬರವಣಿಗೆಯ ಕ್ರಮಗಳು ಮತ್ತು ಸಂಶೋಧನ ವಿಧಾನ ಸಂ. ವಿಜಯ್ ತಂಬಂಡ ಪೂಣಚ್ಚ, 2010

30. **ಆರ್. ಚಲಪತಿ, ನಮ್ಮದೇ ತಿಳಿವಿನ ದಾರಿಯಲ್ಲಿ,** , ಪು.16, ಪಲ್ಲವ ಪ್ರಕಾಶನ, 2012

31. ಅದೇ, ಪು.19

32. ಅದೇ, ಪು.19

33. ಅದೇ, ಪು.20

34. **ಡಾ. ರಾಮೇಗೌಡ, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾಗಗಳು,** ಪು.102, ಚಿತ್ರಕೂಟ ಕಾಳಿದಾಶ ರಸ್ತೆ, ಮೈಸೂರು, 1992

35. **ಬಾಲಸುಬ್ರಮಣ್ಯ, ಅರಿಸ್ಟಾಟಲ್ ಕಾವ್ಯಮೀಮಾಂಸೆ,** ಪು.38, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

36. **ಶಿವರಾಮ ಪಡಿಕ್ಕಲ್, ನಾಡುನುಡಿಯ ರೂಪಕ,** ಪು.77, ಪ್ರಸಾರಾಂಗ ಮ.ವಿ.ವಿ.

37. **ವಿಲಿಯಂ ಹೆನ್ರಿ ಹಡ್ಸನ್ ಅನು: ಸಿ.ಪಿ.ಕೆ. ಸಾಹಿತ್ಯ ಪ್ರವೇಶ** (ಯ್ಯಾನ್ ಇಂಟುಡಕ್ಸನ್ ಟು ದಿ ಸ್ಟಡಿ ಆಫ್ ಲಿಟ್ರೇಚರ್, 1974)

****

## ಅಧ್ಯಾಯ ಮೂರು: ಪ್ರಗತಿಶೀಲ ಸಾಹಿತ್ಯ ಮತ್ತು ನಿರಂಜನರು

ಭಾರತ 1940ರಲ್ಲಿ ಅನೇಕ ಬದಲಾವಣೆಗೆ ಒಳಗಾಗುತಿತ್ತು. ಸ್ವಾತಂತ್ರ್ಯ ಚಳುವಳಿ ಗಂಭೀರ ಸ್ವರೂಪವನ್ನು ಪಡೆದುಕೊಂಡು ನಿರ್ಣಾಯಕ ಹಂತ ತಲುಪುತಿತ್ತು. ಅನೇಕ ಲೇಖಕರು ಈ ಚಳುವಳಿಯಲ್ಲಿ ಪಾಲ್ಗೊಂಡು ವಸಾಹತುಶಾಹಿ ಮುಕ್ತ ಭಾರತಕ್ಕೆ ನಾಂದಿ ಹಾಡುತ್ತಿದ್ದರು. ಹೊಸ ಭಾರತವನ್ನು ಕಟ್ಟುವ ಹುಮ್ಮಸ್ಸಿನಲ್ಲಿದ್ದರು. ಭಾರತ ಸ್ವಾತಂತ್ರ್ಯಗೊಂಡರೂ ಭಾರತದ ಕೆಲವು ಮೂಲಭೂತ ಸಮಸ್ಯೆಗಳು ಹಾಗೆ ಉಳಿಯುವದರ ಬಗ್ಗೆ ಮತ್ತು ಹೊಸದಾಗಿ ಬೆಳೆಯುತ್ತಿರುವ ನಗರೀಕರಣ ಪ್ರಕ್ರಿಯೆಯ ಬಗ್ಗೆ ಲೇಖಕರು ಗಂಭೀರವಾಗಿ ಯೋಚಿಸುತ್ತಿದ್ದರು. ಈಗಾಗಲೇ ನಗರೀಕರಣಕ್ಕೆ ಒಳಗಾದ ದೇಶಗಳ ಪರಿಸ್ಥಿತಿಯನ್ನು ಗಮನಿಸುತ್ತಿದ್ದರು. ಜಾತೀಯತೆ, ಅಸ್ಪೃಶ್ಯತೆ, ಲಿಂಗತಾರತಮ್ಯ, ಧಾರ್ಮಿಕ ಕಂದಾಚಾರ, ಮೌಢ್ಯ, ಅಸಮಾನತೆ ಮುಂತಾದ ಸಮಸ್ಯೆಗಳು ಯಾವ ಸ್ವರೂಪವನ್ನು ಪಡೆಯಬಹುದೆಂದು ಚಿಂತಿಸುತ್ತಿದ್ದರು. ಮುಖ್ಯವಾಗಿ ನಗರದಲ್ಲಿ ಬೆಳೆಯುತ್ತಿದ್ದ ಶ್ರೀಮಂತ ವರ್ಗದ ಮನೋಭವದ ಬಗ್ಗೆ ಗಮನಹರಿಸಲಾಗುತಿತ್ತು. ಅವರು ಯಾವ ರೀತಿಯಲ್ಲಿ ಸಮಾಜವನ್ನು ಮುಂದೆ ಕೊಂಡೊಯ್ಯುತ್ತಿದ್ದಾರೆ ಎಂಬುದನ್ನು ವಿಮರ್ಶೆಗೆ ಒಡ್ಡಲಾಗುತಿತ್ತು. ಯಾಕೆಂದರೆ ಈಗಾಗಲೇ ಈ ವರ್ಗ ಯುರೋಪ ದೇಶಗಳಲ್ಲಿ ಬಹುದೊಡ್ಡ ವರ್ಗತಾರತಮ್ಯವನ್ನು ಹುಟ್ಟುಹಾಕಿ ಬಡವರನ್ನು ಶೋಷಣೆಗೆ ಈಡುಮಾಡುತಿತ್ತು. ಜಗತ್ತನ್ನು ಏಕಮುಖ ನೆಲೆಯಲ್ಲಿ ನೋಡುವ ಮನೋಭಾವ ಹೆಚ್ಚಾಗುತಿತ್ತು. ಜಗತ್ತಿನ ಸಂಪತ್ತಿನ ಒಡೆಯರು ತಾವಾಗಬೇಕೆಂಬ ಸರ್ವಾಧಿಕಾರಿ ಧೋರಣೆಯು ಮೂಡುತಿತ್ತು. ಅದರ ಪರಿಣಾಮವಾಗಿ ಒಂದನೆಯ ಪ್ರಪಂಚ ಮಹಾಯುದ್ದ ನಡೆದಿತ್ತು. ಅದು ಜನಸಾಮನ್ಯರ ಮೇಲೆ ಯಾವ ಪರಿಣಾಮ ಮಾಡಿದೆ ಎಂಬುದರ ಚಿತ್ರಣ ಕಣ್ಣ ಮುಂದೆ ಇತ್ತು.

ಇಡೀ ಯುರೋಪ್ ದೇಶವೆ ಯುದ್ಧದಿಂದ ಆರ್ಥಿಕವಾಗಿ ಕುಸುದು ಹೋಗಿತ್ತು. ಸಾಮಾಜಿಕ ಸಂಬಂಧಗಳು ತುಂಬಾ ಸಂಕೀರ್ಣಗೊಂಡು ಸಹಜತೆಯನ್ನು ಕಳೆದುಕೊಂಡು ಕೃತಕವಾಗುತ್ತಿದ್ದವು. ರಾಜಕೀಯ ಅಸ್ಥಿರತೆ ತಲೆದೋರಿತ್ತು. ನಿರುದ್ಯೋಗ ತಾಂಡವಾಡುತಿತ್ತು. ಪರಸ್ಪರ ದೇಶಗಳ ನಡುವೆ ಸಂಬಂಧಗಳು ವಿಶ್ವಾಸ ಕಳೆದುಕೊಳ್ಳುತ್ತಿದ್ದವು. ಮುಖ್ಯವಾಗಿ ನಗರಗಳಲ್ಲಿ ಕಾರ್ಮಿಕ ವರ್ಗ ಬೆಳೆಯುತಿತ್ತು. ಕಾರ್ಖಾನೆಗಳು ತಲೆ ಎತ್ತುತ್ತಿದ್ದವು. ಕಾರ್ಖಾನೆಯ ಮಾಲೀಕರು ಈ ದುರ್ಬರ ಪರಸ್ಥಿಯನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಂಡರು. ಅಸಹಾಯಕರಾದ ಕಾರ್ಮಿಕರು ಗ್ರಾಮಗಳಿಂದ ವಲಸೆ ಬರುತ್ತಿದ್ದರು. ನಗರಕ್ಕೆ ಬಂದವರು ಮತ್ತೆ ಗ್ರಾಮಗಳಿಗೆ ಹಿಂದುರುಗುವ ಪರಸ್ಥಿಯಲ್ಲಿ ಕಾರ್ಮಿಕರು ಇರಲಿಲ್ಲ. ಆದ್ದರಿಂದ ಅವರನ್ನು ಕಾರ್ಖಾನೆಗಳಲ್ಲಿ ಕಡಿಮೆ ಕೂಲಿಗೆ ಹೆಚ್ಚು

ದುಡಿಸಿಕೊಳ್ಳುತ್ತಿದ್ದರು. ಈ ಕಾರ್ಮಿಕವರ್ಗದವರು ಯಾವ ಪ್ರತಿಕ್ರಿಯೆಯಿಲ್ಲದೆ ದುಡಿಯುತ್ತಿದ್ದರು. ಇವರಿಗೆ ಒಂದು ಪ್ರಜ್ಞೆಯನ್ನು ನೀಡುವ ಆಲೋಚನೆಯನ್ನು ಲೇಖಕರು ಮಾಡಿದರು.

ವ್ಯಕ್ತಿ ವ್ಯಕ್ತಿಗಳ ನಡುವೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಎಲ್ಲಾ ರೀತಿಯ ಸಂಬಂಧಗಳ ಒಟ್ಟು ಮೊತ್ತ ಒಂದು ಸಾಮಾಜಿಕ ಸಂಸ್ಥೆ ಎನಿಸಿಕೊಳ್ಳುತ್ತದೆ. ಯಾವ ರೀತಿಯ ಸಾಮಾಜಿಕ ವ್ಯವಸ್ಥೆಯೆ ಆಗಲಿ, ಅದರ ಮುಖ್ಯವಾದ ಸ್ವರೂಪ ನಿರ್ಣಯವಾಗುವುದು ಅದರ ತಳಪಾಯದಂತಿರುವ ಆರ್ಥಿಕ ವ್ಯವಸ್ಥೆಯ ಮೇಲೆ. ಆದ್ದರಿಂದಲೇ ವ್ಯವಸ್ಥೆಯಲ್ಲಿ ಅಂದರೆ ಉತ್ಪತ್ತಿ ಸಂಪಾದನ ಕ್ರಮಗಳಲ್ಲಿ ಮೂಲಭೂತ ಬದಲಾವಣೆಗಳು ಆದಗ್ಗೆಲ್ಲಾ ವ್ಯಕ್ತಿ ವ್ಯಕ್ತಿಗಳ ನಡುವಣ ಇತರ ಎಲ್ಲಾ ಸಂಬಂಧಗಳಲ್ಲೂ ಸೂಕ್ಷ್ಮ ಮಾರ್ಪಾಡುಗಳು ಆಗುತ್ತವೆಂಬುದನ್ನು ನಾವು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಆ ಸಂದರ್ಭದಲ್ಲಿ ಸಾಹಿತ್ಯ ಯಾವ ಧೋರಣೆಯನ್ನು ತಾಳಬೇಕು ಎಂದು ಗಂಭೀರವಾಗಿ ಚರ್ಚೆಗಳು ನಡೆಯುತ್ತಿದ್ದವು. ಈ ಹೊತ್ತಿಗೆಲ್ಲ ಮಾರ್ಕ್ಸ್‌ನ ಸಿದ್ಧಾಂತಗಳು ಸಾಕಾರ ರೂಪ ಪಡೆಯುತ್ತಿದ್ದವು.

ಮಾರ್ಕ್ಸ್ ಚರಿತ್ರೆಯನ್ನು ದುಡಿಯುವವರ ನೆಲೆಯಲ್ಲಿ ನಿಂತು ಅವಲೋಕಿಸಿದನು. ಆರ್ಥಿಕಶಕ್ತಿಗಳು ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸಿ ಬಡವರನ್ನು ಹೆಚ್ಚು ಶೋಷಣೆ ಮಾಡುತ್ತವೆ ಮತ್ತು ಸರ್ವಾಧಿಕಾರಿ ಧೋರಣೆಯನ್ನು ತಾಳುತ್ತವೆ. ಆದ್ದರಿಂದ ಕಾರ್ಮಿಕರು ಒಂದಾಗಿ ಆರ್ಥಿಕ ಶಕ್ತಿಗಳ ಸರ್ವಾಧಿಕಾರವನ್ನು ನಿರ್ನಾಮ ಮಾಡಿ, ಕಾರ್ಮಿಕರ ರಾಜಕೀಯ ಅಧಿಕಾರವನ್ನು ನಿರ್ಮಾಣ ಮಾಡಬೇಕೆಂದು ಮಾರ್ಕ್ಸ್‌ವಾದದ ನಿಲುವಾಗಿತ್ತು. ಅನಂತಮೂರ್ತಿಯವರು ಮಾರ್ಕ್ಸ್‌ವಾದದ ಬಗ್ಗೆ ಹೀಗೆ ಹೇಳುತ್ತಾರೆ." ಜಗತ್ತು ಹೇಗೆ ಬದಲಾಗಬೇಕು ಎಂಬುದರ ಆಧಾರದ ಮೇಲೆ ಜಗತ್ತನ್ನು ಅರ್ಥಮಾಡಿಕೊಳ್ಳಬಹುದು ಎಂದು ಆತ ವಿವರಿಸಿದ. ಅದು ಕ್ರಿಯಾಪದ ತತ್ವಜ್ಞಾನವಾಗಿದ್ದು, ತೀವ್ರವಾದಿ ಗಡಿರೇಖೆಯನ್ನು ಮುಟ್ಟಿತ್ತು. ಅಲ್ಲಿ ಬದಲಾವಣೆಯ ಗುರಿಯೇ ಜ್ಞಾನದ ಕೀಲಿಕೈ ಆಯಿತು. ಸಮಾನತೆಯ ಸಾಧನೆ ಒಡೆತನದ ವರ್ಗದ ನಿರ್ನಾನವು ಬದಲಾವಣೆಯ ಆಶಯ ಕೇಂದ್ರ ಬಿಂದುವಾಯಿತು. ಇಲ್ಲಿ ಕ್ರಿಯೆ ಒಂದು ನಿರ್ದಿಷ್ಟ ರೂಪದಲ್ಲಿತ್ತು. ಅಂದರೆ ಆಸ್ತಿ ಸಂಬಂಧಗಳಲ್ಲಿ ಬದಲಾವಣೆ ತಂದು ಸಮಾನತೆ ಸಾಧಿಸುವದಕ್ಕೆ ಸಂಬಂಧಪಟ್ಟ ಕ್ರಿಯೆಯಾಗಿತ್ತು."[1]

ಮಾರ್ಕ್ಸ್ ಜ್ಞಾನದ ಉತ್ಪತ್ತಿಯ ಮೂಲವನ್ನು ಶೋಧಿಸುದರ ಜೊತೆಗೆ ಅದರ ಹೊಣೆಗಾರಿಕೆಯ ಬಗೆಗೆ ಗಂಭೀರವಾಗಿ ಚಿಂತಿಸಿದನು. ಅದು ಒಣಪಾಂಡಿತ್ಯವಾಗದೆ ಸಾಮಾಜಿಕ ಬದಲಾವಣೆಯ ಅಸ್ತ್ರವಾಗಬೇಕೆಂದು ಪ್ರತಿಪಾದಿಸಿದನು. ಬದಲಾವಣೆ ತರುವದೇ ಅದರ ಅಂತಿಮ ಗುರಿಯಾಗಿರಬೇಕೆಂದು ವಾದ ಮಾಡಿದನು. ಸಾಹಿತ್ಯವು ಕೂಡ ಸಾಮಾಜಿಕತೆಯ ಭಾಗವಾಗಿರುದರಿಂದ ಅದರಲ್ಲಿರುವ ಶೋಷಣೆಯ ನೆಲೆಗಳಿಗೆ ಸ್ಪಂದಿಸುವದು ಅದರ ಮೂಲ

ಆಶಯವಾಗಿರಬೇಕು." ಅವರ ಪ್ರಕಾರ ಕಲೆಯ ಬೆಳವಣಿಗೆಯು ಆಕಸ್ಮಿಕವಲ್ಲ. ಕಲೆಯಾಗಲಿ ಸಾಹಿತ್ಯವಾಗಲಿ ಸಾಮಾಜಿಕ ಬೆಳವಣಿಗೆಯೊಂದಿಗೆ ಚಲನಶೀಲತೆಯನ್ನು ಪಡೆದುಕೊಂಡಿದೆ ಮತ್ತು ಅದು ಸಾಮಾಜಿಕ ಉದ್ದೇಶಕ್ಕೆ ತಕ್ಕಂತೆ ಪರಿವರ್ತನೆಯನ್ನು ಕಂಡಿದೆ. ಕಲೆಯಾಗಲಿ ಸಾಹಿತ್ಯವಾಗಲಿ ಅಂತಿಮವಾಗಿ ಸಮಾಜವಾದಿ ಆಶಯಕ್ಕೆ ತಕ್ಕಂತೆ ಇರಬೇಕಾಗುತ್ತದೆ. ಅದು ಅನಿವಾರ್ಯ. ಸೌಂದರ್ಯಶಾಸ್ತ್ರ ಮತ್ತು ವಾಸ್ತವತೆಯ ನಡುವೆ ದ್ವಂದ್ವಮಾನ ಭೌತಿಕವಾದಿ ಸಂಘರ್ಷವಿರುತ್ತದೆ. ಕಲೆಯಾಗಲಿ, ಸಾಹಿತ್ಯವಾಗಲೀ ಚರಿತ್ರೆಯೊಂದಗಿನ ಮುಖಾಮುಖಿಯಲ್ಲಿ ಬೆಳೆಯುತ್ತದೆ. ವರ್ಗಸಂಘರ್ಷ, ರಾಜಕಾರಣ, ನಿರ್ದಿಷ್ಟ ವರ್ಗದ ತಾತ್ವಿಕತೆಯು ಸಾಹಿತ್ಯ ಚಿಂತನೆಯ ಮೇಲೆ ಪ್ರಭಾವ ಬೀರುತ್ತದೆ."[2] ಸಾಹಿತ್ಯ ನಿರ್ಮಾಣಕ್ಕೆ ಕಾರಣವಾಗುವ ಅಂಶಗಳು ಯಾವುವು ಎಂಬುದರ ಮೇಲೆ ಸಾಹಿತ್ಯ ರಚನೆಯು ನಿಂತಿರುತ್ತದೆ. ಸಮಾಜವನ್ನು ಚಾರಿತ್ರಿಕವಾಗಿ ಗ್ರಹಿಸುವುದರ ಮೂಲಕ ವಾಸ್ತವವನ್ನು ಸರಿಮಾಡಬೇಕಾದ ಹೊಣೆಗಾರಿಕೆ ಲೇಖಕನದಾಗಿರುತ್ತದೆ. ಬರಹಗಾರ ಸಮಾಜದ ಭಾಗವಾಗಿರುದರಿಂದ ಸದಾ ಸಮಾಜಕ್ಕೆ ಸ್ಪಂದಿಸಬೇಕಾಗುತ್ತದೆ. ಶೋಷಣಾರಹಿತ ಸಮಾಜವನ್ನು ನಿರ್ಮಿಸುದೇ ಸಾಹಿತ್ಯದ ಗುರಿಯು ಆಗಬೇಕಾಗುತ್ತದೆ ಎಂದು ಮಾರ್ಕ್ಸ್ ಹೇಳಿದನು.

"1. ತತ್ವಜ್ಞಾನದ ಗುರಿ ಜಗತ್ತಿನ ಮೂಲಸ್ವರೂಪವನ್ನು ವಿವರಿಸುವದಲ್ಲ. ಬದಲಾಗಿ ಜಗತ್ತನ್ನು ಪುನಾರಚಿಸುವುದು.

2. ಚರಿತ್ರೆಯನ್ನು ರೂಪಿಸುವ ಶಕ್ತಿಗಳು ಪ್ರಧಾವಾಗಿ ಆರ್ಥಿಕ ಶಕ್ತಿಗಳು.

3. ಸಮಾಜ ಯಾವಾಗಲು ಮಾಲೀಕರು ಆಳುಗಳೆಂಬ ಎರಡು ವರ್ಗಗಳಾಗಿ ವಿಭಜನೆಯಾಗಿರುತ್ತದೆ. ಅವರುಗಳ ನಡುವೆ ಯಾವಾಗಲು ಘರ್ಷಣೆ ಸಾಗಿರುತ್ತದೆ.

4. ಕೂಲಿಗಳ ದುಡಿಮೆಯ ಫಲವಾದ ಹೆಚ್ಚಳ ಮೌಲ್ಯವನ್ನು ಮಾಲೀಕರು ಯವಾಗಲು ಕಬಳಿಸುತ್ತಾರೆ.

5. ಖಾಸಗಿ ಆಸ್ತಿಯ ರದ್ಧತಿ ಅಥವಾ ಉತ್ಪದನಾ ಸಾಧನಗಳ ರಾಷ್ಟ್ರೀಕರಣದಿಂದ ಮಾತ್ರ ಈ ಸೋಷಣೆ ನಿಲ್ಲುತ್ತದೆ.

6. ಈ ಬಡತನ ಕಾರ್ಮಿಕರಲ್ಲಿ ಕ್ರಾಂತಿಕಾರಿ ಚೈತನ್ಯ ತುಂಬಿ ವರ್ಗಗಳ ಘರ್ಷಣೆ ವರ್ಗಯುದ್ಧವಾಗಿ ಮಾರ್ಪಾಡಾಗುತ್ತದೆ.

7. ಕೂಲಿಕಾರರು ಮಾಲೀಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವರು ಪ್ರಭುತ್ವವನ್ನು ವಶಪಡಿಸಿಕೊಂಡು ತಮ್ಮದೇ ಆದ ರಾಜ್ಯವನ್ನು ಸ್ಥಾಪಿಸುತ್ತಾರೆ. ಇದನ್ನೇ ಮಾರ್ಕ್ಸ್ ದುಡಿಮೆಗಾರರ ಸರ್ವಾಧಿಕಾರತ್ವ ಎಂದು ಕರೆಯುತ್ತಾನೆ.

ಈ ವಿದ್ಯಾಮಾನಗಳನ್ನು ಪಡೆಯಲಾಗುವದಿಲ್ಲ. ಹೀಗಾಗಿ ಸಮಾಜವಾದ ಅನಿವಾರ್ಯ."[3] ಮಾರ್ಕ್ಸ್‌ನ ಈ ಚಿಂತನೆಗಳು ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಸಾಹಿತ್ಯವನ್ನು ಅಭಿಜಾತ ನೆಲೆಯಲ್ಲಿ ನೋಡದೆ ಅದು ಸಾಮಾಜಿಕ ಸ್ವರೂಪದಲ್ಲಿ ಕಾಣಬೇಕೆಂಬ ನಿಲುವುಗಳು ಮುಂಚೂಣಿಗೆ ಬಂದವು. ಇದರಿಂದಾಗಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನಗಳು ಕೂಡ ಬದಲಾದವು.

ಸಮಾಜವನ್ನು ವಾಸ್ತವವಾಗಿ ಕಟ್ಟಿಕೊಡಬೇಕೆಂಬ ಚಿಂತನೆ ಬೆಳೆಯಿತು. ಗ್ರಾಮಗಳು ಭೂಮಾಲಿಕ ವರ್ಗಗಳಿಂದ ಶೋಷಣೆಗೆ ಗುರಿಯಾಗುತ್ತಿದ್ದವು. ಜಾತೀಯತೆ, ಅಸ್ಪೃಷ್ಯತೆಯಂತ ಸಮಸ್ಯೆಗಳು ಅಸಮಾನತೆಯನ್ನು ಸೃಷ್ಟಿಸಿದ್ದವು. ರೈತರು, ಕೂಲಿಕಾರರು, ಮಹಿಳೆಯರು, ಕಾರ್ಮಿಕರು, ಅರೆ ಕಾರ್ಮಿಕರು ಯಾವ ಭದ್ರತೆ ಇಲ್ಲದೆ ಜೀವನ ಸಾಗಿಸುತ್ತಿದ್ದರು. ಇಂತವರ ಜೀವನವನ್ನು ಕುರಿತು ಸಾಹಿತ್ಯ ರಚಿಸಬೇಕೆಂದು ಪ್ರಗತಿಶೀಲರು ಆಲೋಚಿಸಿದರು. ಈ ಸಂದರ್ಭದಲ್ಲಿ ಹೊಸ ಓದುಗ ವರ್ಗ ಸೃಷ್ಟಿಯಾಗುತಿತ್ತು. ಅವರಿಗೆ ಸಾಹಿತ್ಯ ಒದಗಿಸಬೇಕಿತ್ತು. ಅವರಿಗೆ ಕೇವಲ ಮನೋರಂಜನೆ ಮಾತ್ರ ಕೊಡದೆ ಚಿಂತನೆ ಮಾಡುವಂತ ವಾಸ್ತವವನ್ನು ದರ್ಶನ ಮಾಡಿಸಬೇಕೆಂಬ ನಿಲುವು ಸಾಹಿತ್ಯದ್ದಾಯಿತು.

ಪ್ರಗತಿಶೀಲರು ಸಾಹಿತ್ಯವನ್ನು ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸಿ ಅದಕ್ಕೆ ಗಂಭೀರವಾದ ಜವಬ್ದಾರಿ ಇದೆ ಎಂದು ಬಾವಿಸಿದರು. ಪ್ರಗತಿಶಿಲರು ಸಾಹಿತ್ಯವನ್ನು ಕೂಲಿಕಾರರ, ಬಡವರ, ರೈತರ, ದಲಿತರ ಪರ ರಚಿಸಬೇಕೆಂದು ನಂಬಿದ್ದರು. ಅನ್ಯಾಯ, ಶೋಷಣೆ, ಜಮೀನ್ದಾರಿಕೆ, ರಾಜಕೀಯ ಬ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿ ಸಾಮಾಜಿಕ ಪರಿವರ್ತನೆ ಸಾಹಿತ್ಯದ ಮುಖ್ಯ ಗುರಿಯಾಗಬೇಕೆಂದರು. ಇದಕ್ಕೆ ಪ್ರೇರಣೆಯಾದವರು ರಷ್ಯದ ಸಾಹಿತಿಗಳು. ರಷ್ಯದ ಸಾಹಿತಿಗಳು ಮಾರ್ಕ್ಸವಾದನ್ನು ಅನುಸರಿಸುತ್ತಿದ್ದರು. ಅವರಂತೆ ಪ್ರಗತಿಶೀಲರು ಕೂಡ ಮಾರ್ಕ್ಸನ ಸಿದ್ಧಾಂತವನ್ನು ತಾತ್ವಿಕ ಪ್ರಣಾಳಿಕೆಯನ್ನಾಗಿ ಮಾಡಿಕೊಂಡರು. ವರ್ಗ ಹೋರಾಟವೇ ಅವರಿಗೆ ಮುಖ್ಯವಾಯಿತು. ದುಡಿಯುವ ವರ್ಗ ಒಗ್ಗೂಡಿ ಬಂಡವಾಳಿಶಾಹಿ ವರ್ಗವನ್ನು ಸದೆಬಡಿದು, ರಾಜಕೀಯ ಅಸ್ತಿತ್ವವನ್ನು ಪಡೆಯಬೇಕೆಂಬ ನಿಲುವನ್ನು ತಮ್ಮ ಸಾಹಿತ್ಯದಲ್ಲಿ ತಂದರು. ಬಂಡವಾಳಶಾಹಿಗೆ ಪೋಷಕರಾದ ಜಮೀನುದಾರರನ್ನು ಕಟುವಾಗಿ ಅಲ್ಲಗಳೆದರು. ಜಮೀನ್ದಾರರ, ಬಂಡವಾಳಶಾಹಿಗಳ, ಶ್ರೀಮಂತರ ಶೋಷಣಾ ಸ್ವರೂಪವನ್ನು ವಿಶ್ಲೇಷಿಸಿದರು. ಸಾಹಿತ್ಯ ರಚನೆ–ಹೋರಾಟ–ಸಂಘಟನೆ–ಬದಲಾವಣೆ–ಕ್ರಾಂತಿಯನ್ನು ಒಂದಕ್ಕೊಂದು ಪೂರಕ ಎಂದು ತಿಳಿದರು. ಲೇಖಕ ಸಾಮಾಜಿಕ ಜವಾಬ್ದಾರಿಯನ್ನು ಅರಿಯಬೇಕು. ಆ ಜವಬ್ದಾರಿಯ ಭಾಗವಾಗಿ ಸಾಹಿತ್ಯ ಮೂಡಿಬರಬೇಕೆಂದು ಭಾವಿಸಿದರು. ದುಡಿಯುವ ವರ್ಗದಲ್ಲಿ ರಾಜಕೀಯ ಅಧಿಕಾರ ನೆಲೆಗೊಳ್ಳಬೆಕು. ಇಂತಹ ರಾಜಕೀಯದ ಜೊತೆಗೆ ಸಾಹಿತಿ ಕಲಾವಿದರಿರಬೇಕೆಂದು ಪ್ರಗತಿಶಿಲರ ಆಶಯವಾಗಿತ್ತು.

ಪ್ರಗತಿಶೀಲತೆ ಮೊಳಕೆಯೊಡದದನ್ನು ಸಜ್ಜದ್ ಜಾಹೀರ್ ಹೀಗೆ ವಿವರಿಸುತ್ತಾರೆ." ೧೯೩೧ ಒಂದು ವಿಶಿಷ್ಟ ವರ್ಷ. ಆಗ ನಾನು ಇಂಗ್ಲೆಂಡ್ ನಲ್ಲಿ ನನ್ನ ವಿದ್ಯಾರ್ಥಿ ಜೀವನದ ಕೊನೆಯ ದಿನಗಳನ್ನು ಕಳೆಯುತಿದ್ದೆ. ಜಗತ್ತನ್ನೇ ನುಂಗ ಹೊರಟ ಆರ್ಥಿಕ ಬಿಕ್ಕಟ್ಟಿನ ರಾಜಕೀಯ ಪರಿಣಾಮದ ವಿರಾಟರೂಪ ಕಾಣಿಸಿಕೊಂಡಿತು. ಎಲ್ಲ ಕಡೆಯೂ ಫ್ಯಾಸಿಸ್ಟ್ ದಬ್ಬಾಳಿಕೆಯ ದುಃಖಪೂರ್ಣ ಕಥೆಗಳೇ ಕೇಳಿ ಬರುತ್ತಿದ್ದವು. ಅಂಥ ಶಕ್ತಿಗೆದುರಾಗಿ ಜನತೆ ಪ್ರತಿಭಟಿಸುವುದನ್ನು ನಾವು ಕಂಡೆವು. ಬುದ್ಧಿಜೀವಿಗಳಲ್ಲು ವಿಚಾರ ಕ್ರಾಂತಿಯಾಯಿತು. ನಮ್ಮ ಕಣ್ಣೆದುರು ನಡೆಯುತ್ತಿದ್ದ ಘಟನೆಗಳು, ನಾವು ಓದುತ್ತಿರುವ ಪುಸ್ತಕಗಳು, ನಡೆಸುತ್ತಿದ್ದ ಚರ್ಚೆಗಳು ನಮ್ಮನ್ನು ಹೊಸಬರನ್ನಾಗಿ ಮಾಡಿದವು. ನಾವು ಮೆಲ್ಲ ಮೆಲ್ಲನೆ ಸಮಾಜವಾದ ಸಿದ್ಧಾಂತದತ್ತ ಸಾಗಿದೆವು."[೭] ಇವರು ಪ್ರಗತಿಶೀಲ ಸಾಹಿತ್ಯ ಮೊಳಕೆಯೊಡೆಯಲು ಕಾರಣರಾದರು. ಅದರ ಪ್ರಣಾಲಿಯಂತೆ ಸಾಹಿತ್ಯ ರಚಿಸುವ ಪಣ ತೊಟ್ಟರು. ತಮ್ಮ ಜೊತೆಗಾರರನ್ನು ಬರೆಯುವಂತೆ ಪ್ರೇರೇಪಿಸಿದರು.

ಕೈಗಾರಿಕೆ ಕ್ರಾಂತಿಯಿಂದ ಬಂಡವಾಳಶಾಹಿ ವ್ಯವಸ್ಥೆ ಬೆಳೆಯುತಿತ್ತು. ದುಡಿವ ವರ್ಗವನ್ನು ಕಡಿಮೆ ಕೂಲಿಗೆ ದುಡಿಸಿಕೊಂಡು ಹೆಚ್ಚು ಲಾಭ ಪಡೆಯುತಿತ್ತು. ದುಡಿಯುವ ವರ್ಗಕ್ಕೆ ಶಿಕ್ಷಣ, ಆರೋಗ್ಯ, ವಸತಿ, ಸ್ವಾತಂತ್ರ್ಯದಂತ ಕನಿಷ್ಟ ಸೌಲಭ್ಯವನ್ನು ನೀಡಿರಲಿಲ್ಲ. ಕೇವಲ ದುಡಿಯುವ ಯಂತ್ರದಂತೆ ಭಾವಿಸಿದರು. ಕಾರ್ಮಿಕರ ದುಡಿಮೆ ಹೆಚ್ಚಾದಂತೆ ಮಾಲೀಕರ ಬಂಡವಾಳ ವೃದ್ಧಿಯಗುತ್ತಾ ಹೋಯಿತು. ಹಣವಂತರು ವ್ಯವಸ್ಥೆಯ ಮೇಲೆ ಸಂಪೂರ್ಣ ಹತೋಟಿ ಸಾಧಿಸುತ್ತಾ ಹೋದರು. ಅದು ಕೇವಲ ಆಯ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಹಣವಂತ ದೇಶಗಳು ಬಡ ದೇಶಗಳ ಸವಾರಿ ಮಾಡುತ್ತಿದ್ದವು. ಬಲಾಢ್ಯ ದೇಶಗಳು ಬಡ ದೇಶಗಳ ಮೇಲೆ ವಸಾಹತುವನ್ನು ಸ್ಥಾಪಿಸಿ ಸುಲಿಯುತ್ತಿದ್ದವು. ಶ್ರೀಮಂತ–ಬಡವ, ಮಾಲೀಕ–ಕಾರ್ಮಿಕ ಎಂಬ ಭೇದದ ಅಂತರ ಬೆಳೆಯುತ್ತಲೆ ಹೋಯಿತು. ದುಡಿಯುವ ವರ್ಗಕ್ಕೆ ಯಾವುದೇ ಭದ್ರತೆ ಮತ್ತು ಅಸ್ತಿತ್ವ ಇಲ್ಲದಂತಾಯಿತು. ಅನಿವಾರ್ಯವಾಗಿ ದುಡಿವ ವರ್ಗ ತಮ್ಮ ಬದುಕಿಗೆ ಹೋರಾಡಲೇಬೇಕಾಯಿತು. ಸಾಹಿತ್ಯ ರಚಿಸುವವರು ಸಂಘಟನೆ ಮಾಡಿಕೊಂಡರು. ಸಂಘಟನೆಯಿಂದ ಸಾಹಿತ್ಯ ರಚಿಸುವದರ ಜೊತೆಗೆ ಹೋರಾಟ ಮಾಡುವುದು ಅವರ ಉದ್ದೇಶವಾಯಿತು. ಬರೆಯುದರ ಜೊತೆಗೆ ಶೋಷಿತರ ಪರವಾಗಿ ಬೀದಿಗಿಳಿದು ಚಳುವಳಿ ಮಾಡುವುದು ಬಹು ಮುಖ್ಯ ಎಂದು ಭಾವಿಸಿದರು.

ಅದರಂತೆ ಪ್ರಗತಿಶೀಲ ಲೇಖಕರು ನಡೆದುಕೊಂಡರು. ಸಾಹಿತ್ಯವು ಅವರ ಬರವಣಿಗೆಗೆ ಒತ್ತಾಸೆಯಾಗಿತ್ತು. ಲೇಖಕರು ದುಡಿವವರ್ಗದ ಅಂಗವಾಗಿ, ಸಾಮಾಜಿಕ ಕಾರ್ಯಕರ್ತರಾಗಿ ಬೀದಿಗಿಳಿಯುವ ವಿಚಾರ ಮಾಡಿದರು. ಇಂತಹ ಪರಸ್ಥಿತಿ ಆ ಸಂದರ್ಭದಲ್ಲಿ ನಿರ್ಮಾಣವಾಗುತಿತ್ತು. ಎರಡನೆಯ ಪ್ರಪಂಚ ಮಹಾಯುದ್ಧ ನಡೆದು ಜಗತ್ತಿನ ಪರಸ್ಥಿತಿ ತಂಬಾ ಅಧೋಗತಿಗೆ ಇಳಿದಿತ್ತು.

ಆರ್ಥಿಕ ಬಿಕ್ಕಟ್ಟು ಸಂಭವಿಸಿತ್ತು. ಎಲ್ಲಲ್ಲೂ ನಿರುದ್ಯೋಗ ತಾಂಡವಾಡುತಿತ್ತು. ಇಂತಹ ದಯಾನೀಯ ಪರಸ್ಥಿತಿಯನ್ನು ದುರುಪಯೊಗ ಪಡಿಸಿಕೊಂಡ ಶ್ರೀಮಂತ ವರ್ಗ ಬಡವರನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಂಡಿತು. ಬಡವರನ್ನು ಮುನ್ನೆಡೆಸುವವರು ಯಾರು ಇದ್ದಿಲ್ಲ. ಆ ಕಾರ್ಯವನ್ನು ಸಾಹಿತಿಗಳು ಮಾಡಬೇಕೆಂದು ಅವರ ಉದ್ದಾರದಲ್ಲಿ ತೊಡಗಿದರು. ಸಾಹಿತಿಯದವನು ಬರವಣಿಗೆಯಲ್ಲಿ ತೊಡಗಿಕೊಂಡರೆ ಸಾಲದು. ಬಡವರಿಗೆ ಸಹಾಯ ಮಾಡಿ ಅವರಿಗೆ ತಿಳುವಳಿಕೆ ನೀಡುವ ಕಾರ್ಯವನ್ನು ಮಾಡಬೇಕೆಂದು ಎಲ್ಲಾ ಬರಹಗಾರರ ಮೇಲೆ ಒತ್ತಡ ಹಾಕಿದರು. ಬರವಣಿಗೆಯಲ್ಲು ಬಡವರ ಬವಣೆಗಳನ್ನು ಬಿಂಬಿಸಬೇಕೆಂದು ತಿಳಿಸಿದರು. ಹೀಗಾಗಿ ಪ್ರಗತಿಶೀಲರ ಸಾಹಿತ್ಯದಲ್ಲಿ ಹೆಚ್ಚಾಗಿ ಬಡವರ ಕಷ್ಟಗಳ ಸಂಗತಿಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

೧೯೩೬ ರಲ್ಲಿ ಪ್ರಗತಿಶೀಲ ಸಂಘಟನೆ ಸಭೆ ಸೇರಿತು. ಈ ಸಭೆ ಭಾರತೀಯ ಸಾಹಿತ್ಯ ವಲಯದಲ್ಲಿ ಹೊಸ ಗಾಳಿ ಬೀಸಲು ಕಾರಣವಾಯಿತು. ಸಭೆಯ ಅಧ್ಯಕ್ಷತೆಯನ್ನು ವಾಸ್ತವವಾದಿ ಲೇಖಕರಾದ ಪ್ರೇಮಚಂದರ್ ವಹಿಸಿದ್ದರು. ಅಧ್ಯಕ್ಷೀಯ ಭಾಷಣವೇ ಪ್ರಗತಿಶೀಲರ ಪ್ರಣಾಳಿಕೆಯಾಯಿತು.“ ಇಲ್ಲಿಯತನಕವೂ ತನ್ನ ಪ್ರತಿಗಾಮಿ ಶಕ್ತಿಯಲ್ಲಿ ಬಂಧಿಸಿಕೊಂಡ ಅದರ ಸತ್ಯ ಮತ್ತು ಪ್ರಗತಿ ಸಂರಚನೆಯನ್ನೇ ನಾಶಗೊಳಿಸಿದ ಪ್ರತಿಗಾಮಿವರ್ಗದ ಕಡೆಯಿಂದ ಸಾಹಿತ್ಯವನ್ನು ಮತ್ತಿತರ ಕಲೆಯನ್ನು ಸೆರೆಬಿಡಿಸಬೇಕಾದುದೇ ಹಾಗೆ. ಅದು ಸತ್ಯವನ್ನು ಜನರ ಹೃದಯದ ಹತ್ತಿರ ತಂದು ಬದುಕಿನ ಉಜ್ವಲವಾದ ವಾಸ್ತವತೆಯನ್ನು ಚಿತ್ರಿಸುವಂತೆಯು ಭವಿಷ್ಯತ್ತನ್ನೂ ರೂಪಿಸುವ ಜವಾಬ್ದಾರಿಯನ್ನು ಹೊರುವಂತೆಯು ಮಾಡಬೇಕಾಗಿದೆ. ಆದ್ದರಿಂದ ಇಂದಿನ ಭಾರತೀಯ ಸಾಹಿತ್ಯ ಜನರ ಮೂಲಭೂತ ಸಮಸ್ಯೆಗಳನ್ನು ಹೊಂದಿರಬೇಕಾಗಿದೆ. ಜನರ ಹಸಿವು, ಬಡತನ, ಹಿಂದುಳಿದಿರುವಿಕೆ ಮತ್ತು ರಾಜಕೀಯ ಕಟು ಪರಸ್ಥಿತಿಯ ಕುರಿತು ಗಂಭೀರ ಕಾಳಜಿ ಹೊಂದಿರಬೇಕೆಂದು ನಾವು ನಂಬುತ್ತೇವೆ. ಯಾವುದು ನಮ್ಮನ್ನು ನಿರಾಶವಾದಿ , ನಿಷ್ಕ್ರೀಯ ಮತ್ತು ವಿಚಾರ ಶೂನ್ಯತೆಯೆಡೆಗೆ ಒಯ್ಯುತ್ತದೆಯೋ ಅದೇ ಪ್ರತಿಗಾಮಿ ನಿಲುವು. ಅದನ್ನು ನಾವು ವೈಚಾರಿಕತೆಯಿಂದ ತಿರಸ್ಕರಿಸುತ್ತೇವೆ. ಯಾವುದು ನಮ್ಮ ವಿಮರ್ಶಕ ಬುದ್ಧಿಯನ್ನು ಹೊಡೆದೆಬ್ಬಿಸುತ್ತದೋ ಆ ಮೂಲಕ ನಮ್ಮ ಸಂಸ್ಥೆ, ಮಾಧ್ಯಮ, ಕಂದಾಚಾರ, ನಡೆ–ನುಡಿಗಳನ್ನು ಪರೀಕ್ಷಸ ಹಚ್ಚುತ್ತದೋ ಅದರಿಂದಾಗಿ ಅಥವಾ ಆ ಮುಖಾಂತರವಾಗಿ ಒಂದು ಸಂಘಟನೆಯ ಅಡಿಯಲ್ಲಿ ಒಂದು ಹೊಸಕಾಲ ಪರಿವರ್ತನೆಗೆ ಅನುವು ಮಾಡುತ್ತಾ ಮುಂದುವರಿವುದೋ ಆ ಸಿದ್ದಿಯನ್ನು ಪ್ರಗತಿಶೀಲತೆಯೆಂದು ಗ್ರಹಿಸುತ್ತೇವೆ ಮತ್ತು ಸ್ವೀಕರಿಸುತ್ತೇವೆ ಎಂಬುದಾಗಿದೆ.”[೫]

ಸಾಹಿತ್ಯವು ಸಾಮಾಜಿಕ ಅಸಮಾನತೆ, ಅನ್ಯಾಯ, ಬ್ರಷ್ಟತೆ, ಅಧಿಕಾದ ದುಷ್ಟತನ, ಚಾರಿತ್ರಿಕ ಶೋಷಣೆಯ ವಿರುದ್ಧವಿರಬೇಕೆಂಬ ನಿಲುವು ಪ್ರಗತಿಶೀಲರದಾಯಿತು. ಮಾರ್ಕ್ಸನ ಕ್ರಾಂತಿಯ

ಪರಿಕಲ್ಪನೆ ಪ್ರಗತಿಶೀಲರಿಗೆ ಮಾದರಿಯಾಯಿತು. ಬಂಡವಾಳಶಾಹಿಯು ಬೆಳೆಯುತ್ತಾ ಹೋದಂತೆ, ದುಡಿಯುವ ವರ್ಗದ ಸಂಘಟನೆ ಗಟ್ಟಿಗೊಂಡು ವಿವೇಕ ಪಡೆದುಕೊಂಡು ಬಂಡವಾಳಶಾಹಿಯ ವಿರುದ್ಧ ಹೋರಾಡುತ್ತಾರೆ. ಆಗ ಕ್ರಾಂತಿ ಸಂಭವಿಸಿ ದುಡಿಯುವ ವರ್ಗದ ಜನರಿಗೆ ಅಧಿಕಾರ ಪ್ರಾಪ್ತವಾಗುತ್ತದೆ. ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎಂಬ ಆಶಯವನ್ನು ಸಾಹಿತ್ಯದಲ್ಲಿ ತರಲು ಪ್ರಯತ್ನಿಸಿದರು. ಮಾರ್ಕ್ಸವಾದಕ್ಕೂ ಅಂಟಿಕೊಳ್ಳದೆ ಪ್ರಗತಿಪರವಾದುದನ್ನು ಪ್ರಗತಿಶೀಲರು ಒಪ್ಪಿಕೊಂಡರು." ಮಾರ್ಕ್ಸ್ ವಾದವು ಒಂದು ತತ್ವಜ್ಞಾನ. ಸಮಗ್ರ ಜೀವನವನ್ನು ನೋಡುವ ದೃಷ್ಟಿಕೋನ. ಬುದ್ಧಿಜೀವಿಗಳು ಆ ತತ್ವಜ್ಞಾನದಿಂದ ಪ್ರಭಾವಿತರಾಗಬಹುದು. ಆಗದೆ ಇರಬಹುದು. ಅದು ಅವರಿಗೆ ಸಂಬಂಧ ಪಟ್ಟ ವಿಷಯ. ಆದರೆ ಮಾರ್ಕ್ಸ್‌ವಾದಿಗಳು ಮಾತ್ರವೇ ಪ್ರಗತಿಶೀಲರು ಎನ್ನುವುದು ತಪ್ಪು. ವೈಜ್ಞಾನಿಕದೃಷ್ಟಿಕೋನವುಳ್ಳವರು, ಆದರ್ಶವಾದಿಗಳು ತಮ್ಮ ಮಾನವೀಯ ಬಾವನೆಗಳಿಂದ ಸತ್ಯ, ನಿಷ್ಠೆಯಿಂದ ಪ್ರಗತಿಶೀಲವಾದ ಸಾಹಿತ್ಯವನ್ನು ರಚಿಸುತ್ತಾರೆ"೬

"ವರ್ಗವೈಷಮ್ಯವನ್ನು ಕೆರಳಿಸುವದಲ್ಲ. ಅನ್ಯಾಯ, ಕ್ರೌರ್ಯ, ದಬ್ಬಾಳಕೆ, ಯಾರಿಂದ ಆದರೂ ಅದರಿಂದ ಒಂದು ಪಕ್ಷಕ್ಕೆ ಅನ್ಯಾಯವಾಗುತ್ತದೆ. ಅವರು ಶಾಂತರಾಗಿರುವದಿಲ್ಲ. ಅನ್ಯಾಯ ದಬ್ಬಾಳಿಕೆ ಯಾರಲ್ಲೂ ಎಲ್ಲಿ ಕಂಡು ಬಂದರೂ ಅವರು ಸಿಡಿದೇಳುತ್ತಾರೆ." ಎಂದು ಅ.ನ. ಕೃ. ಅವರು ಹೇಳುತ್ತಾರೆ. " ವಾಸ್ತವ ಪರಸ್ಥಿತಿಗೆ ಕಣ್ಣು, ಕಿವಿ, ತೆರೆದಿಟ್ಟು ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಪೂರ್ತಿ ನೀಡುವಂತ ಕೃತಿ ರಚಿಸುವದೆ ಪ್ರಗತಿಶೀಲ ಸಾಹಿತ್ಯ" ಎಂದು ಬಸವರಾಜ ಕಟ್ಟಿಮನಿಯವರು ಬಾವಿಸುತ್ತಾರೆ. ಈ ಹಿನ್ನಲೆಯಲ್ಲಿ ಪ್ರಗತಿಶೀಲರು ಹೆಣ್ಣಿನ ಮೇಲಿನ ದೌರ್ಜನ್ಯ, ಕೊಳಚೆ ಜೀವನ, ಧಾರ್ಮಿಕ ಢಾಂಭಿಕತೆ, ಮಠಾಧಿಪತಿಗಳ ಕೊಳಕು, ಕಪಟ ಸಮಾಜ ಸೇವಕರು, ರಾಜಕಾರಣಿಗಳು ಇಂತೆಲ್ಲಾ ಸಮಾಜದ ಸಂಗತಿಗಳ ಕುರಿತು ಕೃತಿ ರಚಿಸಿದರು.

ಪ್ರಗತಿಶೀಲರು ೧೯೪೬ರಲ್ಲಿ ನಡೆದ ಧಾರವಾಡದ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮ ಸಾಹಿತ್ಯಿಕ ನಿಲುವುಗಳನ್ನು ಸ್ಪಷ್ಟಪಡಿಸಿದರು."ಸಾಹಿತ್ಯವೆಂಬ ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತಿ ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ. ಇವರು ಮಧ್ಯಮ ವರ್ಗದ ಆಸೆ, ಕೋಪ, ತಾಪ, ತೃಪ್ತಿಗಳನ್ನಷ್ಟೇ ಸೃಷ್ಟಿಸುತ್ತಾರೆ. ವರ್ಗವೈಷಮ್ಯವನ್ನು ಅವರು ಕೆರಳಿಸುವದಿಲ್ಲ. ಆದ್ದರಿಂದ ಇಂದಿನ ಸಾಹಿತ್ಯ ಬದಲಾಗಬೇಕಿದೆ. ಒಂದು ವರ್ಗಕ್ಕೆ ಅನ್ಯಾವಗುತ್ತಿದ್ದರೆ ಸಾಹಿತಿ ಸುಮ್ಮನೆ ಕೂಡಬಾರದು. ತಕ್ಷಣ ಅದಕ್ಕೆ ಸ್ಪಂದಿಸಬೇಕು. ಅನ್ಯಾಯ, ಕ್ರೌರ್ಯ, ದಬ್ಬಾಳಿಕೆ, ಶೋಷಣೆ ಯಾರಲ್ಲಿ ಕಂಡುಬಂದರು ಸಾಹಿತಿ ಸಿಡಿದೇಳಬೇಕು. ಎಲ್ಲಾ ಸಾಹಿತ್ಯ ಕಲೆಗಳ ಉಗಮಕ್ಕೆ ಸಾಮನ್ಯ ಜನತೆಯೆ ಮೂಲ. ಉತ್ತಮ ಕಲೆಯ ತಾಯಿಬೇರು ಸಾಮನ್ಯ ಜನತೆಯಲ್ಲಿಯೇ ಅಡಗಿದೆ. ನವೋದಯದವರು

ಜನಪದವನ್ನು ಕಡೆಗಣಿಸಲಿಲ್ಲ. ಅವರೊಂದಿಗೆ ಪೂರ್ಣ ಬೆರೆಯಲಿಲ್ಲ. ಅವರು ನಿರ್ವಿಣ್ಣರಾಗಿ ಸುಮ್ಮನೆ ಕುಳಿತರು. ಪರಂಪರಾಗತ ಮೌಢ್ಯವನ್ನು ಖಂಢಿಸಬೇಕು. ದುರ್ಬಲತೆಯಿಂದ ಶಾಂತಿ ಲಭಿಸುವದಿಲ್ಲ.ನ್ಯಾಯ ದೊರಕುವದಿಲ್ಲ. ಕ್ರಾಂತಿಯಿಂದ ಶಾಂತಿ ಸಾಧ್ಯವಾಗುತ್ತದೆ. ಈಗ ಜಗತ್ತಿನಲ್ಲಿ ಪ್ರಜಾಸಾಮ್ಯ, ಬಂಡವಾಳಸಾಮ್ಯ ಎಂಬ ಎರಡು ಪಕ್ಷಗಳು ಉದಯಿಸುತ್ತಿವೆ. ಇವೇ ಎರಡು ಜಾತಿಗಳು. ಇವುಗಳಲ್ಲಿ ಸಾಹಿತಿ ಯಾವುದರೊಂದಿಗೆ ಗುರಿತಿಸಿಕೊಳ್ಳುತ್ತಾನೆ ಎಂಬುದು ಮುಖ್ಯ. ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗಿರುವ ಗಾಯಿತ್ರಿಯಿದು. ಸಾಹಿತ್ಯ ದುರ್ಬಲರ, ದಲಿತರ, ಬಡವರ ರಕ್ಷಾಕವಚವಾಗಬೇಕು."

ಈ ನಿಟ್ಟಿನಲ್ಲಿ ಸಾಹಿತ್ಯವನ್ನು ರಚಿಸಿದರು. ಎಸ್. ಅನಂತನಾರಾಯಣ ಅವರು "ಜನತೆಗೆ, ಕೂಲಿಕಾರರಿಗೆ ಮತ್ತು ರೈತರಿಗೆ ಬೇಕಾದ ಸಾಹಿತ್ಯಬೇಕು. ಅವರಿಗೆ ಯಾವಾಗಲು ಮುಂದಿರುವ ಕಷ್ಟಗಳ ಬೆಟ್ಟಗಳನ್ನು ಹಿಟ್ಟು ಮಾಡಲು ಹುಮ್ಮಸ್ಸು ಕೊಡುವ ಸಾಹಿತ್ಯ ಬೇಕು. ಅವರಿಗೆ ನಿಜದ ಚಿತ್ರಣ ನೀಡಬೇಕು" ಎಂದು ಹೇಳಿದರು.

ತಾ. ರ. ಸು., ಅ.ನ. ಕೃ., ನಿರಂಜನ, ಬಸವರಾಜ ಕಟ್ಟಿಮನಿ, ಶ್ರೀರಂಗ, ಚೆದುರಂಗ, ಕೊ. ಚೆನ್ನಬಸ್ಸಪ್ಪ, ವ್ಯಾಸರಾಯ ಬಲ್ಲಾಳರು ಪ್ರಗತಿಶೀಲ ಸಭೆಗಳಿಗೆ ಹಾಜರಾಗಿ ಅಲ್ಲಿಯ ವಿಚಾರಗಳಿಂದ ಪ್ರಭಾವಿತರಾದರು. ಕನ್ನಡದಲ್ಲಿ ಆ ಸಾಹಿತ್ಯ ಬೆಳೆಯಲು ಕಾರಣರಾದರು.

ಇವರು ಸಾಹಿತಿಗೆ ರಾಜಕೀಯ ಬದ್ದತೆ ಇರಬೇಕು. ಅನ್ಯಾಯ, ಶೋಷಣೆ, ದಬ್ಬಾಳಿಕೆ ಖಂಢಿಸುವ ಪ್ರಗತಿಪರ ಚಿಂತನೆ ಇರಬೇಕು. ಜನತೆಗೆ ಉಪಯೋಗವಾಗುವ ಸಾಹಿತ್ಯ ರಚನೆಯಾಗಬೇಕು. ಎಂದು ಅದರಂತೆ ಸಾಹಿತ್ಯ ರಚಿಸುವುದರ ಜೊತೆಗೆ ನಡೆದುಕೊಳ್ಳುವ ಪ್ರಯತ್ನ ಪ್ರಗತಿಶೀಲರು ಮಾಡಿದರು.

ಪ್ರಗತಿಶೀಲರು ಹೆಚ್ಚಾಗಿ ಕಾದಂಬರಿಗಳನ್ನು ಬರೆದರು. ಕಾದಂಬರಿಯ ಬರವಣಿಗೆಯಲ್ಲಿ ಇವರು ದೊಡ್ಡ ಕ್ರಾಂತಿಯನ್ನೇ ಮಾಡಿದರು. ಭಾವನಾತ್ಮಕ ಶೈಲಿಯಿಂದ, ಹದವಾದ ಸಂಭಾಷಣೆಯಿಂದ ಓದುಗರನ್ನು ಮೈಮರೆವಂತೆ ಮಾಡಿದರು. ಸಮಸ್ಯೆಗಳನ್ನು ಕಲಾತ್ಮಕಗೊಳಿಸಿ ಜನರನ್ನು ಕ್ರಾಂತಿಗೆ ಸಜ್ಜುಗೊಳಿಸುವ ರೀತಿಯಲ್ಲಿ ಕಾದಂಬರಿಗಳನ್ನು ಬರೆದರು. ಓದುವ ವರ್ಗವು ಬೆಳೆದಿದ್ದರಿಂದ ಇವರ ಕಾದಂಬರಿಗಳು ಮುಖ್ಯ ಆಹಾರವಾದವು. ಮುಖ್ಯವಾಗಿ ಸ್ತ್ರೀ ಶಿಕ್ಷಣದಿಂದಾಗಿ ಮಹಿಳಾ ಓದುವ ವರ್ಗವು ಬೇಗನೆ ಕಾದಂಬರಿಗನ್ನು ಸ್ವೀಕರಿಸಿತು. ಇವರು ದೊಡ್ಡ ಪ್ರಮಾಣದಲ್ಲಿ ಓದುಗ ವರ್ಗವನ್ನು ಬೆಳೆಸಿದರು.

ತ್ರಿವೇಣಿ, ಅನುಪಮ ನಿರಂಜನ, ಹೆಚ್.ಎಸ್.ಪಾರ್ವತಿ, ಎಂ.ಕೆ. ಇಂದಿರಾರಂತಹ ಜನಪ್ರಿಯ ಕಾದಂಬರಿಕಾರರು ಈ ಕಾಲದಲ್ಲಿ ಜನರನ್ನು ತಟ್ಟಿದರು. ಇವರು ಮಧ್ಯಮ ವರ್ಗದ ಮಹಿಳೆಯರ ಬದುಕುಗಳನ್ನು ಅನಾವರಣಗೊಳಿಸಿದರು. ಅವರ ಕನಸುಗಳು, ಭಾವನೆಗಳು, ತುಡಿತಗಳು,

ಸಂಬಂಧಗಳು, ಮಹಿಳೆಯರ ಕೌಟುಂಬಿಕ, ಸಾಮಾಜಿಕ ನೆಲೆಗಳು, ಲಿಂಗ ತಾರತಮ್ಯದ ಸೂಕ್ಷ್ಮ ಸಂವೇದನೆಗಳನ್ನು ಕಾದಂಬರಿಯಲ್ಲಿ ಅಭಿವ್ಯಕ್ತಿಸಿದರು.

ಅ.ನ.ಕೃಷ್ಣರಾಯರು ನೂರರ ಮೇಲೆ ಕಾದಂಬರಿಗಳನ್ನು ಬರೆದರು. ಇವರದು ವಾಸ್ತವ ಮಾರ್ಗ. ವಾಸ್ತವದ ಸಮಸ್ಯೆಗಳಿಗೆ ಕಲಾರೂಪ ನೀಡುವುದು ಅವರ ಧೋರಣೆಯಾಯಿತು. ಮಧ್ಯಮ ವರ್ಗದ ಆಶೆ ಆಕಾಂಕ್ಷೆಗಳಿಗನುಗುಣವಾಗಿ ಕಾದಂಬರಿಗಳನ್ನು ಹೊಸೆದರು. ಚಿತ್ತಾಕರ್ಷಕ ಶೈಲಿಯಿಂದ ಓದುಗರ ಮನಸೂರೆಗೊಂಡರು. ಸಂಧ್ಯರಾಗ ಅವರ ಪ್ರಾತಿನಿಧಿಕ ಕಾದಂಬರಿಯಾಗಿದೆ. ಸಂಗೀತಗಾರನೊಬ್ಬನ ಜೀವನ ಈ ಕಾದಂಬರಿಯ ವಸ್ತುವಾಗಿದೆ. ಲಕ್ಷ್ಮಣನ ಕಲಾಜೀವನದೊಂದಿಗೆ ಅವನ ಸುತ್ತಲಿನ ಸಾಮಾಜಿಕ ಜೀವನವನ್ನು ಚಿತ್ರಿಸಲಾಗಿದೆ.ಲಕ್ಷ್ಮಣನ ಕಲಾಜೀವನವು ಓದುಗರನ್ನು ಹಿಡಿದಿಡುತ್ತದೆ. ಮೀನಾಕ್ಷಮ್ಮ, ಶಾಮಣ್ಣ, ಜಯ, ಶಾಂತರ ಸ್ವಭಾವವು ಭಾವನಾತ್ಮಕವಾಗಿದೆ. ಅವರ ಲಲಿತವಾದ ಶೈಲಿ ಓದುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಉದಯರಾಗ ಕಾದಂಬರಿಯಲ್ಲಿ ಚಹದಂಗಡಿಯ ಮಾಣಿಯೊಬ್ಬ ಚಿತ್ರ ಕಲಾವಿದನಾಗುವ ಕತೆಯಿದೆ. 'ಮಂಗಳಸೂತ್ರ' ಕಾದಂಬರಿ ಮೂವರು ಅಕ್ಕ ತಂಗಿಯರ ದಾಂಪತ್ಯ ಜೀವನವನ್ನು ಚಿತ್ರಿಸುತ್ತದೆ. 'ಸಾಹಿತ್ಯರತ್ನ' ದಲ್ಲಿ ಸಾಹಿತಿಯಾದ ಮೂರ್ತಿ ಹೆಂಡತಿ ಗಿರಿಜೆಯನ್ನು ಬಿಟ್ಟು, ಆಕಸ್ಮಿಕವಾಗಿ ಪರಿಚಯವಾದ ಲಲಿತೆಯಲ್ಲಿ ಅನುರುಕ್ತನಾಗಿ, ಆಕೆಯೊಂದಿಗೆ ಜೀವಿಸುವ ಕತೆಯಿದೆ. 'ನಟಸಾರ್ವಭೌಮ' ದಲ್ಲಿ ರಾಜನೆಂಬ ನಟನ ಜೀವನ ವೃತ್ತಾಂತವಿದೆ. ಜೊತೆಗೆ ಕಲೆ, ಸಂಗೀತ, ರಂಗಭೂಮಿಯ ಇತಿಹಾಸವನ್ನು ನಿರೂಪಿಸಲಾಗಿದೆ. ರಾಜನಿಗೆ ನಾಲ್ಕು ಜನ ಪ್ರೇಯಸಿಯರಿದ್ದರು ಯಾವ ತಳಮಳವಿಲ್ಲದೆ ನಿರ್ಲಿಪ್ತವಾಗಿರುತ್ತಾನೆ. ಜೀವನ ಕಲೆ, ಆದರ್ಶ- ವ್ಯವಹಾರ, ಕಾಮ-ಪ್ರೇಮಗಳ ಬಗ್ಗೆ ತಮ್ಮ ವಿಚಾರಗಳನ್ನು ಹೇಳಲೆತ್ನಿಸಿದ್ದಾರೆ. 'ಮುಯ್ಯಿಗೆ ಮುಯ್ಯಿ' ಯಲ್ಲಿ ಮೃದಂಗವಾದಕನ ಕತೆಯಿದೆ. ನಗ್ನಸತ್ಯ, ಶನಿಸಂತಾನ, ಸಂಜೆಗತ್ತಲು,ಅಪರಂಜಿ, ಕಾದಂಬರಿಗಳು ವೇಶ್ಯ ಸಮಸ್ಯೆಯನ್ನು ಒಳಗೊಂಡಿವೆ. ಇದೇ ರೀತಿಯ ಕಾದಂಬರಿಗಳನ್ನು ಬರೆಯುತ್ತಾ ಆಕರ್ಷಕವಾದ ಕಥನಶೈಲಿ, ಮನೋಹರವಾದ ಸಂಭಾಷಣೆಯಿಂದ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದರು. ಆದರೆ, ಕಲಾಕೃತಿಯ ಸಾರ್ವಕಾಲಿಕತೆಯ ದೃಷ್ಟಿಯಿಂದ ಯಶಸ್ಸು ಪಡೆಯಲಿಲ್ಲ. ಅವರು ತಮ್ಮದಲ್ಲದ ಅನುಭವವನ್ನು ಕಲ್ಪಿಸಿಕೊಂಡು, ತೀರಾ ಭಾವವೇಶದಿಂದ ಬರೆದರು. ಸಾಂಸ್ಕೃತಿಕ ಬದುಕನ್ನು ಸೂಕ್ಷ್ಮವಾಗಿ, ವಸ್ತುನಿಷ್ಠವಾಗಿ ಗ್ರಹಿಸುವಲ್ಲಿ ಸೋತಂತೆ ಕಾಣುತ್ತದೆ. ಆದರೂ ಒಂದು ಓದುವ ವರ್ಗವನ್ನು ಕಾದಂಬರಿಯ ಕಡೆ ಹೊರಳುವಂತೆ ಮಾಡಿದ್ದು ದೊಡ್ಡ ಸಾಧನೆಯಾಗಿದೆ.

ತ.ರಾ.ಸುಬ್ಬರಾವ್ ಸಂಖ್ಯೆಯಲ್ಲಿ ಬಹಳಷ್ಟು ಕಾದಂಬರಿಗಳನ್ನು ಬರೆದರು. ಅತಿ ರಂಜಕತೆ, ಭಾವನಮಯತೆ, ರೊಚ್ಚಿನಿಂದ ಇವರ ಕಾದಂಬರಿಗಳು ಕೂಡಿವೆ. ಅ.ನ.ಕೃ. ದಾರಿಯನ್ನು ಇವರು

ತುಳಿದರು. ಕೃತಿಯನ್ನು ಓದುಗರಿಗೆ ತಲುಪುವುದಷ್ಟೇ ಇವರಿಗೆ ಮುಖ್ಯವಾಯಿತು. ಅದಕ್ಕೆ ಕಸರತ್ತನ್ನು ಮಾಡಿದರು. 'ಮಸಣದ ಹೂ' ವೇಶ್ಯಾಸಮಸ್ಯೆಯನ್ನು ಚರ್ಚಿಸುತ್ತದೆ. 'ಬಿಡುಗಡೆಯ ಬೇಡಿ' ಸ್ತ್ರೀ ಸ್ವಾತಂತ್ರದ ಚಿತ್ರಣವಿದೆ. ಈ ಕಾದಂರಿಗಳಲ್ಲಿ ಹೆಣ್ಣಿನ ಬದುಕಿನ ದಾರುಣತೆಯನ್ನು ನಿರೂಪಿಸಿದರು. ಪುರುಷ ಜಗತ್ತು ಮಹಿಳೆರನ್ನು ಬೇಟೆಯಾಡುವ ಸ್ಥಿತಿಯನ್ನು ತೆರೆದು ತೋರಿಸಿದರು. 'ನಾರಹಾವು' 'ಸರ್ಪಮತ್ಸರ' ಇವರ ಜನಪ್ರಿಯ ಕಾದಂಬರಿಗಳು. ನಾಗರಹಾವಿನ ರಾಮಚಾರಿ, ಮೇಷ್ಟ್ರು, ಆಲುಮೇಲು, ಮಾರ್ಗರೇಟ್, ವರದರಾಜು, ವರದರಾಜುವಿನ ತಂಗಿ– ಈ ಪಾತ್ರಗಳಲ್ಲಿ ಜಾತಿಸಮಸ್ಯೆ ಮತ್ತು ಸ್ತ್ರೀ ಸಮಸ್ಯೆಯನ್ನು ಸಂಪ್ರದಾಯದ ಹಿಂಧೂ ಧರ್ಮದ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹೀಗಾಗಿ ಈ ಕಾದಂಬರಿಗೆ ವೈಚಾರಿಕತೆ ಪ್ರಾಪ್ತಿಯಾಗಿದೆ. 'ಚೆಂದನದ ಗೊಂಬೆ' ತುಂಬಾ ಜನಪ್ರಿಯತೆನ್ನು ಪಡೆದ ಕಾದಂಬರಿಯಾಗಿದೆ. ಗಂಡ ಸತ್ತ ರತ್ನಳ ಕತೆ ಈ ಕಾದಂರಿಯಲ್ಲಿದೆ. ರತ್ನಳ ಗಂಡ ಆದರ್ಶಕ್ಕೆ ಬಿದ್ದ ಕಾರಣ ಜೀವನ ತೊಂದರೆಯಲ್ಲಿ ಸಿಲುಕುತ್ತದೆ. ಗಂಡನ ಸ್ನೇಹಿತ ರಾಘಣ್ಣ ಸಹಾಯ ಮಾಡುತ್ತಾನೆ. ಆದರೆ ಆಕೆಯ ಬಂಧು, ಬಳಗದಲ್ಲಿ ಅನೇಕ ಬಿಕ್ಕಟ್ಟುಗಳು ಸೃಷ್ಟಿಯಾಗುತ್ತವೆ. ಯಾವುದೋ ಗಂಡನ ಹಳೆಯ ಸಾಲ ಆಕೆಯನ್ನು ಕಂಗೆಡುಸುತ್ತದೆ. ಋಣಸಂಬಂಧ, ಸಾಮಾಜಿಕ ನೀತಿ, ವ್ಯವಹಾರದ ದುಷ್ಟತನ ಆಕೆಯನ್ನು ಮುತ್ತಿಕೊಳ್ಳುತ್ತದೆ. ಅ.ನ.ಕೃ.ಅವರ ಐತಿಹಾಸಿಕ ಕಾದಂಬರಿಗಳಾದ 'ಕಂಬನಿಯ ಕುಯಿಲು', 'ರಕ್ತರಾತ್ರಿ' 'ಸಿಡಿಲಮೊಗ್ಗು', ನಂತೆಯೇ ತ.ರಾ.ಸು.ರವರು 'ದುರ್ಗಸ್ತಮಾನ' ಎಂಬ ಐತಿಹಾಸಿಕ ಕಾದಂಬರಿ ಬರೆದರು. ತ.ರಾ.ಸು. ಕೂಡ ಓದುಗ ವರ್ಗವನ್ನು ನಿರ್ಮಾಣ ಮಾಡುವಲ್ಲಿ ಕಾದಂಬರಿ ಪ್ರಕಾರವನ್ನು ದುಡಿಸಿಕೊಂಡರು. ಅ.ನ.ಕೃ. ಮಾರ್ಗದಲ್ಲಿಯೇ ನಡೆದಿದ್ದರಿಂದ ಸಾಂಸ್ಕೃತಿಕ ಅನನ್ಯತೆಯನ್ನು ಸಾಧಿಸುವಲ್ಲಿ ಸೋತಂತೆ ಕಾಣುತ್ತದೆ. ಅ.ನ.ಕೃ. ಬಗ್ಗೆ ಕುರ್ತುಕೋಟಿಯವರು ಹೇಳುವ ಮಾತುಗಳನ್ನು ಗಮನಿಸಿದರೆ ಇವರ ಸಾಹಿತ್ಯದ ಮಿತಿ ಅರ್ಥವಾಗುತ್ತದೆ." ಇವರು ವಿಚಾರವಾದಿಗಳಲ್ಲ. ಆದ್ದರಿಂದ ಸರಳವಾದ ಕತೆಗಳ ಬಗ್ಗೆಯೆ ಒತ್ತುಕೊಡಬೇಕಾಗಿತ್ತು. ವಿಪರೀತವಾದ ಭಾವನವಸತೆಯ ಪರಿಣಾಮವಾಗಿ, ಬುದ್ದಿವಂತಿಕೆಯ ಫಲವೂ ತಪ್ಪಿ ಹೋಯಿತು. ಅಂತಃಕರಣದ ಆಳವನ್ನು ತೋರಿಸಬಲ್ಲ ಕಲ್ಪನಾಶಕ್ತಿಯು ಇಲ್ಲವಾಯಿತು. ಅವರ ಸಾಹಿತ್ಯದ ಹೃದಯದಲ್ಲಿಯೇ ಬೌದ್ಧಿಕ ತಪ್ಪು ತಿಳುವಳಿಕೆಯ ಮಂಜು ಮುಸುಕಿದೆ. ಅದರಾಚೆಗೆ ಇರುವ ಜೀವನ ಅವರಿಗೆ ಕಾಣಿಸುವದಿಲ್ಲ. ಹೀಗಾಗಿ ಮಂಡಿಸಬೇಕೆಂದರೆ ಸ್ವಂತ ವಿಚಾರಗಳಿಲ್ಲದೆ, ಚಿತ್ರಿಸಲಿಕ್ಕೆ ಜೀವನವೂ ಇಲ್ಲದೆ ಅ.ನ.ಕೃ. ಜೀವಂತ ಚಿತ್ರವಾಗಿದ್ದಾರೆ. ಅವರು ಜೀವನವೆಂದು ಹಿಡಿದದ್ದು ಕನಸಾಗುತ್ತದೆ. ಭಾವಪ್ರಪಂಚ ತರಲಾಗುತ್ತದೆ. ಪಾತ್ರಗಳೆಲ್ಲ ನೆರಳುಗಳಾಗುತ್ತವೆ. ಅವರ ಕಾದಂಬರಿಗಳಿಗೆ ವಸ್ತುವಿನ ಕೊರತೆ ಎಂದಿಗೂ ತಪ್ಪಿಲ್ಲ. ಬರೆಯುವದು ಅವರಿಗೆ ಉಸಿರಾಡಿಸಿದಷ್ಟೇ ಸುಲಭವಾಗಿದೆ. ಆದರೆ ಯಾವುದನ್ನು ಕುರಿತು

ಬರೆಯಬೇಕೆಂಬುದೆ ಅವರ ಸಮಸ್ಯೆ. ಹೀಗಾಗಿ ಈ ಕೊರತೆಯನ್ನು ಅವರು ಸ್ವಂತ ಕನಸುಗಳಿಂದ ತುಂಬುತ್ತಾರೆ. ಜೀವನ ಅವರ ಕೈಗೆ ಅನುಭವವಾಗಿ ದೊರೆಯದೆ, ಕನಸಾಗಿಯೇ ದೊರೆತಿದೆ”[2]

ಈ ಕಾಲಘಟ್ಟದಲ್ಲಿ ಯಶಸ್ವಿ ಕಾದಂಬರಿಕಾರರಾಗಿ ಮುನ್ನೆಡೆದವರು ಬಸವರಾಜ ಕಟ್ಟಿಮನಿಯವರು. ಕಾದಂಬರಿ ರಚನೆ ಮತ್ತು ವೈಚಾರಿಕ ಬದ್ದತೆಯಿಂದ ಮಾದರಿಯಾದವರು. ಕಾಲಾಂತರದಲ್ಲಿ ಉಳಿಯುವ ಉತ್ಕೃಷ್ಟ ಕಾದಂಬರಿಗಳನ್ನು ಇವರು ಕಟ್ಟಿಕೊಟ್ಟರು. ‘ಜ್ವಾಲಮುಖಿಯ ಮೇಲೆ’, ‘ಮಾಡಿಮಡಿದವರು’, ‘ಜರತಾರಿ ಜಗದ್ಗುರು’, ‘ಬಲೆಯ ಬೀಸಿದರು’, ‘ಹರಿಜನಾಯಣ’, ‘ನೀ ನನ್ನ ಮುಟ್ಟಬೇಡ’, ‘ಬೆಳಗಿನ ಗಾಳಿ’, ‘ನರಗುಂದ ಬಂಡಾಯ’ ಮುಖ್ಯ ಕಾದಂಬರಿಯಾಗಿವೆ. ‘ಜ್ವಾಲಮುಖಿಯ ಮೇಲೆ’ ಕಾದಂಬರಿ ಸಂಪೂರ್ಣ ಮಾರ್ಕ್ಸ್‌ನ ವರ್ಗಕಲಹವನ್ನೊಳಗೊಂಡ ಪ್ರಗತಿಶೀಲದ ನಿಲುವುಗಳಿಗೆ ಮಾದರಿಯಾಗಿದೆ. ಹಳ್ಳಿಯಿಂದ ನಗರಕ್ಕೆ ದುಡಿಯಲು ಬರುವ ದುಡಿವ ವರ್ಗ ಕಾರ್ಖಾನೆಯ ಮಾಲೀಕರಿಂದ ಅನೇಕ ರೀತಿಯಿಂದ ಶೋಷಣೆಗೆ ಒಳಗಾಗುತ್ತಾರೆ. ಕಡಿಮೆ ಕೂಲಿಗೆ ಹೆಚ್ಚು ದುಡಿಯುತ್ತಾರೆ. ಕಾರ್ಮಿಕರ ರಕ್ತ ಹೀರಿ ಮಾಲೀಕರು ಹೆಚ್ಚಿನ ಲಾಭ ಗಳಿಸುತ್ತಾರೆ. ಮಾಲೀಕ ಮತ್ತು ಕಾರ್ಮಿಕರ ನಡುವೆ ಅಂತರ ಹೆಚ್ಚುತ್ತಲೇ ಹೋಗುತ್ತದೆ. ಮಾಲಿಕರ ಅನ್ಯಾಯದಿಂದ ಶೋಷಣೆಯಿಂದ ದುಡಿವವರ್ಗ ಬಿಡುಗಡೆಯಾಗಲು ಕಮ್ಯುನಿಷ್ಟ ಪಕ್ಷ ಕಟ್ಟಿ ಸಂಘಟಿತರಾಗಿ ಹೋರಾಡುವ ಅನಿವಾರ್ಯತೆಯನ್ನು ಕಾದಂಬರಿ ಎತ್ತಿ ಹೇಳುತ್ತದೆ. ‘ಮಾಡಿಮಡಿದವರು’ ಕೃತಿ ಸ್ವಾತಂತ್ರ ಹೋರಾಟದಲ್ಲಿ ಬ್ರಿಟಷರ ವಿರುದ್ದ, ಜಮೀನ್ದಾರಿಕೆಯ ವಿರುದ್ದ ಹೋರಾಡಿ ನಾಡಿಗಾಗಿ ಪ್ರಾಣ ಕೊಟ್ಟವರ ಕತೆಯಾಗಿದೆ. ‘ಬಲೆಯ ಬೀಸಿದರು’ ಕೃತಿಯಲ್ಲಿ ಸ್ವಾತಂತ್ರ್ಯ ನಂತರ ಬಲಾಢ್ಯವಾದ ಕಾಂಗ್ರೆಸ್ ಪಕ್ಷಕ್ಕೆ ಪ್ರತಿಯಾಗಿ ರೈತ ಪಕ್ಷವೊಂದನ್ನು ವರ್ಗ ನೆಲೆಯಲ್ಲಿ ಕಟ್ಟಲು ಹೆಣಗಾಡಿ, ಆ ಸಂಘರ್ಷದಲ್ಲಿ ಹಿಂಸೆಗೆ ಗುರಿಯಾಗಿ ಪ್ರಾಣತ್ಯಾಗ ಮಾಡುವ ಸದಾಶಿವರಾಯನ ಕಥೆ ಇದೆ. ಕಟ್ಟಿಮನಿಯವರು ದಲಿತರ, ಕಾರ್ಮಿಕರ, ರೈತರ ಸಮಸ್ಯೆಗಳನ್ನು ಕುರಿತು ಕಾದಂಬರಿ ಬರೆದರು. ಭಾವನೆಗಳ ಹಿಡಿತಕ್ಕೆ ಸಿಲುಕದೆ, ವಸ್ತುನಿಷ್ಠವಾಗಿ ಸಮಾಜವನ್ನು ಗ್ರಹಿಸಿದರು. ಗ್ರಾಂಮೀಣ ಅನುಭವ, ಸೇವಾಮನೋಭಾವ, ಖಚಿತವಾದ ದೃಷ್ಟಿಕೋನ ಕಾದಂಬರಿಯ ಪಾತ್ರಗಳಿಗೆ ಗಾಢತೆ ಪ್ರಾಪ್ತವಾಗಲು ಕಾರಣವಾಗಿದೆ. ಹಿಂದೂಧರ್ಮದ ಬಗ್ಗೆ ತೀರ್ವ ತಾತ್ವಿಕ ವಿರೋಧವಿದ್ದುದರಿಂದ ಹರಿಜನಾಯಣ ದಂತಹ ಕಾದಂಬರಿ ಬರೆಯಲು ಸಾಧ್ಯವಾಯಿತು. ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಸ್ತ್ರೀ ಸ್ವಾತಂತ್ರ್ಯದಂತಹ ಸಾಮಾಜಿ ಸಮಸ್ಯೆಗಳ ಬಗ್ಗೆ ಕಾಳಜಿ ಇದ್ದುದರಿಂದ ಕಾದಂಬರಿಗಳಲ್ಲಿ ಈ ಸಮಸ್ಯೆಗಳೇ ಪ್ರಧಾನವಾಗಿ ಕಾಣಿಸಿಕೊಂಡವು. ಮಾರ್ಕ್ಸ್‌ವಾದ, ಸಮಾಜವಾದವನ್ನು ವಿಮರ್ಶಾತ್ಮಕವಾಗಿ ಕಾದಂಬರಿಯಲ್ಲಿ ಚರ್ಚಿಸುವದರಿಂದ ಬಸವರಾಜಕಟ್ಟಿಮನಿಯವರು ಕಾದಂಬರಿ ಕ್ಷೇತ್ರದಲ್ಲಿ ವಿಶೇಷ ಛಾಪನ್ನು ಮೂಡಿಸಲು ಸಾಧ್ಯವಾಯಿತು.

ಪ್ರಗತಿಶೀಲರಲ್ಲಿ ಚದುರಂಗರದು ಎದ್ದು ಕಾಣುವ ಹೆಸರು. ಈ ಸಂದರ್ಭದಲ್ಲಿ ವಿಶೇಷವಾದ ಕಾದಂಬರಿ ಹಾಗು ಕತೆಗಳನ್ನು ಇವರು ಬರೆದರು. ತೀರಾ ಸಿದ್ಧಾಂತಕ್ಕೆ ಕಟ್ಟುಬಿದ್ದು ಸಾಹಿತ್ಯವನ್ನು ರಚಿಸದೆ ಅನುಭವಗಳನ್ನು ಶೋಧಿಸುವ ಕಥನವನ್ನು ಸೃಷ್ಟಿಸಿದರು. ಉಯ್ಯಾಲೆ, ಸರ್ವಮಂಗಳ, ವೈಶಾಖ, ಹೆಜ್ಜಾಲ, ಎಂಬ ನಾಲ್ಕು ಕಾದಂಬರಿ ಬರೆದಿದ್ದರು ವೈಶಾಖ ಮಹತ್ವದ ಕಾದಂಬರಿಯಾಗಿದೆ. ಬ್ರಾಹ್ಮಣ ಮತ್ತು ದಲಿತ ಕೇರಿಯ ಚಿತ್ರಣ ಇಲ್ಲಿ ಬರುತ್ತದೆ. ದಲಿತನಾದ ಲಕ್ಕ ಬ್ರಹ್ಮಾಣ ವಿಧುವೆಯಾದ ರುಕ್ಮಿಣಿಯನ್ನು ಆಕಸ್ಮಿಕ ಕೂಡುತ್ತಾನೆ. ರುಕ್ಮಿಣಿಯ ಮಾವನು ಕೂಡಿರುತ್ತಾನೆ. ಆಕೆಯ ಬಸುರಿಗೆ ಲಕ್ಕನನ್ನು ಹೊಣೆಗಾರನನ್ನಾಗಿ ಮಾಡಲಾಗುತ್ತದೆ. ಇಲ್ಲಿ ಜಮೀನ್ದಾರರ ವರ್ಗ ಮತ್ತು ಜೀತದಾಳುವರ್ಗದ ನಡುವೆ ಸಂಘರ್ಷ ತಣ್ಣಗೆ ನಡೆಯುತ್ತದೆ. ಲಕ್ಕ, ವಿಧಿವೆ ರುಕ್ಮಿಣಿಯರು ನಮ್ಮ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಎರಡು ಸ್ಥರಗಳ ಸಂಕೇತವಾಗಿ ಕಾಣುತ್ತಾರೆ. ಪ್ರಾದೇಶಿಕ ಸಮೃದ್ಧ ವಿವರಗಳು ವೈವಿಧ್ಯವಾಗಿ ಅನೇಕ ಪಾತ್ರಗಳಲ್ಲಿ ಮೂಡಿ ಬಂದಿದೆ. ಕೇವಲ ಪಾದೇಶಿಕ ವಿವರವನ್ನು ನೀಡಲು ಸೀಮಿತವಾಗದೆ ಸಾಮಾಜಿಕ ಅರಿವಿನ ಆಯಾಮಗಳನ್ನು ಧ್ವನಿಪೂರ್ಣವಾಗಿ ಮಂಡಿಸುತ್ತದೆ. ಬ್ರಾಹ್ಮಣರ, ಜಮೀನ್ದಾರರ, ದಲಿತ ಜೀತದಾಳುಗಳ ಜೀವನವನ್ನು ಸಂಬಂಧ ಮತ್ತು ಸಂಘರ್ಷಗಳ ನೆಲೆಯಲ್ಲಿ ಮರು ಸೃಷ್ಟಿಸಿದ್ದಾರೆ. ಇಲ್ಲಿ ಪ್ರಾದೇಶಿಕ ಭಾಷೆಯ ಬಳಕೆ ವಿಶಿಷ್ಟ ಅನನ್ಯತೆಯನ್ನು ಪಡೆದಿದೆ.

ಅನುರುಕ್ತೆ, ವಾತ್ಸಲ್ಯಪಥ, ಹೇಮಂತಗಾನ, ಉತ್ತರಾಯಣ, ಬಂಡಾಯ, ಹೆಜ್ಜೆ ಯಂತಹ ಪ್ರಮುಖ ಕಾದಂಬರಿಗಳನ್ನು ವ್ಯಾಸರಾಯ ಬಲ್ಲಾಳರು ಬರೆದರು. ಬಾಂಬೆಯಲ್ಲಿ ಬಹುಕಾಲ ವಾಸವಿದ್ದುದರಿಂದ ಅಲ್ಲಿಯ ಜೀವನವನ್ನು ಕಾದಂಬರಿಯಲ್ಲಿ ತಂದರು. ಬಂಡಾಯ ಕಾದಂಬರಿ ಬಾಂಬೆಯ ಜೀವನ್ನು ಪ್ರತಿಬಿಂಬಿಸುತ್ತದೆ. ವರ್ಗಸಂಘರ್ಷದ ಕ್ರಿಯೆ ಮತ್ತು ಅದರ ಪರಿಣಾಮ ಅತ್ಯಂತ ವಾಸ್ತವವಾಗಿ ನಿರೂಪಿತವಾಗಿದೆ. ಸಾಮಾಜಿಕ ಅನನ್ಯತೆ ಈ ಕಾದಂಬರಿಯಲ್ಲಿ ಎದ್ದು ಕಾಣುತ್ತದೆ. ಎಲ್ಲಾ ಪಾತ್ರಗಳು ಸಾಮಾಜಿಕ ಕ್ರಿಯೆಗೆ ಮೂರ್ತರೂಪ ಕೊಡಲು ಶ್ರಮಿಸುತ್ತವೆ. ಅವರ ಕಾದಂಬರಿಯಲ್ಲಿ ಮಧ್ಯಮವರ್ಗದ ಆಶೆ, ಆಕಾಂಕ್ಷೆ, ಅಂತಃಕರಣ ಅನುಭವಿಸುವ ಸಾಮಾಜಿಕ ಒತ್ತಡಗಳ ಸ್ವರೂಪವನ್ನು ಕಾಣುತ್ತೇವೆ. ಬಂಡಾಯ ಕಾದಂಬರಿ ವರ್ಗಸಂಘರ್ಷವನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದೆ. ಪ್ರಗತಿಶೀಲ ಆಶಯಕ್ಕೆ ತಕ್ಕಂತೆ ಈ ಕೃತಿ ರೂಪತಳೆದಿದೆ.

ಗಾಂಧೀಜಿಯವರ ನೇರ ಪ್ರಭಾವಕ್ಕೆ ಒಳಗಾದ ಗೊರೂರು ರಾಮಸ್ವಾಮಿ ಅಯ್ಯಾಂಗಾರರು ಗ್ರಾಮಗಳ ಸಮಸ್ಯೆಯನ್ನು ಇಟ್ಟುಕೊಂಡು ಹಾಮಾವತಿ, ಮೆರವಣಿಗೆ, ಕಾದಂಬರಿ ಬರೆದರು. ಅಸ್ಪೃಶ್ಯತೆ, ಜಾತಿವ್ಯವಸ್ಥೆಯನ್ನು ತಿರಸ್ಕರಿಸಿ ಗಾಂದೀಜಿಯ ಸ್ವರಾಜ್ಯ ಕಲ್ಪನೆಯನ್ನು ಕಟ್ಟಿಕೊಡುವ

ಪ್ರಯತ್ನ ಮಾಡಿದರು. ಬಿತ್ತಿ ಬೆಳೆದವರು ಸಾತಂತ್ರ ಹೋರಾಟವನ್ನು ಕುರಿತ ಕಾದಂಬರಿಯಾಗಿದೆ. ಗ್ರಾಮೀಣ ಪ್ರದೇಶದ ಬಿಕ್ಕಟ್ಟುಗಳನ್ನು ವಿಶ್ಲೇಷಿಸುವಲ್ಲಿ ಹೆಚ್ಚಿನ ಕಾಳಜಿಯನ್ನು ಇವರು ಹೊಂದಿದ್ದಾರೆ. ಪ್ರಗತಿಶೀಲರ ಒಟ್ಟು ನೋಟವನ್ನು ಗಮನಿಸಿದಾಗ ಅನೇಕ ಮಿತಿಗಳು ಕಂಡುಬರುತ್ತವೆ. ಅದು ಮುಖ್ಯವಾಗಿ ಬರಹಕ್ಕಿರುವ ಸಾಹಿತ್ಯಕ ಮೌಲ್ಯವನ್ನು ಕುರಿತು. ಬರಹ ವರದಿಯ ಮಾದರಿಯನ್ನು ಪಡೆಯದೆ ಅದು ಕಲೆಯ ರೂಪವನ್ನು ಹೊಂದಿರಬೇಕು ಎಂಬುದು ಮುಖ್ಯವಾದ ಅಭಿಪ್ರಾಯ. ಕಲೆಗಿಂತ ಬದುಕು ಮುಖ್ಯ ಅದನ್ನು ಬಿಂಬಿಸುವುದು ಜನರಿಗೆ ತಲುಪಿಸುವುದು ಆ ಮೂಲಕ ಜನರಲ್ಲಿ ಪ್ರಜ್ಞೆಯನ್ನು ಮೂಡಿಸುವುದು ಮುಖ್ಯ ಎಂದು ವಾದಿಸುವವರು ಉಂಟು. ಈ ಚರ್ಚೆ ನಡೆಯುತ್ತಲೇ ಇದೆ. ಈ ಅಂಶವನ್ನು ಕೇಂದ್ರವಾಗಿಟ್ಟುಕೊಂಡು ಪ್ರಗತಿಶೀಲ ಸಾಹಿತ್ಯವನ್ನು ವಿಮರ್ಶೆ ಮಾಡುವ ಮನೋಭಾವಗಳು ಕನ್ನಡದಲ್ಲಿ ನಡೆದಿವೆ. ಈ ಚರ್ಚೆ ನಡೆಯುವಾಗಲೆಲ್ಲ ನಿರಂಜನರ ಸಾಹಿತ್ಯವನ್ನು ಕಲೆಯ ಮತ್ತು ಮೌಲಿಕ ನೆಲೆಯಲ್ಲಿ ನೋಡುವದನ್ನು ಕಾಣುತ್ತೇವೆ. ನಿರಂಜನರು ಕಲೆ ಮತ್ತು ಬದುಕಿನ ಆಯಾಮಗಳನ್ನು ಬಹಳ ಯಶಸ್ವಿಯಾಗಿ ತಮ್ಮ ಬರಹದಲ್ಲಿ ಬಿಂಬಿಸಿದವರು. ಈ ಕಾರಣಕ್ಕಾಗಿ ಅವರು ಪ್ರಗತಿಶೀಲರಲ್ಲಿ ವಿಭಿನ್ನರಾಗಿ ನಿಲ್ಲುತ್ತಾರೆ. ಪ್ರಗತಿಶೀಲರ ಮಿತಿಯನ್ನು ದಾಟಿ ಮುನ್ನೆಡೆಯುತ್ತಾರೆ.

"ನಿರ್ದಿಷ್ಟ ಸಾಹಿತ್ಯ ಪ್ರಕಾರವೊಂದು ತನ್ನದೇ ಆದ ರೀತಿಯಲ್ಲಿ ಬೆಳೆಯುತ್ತ ಒಂದು ಹಂತವನ್ನು ತಲುಪಿರುವಾಗ, ಅದಕ್ಕಿಂತಲೂ ಹಿಂದಿನ ಹಂತಗಳಲ್ಲಿ ರಚಿತವಾದ ಕೃತಿಗಳು ತಮ್ಮ ಜೀವಂತಿಕೆಯನ್ನು, ಸಾಂದರ್ಭಿಕತೆ(ರಿಲೆವೆನ್ಸ)ಯ ಬಗೆ ಹೇಗೆ ಎಂಬುದು ಮಹತ್ವದ ಪ್ರಶ್ನೆ. ಕೇವಲ ಸಮಕಾಲಿನ ಪ್ರಸ್ತುತತೆ ಮತ್ತು ತಾಂತ್ರಿಕ ಪರಿಣತಿಗಳನ್ನು ಬಯಸುವ ವಿಮರ್ಶಕರು ಹಿಂದಿನ ಕೃತಿಗಳಿಗೆ ಅನ್ಯಾಯ ಮಾಡುತ್ತಿರುತ್ತಾರೆ. ಇಷ್ಟಕ್ಕೂ ಸಾಹಿತ್ಯಾಸಕ್ತನೊಬ್ಬನು ಬೇರೆ ಬೇರೆ ಕಾಲಖಂಡಗಳಲ್ಲಿ ರಚಿತವಾದ ಕೃತಿಗಳನ್ನು ಏಕಕಾಲದಲ್ಲಿ ಓದುವ ಅವಕಾಶ ಪಡೆಯುವದರಿಂದ, ಅವನಿಗೆ ಕೃತಿ ರಚನೆಯ ಕಾಲದ ಐತಿಹಾಸಿಕ ಸಂದರ್ಭಕ್ಕಿಂತ ಆ ಕೃತಿಯ ಸಾಹಿತ್ಯಿಕ ಮೌಲ್ಯವೇ ಹಚ್ಚು ಮುಖ್ಯವಾಗುತ್ತದೆ. ಮನುಷ್ಯನ ಅನುಭವ, ಅನಿಸಿಕೆ ಮತ್ತು ಭಾವನೆಗಳ ಲೋಕವನ್ನು ಕಲೆಯಾಗಿ ಕಟ್ಟುವ ಪ್ರಕ್ರಿಯೆಯಲ್ಲಿ ಸಾಹಿತಿ ಪಡೆದಿರುವ ಯಶಸ್ಸು ಮಾತ್ರ ನಮಗೆ ಮುಖ್ಯ. ಅವನ ಕೃತಿಗಳು ಆ ಕಾಲದ ಸಾಹಿತ್ಯಿಕ ಗ್ರಹಿಕೆಗಳಿಗಿಂತ ತಾಂತ್ರಿಕ ಆವಿಷ್ಕಾರಗಳಿಂದ ಪರಿಮಿತವಾಗಿರುತ್ತದೆ. ಹಲವು ಬಾರಿ ಅವನ್ನು ಮೀರಿ ನಿಲ್ಲುತ್ತವೆ. ಅದೇ ರೀತಿಯಲ್ಲಿ ಪ್ರತಿಯೊಂದು ಯುಗವೂ ಕೂಡ ತನಗೆ ವಿಶಿಷ್ಟವಾದ ಸಂಗತಿಗಳ ಸಾಹಿತ್ಯಕ ಅಭಿವ್ಯಕ್ತಿಗೆ ಅತ್ಯಂತ ಸೂಕ್ತವಾದ ರೂಪವನ್ನು, ತಾಂತ್ರಿಕ ಸಲಕರಣೆಗಳನ್ನು ರೂಪಿಸಿಕೊಳ್ಳುತ್ತದೆಯೆನ್ನುವ ಮಾತಿನಲ್ಲಿಯೂ ಸಾಕಷ್ಟು ಸತ್ಯವಿದೆ."[೮] ಈ ಮಾತುಗಳು ನಿರಂಜನರ ಸಾಹಿತ್ಯಕ್ಕೆ ಅನ್ವಯಿಸುತ್ತದೆ

ನಿರಂಜನರು ಜನಪರವಾದ ಸಾಹಿತ್ಯವನ್ನು ಸೃಷ್ಟಿಸುವ ಆಶಯವನ್ನು ಹೊಂದಿದ್ದರೂ ಅವರು ಕಲಾತ್ಮಕತೆಗೂ ಮಹತ್ವವನ್ನು ನೀಡಿದರು. ಅವರು ಬರಹಗಾರರು ಮಾತ್ರವಾಗಿರದೆ ಕಮ್ಯುನಿಷ್ಟ ಪಕ್ಷದ ಕಾರ್ಯಕರ್ತರಾಗಿದ್ದರು. ಅವರ ಸಮಸ್ಯೆಗಳನ್ನು ಬಹಳ ಹತ್ತಿರದಿಂದ ಕಂಡವರಾಗಿದ್ದರು. ಆದ್ದರಿಂದ ಅವರಿಗೆ ಜನರ ಆಳದ ನಾಡಿಮಿಡಿತದ ಅರಿವು ಇತ್ತು. ಆದ್ದರಿಂದ ಅವರ ಬರಹದಲ್ಲಿ ಕಾಳಜಿಯ ಕ್ರಿಯೆಗಳು ತೋರಿಕೆಯ ವಾಚ್ಯದ ನೆಲೆಯನ್ನು ಪಡೆಯುದಿಲ್ಲ. ಅವು ನೈಜ ಮತ್ತು ಮಾನವೀಯ ನೆಲೆಯನ್ನು ಪಡೆದಿವೆ. ಅದಕ್ಕೆ ಅವರ ಬದುಕಿನಲ್ಲಾದ ಬದಲಾವಣೆಗಳು ಕೂಡ ಕಾರಣವಾಗಿರುದನ್ನು ಗಮನಿಸಬೇಕು. "ನಿರಂಜನರ ಬದುಕಿನಲ್ಲಿ ಹಲವು ಮಹತ್ವದ ಘಟ್ಟಗಳಿದ್ದು, ಅವು ಅವರ ಬರವಣಿಗೆಯ ಮೇಲೆ ಪ್ರಭಾವ ಬೀರಿವೆ ಎಂಬುದು ನನ್ನ ಅಭಿಪ್ರಾಯ. ಅವರು ಕಮ್ಯುನಿಷ್ಟ ಪಕ್ಷದ ಸಕ್ರಿಯ ಸದಸ್ಯರಾಗಿದ್ದು, ಭೂಗತವಾಗಿದ್ದು, ಜನಶಕ್ತಿ ಸಂಪಾಪದಕರಾಗಿದ್ದುದು ೧೯೪೧ರಿಂದ೧೯೫೧ರ ವರೆಗಿನ ಅವಧಿಯಲ್ಲಿ. ಎಂದರೆ ಹದಿನೆಂಟರಿಂದ ಇಪ್ಪತ್ತರ ವಯಸ್ಸಿನಲ್ಲಿ, ಹಲವು ಕಾರಣಗಳಿಂದ ರಾಜಕೀಯ ಚಟುವಟಿಕೆಗಳಿಂದ ಬಿಡುಗಡೆ ಪಡೆದ ನಂತರ ಎಂದರೆ ೧೯೫೪ರಲ್ಲಿ ಅವರ ಮೊದಲ ಕಾದಂಬರಿ ಪ್ರಕಟವಾಯಿತು (ವಿಮೋಚನೆ). ಆಗ ಅವರಿಗೆ ಮುವತ್ತು ವರ್ಷ. ಅದರ ನಂತರ ಅವರು ರಾಜಕೀಯ ಸಿದ್ಧಾಂತವೊಂದರ ಬೆಂಬಲಿಗರಾಗಿ ಉಳಿದರೆ ವಿನಾ, ಸಾಹಿತಿಗಳಾದರೆ ವಿನಾ ರಾಜಕೀಯ ಹೋರಾಟಗಾರರಾಗಲಿಲ್ಲ. ಆದ್ದರಿಂದ ಕ್ರಾಂತಿ ಪರವಾದ, ಜನತೆಯ ಹೋರಾಟವನ್ನು ಸಮರ್ಥಿಸುವ ಅವರ ಕೃತಿಗಳೆಲ್ಲವೂ ಅವರು ಮೂವತ್ತನೆಯ ವಯಸ್ಸಿನಲ್ಲಿ ರಾಜಕೀಯ ನಿವೃತ್ತಿ ಪಡೆದ ನಂತರವೇ ರಚಿತವಾದವು. ಇದು ತಪ್ಪೆಂದು ನಾನು ಹೇಳುತ್ತಿಲ್ಲ. ಇದು ಪ್ರಾಯಶಃ ಆ ಕಾಲದ ವಾಮಪಂಥೀಯ ಹೋರಾಟಗಳ ವಸ್ತುಸ್ಥಿತಿಯನ್ನು ಪ್ರತಿಫಲಿಸುತ್ತಿರಬಹುದು. ಆದರೆ ತನ್ನ ಬದುಕಿನ ಕೊನೆವರೆಗೂ ಹೋರಾಟದಲ್ಲಿ ನಿರತನಾಗಿದ್ದ ಪಾಬ್ಲೋ ನೆರುದಾ ಅಂತವರ ಬರವಣಿಗೆಗೂ ಇದಕ್ಕೂ ವ್ಯತ್ಯಾಸ ಇದೆಯೆಂದು ನನಗೆ ತೋರುತ್ತದೆ."

ನಿರಂಜನರು ಬದುಕನ್ನು ಸೌಂದರ್ಯದ ನೆಲೆಯಲ್ಲಿ ಕಾಣುವ ಕಾದಂಬರಿಯನ್ನು ಬರೆದರು. ಅವರ ಬದುಕಿನ ಸೌಂದರ್ಯವೇ ಬೇರೆ. ಶೋಷಣೆಗೆ ಒಳಗಾಗುವ ವ್ಯವಸ್ಥೆಯನ್ನು ಮಾನವೀಯ ನೆಲೆಯಲ್ಲಿ ಕಾಣುವುದು. ಶೋಷಣೆಗೆ ಒಳಗಾಗುವ ಬದುಕನ್ನು ಹೋರಾಟದ ಮೂಲಕ ಬದಲಾಯಿಸುವುದು ಅವರಿಗೆ ಮುಖ್ಯವಾದರೂ ಸಾಹಿತ್ಯ ರಚನೆಯಲ್ಲಿ ಮಾತ್ರ ಕಲಾತ್ಮಕ ಅಂಶವನ್ನು ಬದಿಗಿಟ್ಟು ಜನಪ್ರಿಯ ಮಾದರಿಯನ್ನು ಅನುಸರಿಸಿ ಸಾಹಿತ್ಯವನ್ನು ಬರೆಯಲಿಲ್ಲ. ಖಚಿತ ಸಮಾಜವಾದಿ ನಿಲುವುಗಳನ್ನು ಸ್ಪಷ್ಟವಾಗಿ ಸಾಹಿತ್ಯದಲ್ಲಿ ತರುವ ಪ್ರಯತ್ನ ಮಾಡಿದರು. ಅದು ಹೇಳಿಕೆಯ ರೀತಿಯಲ್ಲಿ ಇರದೆ ಸೈದ್ಧಾಂತಿಕ ಸ್ವರೂಪವನ್ನು ಪಡೆದುಕೊಂಡಿತ್ತು. ಮುಖ್ಯವಾಗಿ ಮಾನವನ ಶೋಷಣೆಯನ್ನು ಚಾರಿತ್ರಿಕ

ಸಂಗತಿಗಳಲ್ಲಿ ಶೋಧಿಸುವ ಚಿಂತನೆಯನ್ನು ಅವರ ಬರಹಗಳಲ್ಲಿ ಕಾಣುತ್ತೇವೆ. ಶೋಷಣೆಯ ಕುರಿತು ಯೋಚಿಸುವ ವಿಧಾನದಲ್ಲಿಯೇ ಸೌಂದರ್ಯದ ಮಾದರಿಯನ್ನು ಕಾಣುವ ಮನೋಭಾವ ನಿರಂಜನರದು."ಮಾನವನ ಜೀವನವನ್ನು ನಿಯಂತ್ರಿಸುತ್ತಿರೋ ಶಕ್ತಿಗಳು ಯಾವುವು? ಈ ಪ್ರಶ್ನೆಯತ್ತ ನಿರಂಜನರ ಗಮನ. ಅದಕ್ಕೆ ಅವರು ಕಂಡುಕೊಂಡ ಸಮಾಜದ ವಾಸ್ತವ ಶಕ್ತಿಗಳ– ಶೋಷಣೆ ದಬ್ಬಾಳಿಕೆಗಳ ಬಗ್ಗೆ ಕಾನ್ಸರೇಷನ್ ಮಾಡಿದರು. ಹಾಗೆ ಕನ್ನಡ ಕಾದಂಬರಿಯಲ್ಲಿ ಮೊದಲ ಬಾರಿಗೆ ಸಾಮಾಜಿಕ ಪ್ರವಾದಿಯ ಧ್ವನಿ ಕೇಳಿಸಲು ಆರಂಭವಾಯಿತು. ಕಾರಂತ, ಪುಟ್ಟಪ್ಪರಿಗೆ ಶೈಲಿಯಲ್ಲಿ ಸರಳವಾದ ಒಂದು ಬಿಡುವು ಇದೆ. ಒಂದು ಮಳೆಗಾಲ, ಮಳೆಯ ರಾತ್ರಿ, ಬೆಳದಿಂಗಳ ರಾತ್ರಿ, ಸೂರ್ಯೋದಯಗಳನ್ನು ಏನು ಕೆಲಸವಿಲ್ಲದ, ಸೈಂದರ್ಯ ಪ್ರಜ್ಞೆಯುಳ್ಳ ಒಬ್ಬ ಸಾಮನ್ಯನಂತೆ ಅವರು ವರ್ಣಿಸಬಲ್ಲರು.( ಕಾರಂತರ ಬೆಟ್ಟದಜೀವ, ಮರಳಿ ಮಣ್ಣಿಗೆ ಕಾದಂಬರಿಯನ್ನು ಲಕ್ಷಿಸಿ ಈ ಮಾತು) ನಿರಂಜನಿಗಾದರೋ ಈ ರೀತಿಯ ಬಿಡಿವು ಇಲ್ಲ. ಅವರಿಗೆ ಯಾವ ರೀತಿಯ ಒಂದು ಆತುರ, ಒಂದು ಆರ್ತತೆ ಇದೆಯೆಂದರೆ ಮನುಷ್ಯ ಯಾಕೆ ಹೀಗಾಗಿದ್ದಾನೆ .......ಎಂಬುದೇ ಆ ತುಡಿತ."[೧೦]
ನಿರಂಜನರ ಬರವಣಿಗೆಯಲ್ಲಿ ನಿರಂತರ ಹರಿಯುವ ಬದುಕನ್ನು ಹಿಡಿದಿಡುವ ಅಖಂಡತೆಯನ್ನು ಕಾಣುತ್ತೇವೆ. ಅದು ಹಸಿ ಹಸಿಯಾದ ಬರವಣಿಗೆಯಲ್ಲ. ಬದುಕನ್ನು ಹಸನುಗೊಳಿಸುವ ಬದಲಾಯಿಸುವ, ಶೋಷಣೆಗೆ ಈಡುಮಾಡುವವರ ಮನೋಧರ್ಮವನ್ನು ಬಯಲುಗೊಳಿಸುವ ಚಿಂತನೆ ಅವರದು. ಯಾವ ಗೊಂದಲಗಳಿಲ್ಲದೆ ಬದುಕಿನುದ್ದಕ್ಕೂ ಹೋರಾಟವನ್ನು ವಾಸ್ತವಗೊಳಿಸುವ ಆಲೋಚನೆಯನ್ನು ಮಾಡುತ್ತಲೇ ಬಂದಿದ್ದಾರೆ. ಇದು ಅವರ ಬರವಣಿಗೆಯ ಸಾಧ್ಯತೆಯನ್ನು ಹೆಚ್ಚಿಸಿದೆ. ಹೊಸ ಬರಹಗಾರರಿಗೆ ಮಾದರಿಯೊಂದನ್ನು ಹಾಕಿಕೊಟ್ಟಿದೆ " ನಿರಂಜನರ ಬರವಣಿಗೆಯ ರೀತಿ ಯಾವುದೆಂದರೆ ಅವರ ಕೊನೆಯ ಗಿರಾಕಿಯ ಬಗ್ಗೆ ಮಾತಾಡುವಾಗ ಆ ಇಡೀ ಕತೆಗೆ ಮೃತ್ಯುಂಜಯದಂತ ಒಂದು ಆಕೃತಿ ಇದೆ. ಒಂದು ಸಮಾಜವಾದಿ ಪುರಾಣದ ಆಕೃತಿ ಇದೆ ಅನ್ನುವುದು ತಿಳಿಯುತ್ತದೆ. ಸಾಹಿತ್ಯವನ್ನು ಅದರ ವಾಸ್ತವತೆಯಿಂದ ಮೆಲೆತ್ತಿ ಮಹಾನ್ ರೂಪಕವಾಗಿ ಮಿತ್ ಆಗಿ ಮಹೋನ್ನತಿಯನ್ನಾಗಿ ಬರೆಯುವ ಛಲ ಇದೆ. (ಸಮಾಜವಾದಿ ಬರಹಗಾರರಿಗೆಲ್ಲ ಇದು ಸಾಮನ್ಯ– ಯುರೋಪ್ ನಲ್ಲಿ ಗಾರ್ಕಿಯಂತವರು ಇತ್ಯಾದಿ.) ನಿರಂಜನರ ಈ ಸಮಾಜವಾದಿ ಛಲಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಕನ್ನಡ ಸಾಹಿತ್ಯದಲ್ಲಿ ಈ ರೀತಿಯ ಅಖಂಡ ಶೈಲಿ ಇರುವವರು ನಿರಂಜನೊಬ್ಬರೆ. ಆದುದರಿಂದ ಸಮಾಜಜವಾದದಲ್ಲಿ ಆಸಕ್ತಿ ಇರುವ ತರುಣ ಲೇಖಕರು ಅವರಿಂದ ಕಲಿಯಬೇಕಾದುದನ್ನೆಲ್ಲ  ಕಲಿತು ಅವರಿಗಿಂತ ಭಿನ್ನವಾಗಿ ಬರೆಯಬೇಕು."[೧೧]
ನಿರಂಜನರು ತೀಕ್ಷ್ಣಮತಿಗಳಾಗಿದ್ದರಿಂದ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಸಾಹಿತ್ಯಕ ಬದಲಾವಣೆಯನ್ನು ಗಮನಿಸುತ್ತಿದ್ದರು. ಬರವಣಿಗೆಯಲ್ಲಿ ಒಂದೇ ತೆರನಾದ ಮಾರ್ಗವನ್ನು

ಅನುಸರಿಸುತ್ತಿರಲಿಲ್ಲ. ಹೊಸ ಪ್ರಯೋಗಗಳನ್ನು ಮಾಡುತ್ತಿದ್ದರು.“ ಕಾಲು ಶತಮಾನದಿಂದ ಒಂದು ಸಾಹಿತ್ಯ ಪ್ರಕಾರವನ್ನು ಬೆಳೆಸುತ್ತಾ ಬಂದಿರುವ, ಸಾಹಿತಿಯೊಬ್ಬನು ಆ ಪ್ರಕಾರದಲ್ಲಿ ಆಗುತ್ತಿರುವ ಬೆಳವಣಿಗೆ ಮತ್ತು ಆವಿಷ್ಕಾರಗಳನ್ನು ಎಚ್ಚರದಿಂದ ಗಮನಿಸಿ, ಅವಕ್ಕೆ ತನ್ನ ಬರವಣಿಗೆಯಲ್ಲಿ ಪ್ರತಿಸ್ಪಂದಿಸಬೇಕಾಗುತ್ತದೆ. ಹಾಗಲ್ಲದೆ ಅವನು ತನ್ನ ಸುತ್ತಾ ಅನಾಸಕ್ತಿ, ಹಟಮಾರಿತನ ಮತ್ತು ತಿರಸ್ಕಾರಗಳ ಗೋಡೆಯನ್ನು ಕಟ್ಟಿಕೊಂಡು ಬದಲಾಗದೆ ಉಳಿದುಬಿಟ್ಟರೆ ಅವನ ಬರವಣಿಗೆಯು ಪುನರುಕ್ತಿ ಪರಂಪರೆಯಾಗಿಬಿಡುತ್ತದೆ. ಸರ್ವಮಂಗಳ, ಸ್ವರೂಪ, ಮತ್ತು ಬಿರುಕು ಕಾದಂಬರಿಗಳನ್ನು ಬರೆದವರು, ಎಷ್ಟೋ ಕಾಲದ ನಂತರ ವೈಶಾಖ, ಕಾರ್ವಾಲೋ, ಮುಸ್ಸಂಜೆಯ ಕಥಾಪ್ರಸಂಗಳಂತಹ ಮಹತ್ವದ ಕೃತಿಗಳನ್ನು ರಚಿಸಿದ್ದು ಈ ಬಗೆಯ ಪ್ರತಿಸ್ಪಂದನಕ್ಕೆ ಸಾಕ್ಷಿ. ಅದೇ ೧೯೮೦ರ ಮೃತ್ಯಂಜಯಕ್ಕೂ ೧೯೫೮ರ ಚಿರಸ್ಮರಣೆಗೂ ಇರುವ ವ್ಯತ್ಯಾಸ. ಕಾಲ, ದೇಶ, ಗಾತ್ರ ಮತ್ತು ವಿವರಗಳಲ್ಲಿ ಮಾತ್ರವೆನಿಸಿದರೆ ಅದು ಒಂದು ಬಗೆಯ ಸ್ಥಗಿತ ಮನೋಧರ್ಮಕ್ಕೆ ಸಾಕ್ಷಿಯಾಗುತ್ತದೆ. ಹರಿಯುವ ನದಿಯ ಬದಿಯಲ್ಲಿ ಹರಿಯದೆ ನಿಂತ ನೀರು ಆರೋಗ್ಯದಿಂದಲೇ ವಂಚಿತವಾಗುತ್ತದೆ. ತನ್ನ ವಿಕಸನದ ಸಾಧ್ಯತೆಗಳನ್ನು ಮೊಟಕು ಮಾಡಿಕೊಂಡಿರುತ್ತದೆ. ಆದ್ದರಿಂದ ಚಿರಸ್ಮರಣೆಯು ಯಾವ ಕಾರಣಗಳಿಗೋಸ್ಕರ, ಹೇಗೆ ಮುಖ್ಯ ಅದ್ವಿತೀಯ ಎನಿಸಿತೋ ಅದೇ ಕಾರಣಗಳಿಗೋಸ್ಕರ ಮೃತ್ಯುಂಜಯ ಕೂಡ ಮುಖ್ಯವಾಗುತ್ತದೆ.”[೧೨]

ಅವರ ಸಾಹಿತ್ಯಕ ಸಾಧನೆಯನ್ನು ಪ್ರಗತಿಶೀಲರೊಂದಿಗೆ ಹೋಲಿಸಿದರೆ ಬಿನ್ನ ನೆಲೆಗಳನ್ನು ಕಾಣುತ್ತೇವೆ. ಕೇವಲ ಸಿದ್ಧಾಂತಕ್ಕೆ ಮಾತ್ರ ತಮ್ಮನ್ನು ಮತ್ತು ಸಾಹಿತ್ಯವನ್ನು ಸೀಮಿತಗೊಳಿಸಲಿಲ್ಲ. ಬದುಕಿನ ಅನಂತವನ್ನು ಶೋಧಿಸುವ ಪ್ರಯತ್ನ ಮಾಡಿದರು. ಬದುಕಿನ ಹಲವು ಆಯಾಮಗಳನ್ನು ತಮ್ಮ ಬರಹಗಳಲ್ಲಿ ತಂದರು. ಸಾಹಿತ್ಯವನ್ನು ತಮ್ಮತನದ ಪ್ರದರ್ಶನಕ್ಕೆ ಬಳಸಿಕೊಳ್ಳಲಿಲ್ಲ. ಬಹಳ ಗಂಭೀರವಾಗಿ ಸಾಹಿತ್ಯ ಚಿಂತನೆಯನ್ನು ಮಾಡಿದರು. “ಪ್ರಗತಿಶೀಲ ಸಾಹಿತ್ಯಕ್ಕೂ ನಿರಂಜನರ ಕಾದಂಬರಿಗಳಿಗೂ ಇರುವ ಸಂಬಂಧವನ್ನು ಕುರಿತು ಒಂದೆರಡು ಮಾತುಗಳು ಅಗತ್ಯ. ೧೯೪೩ರಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ತಾವು ಅ.ನ. ಕೃ. ಜೊತೆಯಲ್ಲಿ ಪ್ರಗತಿಶಿಲತೆಯ ತುತ್ತೂರಿ ಊದಿದೆವೆಂದು ನಿರಂಜನರು ಹೇಳುತ್ತಾರೆ. ಆಗ ಅವರಿಗೆ ಇಪ್ಪತ್ತು ವರ್ಷ. ೧೯೪೪ರಲ್ಲಿ ಎಂದರೆ ಒಂದು ವರ್ಷದ ನಂತರ, “ಪ್ರಗತಿಶೀಲ ಸಾಹಿತ್ಯಾಸಕ್ತರ ಸಭೆಯಲ್ಲಿ ಶ್ರೀ ಅ.ನ.ಕೃ. ಅವರ ಕಾರ್ಯವಿಧಾನವನ್ನು ಟೀಕಿಸಿ ಭಾಷಣ ಮಾಡುತ್ತಾರೆ. ೧೯೪೫ರಲ್ಲಿ ಶ್ರೀ ಅ.ನ.ಕೃ. ಬಳಗದವರಿಗೆ ಅಸ್ಪೃಶ್ಯರಾಗುತ್ತಾರೆ. ಹೀಗೆ ನಾವು ಪ್ರಗತಿಶೀಲ ಸಾಹಿತ್ಯವೆಂದು ಕರೆಯುವ ಚಳುವಳಿಯ ಮೊದಲ ಹಂತದಿಂದಲೂ, ನಿರಂಜನರದು ಭಿನ್ನವಾದ ಧೋರಣೆಯಾದುದರಿಂದ, ಅವರ ಕಾದಂಬರಿಗೆ ಅ.ನ.ಕೃ ಅನುಕರಣೀಯ ಮಾದರಿಯೆನಿಸುವದಿಲ್ಲ. ತಮ್ಮ ಮೊದಲ ಕಾದಂಬರಿ ಪ್ರಕಟಣೆಗಿಂತಲೂ

ಮುಂಚಿನಿಂತಲೂ ಅವರು ಬೆಳಿಸಿಕೊಂಡ ವಿಮರ್ಶಾತ್ಮಕ ನೆಲೆಯು ನಿರಂಜನರು ಪ್ರಗತಿಶೀಲರ ನಡುವೆ ವಿಶಿಷ್ಟರಾಗಲು ಕಾರಣವಾಯಿತು. ಅಲ್ಲದೆ ಹಿಂಧೂಧರ್ಮದ ತಾತ್ವಿಕ ಮೌಲ್ಯಗಳ ಕಡೆಗೆ ಅ.ನ.ಕೃ. ತಾ.ರ.ಸು. ಅವರ ಆಸಕ್ತಿಯು ಜೀವಂತವಾದರೆ ನಿರಂಜನರೂ ಇಂದಿನವರೆಗೂ ಕಟ್ಟಾ ನಾಸ್ತಿಕರಾಗಿಯೇ ಉಳಿದಿದ್ದಾರೆ. ಅವರ ಯಾವ ಬರಹದಲ್ಲಿಯೂ ದೇವರು, ಧರ್ಮಗಳೂ ಮಾನವೀಯ ಸಂಬಂಧಗಳಿಗಿಂತ ಮುಖ್ಯವಾಗುವದಿಲ್ಲ. ಇಲ್ಲಿಯೇ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪ್ರಗತಿಶೀಲರ ಕಾಮಪ್ರಚೋದಕ ಬರವಣಿಗೆಯ ವಿರುದ್ಧ ನಿರಂಜನರು ವ್ಯಕ್ತಪಡಿಸಿದ ತೀವ್ರ ಪ್ರತಿಭಟನೆ. ಅವರು ಅದನ್ನು ಸ್ವಚ್ಛಂದತೆಗೆ ಲೈಸೆನ್ಸ ಎಂದು ಕರೆದರು. ಪ್ರಗತಿಶೀಲರ ಕಮ್ಯೂನಿಸ್ಟ್ ವಿರೋಧವನ್ನು ಖಂಡಿಸುವದರ ಮೂಲಕ ಅವರು ಇನ್ನಷ್ಟು ಏಕಾಂಗಿಯಾದರು. ಹೀಗೆ ಬುದ್ಧಿಪೂರ್ವಕವಾಗಿ ಬೆಳಿಸಿಕೊಂಡ ವಿರೋಧ ಮತ್ತು ಭ್ರಮನಿರಸನಗಳೇ ಅವರ ಕಾದಂಬರಿಗಳ ಹಲವು ಒಳ್ಳೆಯ ಗುಣಗಳಿಗೆ ಕಾರಣವಾಗುವುದನ್ನು ಗಮನಿಸಬಹುದು.೧೩

ಬರಹ ಮತ್ತು ಬದುಕನ್ನು ಅವರು ಬೆಸೆಯುತ್ತಾ ಬಂದವರು. ಎಂತ ತೊಡುಕಗಳ ನಡುವೆಯೂ ವ್ಯವಸ್ಥೆಯೊಂದಿಗೆ ರಾಜಿಯಾಗದೆ ತಮ್ಮತನವನ್ನು ಕಾಪಾಡಿಕೊಂಡು ಬಂದಿದ್ದಾರೆ. ಪ್ರಗತಿಪರತೆಯನ್ನು ಬದುಕಿನುದ್ದಕ್ಕೂ ಅನುಸರಿಸಿಕೊಂಡು ಬಂದಿದ್ದಾರೆ. ಜೀವಪರ ಚಿಂತನೆಯನ್ನೇ ನಂಬಿಕೊಂಡು ಅದರಂತೆ ಸಾಹಿತ್ಯವನ್ನು ಸೃಷ್ಟಿ ಮಾಡಿದ್ದಾರೆ. “ಕನ್ನಡ ಹಾಗು ಭಾರತೀಯ ಭಾಷೆಗಳಲ್ಲಿಯೇ, ತಾವು ಪ್ರಗತಿಶೀಲರೆಂದು ಕರೆಸಿಕೊಂಡ ಅನೇಕ ಸುಪ್ರಸಿದ್ದ ಸಾಹಿತಿ, ಕವಿಗಳು, ಸ್ವಾತಂತ್ರ್ಯನಂತರ ಯಾವ ಯಾವುದೋ ಕಾರಣದಿಂದ ತಮ್ಮ ಪ್ರಗತಿಪರ ನಿಲುವುಗಳಿಂದ ಹೊಯ್ದಾಡಿದ್ದಾರೆ. ಇವರು ತಮ್ಮ ತಾರುಣ್ಯದ ಬಿಸಿ ರಕ್ತದ ಆವೇಶದಲ್ಲಿ ಪ್ರಗತಿವಾದಿಗಳಾಗಿ, ಕ್ರಾಂತಿಕಾರಿಗಳಾಗಿ ಸಾಹಿತ್ಯ ಸೃಷ್ಟಿಗೆ ನುಗ್ಗಿದ್ದಾರೆ. ಆದರೆ ನಂತರ ತಮ್ಮ ಮಧ್ಯಮ ಹಾಗು ಕೊನೆಯ ವಯಸ್ಸಿನಲ್ಲಿ ಆಧ್ಯಾತ್ಮ, ದಿಗಂಬರ, ಪ್ರತೀಕ ಮೊದಲಾದ ವಾದಗಳಿಗೆ ಒಳಗಾಗಿ ಸೋತಿದ್ದಾರೆ. ತಮ್ಮ ಸುತ್ತಲಿನ ಸಾಮಂತಿ ಹಾಗು ಬೂರ್ಜ್ವಾ ವಾತವರಣಕ್ಕೆ ಹೆದರಿಕೊಂಡು ಹೇಗಾದರು ಬದುಕುವ ಬಯಕೆಗಾಗಿ ಒಡಂಬಡಿಕೆ ಮಾಡಿಕೊಂಡಿದ್ದಾರೆ. ಭಾರತೀಯ ಲೇಖಕರಲ್ಲಿ ಇಂಥವರ ಸಂಖ್ಯೆ ಹೇರಳವಾಗಿದೆ. ಕೇವಲ ಬೆರಳೆಕೆಯಷ್ಟು ಸಾಹಿತಿಗಳು ಮಾತ್ರ ತಾವು ದೃಢವಾಗಿ ನಂಬಿಕೊಂಡು ಬಂದ ಪ್ರಗತಿಶೀಲ ಧೋರಣೆಗಳಿಗೆ ದ್ರೋಹ ಬಗೆಯದೆ ಆಜೀವ ಬದ್ದರಾಗಿ ಸಾಹಿತ್ಯ ಸೃಷ್ಟಿಸುತ್ತಾ ಬಂದಿದ್ದಾರೆ. ಇಂಥ ಅಪರೂಪದ ಲೇಖಕರಲ್ಲಿ ನಿರಂಜನರು ಒಬ್ಬರೆಂದು ಧೈರ್ಯವಾಗಿ ಹೇಳಬಹುದು”.[೧೪]

## ಅಡಿ ಟಿಪ್ಪಣೆಗಳು

1. ಯು. ಆರ್. ಅನಂತಮೂರ್ತಿ, ಪ್ರಜ್ಞೆ ಮತ್ತು ಪರಿಸರ, ಪು. 27
2. ಡಾ. ಕೆ. ಕೇಶವಶರ್ಮ, ಮಾರ್ಕ್ಸವಾದಿ ವಿಮರ್ಶೆ ಪು. 45
3. ಡಿ.ಆರ್. ನಾಗರಜ್, ಸಂಸ್ಕೃತಿ ಕಥನ, ಪು. 206
4. ನಿರಂಜನ , ಬುದ್ದಿ ಬಾವ ಬೆಳಕು ೧೯೮೪,ಪು.೯೬
5. ಆರ್.ವಿ.ಭಂಡಾರಿ: ಕಾದಂಬರಿಗಳಲ್ಲಿ ವರ್ಗ ವರ್ಣ ಸಂಘರ್ಷ, ೨೦೦೩,ಪು.೭೩
6. ನಿರಂಜನ , ಬುದ್ದಿ ಬಾವ ಬೆಳಕು, ೧೯೮೪ ಪು. ೫೩
7. ಕೀರ್ತಿನಾಥ ಕುರ್ತುಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, 1983, ಪು.264–65
8. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂರಿಗಳು ಕೆಲವು ಟಿಪ್ಪಣೆಗಳು, ಪು. 340 ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986,
9. ಅದೇ, ಪು.341
10. ಡಿ.ಆರ್. ನಾಗರಾಜ್, ಕನ್ನಡ ಕಾದಂಬಿಕಾರರಲ್ಲಿ ನಿರಂಜನರ ಪಾತ್ರ, ಪು.336, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986
11. ಅದೇ, ಪು. 338
12. ಎಚ್.ಎಸ್. ರಾಘವೇಂದ್ರರಾವ್, ನಿರಂಜನರ ಕಾದಂರಿಗಳು ಕೆಲವು ಟಿಪ್ಪಣೆಗಳು, ಪು. 340 ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986
13. ಅದೇ, ಪು. 341
14. ಪಿ. ವಿ. ವಜ್ರಮಟ್ಟಿ, ಪ್ರಗತಿಶೀಲ ಸಾಹಿತಿಯಾಗಿ ನಿರಂಜನ, ಪು. 202, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986

****

## ಅಧ್ಯಾಯ ನಾಲ್ಕು: ಮೃತ್ಯುಂಜಯ ಕಾದಂಬರಿಯಲ್ಲಿ ಚರಿತ್ರೆಯ ಪರಿಕಲ್ಪನೆ

ನಿರಂಜನರು ಸಾಹಿತ್ಯ ರಚನೆಯನ್ನು ಸೌಂದರ್ಯದ ನೆಲೆಯಲ್ಲಿ ನೋಡದೆ ಸಾಮನ್ಯರ ಬವಣೆಗಳ ನೆಲೆಯಲ್ಲಿ ನೋಡಿದರು. ಇದರಿಂದಾಗಿ ಸಾಮನ್ಯರ ಬದುಕಿನ ವಿನ್ಯಾಸವೇ ಅವರ ಸಾಹಿತ್ಯದಲ್ಲಿ ಕಾಣುತ್ತೇವೆ. ಅವರ ಕಥನ ಸಾಹಿತ್ಯವು ಜನ ಸಾಮನ್ಯರ ಜೀವನ ಕಥನವೇ ಆಗಿದೆ. ಮಾನವನ ಉಗಮದಿಂದ ಇಂದಿನ ವರೆಗೆ ಹಂತಹಂತವಾಗಿ ಸಾಮನ್ಯ ಜನರು ಯಾವ ರೀತಿಯ ಶೋಷಣೆ, ದಬ್ಬಾಳಿಕೆಗೆ ಈಡಾಗುತ್ತಾ ಬಂದಿದ್ದಾರೆ ಎಂಬುದನ್ನು ಚರಿತ್ರೆಯ ಆಳವಾದ ಅಧ್ಯಯನದಿಂದ ತಮ್ಮ ಕಥನದಲ್ಲಿ ಕಟ್ಟಿದ್ದಾರೆ. ಚರಿತ್ರೆಯ ಬಗೆಗಿರುವ ಅವರ ಆಸಕ್ತಿ ಚರಿತ್ರೆಯ ಸಂಗತಿಗಳನ್ನು ಮಾನವಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಿಸುವಂತೆ ಮಾಡಿದೆ. ಮಾನವನ ಅಭ್ಯುದಯಕ್ಕೆ ಅಡ್ಡಿಯಾದ ವರ್ಗತಾರತಮ್ಯದ ಕಾಲಘಟ್ಟವನ್ನು ಮತ್ತು ಅದನ್ನು ಮೀರುವ ಆಯಾಮಗಳನ್ನು ಮೃತ್ಯುಂಜಯ ಕಾದಂಬರಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈಗಾಗಲೆ ಸಿದ್ಧವಾದ ಚರಿತ್ರೆಯ ಬರವಣಿಗೆಗಿಂತ ವಿಭಿನ್ನವಾದ ಚರಿತ್ರೆಯ ವಿನ್ಯಾಸವನ್ನು ಈ ಕೃತಿಯಲ್ಲಿ ತಂದಿದ್ದಾರೆ. ಅಂದರೆ ಚರಿತ್ರೆಯ ಬರವಣಿಗೆಯನ್ನು ಈ ಕೃತಿಯಲ್ಲಿ ಮಾಡುತ್ತಿಲ್ಲ. ಸೃಜನಶೀಲ ಮನಸ್ಸೊಂದು ತನ್ನ ಕಥನದ ಮೂಲಕ ಒಂದು ಕಾಲಘಟ್ಟಕ್ಕೆ ಮುಖಾಮುಖಿಯಾಗುವ ಸಂದರ್ಭವನ್ನು ಕಾಣುತ್ತೇವೆ. ನಿರಂಜನರು ಜಗತ್ತಿನ ಚರಿತ್ರೆಯನ್ನು ಓದುವಾಗ ಅದರ ಬೆಳವಣಿಗೆಗೆ ರೋಮಾಂಚಿತರಾಗಿ ಆ ಕುರಿತು ಕಾದಂಬರಿ ಬರೆಯುವ ಆಲೋಚನೆ ಮಾಡಿದ್ದಾರೆ. ಅದು ಇರುವ ಚರಿತ್ರೆಯ ಮಾನದಂಡಗಳಿಗೆ ವಿಭಿನ್ನವಾದ ಬಾವನಾತ್ಮಕ ಮತ್ತು ಮಾನವೀಯ ಸ್ಪರ್ಷ ತರುವ ಪ್ರಯತ್ನ ಮಾಡಿದೆ. ಇದರಿಂದಾಗಿ ನಿರಂಜನರ ಚರಿತ್ರೆಯ ಪರಿಕಲ್ಪನೆ ಜನಸಾಮನ್ಯರ ದೌನಂದಿನ ಜೀವನ ಸಂಗತಿಗಳನ್ನು ಅನಾವರಣ ಮಾಡುವುದೇ ಆಗಿದೆ. ಇವರು ತಮ್ಮ ಕಥನದ ಮೂಲಕ ಸಾಮನ್ಯರ ಚರಿತ್ರೆಯನ್ನು ಬರೆಯುತ್ತಿದ್ದಾರೆ."ಸಾಹಿತಿಗೆ ಇತಿಹಾಸವೆಂದರೆ ಸಾಮನ್ಯ ಜನರ, ಅವರನ್ನೊಳಗೊಂಡ ಸಮಾಜದ, ಆ ಸಮಾಜದ ಆಂತರಿಕ ಸಾಮರ್ಥ್ಯ- ಪೊಳ್ಳುಗಳ ಸಮೀಕ್ಷೆ. ಇತಿಹಾಸದಲ್ಲಿ ಆಕಸ್ಮಿಕ ಹಾಗು ಅಗೋಚರವಾದುದುದೇನೂ ಇಲ್ಲ. ಪ್ರತಿಯೊಂದು ಐತಿಹಾಸಿಕ ಘಟನೆಗು ತನ್ನದೆ ಆದ ಕಾರಣವಿದೆ. ಮತ್ತು ಎರಡು ಘಟನೆಗಳ ಮಧ್ಯೆ ಕಾರ್ಯ ಕಾರಣ ಸಂಬಂಧವಿದೆ. ಈ ಐತಿಹಾಸಿಕ ಪ್ರಜ್ಞೆಯುಳ್ಳ ಸಾಹಿತಿಗಳ ಕೃತಿಗಳಲ್ಲಿ ರಾಜಪುರುಷರು ಅಧಿಕಾರಿಗಳು ಕಂಡುಬಂದರು ಒತ್ತು ಬೀಳುವುದು ಆಕಾಲದ ಸಾಮನ್ಯ ಜನರ ಮೇಲೆ. ಅವರ ಆಶೋತ್ತರಗಳ ಮೇಲೆ. ಮತ್ತು ಅಂದಿನ ಸಮಾಜದ ರಚನೆಯ ಮೇಲೆ. ನಿರಂಜನರ ಯಶಸ್ವಿ ಐತಿಹಾಸಿಕ ಕಾದಂಬರಿಗಳಲ್ಲಿ ಈ ವಿಧದ ಐತಿಹಾಸಿಕ ಪ್ರಜ್ಞೆ ಇದೆ."[೧]

ಕಾದಂಬರಿಯನ್ನು ಚರಿತ್ರೆಯೆಂದು ಒಪ್ಪಿಕೊಳ್ಳಬಹುದೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಅಲ್ಲಿ ಬರುವ ಪಾತ್ರಗಳು ಲೇಖಕನ ಕಲ್ಪನೆಯ ಕೂಸುಗಳೇ ಆಗಿರುವದರಿಂದ ಅವು ಅಧಿಕೃತವಾಗುತ್ತವೆಯೇ ಎಂದು ಅನಿಸುತ್ತದೆ. ಆದರೆ, ಲೇಖಕ ಎಷ್ಟೇ ಕಲ್ಪನೆಯಲ್ಲಿ ಪಾತ್ರಗಳನ್ನು ಸೃಷ್ಟಿಸಿರಲಿ ಅವು ವಾಸ್ತವದ ಹಾಗು ಅನುಭವದ ತಳಹದಿಯನ್ನು ಹೊಂದಿರುತ್ತವೆ. ಇಂದಿನ ಬದುಕಿನೊಂದಿಗೆ ಸಂಬಂಧವನ್ನು ಹೊಂದಿರುತ್ತವೆ. ಏಕೆಂದರೆ ಲೇಖಕ ಯಾವುದೇ ಕಾಲವನ್ನು ಕಾದಂಬರಿಯಲ್ಲಿ ಚಿತ್ರಿಸುತ್ತಿರಲಿ ಅವನಿಗೆ ವಾಸ್ತವದ ಅರಿವು ಇರುತ್ತದೆ. ಲೇಖಕನ ಆಲೋಚನೆಯನ್ನು ಇರುವಿಕೆಯ ಸಂಗತಿಗಳೇ ರೂಪಿಸುತ್ತಿರುತ್ತವೆ. ನಿರಂಜನರು ಅಧ್ಯಯನದ ಮೂಲಕ  ಪೂರ್ವ ಕಾಲದ ಸಂಗತಿಗಳನ್ನು ಕಥನ ಮಾಡುವಾಗ ವಾಸ್ತವದ ಸಂಗತಿಗಳೇ ಅವರನ್ನು ಪ್ರೇರೇಪಿಸುತ್ತಿರುತ್ತವೆ. ಅವರು ಆಯ್ಕೆ ಮಾಡಿಕೊಳ್ಳುವ ವಸ್ತುವಿನಲ್ಲಿಯೇ ಅವರ ಮನೋಭಾವವನ್ನು ಗುರುತಿಸಬಹುದು."ಕಾದಂಬರಿಯೆಂದರೆ ಚರಿತ್ರೆಯಲ್ಲ. ಇನ್ನು ಮೃತ್ಯುಂಜಯದ ತುಂಬಾ ಬಂದ ಇತರ ಪಾತ್ರಗಳ ವಿಚಾರವೇನು. ಮೆನೆಪ್‌ಟಾ, ನುಟ್‌ಮೋಸ್, ಗೇಬು, ನೆಹನವೇಮ್ಫ್, ನೆಫರುರಾ, ಅಮೆರೆಬ್, ಹೆಖ್ವೆಟ್, ಹೇಪಟ್, ಒಬ್ಬರೇ ಇಬ್ಬರೆ ಎಲ್ಲರೂ ಸಾಹಿತಿಯ ಶಿಶುಗಳೇ! ಕೆಲವು ಹೆಸರುಗಳನ್ನಷ್ಟೇ ನಿರಂಜನರು ತಾವು ಓದಿದ ಪುಸ್ತಕಗಳಿಂದ ತೆಗದಿರಬಹುದು. ಇನ್ನುಳುದವುಗಳನ್ನು ಅವರು ತಾವಾಗಿಯೇ ನಿರ್ಮಿಸಿರಬೇಕು. ಹಾಗೆಯೇ ನೀರಾನೆ ಪ್ರಾಂತ. ಅಲ್ಲಿ ನಡೆದ ಬಂಡಾಯ, ಅದರ ಪ್ರೇರಣೆ, ಪರಿಣಾಮ ಇವೆಲ್ಲ ಪುರಾತನ ಐಗುಪ್ತದ ಇತಿಹಾಸದಲ್ಲಿ ನಡೆದ ಘಟನೆಗಳೋ ಅಲ್ಲವೋ ಎಂದು ಹೇಳುವುದು ಹೇಗೆ? ಕಲ್ಪನೆಯನ್ನು ಬಡಿದೆಬ್ಬಿಸುವ ಒಂದು ವಾಕ್ಯವೋ ಹೇಳಿಕೆಯೊ ನಿರಂಜನರಿಗೆ ಯಾವುದಾದರು ಒಂದು ಗ್ರಂಥದಲ್ಲಿ ದೊರಕಿರಬಹುದೆಂದು ಊಹಿಸಬಹುದು. ಉಳಿದುದೆಲ್ಲ ಅವರ ಕಲ್ಪನೆಯೆ ಸರಿ. ಆದರೆ ಐಗುಪ್ತವೆಂಬ ನಾಡು, ಪೆರೊ ಎಂಬ ಹೆಸರಿನ ಮನೆತನ, ರಾ, ಅಮೆನ್ ಇತ್ಯಾದಿ ದೇವರುಗಳ ಕಲ್ಪನೆ, ನೀಲನದಿ, ಪಿರಮಿಡ್ಡುಗಳು ಮುಂತಾದವುಗಳ ನಮಗೆ ಗೊತ್ತು. ಆದ್ದರಿಂದ ಕಾದಂಬರಿಯ ಹಿನ್ನಲೆ ಪೂರ್ತಿ ಫ್ಯಾಂಟಸಿಯಲ್ಲ."[2] ಅಂದರೆ ಇಲ್ಲಿ ಬರುವ ಪಾತ್ರ ಮತ್ತು ಕಾಲ ಪುರಾತನದ್ದು ಇರಬಹುದು. ಆದರೆ ಅಲ್ಲಿಯ ಮನಸ್ಥಿತಿಗಳು ಎಲ್ಲಾ ಕಾಲದವು ಆಗಿರುತ್ತವೆ ಎಂಬುದನ್ನು ಗಮನಿಸಬೇಕು.

ನಿರಂಜನರು ಚರಿತ್ರೆಯನ್ನು ಗತಕಾಲದಿಂದ ಎತ್ತಿಕೊಂಡು ಯಥಾವತ್ತಾಗಿ ಕಥನ ಮಾಡುವ ಉತ್ಸಾಹ ತೋರಿದವರು. ಅವರು ಆಯ್ಕೆ ಮಾಡಿಕೊಂಡ ಕಾಲವನ್ನು ಜೀವಸಹಿತ ಚಿತ್ರಿಸುವುದು ಮುಖ್ಯವಾದುದು. ಈಗಾಗಲೇ ಕನ್ನಡದಲ್ಲಿದ್ದ ಐತಿಹಾಸಿಕ ಕಾದಂಬರಿಗಳ ಪರಂಪರೆಯನ್ನು ಅವರು ಮುಂದುವರೆಸಲಿಲ್ಲ. ಚರಿತ್ರೆಯನ್ನು ರೋಚಕಗೊಳಿಸುವ ಉಮೇದು ಅವರಿಗೆ ಇರಲಿಲ್ಲ. ಶೋಷಿತರ, ಧಮನಿತರ, ಅವಮಾನಿತರ, ದುರ್ಬಲರ ಸಾಮಾಜಿಕ ಜೀವನವನ್ನು ಕಟ್ಟಿಕೊಡುವುದು ಅವರ

ಆಶಯವಾಗಿತ್ತು. ಮುಖ್ಯವಾಗಿ ವರ್ಗಸಂಘರ್ಷದ ಆಯಾಮಗಳನ್ನು ಗುರಿತಿಸುವದಾಗಿತ್ತು."ಇತಿಹಾಸವೆಂದರೆ ರಾಜ-ರಾಣಿಯರ, ಅಧಿಕಾರಕ್ಕಾಗಿ ಅವರು ನಡೆಸಿದ ಕಾರಸ್ಥಾನಗಳ ವಿವರವಲ್ಲವೆಂದು ಹೇಳುತ್ತಾ ನಿರಂಜನರು 'ಕಲ್ಯಾಣಸ್ವಾಮಿ'ಯ ಹಿನ್ನುಡಿಯಾಗಿ ಬರುವ 'ಇತಿಹಾಸ ಮತ್ತು ಸೃಷ್ಟ್ಟಿ ಸಾಹಿತ್ಯ' ಎಂಬ ಪ್ರಬಂಧದಲ್ಲಿ ತಮ್ಮ ವಿಚಾರಗಳನ್ನು ಹೀಗೆ ಮಂಡಿಸುತ್ತಾರೆ. 'ಕಾಲಕಾಲಕ್ಕೂ ಬದಲಾಗುತ್ತಾ ಬಂದ ಬದುಕು, ಆಗಿನ ಕಾಲಧರ್ಮ, ಅದರಿಂದ ಪ್ರಭಾವಿತರಾದ ಜನರ ರೀತಿ ನೀತಿಗಳು, ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು.' ಇವು ಇತಿಹಾಸವನ್ನು ರೂಪಿಸುವ ಮುಖ್ಯ ಅಂಶಗಳು. 'ಗತಜೀವನದ ಪುನರ್ ಸೃಷ್ಟಿಯೇ ಐತಿಹಾಸಿಕ ಸಹಿತ್ಯ ಕೃತಿಗಳಲ್ಲಿರಬೇಕಾದ ಪ್ರಧಾನ ಅಂಶ' (ಪುಟಗಳು 149-151). ಚಿಂತನಶೀಲ ನಿರಂಜನರ ಈ ವಿಚಾರಗಳು ಸಾಹಿತ್ಯಿಕವಾಗಿ ಸಫಲವಾಗುವುದು 'ಮೃತ್ಯುಂಜಯ' ಕೃತಿಯಲ್ಲಿಯೇ. ಭಾಷೆ, ಪಾತ್ರ ರಚನೆ, ಒಟ್ಟು ಕೃತಿಯ ನೆಲೆಗಟ್ಟಾಗಿರುವ ಸಾಮಾಜಿಕ ಸಿದ್ಧಾಂತ- ಪ್ರತಿಯೊಂದರಲ್ಲಿಯು 'ಮೃತ್ಯುಂಜಯ' ನಿರಂಜನರ ಇತರ ಐತಿಹಾಸಿಕ ಕೃತಿಗಳಿಗಿಂತ ಬಿನ್ನವಾಗಿದೆ. ಮತ್ತು ನಿರಂಜನರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆಯಾಗಿದೆ. ಈ ಅಪ್ರತಿಮ ಯಶಸ್ವಿಗೆ ಮುಖ್ಯ ಕಾರಣ ಪ್ರಾಯಶಃ ಕೃತಿಕಾರನಿಗೂ ವಸ್ತುವಗೂ ಇರುವ ದೂರ. 'ಮೃತ್ಯಂಜಯ' ಕನಿಷ್ಟ ಪಕ್ಷ ಮೂರು ಸಾವಿರ ವರ್ಷಗಳ ಹಿಂದೆ ಇದ್ದಿರಬಹುದಾದ ಈಜಿಪ್ತ್ ಸಮಾಜದ ವರ್ಣನೆ ಮತ್ತು ವಿಶ್ಲೇಷಣೆ. ಆದ್ದರಿಂದ ಈ ಕೃತಿಯಲ್ಲಿ ಇತಿಹಾಸದ ಗರ್ಭದಲ್ಲಿ ಹುದುಗಿಹೋದ ಘಟನೆಯನ್ನು-ಅನಕ್ಷರಸ್ಥ ರೈತರು, ಕುಶಲ ಕೆಲಸಗಾರರು ಮತ್ತು ಕೂಲಿಕಾರರು ಶ್ರೇಣಿಕೃತ ಮತ್ತು ವರ್ಗೀಕೃತ ಸಮಾಜ ವ್ಯವಸ್ಥೆಯ ವಿರುದ್ಧ ಎದ್ದನಿಂತ ಘಟನೆಯನ್ನು - ನಿರುದ್ವೇಗದಿಂದ ನಿಷ್ಪಾಕ್ಷಿಕವಾಗಿ ಇತಿಹಾಸಕಾರನಂತೆ ಚಿತ್ರಿಸಲು ನಿರಂಜನಿರಿಗೆ ಸಾದ್ಯವಾಗಿದೆ."[3]

"ಮಾನವ ನಾಗರಿಕತೆಯ ಮೂಲದತ್ತ ಪಯಣ- ರೋಮಾಂಚಕಾರಿ ಅನುಭವ. ಆ ದಾರಿಯಲ್ಲಿ ಪ್ರಾಚೀನ ಈಜಿಪ್ಟ ಬಲು ದೊಡ್ಡ ತಂಗುದಾಣ. ಅದರ ಆಕರ್ಷಣೆಗೆ ನಾನು ಸಂಪೂರ್ಣ ಮನಸೋತಿದ್ದೇನೆ. ಅದನ್ನು ಅಂಗೈಯಲ್ಲಿ ಕಟ್ಟಿಕೊಡುವ ಆಶೆ." ಎಂದು ತಾವು ಕಾದಂಬರಿ ಬರೆಯುವ ಇಚ್ಚೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ಪ್ರಾಚೀನ ಈಜಿಪ್ಟ್‌ನ ಚರಿತ್ರೆ ಕಾಡುತ್ತಾ ಹೋಗಿದೆ. ಕಾರಣ, ಚರಿತ್ರೆಯ ಒಳಗಿರುವ ಸಂಘರ್ಷಗಳು. ಪ್ರಭುತ್ವಗಳು ಸೃಷ್ಟಿಸಿರುವ ಯಜಮಾನಿಕೆಯ ವ್ಯವಸ್ಥೆಯನ್ನು ಮೀರುವ ಸಂದರ್ಭದ ಕಾಲಘಟ್ಟಗಳು. ಯಾಕಂದರೆ ನಮ್ಮ ಚರಿತ್ರೆಯ ಬರವಣಿಗೆಯಲ್ಲಿ ಪ್ರಭುತ್ವಗಳು ಬದುಕಿದ ರೀತಿಯನ್ನೇ ಚರಿತ್ರೆಯ ರೀತಿಯೆಂದು ನಂಬಿಸಲಾಗಿದೆ. ಅಂದರೆ ಅಲ್ಲಿ ಸಾಮನ್ಯರ ಬದುಕಿನ ಕ್ರಮಗಳ ಗೈರು ಹಾಜರಿಯನ್ನು ಕಾಣುತ್ತೇವೆ. ಅದು ನಿರಂಜನರಿಗೆ ಚರಿತ್ರೆಯನ್ನು ಹೊಸ ಬಗೆಯಲ್ಲಿ ನೋಡಲು ಪ್ರೇರೇಪಿದೆ.

“ಚರಿತ್ರೆಯ ಸತ್ಯ ಮತ್ತು ಸಾಹಿತ್ಯದ ಸತ್ಯ ಇವೆರಡೂ ಸತ್ಯವೇ ಆಗಿದ್ದರು ಇವುಗಳ ರೀತಿಗಳು ಬೇರೆ ಬೇರೆ. ಚರಿತ್ರೆ ಸಂಭವಗಳನ್ನು ಮಾತ್ರ ಚಿತ್ರಿಸಿದರೆ, ಸಾಹಿತ್ಯ ಸಂಭವನೀಯಗಳನ್ನು ಮಾತ್ರ ಚಿತ್ರಿಸುತ್ತದೆ. ಸಂಭವನೀಯದೊಳಗೆ ಸಂಭವವೂ ಸೇರಿರುತ್ತದೆ. ಆದರೆ ಸಂಭವದೊಳಗೆ ಸಂಭವನೀಯವೆಲ್ಲವೂ ಸೆರಿರುವದಿಲ್ಲವೆಂಬುದನ್ನು ಗಮನಿಸಬೇಕು. ಸಂಭವನೀಯ ಜಗತ್ತು ಸಂಭವ ಜಗತ್ತಿಗಿಂತ ಮುಖ್ಯವಾದುದು. ಆದ್ದರಿಂದ ನೀರಾನೆ ಪ್ರಾಂತವೆಂಬುದೊಂದು ಇತ್ತೇ ಅಲ್ಲಿ ಮೆನೆಪ್ಟಾನ ನಾಯಕತ್ವದಲ್ಲಿ ಪೆರೋ, ಅರ್ಚಕ, ಭೂಮಲೀಕ ಸರ್ವಾಧಿಕಾರದ ವಿರುದ್ಧ ಬಂಡಾಯವೊಂದು ನಡೆಯಿತೆ, ಈ ಬಂಡಾಯ ಸಮೂಹ ಹತ್ಯೆಯಲ್ಲಿ ಕೊನೆಗೊಂಡಿತೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಐತಿಹಾಸಿಕ ದಾಖಲೆಗಳಲ್ಲಿ ಹುಡುಕಲಾರೆವು. ಇಂಥ ಘಟನೆಗಳು ಸಂಭವನೀಯ ಜಗತ್ತಿಗೆ ಸೇರಿದವು ಹಾಗು ಬೇರೆ ಬೇರೆ ರೂಪಗಳಲ್ಲಿ ಮಾನವ ಇತಿಹಾಸದಲ್ಲಿ ಕಾಣಿಸಿಕೊಂಡವು ಎಂದು ತಿಳಿದರೆ ಸಾಕು.”[೪],

ಈಜಿಪ್ಟ್‌ನ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಅವರಿಗೆ ಕಂಡ ಹೊಸ ಸತ್ಯವೊಂದನ್ನು ಕಥನವಾಗಿಸುವ ಚಿಂತನೆ ಮಾಡಿದ್ದಾರೆ. ಪ್ರಭುತ್ವದ ವಿರುದ್ಧ ಹೋರಾಡಿದ ಸಾಮನ್ಯರ ಜೀವನಗಾತೆಯು ಅವರನ್ನು ವಿಸ್ಮಿತರನ್ನಾಗಿಸಿದೆ. ಅದನ್ನೇ ಅವರು ಕಾದಂಬರಿ ಮಾಡಿದ್ದಾರೆ.“ಸರ್ವಶಕ್ತ ಪೆರೋಗಿದಿರು ದಲಿತರು ಹೋರಾಡಿದ ಆ ಕಥೆ ಎಷ್ಟು ಹಳೆಯದು? ಅಧ್ಯಯನ ಆರಂಭಿಸಿದೆ. ಪ್ರಾಚೀನ ಹೆರೊಡೊಟಸನಿಂದ ಮೊದಲಾಗಿ ಆಧುನಿಕವರೆಗೆ. ದೀರ್ಘ ಕಾಲ ಆಳಿದ ಎರಡನೆಯ ಪೇಪಿಯ ಆಳ್ವಿಕೆಯಲ್ಲಿ ಅಂಥ ಘರ್ಷಣೆಗಳು ನಡೆದವು ಎನ್ನುವುದಕ್ಕೆ ಆಧಾರಗಳು ದೊರೆತವು. ಅಂದರೆ, ಆ ಸಂಗತಿ ೪, ೫೦೦ ವರ್ಷ ಹಳೆಯದು ಎಂದಾಯಿತು. ನೀಲ ನದಿಯ ದಂಡೆಗಳು ಕೃಷಿಯಿಂದ ಹಸಿರಾಗತೊಡಗಿ ಆಗಲೇ ೪,೦೦೦ ವರ್ಷ ಕಳೆದಿದ್ದವು. ಊರುಗಳು – ನಗರಗಳು ರೂಪಗೊಂಡಿದ್ದವು. ಲಿಪಿ ಸೃಷ್ಟಿಯಾಗಿತ್ತು. ಸತ್ತ ಪೆರೋಗಳಿಗಾಗಿ ಗೋರಿಗಳ ನಿರ್ಮಾಣ ಆರಂಭಗೊಂಡಿತ್ತು. ಅದು ಈಜಿಪ್ಟ್‌ನ ಬಹುಜನಸಮುದಾಯವೇ ಗುಲಾಮ ಜೀವನ ನಡೆಸುತ್ತಿದ್ದ ಕಾಲ. ಆಗ ನಡೆದ ಬಂಡಾಯ ಮಾನವ ನಾಗರಿಕತೆಯ ಇತಿಹಾಸದಲ್ಲಿಯೇ ಪ್ರಪ್ರಥಮ.”[೫]

ಇಡೀ ಕಾದಂಬರಿಯಲ್ಲಿ ಕಾಣುವುದು ಈಜಪ್ಟ್‌ನ ೪೦೦೦ ವರ್ಷಗಳ ಹಿಂದಿರುವ ಜೀವನವನ್ನು. ಆ ಸಂದರ್ಭದ ಎಲ್ಲಾ ಸಾಂಸ್ಕೃತಿಕ ವಿವರಗಳನ್ನು ಕಾದಂಬರಿಯಲ್ಲಿ ತಂದಿದ್ದಾರೆ. ಪಾತ್ರಗಳಿಗೆ ಅಲ್ಲಿಯ ಸಮುದಾಯದ ಹೆಸರುಗಳನ್ನೇ ಇಟ್ಟಿದ್ದಾರೆ. ಹೀಗಾಗಿ ಆ ಕಾಲದಲ್ಲಿಯೇ ನಡೆದಾಡಿದ ಅನುಭವವನ್ನು ಈ ಕಾದಂಬರಿ ನೀಡುತ್ತದೆ. ವರ್ಗ ಸಂಘರ್ಷದ ಮೂಲ ನೆಲೆಗಳನ್ನು ಶೋಧಿಸುವ ಮತ್ತು ಕಟ್ಟಿಕೊಡುವ ಕಾದಂಬರಿ ಇದಾಗಿದೆ. ಕಲ್ಪನೆಯ ಆಧಾರದಿಂದ ಮಾತ್ರ ಇದು ರಚನೆಯಾಗಿಲ್ಲ.

ವಾಸ್ತವಾಂಶಗಳನ್ನು ಒಳಗೊಂಡಿದೆ. ಅದಕ್ಕಾಗಿ ನಿರಂಜನರು ಈಜಿಪ್ಟ್ ದೇಶಕ್ಕೆ ಹೋಗಿ ಅಲ್ಲಿ ಕೆಲವು ದಿನಗಳ ಕಾಲ ವಾಸ ಮಾಡಿ ಮಾಹಿತಿ ಸಂಗ್ರಹ ಮಾಡಿಕೊಂಡು ಬಂದಿದ್ದಾರೆ. ಆ ಕಾಲದ ಚರಿತ್ರೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ."ಆ ಕಾಲಾವಧಿಯ ಸಾಮಾಜಿಕ ಆರ್ಥಿಕ, ರಾಜಕೀಯ ಬದುಕನ್ನು ಅರಿಯಲು ಶ್ರಮಿಸಿದೆ. ಪುರಾತತ್ತ್ವಜ್ಞರನ್ನು ಊರುಗೋಲಾಗಿ ಬಳಿಸಿ, ಕಾಲದ ಅಂತರವನ್ನು ದಾಟಿ, ಪ್ರಾಚೀನ ಈಜಿಪ್ಟ್‌ಗೆ ಹೋದೆ. ಗೋರಿಗಳ ನಡುವೆ ಓಡಾಟ, ಸತ್ತವರ ಸಂಗ, ನೀಲ ನದಿಯಲ್ಲಿ ದೋಣಿ ಪ್ರವಾಸ. ರೈತನಾದೆ, ಕುಶಲಕರ್ಮಿಯಾದೆ, ಲಿಪಿಕಾರನಾದೆ, ಪುರೋಹಿತನಾದೆ, ಪೆರೋ ಪಾತ್ರವನ್ನು ಧರಿಸಿದೆ. ಒಂಬತ್ತು ತಿಂಗಳ ಯತ್ನ. (ನಾನು ನೆರವು ಪಡೆದದ್ದು ಫ್ಲಂಡರ್ಸ್ ಪೆಟ್ರಿ, ಲಿಯೋನಾರ್ಡ್‌ವೊಲ್ಲೀ, ಹವರ್ಡ್ ಕಾರ್ಟರ್, ಜೇಮ್ಸ್ ಬ್ರೆಸ್ಟೆಡ್, ವಿಲ್ ಡ್ಯೂರಂಟ್, ಲಿಯೋನಾರ್ಡ್ ಕಾಟ್ರೆಲ್, ಜಾಕ್ ಲಿಂಡ್ಸೆ ಮತ್ತಿತರ ಕೃತಿಗಳಿಂದ) ಇಷ್ಟಾದ ಮೇಲೆ ನಾನು ಸಿದ್ಧ ಎನಿಸಿತು."[೬] ಹೀಗೆ ಅವರು ವಾಸ್ತವದ ನೆಲೆಗಟ್ಟಿನ ಮೇಲೆ ಕಾದಂಬರಿಯನ್ನು ಬರೆದಿದ್ದಾರೆ.

"ನಿರಂಜನರ 'ಮೃತ್ಯುಂಜಯ'ಕಾದಂಬರಿ ಚರಿತ್ರೆಯನ್ನು ತೀರ ಬಿನ್ನವಾದ ರೀತಿಯಲ್ಲಿ ಬಳಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಈಜಿಪ್ತಿನ ಗತಕಾಲವೊಂದರ ಮೂರ್ತವಾದ ಮತ್ತು ಕೆಲವು ಕಡೆಗೆ ದೀರ್ಘವೆನಿಸುವ ವಿವರಗಳು. ಈಜಿಪ್ತಿನ ಬದುಕಿನ ಈ ವಿವರಗಳು ನಮಗೆ ಕಡಿಮೆ ಪರಿಚಿತವಾಗಿದ್ದರಿಂದ ಮತ್ತು ಕಾದಂಬರಿಯ ಭಾಷೆ ವಿವರಗಳಿಗೆ ಜೀವಸ್ಪರ್ಶ ಮಾಡಿಸುವಷ್ಟು ಉದ್ದೀಪಕವಾಗದೇ ಇರುವದರಿಂದ ಮೊದಲ ಓದಿನಲ್ಲಿ ಅವು ನಮಗೆ ತೊಡಕಾಗುತ್ತವೆ. ಕಥೆಯ ಓಟಕ್ಕೆ ಅಡಚಣೆಯಾದಂತೆ ಭಾಸವಾಗುತ್ತವೆ. ಆದರೆ, ಕಾದಂಬರಿಯ ಬಂಧವನ್ನು ಸರಿಯಾಗಿ ಗುರುತಿಸಿದಾಗ ಈ ವಿವರಗಳು ಕೇವಲ ಒಬ್ಬ ಸಂಶೋಧಕನ ಟಿಪ್ಪಣೆಗಳಲ್ಲ, ಕಾದಂಬರಿಯ ಸತ್ವಕ್ಕೆ ಅನಿವಾರ್ಯವಾದುವು ಎನ್ನುವುದು ಸ್ಪಷ್ಟವಾಗುತ್ತದೆ. ಕಾದಂಬರಿಯ ಸತ್ವ ಮತ್ತು ಅದನ್ನು ಹೊಮ್ಮಿಸುವ ಅದರ ಬಂಧ– ಇವೆರಡನ್ನು ಗುರುತಿಸಲು ಈಜಿಪ್ತಿನ ಇತಿಹಾಸದ ಮತ್ತು ನಿರಂಜನರು ಬಳಿಸಿಕೊಳ್ಳುವ ಪುರಾಣ ಕಥೆಗಳ ಪರಿಚಯ ಅವಶ್ಯಕವಾಗಿದೆ."[೭]

ಈಜಿಪ್ಟ್‌ನ್ನು ಕೇಂದ್ರವಾಗಿಟ್ಟುಕೊಂಡು ಮಾನವನ ಚರಿತ್ರೆಯನ್ನು ಕಂಡುಕೊಳ್ಳುವ ಯತ್ನ ಕಾದಂಬರಿ ಮಾಡುತ್ತದೆ. ಜನಸಾಮನ್ಯರ ಜೀವನವಿಧಾನವನ್ನು ನಾವು ಚರಿತ್ರೆಯಲ್ಲಿ ಕಾಣುವುದಿಲ್ಲ. ಅಲ್ಲಿ ಕೇವಲ ರಾಜ ಮಹಾರಾಜರ ಜೀವನ ವಿಧಾನವನ್ನು ಮಾತ್ರ ಕಾಣುತ್ತೇವೆ. ಕಾದಂಬರಿಯಲ್ಲಿ ಅವರ ಜೊತೆಗೆ ಜೀವನದ ಎಲ್ಲಾ ಮುಖಗಳನ್ನು ಅನಾವರಣ ಮಾಡುಲಾಗಿದೆ. ಈ ಕಾರಣಕ್ಕೆ ಚರಿತ್ರೆಯ ಬಿನ್ನ ಧ್ವನಿಯನ್ನು ಕಾದಂಬರಿ ಅಭಿವ್ಯಕ್ತಿಸುತ್ತದೆ. ಕಾದಂಬರಿ ಆ ಕಾಲದ ಜೀವನ ವಿವರಗಳನ್ನು ಒದುಗಿಸುತ್ತಿಲ್ಲ. ಅದು ವರ್ಗವ್ಯವಸ್ಥೆಯ ಸ್ವರೂಪವನ್ನು ಶೋಧಿಸುತ್ತದೆ."ಈ ಕೃತಿ ಆರಂಭವಾಗುವುದು

ಐಸಿಸ್‌ನ ನೆನಪಿಗಾಗಿ ಪ್ರತಿವರ್ಷವೂ ಪುಣ್ಯಕ್ಷೇತ್ರವಾದ ಅಬ್ಬುವಿನಲ್ಲಿ ನಡೆಯುವ ದೊಡ್ಡ ಜಾತ್ರೆಯಿಂದಲೆ. ಈ ಜಾತ್ರೆಯ ಸಂದರ್ಭವನ್ನು ಅತಿ ಕುಶಲತೆಯಿಂದ ಲೇಖಕರು ಅಂದಿನ ವರ್ಗೀಕೃತ – ಶ್ರೇಣಿಕೃತ ಸಮಾಜವನ್ನು ನಮ್ಮ ಮುಂದಿಡಲು ಉಪಯೋಗಿಸುತ್ತಾರೆ. ನಮಗರಿವಿಲ್ಲದಂತೆಯೇ ನಾವು ರೈತರಾದ ಮೆನೆಪ್‌ಟಾ ಮತ್ತಿತರ ಯಾತ್ರಿಕರು, ಕುಶಲಕರ್ಮಿಗಳಾದ ಅಂಬಿಗ ಬಟಾ ಮತ್ತು ಅವನ ಸಹಾಯಕರು ಇವರಿಂದ ಪ್ರಾರಂಭಿಸಿ, ಯಾತ್ರೆಯು ಮುದುವರಿದಂತೆಲ್ಲ ಸಮಾಜದ ಒಂದೊಂದೇ ವರ್ಗವನ್ನು ಮತ್ತವರ ಸಾಮಾಜಿಕ ಸ್ಥಾನಮಾನಗಳನ್ನು ಅರ್ಥಮಾಡಿಕೊಳ್ಳುತ್ತೇವೆ. ಸಮಾಜದ ಅತೀ ಕೆಳಗೆ ಭಿಕ್ಷುಕರು–ಅವರಿಗಿಂತ ತುಸು ಮೇಲೆ ನೇಯುವ, ನೂಲುವ, ಮರ–ಕಬ್ಬಿಣ ಕೆಲಸ ಮಾಡುವ ಕುಶಲಕರ್ಮಿಗಳು ಅವರ ನಂತರ ವರ್ತಕರು–ವರ್ತಕರಿಗಿಂತ ಕೊಂಚ ಮೇಲೆ ಭೂಮಾಲೀಕರು, ಪ್ರಾಂತಪಾಲರು– ಈ ದೈತ್ಯಾಕೃತಿಯ ಪಿರಮಿಡ್‌ನ ತುದಿಯಲ್ಲಿ ಸರಿಸಮನಾಗಿ ಅಧಿಕಾರ ಹಂಚಿಕೊಂಡಿರುವ ಮತ್ತು ಆ ಕಾರಣದಿಂದಲೇ ಸದಾ ಪರಸ್ಪರ ಸಂದೇಹ– ದ್ವೇಷಗಳಿಂದ ತುಂಬಿರುವ ಚಕ್ರವರ್ತಿ ಪೆರೋ ಮತ್ತು ಧರ್ಮಗುರು ಹೆಪಾಟ್ ಇಂತಹ ಸಮಾಜದ ಚಿತ್ರ ಅತ್ಯಂತ ಸಹಜವಾಗಿಯೇ ಯಾತ್ರೆಯ ಸಂದರ್ಭದಲ್ಲಿ ನಮ್ಮ ಕಣ್ಮುಂದೆ ನಿಲ್ಲುತ್ತದೆ. ಅಬ್ಬುವಿನ ದೋಣಿಕಟ್ಟೆಯಲ್ಲಿ ಪ್ರತಿಯೊಂದು ವರ್ಗಕ್ಕೂ ತನ್ನದೇ ಆದ ಸ್ಥಾನ ದೋಣಿ ನಿಲ್ಲಿಸಲು, ಆ ಸ್ಥಾನ ಪಲ್ಲಟವಾಗದಂತೆ ಶಿಸ್ತು ಕಾಯಲು ಸದಾ ಚಾಟಿ ಹಿಡಿದು ನಿಂತಿರುವ ಸೈನಿಕರು."[8]. ಹೀಗೆ ಕಾದಂಬರಿ ಇಡೀ ಆ ಕಾಲದ ಜನಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.
ಕಾದಂಬರಿಯು ಕೇವಲ ಬೌತಿಕ ವಿವರಗಳಿಗೆ ಮಾತ್ರ ಸೀಮಿತವಾಗುವದಿಲ್ಲ. ಪ್ರತಿಯೊಂದು ಪಾತ್ರದ ಮಾನಸಿಕ ಬೆಳವಣಿಗೆಯನ್ನು ವಿಶ್ಲೇಸಿಸುತ್ತಾ ಹೋಗುತ್ತದೆ. ಪಾತ್ರಗಳ ವಿಕಾಸವು ಒಂದು ರೀತಿಯಲ್ಲಿ ಚರಿತ್ರೆಯ ಸಾಮಾಜಿಕ ವಿನ್ಯಾಸವನ್ನು ಅನಾವರಣ ಮಾಡುತ್ತಲೇ ಅದನ್ನು ಮೀರುವ ನಿಲುವುಗಳನ್ನು ಧ್ವನಿಸುತ್ತದೆ."ಕಾದಂಬರಿಯ ಮುಖ್ಯ ಅಂಶವಾದ ಪೆರೋ ಮತ್ತು ಪುರೋಹಿತಶಾಹಿಯ ವಿರುದ್ಧ ನೀರಾನೆ ಪ್ರಾಂತದ ಮೆನೆಪ್‌ಟಾ ಮಾಡುವ ಬಂಡಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕಾದಂಬರಿಯ ಎಲ್ಲಾ ವಿವರಗಳು ಇಜಿಪ್ತಿನ ವರ್ಗವ್ಯವಸ್ಥೆಯ ಸ್ವರೂಪವನ್ನು ಮೂರ್ತವಾಗಿ ಹಿಡಿದು ಕೊಡುವ ಕುರುಹುಗಳಾಗಿವೆ. ಇದನ್ನು ಅರ್ಥಮಾಡಿಕೊಂಡರೆ ಕಾದಂಬರಿಯ ಒಂದು ಬಂಧ ನಮಗೆ ಗೋಚರಿಸುತ್ತದೆ. ಕಾದಂಬರಿಯ ಕೇಂದ್ರ ಮೊದಲ ಭಾಗದಲ್ಲಿ ಬಹಳ ಬೇಗನೆ ಸುಲಭವಾಗಿ ನಡೆದು ಹೋಗುವ ಬಂಡಾಯವಲ್ಲ. ಕಾದಂಬರಿಯ ಬಂಧವಿರುವುದು ನಾಯಕ ಮೆನೆಪ್‌ಟಾ ಇಜಿಪ್ತಿನ ಸಮಾಜ ವ್ಯವಸ್ಥೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಚಿಂತನೆಯ ಬೆಳವಣಿಗೆಯಲ್ಲಿ. ಅಂದರೆ, ಕಾದಂಬರಿಯ ರಚನೆ ಘಟನೆಗಳ ಬದಲಾಗಿ ನಾಯಕನ ಮಾನಸಿಕ ಬೆಳವಣಿಗೆಯನ್ನು ಅನುಸರಿಸುತ್ತದೆ. ನಿರಂಜನರು ಮೊದಲಿಂದಲೂ ಕೊಡುತ್ತಾ ಹೋಗುವ ಜನಜೀವನದ ವಿವರಗಳು

ಕ್ರಮೇಣವಾಗಿ ತೆರೆಯನ್ನು ಸರಿಸುತ್ತಾ ವ್ಯವಸ್ಥೆಯ ಮೂಲದಲ್ಲಿರುವ ಕ್ರೌರ್ಯವನ್ನು ಬಯಲು ಮಾಡುತ್ತದೆ. ಅವುಗಳನ್ನು ಅನುಸರಿಸುವಂತೆ ಮೆನೆಪ್‌ಟಾ ಕೂಡ ತನ್ನ ಸುತ್ತಲಿನ ಬದುಕಿನ ಆಳಕ್ಕೆ ಇಳಿಯುತ್ತಾ ಕೊನೆಗೆ ಅದರ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತಾನೆ. ಕಂದಾಯ ವಸೂಲಿಯ ಅನ್ಯಾಯವನ್ನು ಮಾತ್ರ ಪ್ರತಿಭಟಿಸಿದ ಅವನು ಕಾದಂಬರಿಯ ಕೊನೆಯ ವಿಚಾರಣೆಯ ಸನ್ನಿವೇಶದಲ್ಲಿ ಇಡೀ ಸಮಾಜ ವ್ಯವಸ್ಥೆಯ ಬ್ರಷ್ಟತೆಗೆ ಸವಾಲು ಎಸೆಯುತ್ತಾನೆ. ಮೊದಲ ಭಾಗದ ನೀರಾನೆ ಪ್ರಾಂತದ ಜೀವನದ ಸರಳತೆಗೂ ಮುಂದೆ ಮೆಂಫಿಸ್‌ನ ಬದುಕಿನ ಸಂಕೀರ್ಣತೆಗೂ ಇರುವ ವ್ಯತ್ಯಾಸಕ್ಕೂ ಇದೇ ಕಾರಣ. ಆದ್ದರಿಂದ ಕಾದಂಬರಿಯ ಬೆಳವಣಿಗೆ ಇರುವುದು ಸಾಮನ್ಯವೆನಿಸುವ ವಿವರಗಳನ್ನು ಕೊಡುತ್ತಾ ಕೊನೆಗೆ ಅವುಗಳ ಹಿಂದಿರುವ ಸಮಾಜ ವ್ಯವಸ್ಥೆಯ ಸ್ವರೂಪವನ್ನು ಬಯಲು ಮಾಡುವುದರಲ್ಲಿ."[೯]

ನಾಗರಿಕತೆಯೊಳಗೆ ಸೃಷ್ಟಿಯಾಗುವ ಕ್ರೌರ್ಯದ ನಾನಾ ಮುಖಗಳನ್ನು ಕಾದಂಬರಿ ಅನಾವರಣಗೊಳಿಸುತ್ತದೆ. ಭೂಮಾಲಿಕರು, ರಾಜರು, ಪುರೋಹಿತರು ಒಂದಾಗಿ ನ್ಯಾಯಯುತವಾಗಿ ಬದುಕುವ ಸಮುದಾಯಗಳನ್ನು ಹೇಗೆ ಅಮಾನುಷವಾಗಿ ನಿರ್ನಾಮ ಮಾಡುತ್ತವೆ ಎಂಬುದನ್ನು ಶೋಧಿಸುತ್ತದೆ. ಪೆರೊ, ಹೆಪೆಟ್ ಪಾತ್ರಗಳು ನಾಗರಿಕತೆಯ ಮೇಲೆ ಹಿಡಿತ ಸಾಧಿಸಿ ಸಾಮನ್ಯರ ಬದುಕುಗಳ ಜೊತೆಗೆ ಹೇಗೆ ಚೆಲ್ಲಾಟವಾಡುತ್ತವೆ ಎಂಬುದನ್ನು ಕಾಣುತ್ತೇವೆ. ಇವರು ವ್ಯವಸ್ಥೆಯನ್ನು ಮುನ್ನೆಡಿಸುವವರು. ಆದರೆ, ಸಾಮನ್ಯರ ರಕ್ತ ಹೀರಿ ಬದಕುವವರು."ಇಜಿಪ್ತಿನ ಆಳುವ ವರ್ಗದ ಲೋಲುಪತೆಯ ಜೀವನ, ಮಾನವೀಯ ಮೌಲ್ಯಗಳೇ ಇಲ್ಲದ ಸಿನಿಕತನ ಮತ್ತು ಬ್ರಷ್ಟತೆ, ಭಾವನೆಗಳಿಗೆ ಅವಕಾಶವೇ ಇಲ್ಲದ ಕ್ರೂರ ಜಾಣತನ ಇವೆಲ್ಲವೂ ಸಹಜವಾಗಿ ಮೂಡಿ ಬಂದಿವೆ. ಮೇಲುವರ್ಗದ ಸಿನಿಕತನದ ಮನುಷ್ಯ ಸಂಬಂಧಗಳು ನೀರಾನೆ ಪ್ರಾಂತದ ಜನರ ಸಹಜ ಸಂಬಂಧಗಳ ವೈದೃಶ್ಯದಿಂದಾಗಿ ನಾಗರೀಕತೆಯೊಂದರ ಸಾವಿನ ಕಥೆಯನ್ನು ಸಕ್ಷ್ಮವಾಗಿ ಹೇಳುತ್ತವೆ. ಈ ಬ್ರಷ್ಟವರ್ಗದ ಪ್ರತಿನಿಧಿಯಾದ ಹೆಖ್ವೆಟ್, ತನ್ನ ಕಾರ್ಯಸಾಧನೆಗಾಗಿ ತನ್ನ ರತಿವರ್ಚಸ್ಸನ್ನು ಬಳಿಸಿಕೊಳ್ಳುವ ಇಜಿಪ್ತಿನ ರಾಣಿ, ತನ್ನ ಪುರುಷತ್ವವನ್ನು ದಾಸಿಯರಿಗೆ ಧಾರೆಯೆರೆದು 'ಸೆಡ್' ಉತ್ಸವದಿಂದ ಮತ್ತೆ ಯೌವನ ಪಡೆದುಕೊಳ್ಳಬಯಸುವ ಪರೋ– ಇವರೆಲ್ಲಾ ಅದೋಗತ ಸಮಾಜವೊಂದರ ಪ್ರತಿನಿಧಿಗಳಾಗಿದ್ದಾರೆ. ಮಹಾ ಅರ್ಚಕ ಹೆಪಾಟ್ ಮತ್ತು ಅವನ ಹಿಂಬಾಲಕರು ದಬ್ಬಾಳಿಕೆಯಲ್ಲಿ ಶಾಮೀಲಾಗಿರುವ ಪುರೋಹಿತಶಾಹಿಯನ್ನು ಪ್ರತಿನಿಧಿಸುತ್ತಾರೆ. ರಾಜಸತ್ತೆ ಮತ್ತು ಪುರೋಹಿತಶಾಹಿಯ ಮಧ್ಯೆ ಅಧಿಕಾರಕ್ಕಾಗಿ ಕಚ್ಚಾಟ ಇಜಿಪ್ತಿನ ಸಂದರ್ಭದಲ್ಲಿ ಅನಿವಾರ್ಯವಾಗಿತ್ತು."[೧೦]

ಇಂತಹ ಕ್ರೂರ ವ್ಯವಸ್ಥೆಯನ್ನು ಬದಲಾಯಿಸಿ ಹೊಸ ವ್ಯವಸ್ಥೆಯನ್ನು ಕಟ್ಟುವ ಯುವ ಪಡೆಯನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಆದರೆ, ಇಂತಹ ಪಡೆಯನ್ನು ಆಳುವ ವರ್ಗ ತನ್ನ ತೋಳ್ಬಲ ಮತ್ತು ಅಧಿಕಾರದಿಂದ ಸದೆಬಡೆಯುವ ಪ್ರಯತ್ನ ಮಾಡುತ್ತದೆ. ಅದರಲ್ಲಿ ಯಶಸ್ವಿಯು ಆಗುತ್ತದೆ. ಈ ವರ್ಗಸಂಘರ್ಷ ಚರಿತ್ರೆಯಲ್ಲಿ ನಿರಂತರವಾಗಿ ಸಾಗುತ್ತಾ ಬಂದಿದೆ. ಈ ಚಿತ್ರಣವನ್ನು ಕಾದಂಬರಿ ಪ್ರತಿಬಿಂಬಿಸುತ್ತದೆ."ಸಮಾಜ ವ್ಯವಸ್ಥೆಯ ಈ ಸ್ವರೂಪವನ್ನು ಬಯಲು ಮಾಡುವುದೇ ಕಾದಂಬರಿಯ ಕೇಂದ್ರಬಿಂದು ಎಂದು ಇಟ್ಟುಕೊಂಡರೆ ಕಾದಂಬರಿಯಲ್ಲಿ ವೈಯಕ್ತಿಕ ಮಟ್ಟದಲ್ಲಿ ಕಾಣುವ ದೌರ್ಜನ್ಯದ ವಿವರಗಳು, ಈ ವಿಶ್ಲೇಷಣೆಯ ಹಿನ್ನಲೆಯಲ್ಲಿ ಹೆಚ್ಚಿನ ಅರ್ಥವಂತಿಕೆ ಪಡೆದುಕೊಳ್ಳುತ್ತವೆ. ಮೊದಲಿಗೆ ನೀರಾನೆ ಪ್ರಾಂತದ ಬಂಡಾಯದಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಬೆಂಬಲವಾಗಿರುವುದು ಋಜು ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎಂಬ ಸರಳವಾದ ನೈತಿಕ ಸ್ಥೈರ್ಯ. ಆದರೆ, ಹಿನ್ನಲೆಯೆಲ್ಲವೂ ಅರ್ಥವಾದ ಮೇಲೆ ಅವರು ನೆಚ್ಚಿಕೊಂಡ 'ಮಾಟ್'( ವೈಯಕ್ತಿಕ ನೀತಿ ಮಾರ್ಗ) ಚರಿತ್ರೆಯ ತಿರುವಿನೊಂದರಲ್ಲಿ ದುಡಿಯುವ ವರ್ಗ ಆಳುವ ವರ್ಗದ ವಿರುದ್ಧ ಹೋಡಬೇಕಾದ ಬಂಡಾಯ ಶಕ್ತಿಯಾಗಿ ಪರಿಣಮಿಸುತ್ತದೆ. ಹೀಗೆ ಕಾದಂಬರಿಯ ಬಂಧ ವ್ಯಕ್ತಿ ತನ್ನ ಸ್ವಂತ ಬದುಕಿನ ನೋವುಗಳಿಂದ ಆರಂಭಿಸಿ ಅವುಗಳ ಹಿನ್ನಲೆಯನ್ನು ಚರಿತ್ರೆಯ ವಿಶಾಲ ಬಿತ್ತಿಯ ಮೇಲೆ ಗುರುತಿಸಿಕೊಳ್ಳುತ್ತಾ ಸಾಗುವ ಕ್ರಿಯೆಯನ್ನು ಅನುಸರಿಸುತ್ತದೆ. ಅರ್ಚಕ ವರ್ಗದವನಾಗಿದ್ದು ಅದರಿಂದ ಸಿಡಿದೆದ್ದು ಮೆನ್ನ ವ್ಯವಸ್ಥೆಯ ಕ್ರೌರ್ಯವನ್ನು ನೋಡಿ ವಿಹ್ವಲಗೊಂಡ ಸೂಕ್ಷ್ಮಜೀವಿ. ಅಸಾಹಾಯಕ ಹುಚ್ಚಿನ ಮಟ್ಟದಲ್ಲಿದ್ದ ಅವನ ವೈಯಕ್ತಿಕ ಬಂಡಾಯ ಕಾದಂಬರಿಯ ಕೊನೆಗೆ ಹೆಚ್ಚು ಕ್ರಿಯಾಶೀಲವಾಗುತ್ತದೆ. ಅವನು ಕೂಡ ವೈಯಕ್ತಿಕ ಮಟ್ಟದ ಬಂಡಾಯ ತರಬಹುದಾದ ಒಬ್ಬಂಟಿತನವನ್ನು ಮೀರಿ ದುಡಿಯುವ ವರ್ಗದ ಸಾಮಾಜಿಕ ಬಂಡಾಯದಲ್ಲಿ ಒಂದಾಗುತ್ತಾನೆ."[೧೧]
ವಸ್ತುನಿಷ್ಠತೆಯಿಂದ ನಿರಂಜನರು ಕಾದಂಬರಿಯನ್ನು ರೂಪಿಸುತ್ತಾ ಹೋಗಿದ್ದಾರೆ. ಇದರಿಂದಾಗಿ ಕಾದಂಬರಿಗೆ ಚಾರಿತ್ರಿಕ ಆಯಾಮ ದೊರೆತಿದೆ. ಅಲ್ಲಿ ಆ ಕಾಲವನ್ನು ಯಥಾವತ್ತಾಗಿ ತರುವ ಅಧ್ಯಯನಶೀಲತೆ ಕಾಣುತ್ತೇವೆ. ಪ್ರತಿಯೊಂದು ಪಾತ್ರವನ್ನು ಬಹಳ ಸೂಕ್ಷ್ಮವಾಗಿ ಕಡೆಯುತ್ತಾ ಹೋಗಿದ್ದಾರೆ. ಅವರರವರ ಮನೋಭಾವಕ್ಕೆ ಅನುಗುಣವಾಗಿ ಚಿತ್ರವತ್ತಾದ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಅವು ಆ ಕಾಲದವು ಅನಿಸುತ್ತದೆ. ವಾಸ್ತವಾಗಿ ಆ ರೀತಿಯ ಮನಸ್ಥಿತಿ ಎಲ್ಲಾ ಕಾಲದ ಪ್ರಭುತ್ವದ್ದಾರುತ್ತದೆ. "ರಾಣಿ ನೆಫರ್‌ಟೀಮ್ ನಾನು ಹೇಳ ಹೊರಟಿರುವುದು ನಿನ್ನ ಸೃಷ್ಟಿಯ ಅಗತ್ಯವನ್ನು. ಕಾಲ ದೇಶಗಳಿಗೆ ದೂರವಾದ ನಿನ್ನ ಹಾಗು ನಿನ್ನಂತಹ ಅನೇಕರ ಸೃಷ್ಟಿಕ್ರಿಯೆ ಯಾಕೆ ಬೇಕಾಯಿತು ಎಂಬುದನ್ನು. ಪೆರೋಪಿಯ ಪುರಾತನ ಐಗುಪ್ತವನ್ನು ಚಿತ್ರಿಸುತ್ತಾ ನಿರಂಜನರು ಚಿಸ್ಮರಣೆಯಲ್ಲಿ ಗಳಿಸಲಾರದ ವಸ್ತುನಿಷ್ಠತೆಯನ್ನು ಮೃತ್ಯುಂಜಯದಲ್ಲಿ ಗಳಿಸಿಕೊಂಡರು. ಕತೆಯ

ಸನ್ನಿವೇಶವೇ ಇಂಥ ವಸ್ತುನಿಷ್ಠತೆಯನ್ನು ಒತ್ತಾಯಿಸುತ್ತದೆ. ಉದಾಹರಣೆಗೆ ನಿನ್ನ ಕೇಶಮುಂಡನೆ, ಕರೀಟಧಾರಣೆ ಇತ್ಯಾದಿ ಪ್ರಸಂಗಗಳು. ಕೃತಿಮ ಕೇಶಕವಚವನ್ನು ನೀನು ವರ್ತಕ ಕೆಪ್ಪುವಿನಿಂದ ಕೊಂಡುಕೊಳ್ಳುತ್ತೀಯ. ಹಾಗು ಆಕೃತಿಮ ಕೂದಲು ಯಾವಳೋ ಅಸ್ಸೀರಿಯಾದ ಸುಂದರಿಗೆ ಸೇರಿದ್ದು ಎಂದು ಕೆಪ್ಪು ಹೇಳುತ್ತಾನೆ. ಇದು ವಿದೇಶಿಯವೇ ಆಗಬೇಕು. ಇಲ್ಲದಿದ್ದರೆ ನಿನಗೆ ಅವಮಾನವಾದ ಹಾಗಾಗುತ್ತದೆ. ನಿನ್ನದೇ ಪ್ರಜೆಯ ಕೂದಲನ್ನು ನೀನು ಧರಿಸುವದೆಂದರೇನು! ಇನ್ನೂ ಕೈ ಬಳಿಕೆಯ ಸಾಧನಗಳ ವಿಷಯದಲ್ಲಿ ಲೇಖಕರು ತೋರಬೇಕಾದ ಎಚ್ಚರಿಕೆ; ನಿನ್ನ ಕಾಲದಲ್ಲಿ ಇನ್ನೂ ಕಬ್ಬಿಣ ತಯಾರಾಗಿದ್ದಿಲ್ಲ; ಗಾಜಿನ ಕನ್ನಡಿಯು ಇರಲಿಲ್ಲ. ಆದ್ದರಿಂದಲೇ ಅರಸಿಯ ಉಪಯೋಗಕ್ಕೆ ಚಿನ್ನದ ಕತ್ತರಿ, ಕಂಚಿನ ರೂಪದರ್ಶಕ. ಈ ರೂಪದರ್ಶಕವನ್ನು ನೋಡುತ್ತಾ, ಈ ಜಗತ್ತಿನಲ್ಲಿ ಅತ್ಯಂತ ರೂಪವತಿ ಯಾರು ಎಂದು ನೀನು ಕೇಳಿರಬುದಲ್ಲವೇ? ಹೀಗೆ ನಿನ್ನ ಕಾಲದ ಐಗುಪ್ತವನ್ನು ಚಿತ್ರಲೆಳೆಸುವ ಯಾವನೆ ಲೇಖಕನಿಗೂ ಕೂಡ ವಸ್ತುನಿಷ್ಠತೆ ತುಂಬಾ ಮಹತ್ವದ್ದಾಗುತ್ತದೆ. ಕತೆಯ ನಾಯಕ ಮೆನೆಪ್‌ಟಾನ ವಧೆ ಕೂಡ ಲೇಖಕರನ್ನು ಭಾವೋದ್ವೋಗಕ್ಕೆ ಗುರಿಮಾಡುವದಿಲ್ಲ. ಮುಂದೆ ಅವರ ಶವಲೇಪನ, ಸಮಾಧಿ ಎಲ್ಲವೂ ಚಿತ್ರವತ್ತಾಗಿ ಮೂಡಿಬಂದಿರುವುದು ಇಂಥ ವಸ್ತುನಿಷ್ಠತೆಯಿಂದಾಗಿಯೆ. ಒಂದು ರೀತಿಯಲ್ಲಿ ಮೃತ್ಯುಂಜಯ ಪುರಾತನ ಐಗುಪ್ತದ ಸಂಶೋಧನೆಯೆಂದರೂ ಸರಿಯೆ."[೨]

ಅಧಿಕಾರಕ್ಕಾಗಿ ನಡೆಯುವ ಸಂಘರ್ಷಗಳು ಕಾಲತೀತವಾದುವು. ಅಧಿಕಾರವನ್ನು ಉಳಿಸಿಕೊಳ್ಳಲು ತಮ್ಮ ವಂಶಕ್ಕೆ ದಾಟಿಸಲು ನಡೆಯುವ ಸಂಗತಿಗಳು ಎಲ್ಲಾ ಕಾಲದಲ್ಲಿಯು ಒಂದೇ ರೀತಿಯಲ್ಲಿರುತ್ತವೆ. ಅವಧಿ ಬೇರೆಯಿರಬಹುದು ಸಮುದಾಯಗಳು ಬೇರೆ ಇರಬಹುದು ಜರುಗುವ ಸಂದರ್ಭಗಳು ಮಾತ್ರ ಒಂದೆ ನೆಲೆಯನ್ನು ಪಡೆದಿರುತ್ತವೆ. ನಿರಂಜನರು ಈ ಕಾದಂಬರಿಯಲ್ಲಿ ಅಧಿಕಾರಕ್ಕಾಗಿ ನಡೆಯುವ ಎಲ್ಲಾ ಹುನ್ನಾರಗಳನ್ನು ಉಳ್ಳವರ ದುರುಳುತನ ಅಮಾನವೀಯತೆಯನ್ನು ನೆಫರ್‌ಟೀಮ್ ಮಹಾರಾಣಿ, ಪೆರೊ, ಹೆಪಟ್ ಮೂಲಕ ಬಯಲು ಮಾಡುತ್ತಾರೆ. ಇವರ ಮನೋಭಾವದಂತಹ ದುರುಳರನ್ನು ಈಗಲೂ ಕಾಣಬಹುದು." ಸೌಂದರ್ಯವತಿಯಾದ ನಿನಗೆ ನನ್ನ ಸೌಂದರ್ಯದ ಅರಿವಿದೆ. ಸತಿಯಾಗಿ ನಿನಗೆ ಗಂಡನ ದೌರ್ಬಲ್ಯಗಳು ಗೊತ್ತು. ಅದೇ ರೀತಿ ರಾಣಿಯಾಗಿ ಅರಸು ಮನೆತನಕ್ಕೆ ಬಂದೊದುಗುವ ವಿಪತ್ತನ್ನು ನೀನು ಬಲ್ಲೆ. ಈಗುಪ್ತದ ಪೇರೋ ವಂಶವಳಿ ಯಾವ ತೊಂದರೆಯು ಇಲ್ಲದೇ ಅಧಿಕಾರದಲ್ಲಿ ಮುಂದುವರಿಯಬೇಕೆಂಬುದೆ ನಿನ್ನ ಆಸಕ್ತಿ. ವಿಷಯಲಂಪಟನಾದ ಪೇಪಿಯಿಂದ ರಾಜಕುಮಾರನಿಗೆ ಅಧಿಕಾರದ ಹಸ್ತಾಂತರವಾಗಬೇಕು. ಅಲ್ಲಿಯ ತನಕ ನಿನಗೆ ಸಮಾಧಾನವಿಲ್ಲ. ಇದರ ಮೊದಲ ಹೆಜ್ಜೆಯೇ ಶೆಡ್ ಉತ್ಸವ. ಮರು ಯೌವ್ವನ ಪಡೆಯಲು ಅರಸನು ಕೈಗೊಳ್ಳುವ ಧಾರ್ಮಿಕ ವಿಧಿಗೆ ಕೇವಲ ಸಾಂಕೇಂತಿಕ ಅರ್ಥವೊಂದೆ

ಇರುವುದೆಂಬುದು ನಿನಗೆ ಗೊತ್ತು. ಸೆಡ್ ಉತ್ಸವದಿಂದ ಪುನಶ್ಚೇತನವನ್ನು ಪಡೆಯಬೇಕಾಗಿದ್ದ ಪೆಪಿ ಬಳಲಿ ಬೆಂಡಾದುದನ್ನು ನೀನು ನೋಡಿದ್ದಿಯ. ಹಾಗೆಯೇ ಕೇಶಮುಂಡನದ ಒಳ ಉದ್ದೇಶ ಬಿಳಿಗೂದಲು ಕಾಣಿಸದೆ ಇರುವುದಕ್ಕಾಗಿ ಎಂದು ನಿನ್ನ ಸಂದೇಹ. ಅದೇನೇ ಇದ್ದರೂ, ಅಧಿಕಾರ ದರ್ಪದಿಂದ ಬೀಗಿದ ಪುರೋಹಿತಶಾಹಿಯನ್ನು ಅಡಿಗಿಸಲು ಸೆಡ್ ಉತ್ಸವವನ್ನು ಉಪಯೋಗಿಸಿಕೊಂಡುದು ನಿನ್ನ ಜಾಣ್ಮೆ ಮೆಚ್ಚತಕ್ಕದ್ದು. ಈಗುಪ್ತವನ್ನು ಆಳುತ್ತಿದ್ದದು ಪೇರೋ ಒಬ್ಬನೇ ಅಲ್ಲ. ಅರಸ, ಪುರೋಹಿತ ವರ್ಗ ಮತ್ತು ಭೂಮಾಲೀಕ ವರ್ಗಗಳ ಶಕ್ತಿತ್ರಯ. ಇವು ಒಂದನ್ನೊಂದು ಸಮತೋಲನದಲ್ಲಿರಿಸಿದರೇನೆ ಈ ಆಳ್ವಿಕೆ ಸುಗಮವಾಗುವುದು. ಪೇರೋ ಪೇಪಿಯ ಕಾಲದಲ್ಲಿ ಈ ಸಮತೋಲನ ತಪ್ಪುತ್ತಿರುವುದನ್ನು ನೀನು ಗಮನಿಸಿದೆ. ಮತ್ತೆ ಆ ಶಕ್ತಿತ್ರಯಗಳನ್ನು ಒಂದು ಗೂಡಿಸುವಲ್ಲಿ ನಿನ್ನ ಕೈವಾಡವೇನು ಸಣ್ಣದಲ್ಲ. ನಿನ್ನನ್ನು ನೋಡಿದೊಡನೆಯೆ ಮಹಾ ಅರ್ಚಕನ ಬಿಗುಮಾನ ಸಡಿಲಾಗುತ್ತದೆ. ಹೇಪಾಟ್‌ನ ಈ ದೌರ್ಬಲ್ಯವನ್ನು ನೀನು ಬಹಳ ಚೆನ್ನಾಗಿಯೆ ಉಪಯೋಗಿಸಿಕೊಳ್ಳುತ್ತಿಯೆ. ನಿನ್ನ ರಾಜಕಾರಣದ ಮುಂದೆ ಎಲ್ಲಾರು ಸಪ್ಪೆಯಾಗಿಬಿಡುತ್ತಾರೆ ಎಂಬುವುದು ಉಳಿದವರ ಟೀಕೆಯಲ್ಲ. ನಿನ್ನ ಮುತ್ಸದ್ದಿತನದ ಹೆಚ್ಚಳ. ರಾಣಿ ನೆಫರ್ ಟೀಮ್ ನಮ್ಮ ನಡುವೆ ಎಂದಿಗೂ ದಟಲಾರದ ಕಾಲ ಹಲವು ಸಾಹಸ್ರ ವರ್ಷಗಳಷ್ಟು ಬಿದ್ದುಕೊಂಡಿದೆ. ಒಮ್ಮೆ, ಒಡೆದ ಮೊಟ್ಟೆಯನ್ನು ಹೇಗೆ ಮತ್ತೆ ಮದಲಿನ ಸ್ಥಿತಿಗೆ ತರಲಾರೆವೋ ಹಾಗೆಯೇ ಒಮ್ಮೆ ಸರಿದ ಕಾಲವನ್ನು ಹಿಂದಕ್ಕೆ ಕೊಂಡೊಯ್ಯುವದು ಅಸಾಧ್ಯದ ಮಾತು. ಆದರೂ ಕೆಲವೊಂದು ಸಂಗತಿಗಳು ಮತ್ತೆ ಮತ್ತೆ ಮರುಕಳಿಸುವದರಿಂದ ಚರಿತ್ರೆ ನಮಗೆ ನಮ್ಮನ್ನು ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ನೀರಾನೆ ಪ್ರಾಂತದಲ್ಲಿ ನಿನ್ನ ಕಾಲದಲ್ಲಿ ನಡೆದ ಬಂಡಾಯ ಈ ಹಿಂದೆ ಹೇಳಿದಂತೆ ಸಂಭವನೀಯ ಜಗತ್ತಿಗೆ ಸೇರಿದ್ದಾದರು, ಇದು ಸಂಭವವಾಗಿ ಪ್ರತಿಯೊಂದು ದೇಶದಲ್ಲಿ ಕಾಣಿಸಿಕೊಂಡುದೆ. ಇಂಥಹ ಬಂಡಾಯದ ಹುಟ್ಟು ಮತ್ತು ಬೆಳವಣಿಗೆ ಮತ್ತು ಅವಸಾನದಲ್ಲಿಯೂ ಕೂಡ ಒಂದು ರೀತಿಯ ಕ್ರಮಬದ್ಧತೆ ಇರುವುದನ್ನು ಕಾಣುತ್ತೇವೆ. ಆದ್ಧರಿಂದಲೇ ಮಾರ್ಕ್ಸಿಸ್ಟ್ ಚಿಂತಕರು ಇದನ್ನೊಂದು ಸಿದ್ಧಾಂತವಾಗಿ ಮಾಡಿಕೊಂಡಿದ್ದಾರೆ. ಬಂಡಾಯವು ಒಂದು ನಿರಂತರ ಅಗತ್ಯವೆಂದು ಮತ್ತೆ ಕೆಲವರು ಹೇಳಿದರೆ ಮಾರ್ಕ್ಸವಾದಿಗಳು ಹಾಗೆ ಭಾವಿಸುವದಿಲ್ಲ. ಒಂದು ಕಾಲಘಟ್ಟದಲ್ಲಿ ಪೂರ್ಣ ಸಮಾನತೆಯ ಆದರ್ಶರಾಜ್ಯ ಸಾಧ್ಯವೆಂಬ ಅವರ ಮತ. ನಿರಂಜನರ ನಿಲುವು ಕೂಡ ಇದೇ ಎಂಬುದು ಅವರ ಚಿರಸ್ಮರಣೆ ಮತ್ತು ಮೃತ್ಯುಂಜಯಗಳೆರಡರಲ್ಲಿಯೂ ಸ್ಪಷ್ಟವಾಗುತ್ತದೆ."[13]

ನ್ಯಾಯಕ್ಕಾಗಿ ಹೋರಾಡಿದವರನ್ನು ಪ್ರಭುತ್ವ ಶಕ್ತಿಗಳು ತಮ್ಮ ಬಲದ ಮೂಲಕ ಬಲಿಯಾಗಿಸುತ್ತಾರೆ. ಅದು ಎಲ್ಲಾ ಕಾಲದಲ್ಲಿಯು ಇರುತ್ತದೆ. ಅದನ್ನು ನಿರಂಜನರು ತಮ್ಮ ಬರಹಗಳ ಮೂಲಕ

ಕಾಣಿಸುತ್ತಲೇ ಬಂದಿದ್ದಾರೆ. ತಮ್ಮ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗೆ ಹೋರಾಟ ಮಾಡುವ ಸಮುದಾಯಗಳನ್ನು ಅಮಾನುಷವಾಗಿ ಧಮನ ಮಾಡುವ ಆಡಳಿತಶಾಹಿಯನ್ನು ಚರಿತ್ರೆಯುದ್ದಕ್ಕು ಕಾಣುತ್ತೇವೆ. ಈ ಸಂಗತಿಗಳು ಚರಿತ್ರೆಯಲ್ಲಿ ಎಲ್ಲಿಯೂ ದಾಖಲಾಗುವದಿಲ್ಲ. ಇಂತಹ ಕಥನಗಳಲ್ಲಿ ಇವು ಅಭಿವ್ಯಕ್ತಿಯಾಗುತ್ತವೆ. ನಿರಂಜನರು ಈ ಕಡೆಗೆ ಹೆಚ್ಚಿನ ಒಲವನ್ನು ತೋರಿಸಿ ಧಮನಿತರ ಚರಿತ್ರೆಯನ್ನು ದಾಖಲುಮಾಡುವ ಪ್ರಯತ್ನ ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಬುಡಕಟ್ಟು ನಾಯಕ  ಮೆನೆಪ್ಟಾನನ್ನು ಅತ್ಯಂತ ಕ್ರೂರವಾಗಿ ಹತ್ಯೆ ಮಾಡಿ ಅವನ ಇಡೀ ನೀರಾನೆಯ ಸಮುದಾಯವನ್ನೇ ನಾಶ ಮಡಿ ಜನರಲ್ಲಿ ಭಯ ಹುಟ್ಟಿಸುತ್ತಾರೆ. ಅಂದರೆ ಪ್ರಭುತ್ವದ ವಿರುದ್ಧ ಹೋರಾಡುವ ನಾಯಕರನ್ನು ತಮ್ಮ ಬಲದ ಮೂಲಕ ನಾಶ ಮಾಡುವುದು ಬಹಳ ಸಹಜ ಎಂಬಂತೆ ನೋಡುತ್ತಾ ಬಂದಿದ್ದೇವೆ. ಈ ಅಂಶವನ್ನು ಮನಗಾಣಿಸುವುದು ನಿರಂಜನರಿಗೆ ಮುಖ್ಯವಾಗಿದೆ.“ ಪುರಾತನ ಐಗುಪ್ತದ  ಅಂದಿನ ರಾಜಕಾರಣ, ಸಂಘರ್ಷ, ಸಮೂಹ ಹತ್ಯೆ ಇಂದಿನ ತನಕಮರುಕಳಿಸುತ್ತಲೇ ಬಂದಿದೆ. ಈ ಮರುಕಳಿಕೆಯಲ್ಲಿ ಮೆನೆಪ್ಟಾ ನಂತಹ ಅದೆಷ್ಟೋ ಮುಗ್ಧರು ಅಸುನೀಗುತ್ತಲೂ ಬಂದಿದ್ದಾರೆ. ಮಹಾ ಅರ್ಚಕ ಹೆಪೆಡ್ ಸೆಡ್ ಉತ್ಸವದಲ್ಲಿ ಭಾಗವಹಿಸಲು ಮೆನಪ್ಟಾನ ಬಲಿಯನ್ನು ಬೇಡುತ್ತಾನೆ. ಒಂದು ರೀತಿಯಲ್ಲಿ ಈ ಬಲಿ ನಿನ್ನದೆ (ನೆಫರ್‌ಟೀಮ್) ಸೂಚನೆ. ಮೆನೆಪ್ ಟಾನನ್ನು ಮಾತ್ರ ನೀನು ವೈಯಕ್ತಿಕವಾಗಿ  ಎಂದು ದ್ವೇಷಿಸಲಿಲ್ಲ. ನಿಜವಾದ ರಾಜಕಾರಣದಲ್ಲಿ ಪ್ರೀತಿ ದ್ವೇಷಗಳಿಗೆ ಸ್ಥಾನವಿಲ್ಲವಲ್ಲವೇ? ಅಲ್ಲದಿದ್ದರೆ ಮೆನೆಪ್ಟಾನ ಬಲಿಗೆ ನೀನು ಬಹುಶಃ ಒಪ್ಪುತ್ತಿರಲಿಲ್ಲವೆಂದೇ ಹೇಳಬೇಕು. ಮೆನೆಪ್ಟಾನ ಬಗ್ಗೆ ನಿನಗೆ ಒಳಗಿಂದೊಳಗೆ  ಮೆಚ್ಚಿಗೆ ಇತ್ತು. ಪೇಪಿಯ ಸ್ಥಾನದಲ್ಲಿ ಮೆನೆಪ್ ಟಾನನ್ನು ಇರಿಸಿ ನೋಡಿರಬಹುದು. ಹಾಗೆ ನೋಡಿದಾಗ ಇಬ್ಬರ ನಡುವಿನ ಅಗಾಧವಾದ ಅಂತರ ನಿನಗೆ ಗೋಚರಿಸಲೇಬೇಕು. ಆದರೆ ಮೆನೆಪ್ಟಾ ಎಂದಿಗೂ ಪೇರೋ ಆಗಲಾರನೆಂಬುದು ನಿನಗೆ ಗೊತ್ತು. ಹೆಚ್ಚೆಂದರೆ ಆತ ಏರಬಹುದಾದ ಸ್ಥಾನ ಪ್ರಾಂತಪಾಲಕನದು. ಇದೂ ನಿರಾನೆ ಪ್ರಾಂತದ ಜನರು ತಾವಾಗಿಯೇ ಕೊಟ್ಟ ಸ್ಥಾನವೇ ಹೊರತು ಮೇಲಿನಿಂದ ದಯಪಾಲಿಸಿದ್ದಲ್ಲ. ಮೆಂಫಿಸ್‌ಗೆ ಬರಲು ಅವನಿಗೆ ಪ್ರಾಂತಪಾಲಕನೆಂಬ ಹೆಸರಿನಲ್ಲಿ. ಎಂದರೆ ಮೆನೆಪ್ಟಾ ನೀರಾನೆ ಪ್ರಾಂತದ ನಾಯಕನಾಗಿ ಮುಂದುವರಿಯುವದಕ್ಕೆ ಬಹುಶಃ ಅರಸೊತ್ತಿಗೆಯ ಆಕ್ಷೇಪವೇನು ಇರಲಿಲ್ಲ. ಆದರೆ ಇಡಿಯ ಅರಸೊತ್ತಿಗೆಯೇ ಭೂಮಾಲೀಕ ಮತ್ತು ಪುರೋಹಿತ ಶಕ್ತಿಗಳ ನಡುವೆ ಸಿಕ್ಕಿ ದುರ್ಬಲವಾಗಿತ್ತಲ್ಲ! ಅರಸೊತ್ತಿಗೆ ತನ್ನ ಶಕ್ತಿಯನ್ನು ಮರಳಿ ಗಳಿಸುವದಕ್ಕೆ ಮೆನೆಪ್ಟಾನ ಬಲಿ ಸೆಡ್ ಉತ್ಸವಕ್ಕಿಂತ ಹೆಚ್ಚು ಅಗತ್ಯವಾಗಿತ್ತು.”[14]

ಐಜಿಪ್ತ ನಾಡನ್ನು ಆಳುವ ದೊರೆ ಪೆರೋ ವಿಲಾಸದ ಜೀವನವನ್ನು ನಡೆಸುವವನು. ಜನರ ರಕ್ತ ಹೀರಿ ವೈಭೋಗ ಜೀವನ ಮಾಡುವವನು. ಜನರು ಕೂಡ ಅದನ್ನು ಒಪ್ಪಿಕೊಂಡು ಬಂದವರು. ಯಾರು ಪ್ರಶ್ನೆ ಮಾಡುವಂತ ಸಾಮರ್ಥ್ಯ ಉಳ್ಳವರಲ್ಲ. ಅವರನ್ನು ಒಪ್ಪಿಕೊಂಡು ಜೀವಿಸುವುದೇ ತಮ್ಮ ಬದುಕೆಂದು ಭಾವಿಸಿದವರು. ವೈಭೋಗದಿಂದ ಬದುಕುವುದೇ ರಾಜತ್ವ ಎಂದು ನಂಬಿದವರು. ಪರೋ ರಾಜನ ವರ್ಣನೆ ಅವನ ವಿಲಾಸಿ ಜೀವನಕ್ಕೆ ಸಾಕ್ಷಿಯಗಿದೆ.'' ಜನಸಮುದಯವೆಲ್ಲ ತನ್ನ ಪಾದಗಳಿಗೆ ಮಣಿಯುವಂತೆ ಮಾಡುವ ಭವ್ಯ ರೂಪ ಪೆರೋನದು. ಆತ ಮೆಟ್ಟಿದುದು ಬಂಗಾರದ ಪಾದರಕ್ಷೆಗಳನ್ನು. ಭುಜಗಳ ಮೇಲೆ ಇಳಿಬಿಟ್ಟಿತ್ತು ಕಸೂತಿ ಅಂಚಿನ ಸಮವಸ್ತ್ರ. ಅದರ ಮೇಲ್ಗಡೆ, ಇಗುಪ್ತ ದೇಶದ ಉತ್ತರ ದಕ್ಷಿಣ ಭಾಗಗಳ ಒಡೆತನವನ್ನು ಸಾರುವ ಎತ್ತರದ ಜೋಡಿ ಕಿರೀಟ. ಮೇಲಣದ ಐಗುಪ್ತದ ಬಿಳಿ ಕಿರೀಟ; ಅದರಲ್ಲಿ ರಾಜಲಾಂಚನ ಸರ್ಪ. ಆ ಕಿರೀಟವನ್ನು ಆವರಿಸಿ ಕೆಂಪು ಕಿರೀಟ. ಕೆಳಗಣ ಐಗುಪ್ತದ್ದು. ಅದರಲ್ಲಿ ಗಿಡುಗ ಚಿಹ್ನೆ. ಮೂಲದಲ್ಲಿ ಬಿಳುಪಾಗಿದ್ದರೂ ಬಿಸಿಲಿನ ಝಳಕ್ಕೆ ಗೋದಿಗೆಂಪಾಗಿ ಮಾರ್ಪಟ್ಟಿದ್ದ ಮೈ ಬಣ್ಣ– ಪ್ರಜೆಗಳ ಕರಿಬಣ್ಣಕ್ಕಿಂತ ಭಿನ್ನ. ನಡುವಯಸ್ಸು ದಾಟಿದ್ದ ನುಣುಪು ಮುಖ. ಕೆನ್ನೆ ತುಟಿಗಳಿಗೆ ಹಚ್ಚಿದ್ದ ಕೆಂಪು. ತುಸು ಬಾಗಿದ ನೀಳ ಮೂಗು. ಕಾಠಿಣ್ಯ ಬೆರೆತ ಗಾಂಭೀರ್ಯ. ನಿರ್ಭಯವಾದ ತಿವಿಯುವ ನೋಟ. ಕತ್ತಿನಿಂದ ತುಸು ಕೆಳಗಿನವರೆಗೂ ಹಾರಗಳ ಎದೆಗವಚ. ಬಲ ಎಡ ಕೈಗಳು ವಕ್ಷಸ್ಥಲಕ್ಕೆ ಅಡ್ಡಲಾಗಿ ಹಿಡಿದಿದ್ದ ಲಾಂಛನಗಳು ಕಾಳು ಒಡೆಯುವ ಸಾಧನ  ಮತ್ತು ಕುರುಬನ ಕೊಂಡಿಕೋಲು. ಸೊಂಟ ಪಟ್ಟಿಯಿಂದ ಮೊಣಕಾಲೀನವರೆಗೂ ಕಸೂತಿ ಹಾಕಿದ ಅಂಗವಸ್ತ್ರ....... ಪಲ್ಲಕ್ಕಿಯ ಹಿಂದೆ ನೂರುಜನ ಕಾವಲು ಭಟರು–ಭಿಲ್ಲಾಳುಗಳು. ಬಲ ಮಗ್ಗುಲ್ಲಲಿ ಅವರ ಮುಖ್ಯಸ್ಥ. ಅವರ ಹಿಂದೆ ಹೇರು ಹೊತ್ತ ಗುಲಾಮರು. ಗುಲಾಮರ ಹಿಂದೆ ಶಿಸ್ತಿಲ್ಲಿದೆ ಗುಂಪು ಕಟ್ಟಿಕೊಂಡು ವೇಗವಾಗಿ ನಡೆಯಲೆತ್ನಿಸುತ್ತಿದ್ದ ಜನರು.**"**[15]

ಪೆರೋನಂತಹ ರಾಜಪ್ರಭುತ್ವ ಒಂದೆಡೆಯಾದರೆ ಹೇಪಟ್ ನಂತಹ ಪುರೋಹಿತರು ಇನ್ನೊಂದೆಡೆ ಜನರ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದರು. ಅದರಲ್ಲಿ ಜನ ಅತಂತ್ರರಾಗುತ್ತಿದ್ದರು. ಒಬ್ಬರಿಗೆ ಸೈನಿಕರ ಬಲವಿದ್ದರೆ, ಇನ್ನೊಬ್ಬರಿಗೆ ದೇವರ ಬಲ. ದೇವರನ್ನು ಮುಂದಿಟ್ಟುಕೊಂಡು ರಾಜರನ್ನೇ ಬೆದರಿಸುವ ಸಂಚುಗಳನ್ನು ಹೇಪಟ್‌ನಂತವರು ಮಾಡುತ್ತಿದ್ದರು. ಹೀಗಾಗಿ ರಾಜ ಪುರೋಹಿತಶಾಹಿಗೆ ಹೆದರಿಕೊಂಡು ಆಡಳಿತ ಮಾಡುತ್ತಿದ್ದರು. ಆದ್ದರಿಂದ ಸಮಾಜದಲ್ಲಿ ರಾಜರಿಗೆ ಕೊಟ್ಟಷ್ಟು ಗೌರವವನ್ನು ಪುರೋಹಿತರಿಗೂ ಕೊಡುತ್ತಿದ್ದರು. ಅವರು ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.'' ಬೋಳು ತಲೆಯ ಯುವಕ ದೇವಸೇವಕರು ಹೇಪಾಟ್ ಕೂಳಿತಿದ್ದ ಪಲ್ಲಕ್ಕಿಯನ್ನು ಹೊತ್ತಿದ್ದರು. ಅವರ ಹಿಂದೆ ಸಾಮಾನು ಸರಂಜಾಮುಗಳ ಹೊರೆ ಭಾರದಿಂದ ಭಾಗಿದ್ದ

ಗುಲಾಮರಿದ್ದರು. ಜನಸ್ತೋಮವನ್ನು ಅನುಸರಿಸಿ ಹೇಪಾಟ್ ಗೂ ಮೆನೆಪ್‌ಟಾ ನಮಿಸಿದ. ತಕ್ಷಣವೇ ತಲೆ ಎತ್ತಿ ಕುತೂಹಲದಿಂದ ಮಹಾ ಅರ್ಚಕನನ್ನು ಈಕ್ಷಿಸಿದ. ನೂರುವರ್ಷಗಳಿಂದ ಹೆಚ್ಚುತ್ತಾ ಬಂದಿದ್ದ ದೇವಸೇವಕರ ಪ್ರಾಬಲ್ಯಕ್ಕೆ ಉತ್ತರಾಧಿಕಾರಿಯಾದವನು ಹೇಪಟ್ ಎಂದು ಮೆನೆಪ್‌ಟಾ ಕೇಳಿದ್ದ. ದೇಶದಲ್ಲಿನ ಎಲ್ಲಾ ದೇವಮಂದಿರಗಳ ಒಡೆತನವು ಅವನದು. ಮೆಂಫಿಸ್‌ನ ದೇಗುಲಕ್ಕೂ ಅಧೀನ ಮಂದಿರಗಳಿಗೂ ತೆರಿಗೆ ವಿನಾಯ್ತಿಯ ಹೇರಳ ಆಸ್ತಿ ಇತ್ತು. ಸಹಸ್ರ ಸಹಸ್ರ ಗುಲಾಮ ಚಾಕರರಿದ್ದರು. ಅಪಾರ ಬೆಲೆಬಾಳುವ ಕನಕ ಭಂಡಾರವಿತ್ತು. ಆಳುವ ಪ್ರಭುಗಿಂತಲೂ ಅರ್ಚಕನೇ ಹೆಚ್ಚು ಶ್ರೀಮಂತ ಎಂಬ ಪಿಸುಮಾತು ಮೆನೆಪ್‌ಟಾ ನ ಕಿವಿಗೆ ಬಿದ್ದಿತ್ತು. ಮೆಂಫಿಸ್‌ನಿಂದ ಬದಿದ್ದ ದೊಡ್ಡ ದೋಣಿಯೊಂದರ ಹಿರಿ ಅಂಬಿಗ 'ಮಹಾ ಅರ್ಚಕನ ಅನುಮತಿ ಪಡೆದೆ ಅರಮನೆಗಳಲ್ಲಿ ಕಾರ್ಯಗಳು ನಡಿತವೆ.' ಎಂದು ಸುದ್ದಿ ಹಬ್ಬಿಸಿದ್ದ."[೧೬]

ಜನರ ನಂಬಿಕೆಗಳನ್ನು ಬಳಿಸಿಕೊಂಡು ಅವರನ್ನು ಮೂಢರನ್ನಾಗಿ ಮಾಡಲಾಗುತ್ತದೆ. ಪುರಾತನ ಕಾಲದಿಂದಲೂ ನಡೆಕುಕೊಂಡು ಬಂದಿದ್ದೆಂದು ಹೇಳಿ ಅದರಂತೆ ನಡಕೊಳ್ಳುವಂತೆ ಜನರನ್ನು ಪ್ರೇರೇಪಿಸಲಾಗುತ್ತದೆ. ಏನು ಅರಿಯದ ಜನರು ಆ ನಂಬಿಕೆಗಳನ್ನು ಚಾಚು ತಪ್ಪದೆ ಪಲಿಸಿಕೊಂಡು ಬರುತ್ತಾರೆ. ನಂಬಿಕೆಗಳು ಆಡಳಿತ ವರ್ಗವನ್ನು ಪ್ರಬಲಗೊಳಿಸುವದ್ದಾಗಿರುತ್ತದೆಯೇ ಹೊರತು ಜನರಿಗೆ ಅರಿವನ್ನು ನೀಡುವ ಉದ್ದೇಶವನ್ನು ಹೊಂದಿರುವದಿಲ್ಲ. ಪಿರಮಿಡ್‌ಗಳ ರಚನೆಗಳು ಈ ಹಿನ್ನಲೆಯಲ್ಲಿ ರಚನೆಯಾಗಿರುವಂತವು. ಅವುಗಳಿಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ."ಗೋರಿ ಕಟ್ಟೋ ಹಕ್ಕು ಮೊದಲು ಪೆರೋಗೆ ಮಾತ್ರ ಇತ್ತು. ಅವರಿಗೆ ಸಾವಿಲ್ಲ. ಯಾಕೆ ಅಂದರೆ ಓಸೈರಿಸಿನ ಕೃಪೆಯಿಂದ ಪೆರೋಗೆ ಪುನರುತ್ಥಾನ ಸಾಧ್ಯ. ಮೂರು ಸಾವಿರ ವರ್ಷ ಅವರು ಬಾಳೋದು ಖಚಿತ......ಆಮೇಲೆ ಅಮಾತ್ಯರಿಗೂ ಗೋರಿ ನಿರ್ಮಾಣಕ್ಕೆ ಅನುಮತಿ ಸಿಕ್ತು. ಮುಂದೆ ಭೂಮಾಲಿಕ ಪ್ರಭುಗಳು ಗೋರಿ ಕಟ್ಟಬಹುದಂತಾಯಿತು. ನೀವು ಭೂಮಲೀಕರಲ್ಲವಲ್ಲ."[೧೭] ಸಾಮನ್ಯ ಜನರು ಮೇಲ್ ಸ್ತರದ ಯಾವುದೆ ಆಯ್ಕೆಯನ್ನು ಮಾಡಿಕೊಳ್ಳುವ ಹಾಗಿಲ್ಲ. ಕೇವಲ ದುಡಿಲಿಕ್ಕೆ ಮಾತ್ರ ಇರುವವರು ಎಂಬ ಅಭಿಪ್ರಾಯ ಇತ್ತು.

ಐಗುಪ್ತ ಸಮುದಾಯದ ನಂಬಿಕೆಯ ದೇವತೆ ಓಸೈರಿಸ್. ಆ ದೇವತೆಗೆ ನಡೆಯುವ ವಿಧಿವವಿಧಾನಗಳು ಅರಸರ ಸೂಚನೆಯಂತೆ ನಡೆಯುತ್ತವೆ. ಅಲ್ಲಿ ಸಾಮನ್ಯರಿಗೆ ಪ್ರವೇಶವಿಲ್ಲ. ಆ ದೇವತೆಗಳ ಸಂತುಷ್ಟತೆಗಾಗಿ ಯಥೇಚ್ಯ ಹಣ ಖರ್ಚು ಮಾಡುತ್ತಾರೆ. ಒಂದು ರೀತಿಯಲ್ಲಿ ಅದೆಲ್ಲ ರಾಜನಿಗೆ ಸಲ್ಲಿಸುವ ಗೌರವವೆಂತಲು ಭಾವಿಸಲಾಗುತ್ತದೆ. "ಹಲವು ಸಹಸ್ರ ಜನ ಸಾಗಿದ ಮೇಲೆ, ಹಾಸುಗಲ್ಲಿನ ದಾರಿಯಲ್ಲಿ, ಬಗೆ ಬಗೆ ಭಕ್ಷ್ಯ ಭೋಜ್ಯ ತುಂಬಿದ್ದ ಜಾಡಿಗಳನ್ನು ಸೇವಕರು ಹೊತ್ತು ತಂದರು. ಇದು ಓಸೈರಿಸನಿಗೆ. ಆ ಲೋಕದ ಬುತ್ತಿ (ಒಂದು ವರ್ಷಕ್ಕಾಗುವಸ್ತು). ಅನಂತರ ಮರದ

ಪೆಟಾರಿಗಳನ್ನು ಹೊತ್ತ ಸೇವಕರು. ಆ ಪೆಟಾರಿಗಳಲ್ಲಿ ಓಸೈರಿಸನ ಆಭರಣಗಳು, ಉಡುಪುಗಳು. ಅವರ ಹಿಂದೆ ಅಧಿಕಾರ ದಂಡ ಹಿಡಿದ ಮಹಾ ಅರ್ಚಕ. ಆತನ ಹಿಂದೆ, ಇಬ್ಬರು ಕಿರಿಯ ದೇವ ಸೇವಕರು ಎಳೆಯುತ್ತಿದ್ದ ಜಾರು ಬಂಡಿ. ಅದರಲ್ಲಿ ಓಸೈರಿಸನ ಮೆದುಳು ಶ್ವಾಸಕೋಶ, ಕರುಳು ಇರಿಸಿದ್ದ, ಮೇಲ್ಕಟ್ಟು ಕಟ್ಟಿದ, ಜಾಡಿಗಳು. ಆ ಜಾರುಬಂಡಿಯ ಹಿಂದೆ ಇನ್ನೊಂದು ನೀಳವಾದ ಜಾರು ಬಂಡಿ. ಅದರಲ್ಲಿ ಓಸೈರಿಸನ ಶವಪೆಟ್ಟಿಗೆಯನ್ನು ಹೊತ್ತ ಮಂಚ. ಅದಕ್ಕೊಂದು ಮೇಲ್ಛಪ್ಪರ. ತಲೆಗೆ ಸಮೀಪದಲ್ಲಿ ಮಂಚನ ಮಗ್ಗುಲಲ್ಲಿ ಸಾಗಿದ್ದಳು ಐಸಿಸ್ ದುಖಿಃನಿ. ಆಕೆಗೆ ತಗಲಿಕೊಂಡು ಶೋಕ ಸ್ತ್ರೀಯರು. ಓಸೈರಿಸನ ಪಾದದ ಬಳಿ, ಜಾರು ಬಂಡಿಯ ಪಕ್ಕದಲ್ಲಿ ಕಿರಿಟಧಾರಿ ಸರ್ವಾಲಂಕೃತ ಪೆರೋ. ಆತನಿಗೆ ಅಂಟಿಕೊಂಡ ಅಂಗರಕ್ಷಕರು. ಅವರ ಹಿಂದೆ ಭೂಮಾಲೀಕರು. ಕಿರಿಯ ದೇವ ಸೇವಕರು ಜಾರು ಬಂಡಿಯನ್ನು ಎಳೆಯುತ್ತಿದ್ದರು. ಅದನ್ನು ಹಿಂಬಾಲಿಸಿ ಬಂತು ಬರಿಯ ರಾಜಪಲ್ಲಕ್ಕಿ. ಹೊತ್ತಿದ್ದವರು ದಾಸಜನ. ಬಳಿಕ ಅರಸನ ಯೋಧರು. ಅವರ ಹಿಂದೆ ಹೊತ್ತುಕೊಂಡು ಬರುತ್ತಿದ್ದ ಗುಲುಗಲು ಗದ್ದಲದ ಜನಸಮುದಾಯ."[೧೮]

ಜನರು ಅನಕ್ಷರಸ್ತರಾದ್ದರಿಂದ ಆಡಳಿತವನ್ನು ಪ್ರಶ್ನೆ ಮಾಡುವ ಅರಿವು ಇರೋದಿಲ್ಲ. ಅವರು ಯಾವುದನ್ನು ಹೇಳುತ್ತಾರೋ ಅದನ್ನು ಮಾತ್ರ ನಂಬಿಕೊಂಡು ಬದುಕುತ್ತಾರೆ. ಪ್ರಭುತ್ವದವರು ತಮ್ಮ ವಂಶವನ್ನು ದೇವಸಮಾನವಾದುದೆಂದು ಬಿಂಬಿಸುತ್ತಾ ಹೋಗುವುದು. ಜನಗಳು ಅದನ್ನು ಬಲವಾಗಿ ನಂಬುವ ವಾತವರಣವನ್ನು ನಿರ್ಮಿಸುವುದು. ಆರಾಧಿಸುವಂತೆ ಪ್ರೇರೇಪಿಸುವುದು. ಮತ್ತೆ ಶಾಸನ ಮಾಡುವುದು. ತಮ್ಮನ್ನು ವಿಜೃಂಭಿಸಿಕೊಳ್ಳುವ ಹೊಗಳುಭಟ್ಟರನ್ನು ನೇಮಕ ಮಾಡುವುದು ಮಾಡುತ್ತಾರೆ. ಇಡೀ ಜನಾಂಗವನ್ನೇ ಸಮೂಹ ಸನ್ನಿಗೆ ಒಳಪಡಿಸುವಂತೆ ಶ್ರೇಷ್ಟತೆಯ ವ್ಯಸನವನ್ನು ತುಂಬಿತ್ತಾರೆ. ಅದರಿಂದ ಮತ್ತರಾದ ಜನ ತಮ್ಮ ಆಡಳಿಗಾರರಿಗಾಗಿ ತಮ್ಮನ್ನು ಅರ್ಪಣೆ ಮಾಡಿಕೊಳ್ಳುತ್ತಾರೆ. ಅದನ್ನು ಮೀರುವವರು ದೇಶದ್ರೋಹದ ಅಪರಾಧಿಗಳಾಗಿ ಶಿಕ್ಷೆಗೆ ಒಳಗಾಗುತ್ತಾರೆ. ತಮ್ಮ ಹೆಸರು ಶಾಸ್ವತವಾಗಿ ಉಳಿಯಲು ಬೃಹದಾಕಾರದ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಜನರನ್ನು ಬೇಕಾಬಿಟ್ಟಿ ದುಡಿಸುತ್ತಿದ್ದರು."ಜಗತ್ತಿನಲ್ಲಿಯೇ ಶ್ರೇಷ್ಟತಮವೆನಿಸಿದ ಐಗುಪ್ತದ ಪ್ರಜೆಗಳು ನಾವು. ಸೃಷ್ಟಿಕರ್ತ ರಾನ ಮಕ್ಕಳು. ಮಹಾ ಪೆರೋನ ಪ್ರೀತಿ ಪಾತ್ರ ಕುರಿಗಳು. ದೇವಸಂತಾನ ಹುಟ್ಟಿಸಿದ ದೇವರೆ ಈ ಲೋಕದಲ್ಲಿ ನಿಂತು ಪ್ರಭುವಾಗಿ ನಮ್ಮನ್ನು ಆಳಿದ ಸಹಸ್ರಾರು ಸಂವತ್ಸರ. ಹಾಗೆಯೆ ದೇವಪುತ್ರ, ಓಸೈರಿಸ್, ಆತನ ಕುಮಾರ ಹೋರೆಸ್ ಇವರು ಸಹಸ್ರಾರು ವರ್ಷ ಆಳಿದರು. ಕಾಲವಾದ ಮೇಲೆ ಅಮರರಾದರು. ದೇವತೆಗಳ ಶ್ರೇಣಿಯಲ್ಲಿ ಸ್ಥಾನ ಪಡೆದರು. ಅದೇ ರೀತಿ ವಿದ್ಯಧಿದೇವತೆ ಥೊಥ್. ಈತ ಮಹಾ ಪ್ರಭುವಾಗಿ ಮೂರು ಸಾವಿರ ವರ್ಷ ರಾಯಭಾರ ಮಾಡಿದ; ಕಾನೂನು ಕಟ್ಟಳೆಗಳ ಇಪ್ಪತ್ತು ಸಾವಿರ ಗ್ರಂಥಗಳನ್ನು ರಚಿಸಿದ. ಮಿಕಗಳನ್ನು ಬೇಟೆಯಾಡುತ್ತಾ

ಅಲೆಮಾರಿಗಳಾಗಿದ್ದ ನಮ್ಮ ಪೂರ್ವಜರು ನೀಲ ನದಿಯ ದಂಡೆಗಳಲ್ಲಿ ನೆಲೆನಿಂತರು, ಕೃಷಿವಲರಾದರು. ಲಿಪಿಯ ಸೃಷ್ಟಿಯಿಂದ ಹೊಸ ಮನ್ವಂತರ ಆರಂಭವಾಯಿತು. ಆ ಮನ್ವಂತರದ ಮೊದಲ ಮಹಾಪ್ರಭು ಮೆನೆಸ್. ಕೇವಲ ಒಂದು ಸವಿರ ವರ್ಷ ಹಿಂದೆಯಷ್ಟೇ ಆಳಿದನು ಈತ. ಇವನ ಕಾಲದಿಂದ ಪ್ರಭುಗಳ ಆಯುಷ್ಯನ್ನು ಮೀರಲಿಲ್ಲ; ಆದರೆ, ಈ ಲೋಕದಲ್ಲಿ ಧರ್ಮನಿಷ್ಠರಾಗಿ ಜೀವಿಸಿ ಗೋರಿ ಕಂಡ ಮೇಲೆ ಮೂರುಸವಿರ ವರ್ಷ ಬದುಕುವ ಅರ್ಹತೆಯನ್ನು ಅವರು ಪಡೆದರು. ಆ ವರೆಗೆ ಮೇಲಣ ಐಗುಪ್ತ ಮತ್ತು ಕೆಳಗಲ ಐಗುಪ್ತ ಅಂತ ಎರಡು ಹೋಳಾಗಿತ್ತು ದೇಶ. ಮೆನೆಸ್ ದೇಶವನ್ನು ಒಗ್ಗೂಡಿಸಿದ, ಜೋಡಿ ಕಿರೀಟ ಧರಿಸಿದ. ಥೊಥ್ ರೂಪಿಸಿದ್ದ ಆಚರಣೆಗಳನ್ನು ಆಚರಣೆಗೆ ತಂದ. ಮಂಚದ ಮೇಲೆ ಮಲಗೋದಕ್ಕೆ, ಕುರ್ಚಿಮೇಲೆ ಕುಳಿತುಕೊಳ್ಳೋದಕ್ಕೆ ಹೇಳಿಕೊಟ್ಟ. ಕಟ್ಟೆಗಳನ್ನು ಕಟ್ಟಿ ನೀಲ ನದಿಯ ನೀರು ಹೊಲಗಳಿಗೆ ಬರೋ ಹಾಗೆ ಮಾಡಿದ. ಪೆರೋ ಜೊಸರನ ಕಾಲದಲ್ಲಿ ಎಂಬತ್ತಾರು ಆಳೆತ್ತರದ ಗೋರಿ ಸಿದ್ದವಾಯಿತು. ಅದನ್ನು ಕಟ್ಟಿದವನು ಮಹಾಶಿಲ್ಪಿ ಇಮ್ಹೊಟೆಪ್. ನಮ್ಮವರು ಮಣ್ಣಿನಿಂದ ಇಟ್ಟಿಗೆ ಮಾಡುವದನ್ನು ಕಲಿತರು. ಇಟ್ಟಿಗೆಯಿಂದ ಮಾತ್ರವಲ್ಲ, ಕಲ್ಲಿನಿಂದಲೂ ಕಟ್ಟಡ ನಿರ್ಮಿಸೋದಕ್ಕೆ ಶುರು ಮಾಡಿದರು. ಪೆರೋ ಖುಫು ರಕ್ಷಕ ದೇವತೆಯ ಮಹಾಶಿಲ್ಪ ಮಾಡಿಸಿದ. ಕಾಓರಾ, ಮೆಂಕೋರಾ ಕಲ್ಲಿನ ಮಹಾ ಪಿರಮಿಡ್ದುಗಳನ್ನು ಕಟ್ಟಿಸಿದರು. ಒಂದು ರಚನೆಗೆ ಇಪ್ಪತ್ತು ವರ್ಷ! ನೂರು ಸಹಸ್ರ ಜೀತದ ದುಡಿಮೆ!"[೧೯]

ವ್ಯಾಪಾರವು ಜನರನ್ನು ಒಗ್ಗೂಡಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಅದ್ದರಿಂದ ಯಾವುದೆ ಆಡಳಿತವು ವ್ಯಾಪಾರದ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಸುತ್ತದೆ. ಅನ್ಯರ ವ್ಯಾಪಾರ ಕೇಂದ್ರಗಳನ್ನು ವಶಪಡಿಸಿಕೊಳ್ಳುವ ಸಂಚುಗಳನ್ನು ರೂಪಿಸುತ್ತಿರುತ್ತದೆ. ಯಾವ ರಾಜ ವ್ಯಾಪಾರವನ್ನು ಬಲಿಷ್ಠಗೊಳಿಸುತ್ತಾನೊ ಆತ ಹೆಚ್ಚು ಜನಮನ್ನಣೆಯನ್ನು ಗಳಿಸಿತ್ತಾನೆ. ಜನರ ಮೆಚ್ಚಿಗೆಗೂ ಪಾತ್ರನಾಗುತ್ತಾನೆ. ಆದ್ದರಿಂದ ಎಲ್ಲಾ ಅರಸರು ವ್ಯಾಪಾರವನ್ನು ಬಲಗೊಳಿಸಲು ಪ್ರಯತ್ನಿಸುತ್ತಿದ್ದರು." ಖೇಮು ದೇವರ ಕೃಪೆಯಿಂದ, ನೀಲ ನದಿಯ ದಯೆಯಿಂದ ಹತ್ತು ಹಗಲು ಹತ್ತು ರಾತ್ರಿಗಳ ಪ್ರವಾಸದ ದೂರ ಒಂದು ಲೆಕ್ಕವೇ ಅಲ್ಲ. ನಮ್ಮ ನೌಕೆಗಳು ಈಗ ಮಹಾ ಹಸುರು ಸಮುದ್ರವನ್ನು ಹೊಕ್ಕು ಕೆಫ್ಟಿಯ ದ್ವೀಪದವರೆಗೆ ಹೋಗಿ ಬರುತ್ತವೆ. ಇತ್ತ ಕೆಟಾ ಜನರ ಜೊತೆ ನಮಗೆ ವಾಣಿಜ್ಯ ಸಂಬಂಧವಿದೆ. ದೂರ ದೇಶವಾದ ಪಂಟ್‌ಗೂ  ಐಗುಪ್ತದ ನೌಕೆಗಳು ಹೋಗಿ ನಮ್ಮ ಸಾಮಗ್ರಿಗಳಿಗೆ ವಿನಿಮಯವಾಗಿ ತಾಮ್ರ, ಕಂಚು, ಬಂಗಾರ, ಬೆಳ್ಳಿ , ಹಸ್ತಿದಂತ, ಅಪೂರ್ವ ಮರಗಳು, ಅಮೂಲ್ಯ ಹರಳುಗಳು, ಸಾಂಬಾರ ವಸ್ತುಗಳು, ಆಕರ್ಷಕ ಪ್ರಾಣಿಚರ್ಮ, ಉಷ್ಟ್ರಪಕ್ಷಿಯ ಪುಕ್ಕ ಇವೆಲ್ಲ ತರುತ್ತವೆ."[೨೦]

ಜನರಿಗೆ ತೆರಿಗೆ ವಿಧಿಸುವುದರ ಮೂಲಕ  ಆದಾಯವನ್ನು ಸಂಗ್ರಹಿಸಲಾಗುತಿತ್ತು. ಅದು ಅವರ ಪರಿಸ್ಥಿತಿಯನ್ನು ನೋಡಿ ತೆರಿಗೆಯನ್ನು ವಿಧಿಸುತ್ತಿರಲಿಲ್ಲ. ಒಟ್ಟು ನಿಗದಿಯಾದ  ತೆರಿಗೆಯನ್ನು ಕೊಡಬೇಕು ಅಷ್ಟೆ. ಕೊಡಲಾಗದವರನ್ನು ಉಗ್ರ ಶಿಕ್ಷೆಗೆ ಒಳಪಡಿಸಲಾಗುತಿತ್ತು. ಅದಕ್ಕೆ ಆಡಳಿತವನ್ನು ವಿವಿಧ ಬಗೆಯಲ್ಲಿ ಹಂಚಲಾಗಿತ್ತು. ಅಧಿಕಾರವು ವಿಕೇಂದ್ರಿಕರಣ ನೆಲೆಯಲ್ಲಿ ಇರಲಿಲ್ಲ. ತಮಗೆ ಬೇಕಾದವರನ್ನು ಆಡಳಿತಧಿಕಾರಿಯನ್ನಾಗಿ ನೇಮಕ ಮಾಡುತ್ತಿದ್ದರು. ಅವರು ಸಾಮನ್ಯರ ಕಷ್ಟ ಸುಖಗಳಿಗೆ ಸ್ಪಂದಿಸದೆ ಆಡಳಿತವನ್ನು ಜನರ ಸುಲಿಗೆಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದೆ ಅವರಿಗೆ ಮುಖ್ಯವಾಗಿತ್ತು. ಜನರ ಏಳಿಗೆಗಾಗಿ ತಮ್ಮನ್ನು ಅರ್ಪಿಸಿಕೊಳ್ಳುತ್ತಿರಲಿಲ್ಲ. ಈಗುಪ್ತದ ಆಡಳಿತವನ್ನು ಪ್ರಾಂತಗಳನ್ನಾಗಿ ವಿಂಗಡಿಸಲಾಗಿತ್ತು. ಒಟ್ಟು ನಲವತ್ತು ಪ್ರಾಂತಗಳಿದ್ದವು. ಪ್ರತಿಯೊಂದು ಪ್ರಾಂತಕ್ಕೆ ಒಬ್ಬ ಪ್ರಾಂತಪಾಲಕರನ್ನು ನೇಮಕ ಮಾಡುತ್ತಿದ್ದರು. ಆ ಪ್ರಾಂತಪಾಲಕರು ರಾಜರ ಅಣತಿಯಂತೆ ನಡೆಯುತ್ತಿದ್ದರು. ಈ ಪ್ರಾಂತಾದಿಕಾರಿಗಳ ಮೇಲೆ ತೆರಿಗೆಯನ್ನು ಸಂಗ್ರಹಿಸಲು ಕಂದಾಯದ ಅಧಿಕಾರಿಗಳು ಇಡಿ ದೇಶಕ್ಕೆ ಮೂರು ಜನ ಇರುತ್ತಿದ್ದರು. ಪ್ರಾಂತಧಿಕಾರಿಗಳಿಗಿಂತ ಅವರು ಮೇಲಿನವರಾಗಿದ್ದರು. ಇವರು ಹೇಳಿದಂತೆ ಪ್ರಾಂತಾಧಿಕಾರಿಗಳು ಕೇಳಬೇಕಿತ್ತು. ಸಂಪೂರ್ಣ ತೆರಿಗೆ ಸಂಗ್ರಹಿಸುವ ಅಧಿಕಾರ ಕಂದಾಯ ಅಧಿಕಾರಿಗಳಿಗೆ ಸೇರಿದ್ದಾಗಿತ್ತು. ವರ್ಷಕ್ಕೆ ಒಂದು ಸಾರಿ ತೆರಿಗೆಯನ್ನು ಸಂಗ್ರಹಿಸಲು ಬರುತ್ತಿದ್ದರು.“ಪೆರೋನ ಕೃಪೆಯಿಂದ ಪ್ರತಿ ವರ್ಷವೂ, ಅಯನ ಸಂಕ್ರಮಣ ಬಿಂದುವಿನಲ್ಲಿ ರಾ ದಕ್ಷಿಣಕ್ಕೆ ಹೊರಳುವ ದಿನ, ಮುಂಜಾನೆ ತುಸು ಮುನ್ನ, ಸೊಥಿಸ್ ನಕ್ಷತ್ರ ಉದಯಿಸುತ್ತದೆ. ನೀಲ ನದಿಯಲ್ಲಿ ಪ್ರವಾಹ ಬರುತಿದೆ–ಅಂತ ಅದು ಸಾರ್‍ತದೆ. ಆ ದಿನದಿಂದ ಈಗುಪ್ತದಲ್ಲಿ ಹೊಸ ವರ್ಷ ಆರಂಭ. ನೀವೆಲ್ಲ ತಿಳಿದಿರೋ ಹಾಗೆ ಇದು ನದಿಯ ಎರಡೂ ದಂಡೆಗಳನ್ನು ನೂರು ದಿನ ನೀರಲ್ಲಿ ಅದ್ದೋ ಭಾರೀ ಪ್ರವಾಹ. ಹೊಲಗಳಲ್ಲಿ ಫಲವತ್ತಾದ ಮಣ್ಣನ್ನು ಬಿಟ್ಟು ಪ್ರವಾಹ ಇಳಿತದೆ. ಪ್ರವಾಹ ಎಷ್ಟು ಎತ್ತರ ಇತ್ತು ಅನ್ನೋದರ ಆಧಾರದ  ಮೇಲೆ ಮುಂದಿನ ವರ್ಷದ ಫಸಲನ್ನು ರಾಜಬೊಕ್ಕಸಕ್ಕೆ ಮತ್ತು ದೇವ ಮಂದಿರಕ್ಕೆ ಸಲ್ಲಬೇಕಾದ ಕಂದಾಯವನ್ನು ಗೊತ್ತು ಮಾಡ್ತೇವೆ. ಯಾವಾಗಲೂ ಪ್ರವಾಹದ ಸೌಲಭ್ಯ ಇರೋ ಭೂಮಿ, ಒಮ್ಮೊಮ್ಮೆ ಮಾತ್ರ ಪ್ರವಾಹ ಸೌಲಭ್ಯ ಇರೋ ಭೂಮಿ, ಪ್ರವಾಹ ಸೌಲಭ್ಯ ಯಾವತ್ತು ಇರದ ಭೂಮಿ– ಮೂರು ರೀತಿ ವಿಂಗಡಿಸುತ್ತೇವೆ. ಕಂದಾಯ ನಿಗದಿ ಮಾಡೋದು ಈ ಆಧಾರದ ಮೇಲೆ. ಧರ್ಮಾತ್ಮ ಒಸೈರಿಸ್ ಹೆಮ್ಮೆ ಪಡಬಹುದಾದ ವ್ಯವಸ್ಥೆ ಇದು. ಚಳಿಗಾಲದಲ್ಲಿ ಆಯನ ಬಿಂದು ತಲುಪಿದ ಮೇಲೆ ರಾ ಉತ್ತರಕ್ಕೆ ಹೊರಳ್ತಾನೆ. ಹಗಲು ದೀರ್ಘವಾಗ್ತದೆ. ಕುಯಿಲು ಆದ ಮೇಲೆ ನಾವು ಬರ್‍ತೇವೆ.”[೨೧] ಎಂದು ಅಧಿಕಾರಿಗಳು ವರ್ಷದ ಮುಂಚೆನೆ ಕಂದಾಯ ವಸೂಲಿಗೆ ಬರುವ ಸೂಚನೆಯನ್ನು ನೀಡುತ್ತಿದ್ದರು.

ಕಂದಾಯವನ್ನು ವಸೂಲಿ ಮಾಡುವಾಗ ಕ್ರೂರವಾಗಿ ನಡಕೊಳ್ಳುತ್ತಿದ್ದರು. ಜನರ ಸಮಸ್ಯೆಗಳನ್ನು ಲೆಕ್ಕಿಸದೆ ಅಧಿಕಾರಿಗಳು ಮನಸೇಚ್ಚೆ ವಸೂಲಿ ಮಾಡುತ್ತಿದ್ದರು. ನಿರ್ದಯವಾಗಿ ಜನರ ಮೇಲೆ ಹಲ್ಲೆ ಮಾಡುತ್ತಿದ್ದರು. ಅವರು ಬೆಳೆ ನಾಶವಾಗಿದೆ ಎಂದು ಬೇಡಿಕೊಂಡರು ಲೆಕ್ಕಿಸದೆ ವಸೂಲಿಗೆ ಇಳಿಯುತ್ತಿದ್ದರು. ಮಳೆ ಬೆಳೆಯ ಪರಸ್ಥಿತಿಯನ್ನು ಅವಲೋಕನ ಮಾಡುತ್ತಿರಲಿಲ್ಲ. ತೆರಿಗೆಯನ್ನು ಕೊಡಬೇಕು ಅಷ್ಟೆ. ಜನರಿಗೆ ಮಾತಾಡುವ ಹಕ್ಕನ್ನು ಕೂಡ ಕೊಟ್ಟಿರಲಿಲ್ಲ. ಅಧಿಕಾರಿಗಳು ಹೇಳಿದಷ್ಟನ್ನು ತೆರಿಗೆ ಕೊಟ್ಟು ಜೀವನ ಸಾಗಿಸಬೇಕು. ಇಲ್ಲದಿದ್ದರೆ ಸಾವಿಗೆ ಶರಣಾಬೇಕು. ಅಷ್ಟು ಅಮಾನುಷವಾಗಿ ತೆರಿಯನ್ನು ವಸೂಲು ಮಾಡುತ್ತಿದ್ದರು.“ಕಂದಾಯ ವಸೂಲಿಯ ಆರು ಜನ ಅಲ್ಲಿಗೆ ಬಂದರು. ಮುಖ್ಯ ಪಟ್ಟಣದಲ್ಲಿ ತಮ್ಮ ಕೆಲಸ ಮುಗಿಸಿ ಹಳ್ಳಿಗಳ ಕಡೆಗೆ ಅವರು ವಸೂಲಿಗೆ ಹೊರಟಿದ್ದರು. ಅದಿಕಾರಿ ಇರಲಿಲ್ಲ ಭಟರು ಮಾತ್ರ.

ತನ್ನ ಗುಡಿಸಿಲಿಗೆ ಅವರು ಬಂದಾಗ ನೆಫಿಸಳ ಚಿಕ್ಕಪ್ಪ ದೈನ್ಯದಿಂದ ಪ್ರಾರ್ಥಿಸಿದ.

‘ಫೆರೋನ ಆಯುರಾರೋಗ್ಯ ಹೆಚ್ಚಲಿ! ಈ ವರ್ಷ ನನ್ನಲ್ಲೇನು ಇಲ್ಲ…’

ಒಬ್ಬ ಭಟ ಅಣುಕಿಸಿ

‘ನನ್ನಲ್ಲನು ಇಲ್ಲ! ಕಳ್ಳ ನನ್ಮಕ್ಳು. ಈ ಪಲ್ಲವಿ ನಿಮಗೆ ರೂಢಿಯಾಗಿದೆ.’

ಇನ್ನೊಬ್ಬ ಭಟ ನೀರಾನೆ ತೊಗಲಿನ ಚಾವಟಿಯಿಂದ ಚುರುಕು ಮುಟ್ಟುಸಿದ. ಚಿಮ್ಮುವ ರಕ್ತದ ವೃತ್ತ ಬೆನ್ನನ್ನು ಎದೆಯನ್ನು ಬಳಿಸಿತು. ಒಬ್ಬನ ಕೈಯಲ್ಲಿ ಹಗ್ಗವಿತ್ತು. ಉಳಿದವರ ಕೈಗಳಲ್ಲಿ ಸೋಗೆ ಕಿತ್ತ ತಾಳೆಯ ಕೊರಡುಗಳು.

‘ಆಣೆ ಮಾಡಿ ಹೇಳ್ತೇನೆ .. ಇನ್ನೊಂದು ವಾರಕ್ಕೆ ಸಾಲುವಷ್ಟು ಕಾಳು ನನ್ನಲ್ಲಿ ಇಲ್ಲ.’

‘ಕುಯ್ಲು ಮುಗಿದು ಒಂದು ತಿಂಗಳು ಆಗಿಲ್ಲ. ಎಲ್ಲಿ ಬಚ್ಚಿಟ್ಟೆ?

‘ಹೊಲದಲ್ಲಿಯೇ ಫಸಲಿಗೆ ಹುಳು ಹಿಡಿತು. ಅರ್ಧ ಕೆಟ್ಟು ಹೋಯಿತು. ಕಾಡು ಹಂದಿಗಳ ಪಾಲಾಯ್ತು ಒಂದಿಷ್ಟು. ಉಳಿದಿದ್ದರಲ್ಲಿ ಇಲಿಗಳೂ ಮಿಡತೆಗಳು ಸ್ವಲ್ಪ ಮುಕ್ಕಿದವು.’

‘ಹಕ್ಕಿಗಳು ಬರಲಿಲ್ವ?’

‘ಬಂದ್ವು ನಮ್ಮಪ್ಪ.. ಚೂರು ಪಾರು ಮನೆಗೆ ಬರೋದಕ್ಮುಂಚೆ ಕಳ್ಳರು ಕೈ ಹಾಕಿದ್ರು’

ಚಾವಟಿ ಮತ್ತೆ ಸುಂಯ್ ಗುಟ್ಟಿತು. ಗುಡಸಲಿನ ಮುಂದಿತ್ತು ನೀರು ಹರಿಯುತ್ತಿದ್ದ ಕಿರು ನಾಲೆ. ನೆಫಿಸಳ ಚಿಕ್ಕಪ್ಪನನ್ನು ದರದರನೆ ಎಳೆದು ಬೋರಲು ಕೆಡವಿದರು. ಮುಖವನ್ನು ನಾಲೆಯಲ್ಲಿ ಅದ್ದಿದರು.

ಇಬ್ಬರು ಗುಡಿಸಲು ಒಳಗಿದ್ದುದನ್ನೆಲ್ಲ ಜಾಲಾಡಿದರು. ಹೆದರಿ ಮೂಲೆ ಸೇರಿ ಅಳುತ್ತಾ ನಿಂತಿದ್ದ ನೆಫಿಸಳನ್ನೂ ಚಿಕ್ಕ ಮಕ್ಕಳನ್ನು ಗದುರಿಸಿದರು. ಅಂಗೈಯಿಂದ ಏಟು ಕೊಟ್ಟರು, ಮುಷ್ಟಿಗಳಿಂದ ಗುದ್ದಿದರು.

‘ಎಲ್ಲಿ ನಿಮ್ಮಮ್ಮ?’

‘ಸತ್ತೋದ್ಲು’ ಎಂದಳು ನೆಫಿಸ್

ಅಷ್ಟರಲ್ಲೇ ಓಡಿಬಂದಳು, ಭೂಮಾಲಿಕರ ಮನೆಗೆ ದುಡಿಯಲು ಹೋಗಿದ್ದ ಚಿಕ್ಕಮ್ಮ. ಆಕೆ ಧ್ವನಿ ತೆಗೆದು ಹತ್ತಳು.

‘ನಮ್ಮಮ್ಮ ಸತ್ತೋದ್ಲು  ಅಂತ ಸುಳ್ಳು ಹೇಳಿದೆಯಾ?’

ಆತ ಹುಡುಗಿ ತುರುಬಿಗೆ ಕೈ ಹಾಕಿ ಎಳೆದ

‘ಅದು ತಬ್ಬಲಿ ಮಗು. ನನ್ನ ಅಕ್ಕಂದು. ಬಿಟ್ಟಿಡಿ’ ಎನ್ನುತ್ತಾ ಚಿಕ್ಕಮ್ಮ ತನ್ನ ಗಂಡನ ಬಳಿಗೆ ಧಾವಿಸಿದಳು.

ಭಟರು ಅವಳ ರಟ್ಟೆ ಹಿಡಿದು ತಿರುವಿದರು.

‘ಎಲ್ಲಿಟ್ಟಿದ್ದಿಯಾ ಧಾನ್ಯ’?

‘ಇಲ್ಲಪೋ ಈ ವರ್ಷ ಇಲ್ಲಪೋ.. ‘

ಅವಳನ್ನೂ ಕೆಡವಿದರು. ಗಂಡನನ್ನು ಹೆಂಡತಿಯನ್ನು ಒಟ್ಟಿಗೆ ಹಗ್ಗದಿಂದ ಬಿಗಿದರು. ಕೊರಡಿನಿಂದ ಹೊಡೆದರು. ತುಳಿದರು.

ನಡು ಆಕಾಶದಲ್ಲಿತ್ತು ರಾನ ರಥ. ಚಿಕ್ಕಮ್ಮನ ಹಾಗೂ ಮಕ್ಕಳ ಆಕ್ರಂದನ ಆಕಾಶಕ್ಕೆ ಏರುತಿತ್ತು.

ಇದ್ದಕ್ಕಿದ್ದಂತೆ ಒಬ್ಬ ಭಟನೆಂದ

‘ಇವನು ಸತ್ತ’

ತೊಡೆಯನ್ನು ತುಳಿದು ನೂಕಿ ಅಂದ

‘ಜೀವ ಇಲ್ಲ’

‘ನಡೀ ಎಂದ ಇನ್ನೊಬ್ಬ.’

ಎಲ್ಲಿಯೂ ಕಾಣಿಸದಿದ್ದ ರೈತರನ್ನು ಹುಡಿಕಿಕೊಂಡು ಹೊರಟರು ಅವರು.” [೨೨]

ಇಂತಹ ಕರುಳಿರುವಂತ ಪ್ರಸಂಗಗಳು ಎಲ್ಲೂ ಚರಿತ್ರೆಯಲ್ಲಿ ದಾಖಲಾಗುವದಿಲ್ಲ. ಚರಿತ್ರೆಯಲ್ಲಿ ಕೇವಲ ತೆರೆಗೆಯನ್ನು ವಸೂಲು ಮಾಡಿದರು ಎಂಬ ಅಂಶಗಳು ಮಾತ್ರ ಇರುತ್ತವೆ. ಆದರೆ ತೆರಿಗೆಯನ್ನು ಹೇಗೆ ವಸೂಲು ಮಾಡಿದರು ಎಂಬ ಬಗ್ಗೆ ಯಾವ ವಿವರಗಳು ಇರುವದಿಲ್ಲ. ಆದ್ದರಿಂದ ಕಾದಂಬರಿಗಳು ಹೇಳುವ ಚರಿತ್ರೆಯ ಪರಿಕಲ್ಪನೆ ಬೇರೆ ರೀತಿಯಲ್ಲಿ ಇರುತ್ತದೆ. ನಿರಂಜನರು

ಶೋಷಣೆಯ ಚರಿತ್ರೆಯನ್ನು ಕಾದಂಬರಿ ಮಾಡುತ್ತಿದ್ದಾರೆ. ಅದು ಅವರ ಉದ್ದೇಶವಲ್ಲ. ಆದರೆ, ಆ ಕಾದಂಬರಿ ಅದನ್ನು ಧ್ವನಿಸುತ್ತದೆ.

ತೆರಿಗೆ ಕೊಡದ ಕಾರಣಕ್ಕೆ ಹಿಂಸೆ ಮಾಡುವುದು ಸಾಮನ್ಯ ಸಂಗತಿಯಾಗಿತ್ತು. ಯಾರು ಅದನ್ನು ಪ್ರಶ್ನೆ ಮಾಡುವ ಹಾಗಿಲ್ಲ. ಪ್ರಭುತ್ವ ಹೇಳುವದನ್ನು ಮಾಡಬೇಕು ಅಷ್ಟೆ. ಅದನ್ನು ಮೀರುವವರು ವಿಪರೀತ ಹಿಂಸೆಗೆ ಒಳಗಾಗಬೇಕಿತ್ತು. ಅವರ ಬವಣೆಗಳನ್ನು ಕೇಳುವವರು ಇದ್ದಿಲ್ಲ. ಇದ್ದರು ಅಂತವರಿಗೆ ಬಲ ಇರಲಿಲ್ಲ. ಜನರು ತಮ್ಮ ಕಷ್ಟಗಳನ್ನು ಹೇಳಿಕೊಂಡರು ಅವನ್ನು ಕೇಳಿ ಪರಿಹರಿಸುವವರು ಇರಲಿಲ್ಲ. ತೆರಿಗೆ ವಸೂಲಿಗೆ ಬರುವವರು ಮತ್ತಷ್ಟು ದರ್ಪ ತೋರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವವರು.“ದಾಖಲೆಯಾಗಿರೋ ಹಾಗೆ ಕಳೆದ ವರ್ಷ ‘ಒಳ್ಳೆಯ ನೀಲ’ ಆದರೇನಾಯಿತು? ಹಗ್ಗ ಎಳೆಯುವವರು ಎಳೆದರು. ಮೋಜಣಿದಾರರು ನೆಲ ಅಳೆದರು. ನಾಲೆಗಳ ದುರಸ್ತಿ ಮಾತ್ರ ಆಗಲಿಲ್ಲ. ಕೆರೆಗಳ ಹೂಳು ತೆಗೆದು ನೀರು ಸಂಗ್ರಹಿಸೋ ಕೆಲಸ ನಡೀಲಿಲ್ಲ. ಇದು ಬಡ ಪ್ರಜೆಗಳಿಂದ ಆಗುವಂತದ್ದೆ? ಆಳುವವರಲ್ಲವೆ ಮಾಡಬೇಕಾದ್ದು? ನಾವು ಷಾಡೂಫ್ ನಡೆಸೇವು. ನದಿಯಿಂದ ನೀರೆತ್ತಿ ಬಾವಿಗೆ ಸುರಿದೇವು. ಆದರೆ ಈ ನೀರು ಎಷ್ಟು ಹೊಲಗಳಿಗೆ ಸಾಕು? ಇಷ್ಟಕ್ಕೆ ಮುಗಿಲಿಲ್ಲ ನಮ್ಮ ಕಷ್ಟ. ಮುದಿ ಹೋರಿಗೆ ಬದಲು ಹೊಸ ಹೋರಿ ತರಬೇಕು ನೇಗಿಲಿಗೆ ಬೇರೆ ಮೊನೆ ಹಾಕಬೇಕು. ಇದಕ್ಕೆ ಖರ್ಚಾಗದಿಲ್ವ? ಧಾನ್ಯ ಬೇಡವಾ? ಇನ್ನು ಇಲಿ, ಹೆಗ್ಗಣ, ಕಾಡುಹಂದಿ, ಹುಳು ಹುಪ್ಪಟೆ, ಮಿಡಿತೆ, ಹಕ್ಕಿಗಳ ಕಾಟದ ವಿಷಯ ಎಷ್ಟು ಹೇಳಿದರು ಸ್ವಲ್ಪವೇ? ಕಳ್ಳರೂ ಬರ್ತ್ತಾರೆ. ರಾಜಕಾರಣಕ್ಕೆ ಹಿಂದೆ ಹತ್ತರಲ್ಲಿ ಒಂದಂಶ ಸಲ್ಲಿಸ್ತಿದ್ವಿ. ಈಗ ಕಂದಾಯ ಇಮ್ಮಡಿಯಾಗಿದೆ. ಹತ್ತರಲ್ಲಿ ಒಂದಂಶ ದೇವ ಮಂದಿರಕ್ಕೂ ಸಲ್ಲಬೇಕಾಗಿದೆ. ಕೈಯಲ್ಲಿದ್ದ ಚೂರು ಪಾರು ಕಾಳು ಮುಗಿದಾಗ ನಾವು ಏನನ್ನು ತಿನ್ಬೇಕು? ಆಗ ಪೆಪೆರೈಸ್ ದಂಟಿನ ಬುಡಭಾಗವೇ ನಮ್ಮ ಆಹಾರ. ಇಲ್ಲವೇ ನೀರು ಗಿಡಗಳ ಬೇರುಗಳು, ಕಡ್ಡಿಗಳು, ಹಸಿಯೋ ಬೇಯಿಸಿಯೋ ಸುಟ್ಟೋ ತಿನ್ಬೇಕು”[೨೩] ಎಂದು ರೈತರು ತಮ್ಮ ಗೋಳನ್ನು ಹೇಳಿಕೊಂಡರೆ ಅದಕ್ಕೆ ಕಿವಿಗೊಡದೆ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು.

ತೆರಿಗೆ ವಸೂಲಿ ಮಾಡುವಾಗಲು ಕೂಡ ತಾರತಮ್ಯ ಮಾಡಲಾಗುತಿತ್ತು. ಭೂಮಾಲಿಕರು ಸುಳ್ಳು ಲೆಕ್ಕಕೊಟ್ಟು ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ತೆರಿಗೆಯ ಅಧಿಕಾರಿಗಳು ರಾಬೊಕ್ಕಸಕ್ಕೆ ಸಂಗ್ರವಾದದ್ದನ್ನೆಲ್ಲ ತಲುಒಇಸುತ್ತಿಲ್ಲ. ಅದರಲ್ಲಿ ಅರ್ಧದಷ್ಟು ನುಂಗುತ್ತಿದ್ದರು. ಇದನ್ನು ಯಾರು ಪ್ರಶ್ನೆ ಮಾಡುವ ಹಾಗಿಲ್ಲ. ಪ್ರಶ್ನೆ ಮಾಡಿದರೆ ಅಂತವರು ಶಿಕ್ಷೆಗೆ ಒಳಗಾಗಬೇಕಾಗುತಿತ್ತು. ನೀರಾನೆಯ ಹೋರಾಟಗಾರನಾದ ಮೆನೆಪ್‌ಟಾ ಈ ಕುರಿತು ತೆರಿಗೆದಾರರನ್ನು ಕೇಳಿದರೆ ಅವರು ವರ್ತಿಸುವ ಪರಿಯೇ ಬೇರೆ. ಅದು ಅತ್ಯಂತ ನಿರ್ದಯವಾದುದು.“ರೈತ ತನ್ನ ಫಸಲಿನ, ಪಶುಪಾಲಕ ತನ್ನ ಮಂದೆಯ, ಕಸಬುದಾರ ತನ್ನ ಕುಶಲ ಕೆಲಸದ, ಬೆಸ್ತ ತಾನು ಹಿಡಿದ ಮೀನಿನ, ಬೇಡ ತಾನು

ಹೊಡೆದ ಮಿಕಗಳ ಹತ್ತರಲ್ಲೆರಡು ಭಾಗ ತೆರಿಗೆಯಾಗಿ ತೆರಲೆಬೇಕು. ಮನುಷ್ಯರ ಮತ್ತು ಪ್ರಾಣಿಗಳ ಗಣತಿ ನಡಿತಲೇ ಇರ್ತದೆ. ಗಣತಿಯ ಕಾಲದಲ್ಲಿ ಪ್ರಾಣಿಗಳನ್ನು ದೂರ ಓಡಿಸಿ ನಮ್ಮಿಂದ ಮರೆ ಮಾಡ್ತಾರೆ–ಅಂತ ಗಣತಿಯವರು ದೂರುತಾರೆ. ನಮ್ಮ ಪ್ರಾಂತದ ಅತ್ಯಂತ ದೊಡ್ಡ ಭೂಮಾಲಿಕ ನುಟ್ ಮೋಸರ ಹಿತ್ತಲಲ್ಲಿ ಹದಿನೈದು ನೂರು ರಾಸು ಇವೆ. ಆದರೆ ದಾಖಲಲ್ಲಿ ಇರೋದೆಷ್ಟು?

'ಎಷ್ಟು?'

'ಪೆಟಾರಿಯಿಂದ ಸುರುಳಿ ತೆಗೆದು ನೋಡಿ.'

'ಲಂಚ ತಗಂಡು ಸುಳ್ಳು ಲೆಕ್ಕ ಬರಿತಾರೆ ಅಂತ ಆಪಾದಿಸುತಿಯ?'

'ನನಗೆ ಗೊತ್ತಿಲ್ಲ. ವಿಚಾರಣೆ ನಡಿಸಬಹುದು. ಒಂದು ನಾವೆಯ ಮುಖ್ಯಸ್ಥ ರಾಜಬೊಕ್ಕಸಕ್ಕೂ ದೇವ ಮಂದಿರಕ್ಕೆ ಮುಟ್ಟಿಸೋದಕ್ಕೆ ಒಯ್ಯುತ್ತಿದ್ದ ಧಾನ್ಯದ ನೂರರಲ್ಲಿ ಎಂಬತ್ತು ಪಾಲು ರಾಜದಾನಿಗೆ ತಲುಪಲೇ ಇಲ್ಲ ಅಂತ ಕೇಳಿದ್ದೇನೆ' "ೀ'

ನೀರಾನೆ ಪ್ರಾಂತದಲ್ಲಿ ತೆರಿಗೆ ವಂಚಿಸುವವರ ಬಗ್ಗೆ ಕೇಳಿದರೆ ಅಂತವರನ್ನು ಸಾರ್ವಜನಿಕವಾಗಿ ವಿಚಾರಣೆ ನಡಿಸಿ ಉಗ್ರ ಶಿಕ್ಷೆಗೆ ಗುರಿಪಡಿಸುತ್ತಿದ್ದರು. ಅವರನ್ನು ನೋಡಿ ಬೇರೆ ಯಾರು ಪ್ರಭುತ್ವದ ವಿರುದ್ಧ ಮಾತಾಡಬಾರದು ಎಂಬುದು ಅವರ ಉದ್ದೇಶ. ಹಾಗೆ ಅನ್ಯಾಯವನ್ನು ಬಯಲಿಗೆಳೆವ ಮೆನೆಪ್‌ಟಾನನ್ನು ಸಾರ್ವಜನಿಕವಾಗಿ ಕಂಬಕ್ಕೆ ಕಟ್ಟಿ ಶಿಕ್ಷೆ ನೀಡಲಾಗುತ್ತದೆ. ಅದನ್ನು ಅವರ ಮಗ ನೋಡಿ ತಾಯಿಗೆ ಹೇಳುತ್ತಾನೆ. ಇದು ಅತ್ಯಂತ ಅಮಾನುಷವಾದುದು.

"ರಾಮೆರಿಪ್‌ಟಾನೆ ನುಡಿದ:

"ಮನೆಗೆ ಹೋಗು ಅಮ್ಮನ ಹತ್ತಿರ ಇರು– ಅಂದ ಅಪ್ಪ"

"ಹುಂ"

"ಅಪ್ಪ ಸಭಾಂಗಣದಲ್ಲಿ ನಿಂತು, ನಮ್ಮ ಜನರಿಗೆ ಹೇಗೆ ಅನ್ಯಾಯ ಆಗ್ತಿದೆಂತ ಹೆಳಿಯೇ ಬಿಟ್ಟ. ಬಹಳ ಹೊತ್ತು ಮಾತಾಡ್ದ. ಅಧಿಕಾರಿಗೆ ತುಂಬಾ ಸಿಟ್ಟು ಬಂತು. ನಮ್ಮಪ್ಪ ಹೆದರಲೇ ಇಲ್ಲ. ನಮ್ಮವರೆಲ್ಲ ಬಂದಿದ್ರೂ. ಸೂಪ್ನು ಮಾವ, ಸೆಬೆಕ್ಸು ಮಾವ ಎಲ್ಲಾ ಇದ್ರು ......"

"ಆ ಮೇಲೆ....."

"ಆಮೇಲೆ ಕಟ್ಟಾಕಿದ್ರೂ"

ದ್ರವಿಸತೊಡಗಿದ ದುಗುಡವನ್ನು ಬಿಗಿಹಿಡಿಯಲೆತ್ನಿಸಿದ ರಾಮೆರಿಪ್‌ಟಾ ಅವುಡುಗಚ್ಚಿದ

"ಹೊಡೆದ್ರಾ?"

ಬಿಕ್ಕುತ್ತ ರಾಮೆರಿ ಗಟ್ಟಿಯಾಗಿ ಅಂದ:

" ಹ್ಞಾ. ಆದರೆ ಅಪ್ಪಾ ಅಳಲಿಲ್ಲ, ಒಂದು ಸರ್ತಿನೂ ಅಳಲಿಲ್ಲ."

ಹಾಗೆ ಹೇಳುತ್ತಾ ಕಂಬನಿ ಹರಿಸುತ್ತಾ, ತಾಯಿಯ ಬಳಿ ರಾಮೆರಿಪ್‌ಟಾ ಕುಸಿದು ಕುಳಿತು, ಆಕೆಯ ಮಡಿಲಲ್ಲಿ ಮುಖವಿರಿಸಿದ

" ರಾಮೆರಿ ರಾಮೆರಿ" ಎಂದು ಮಗನ ಮೈ ದಡುವುತ್ತಾ ನೆಫಿಸ್ ಸಂತೈಸಿದಳು, ತಾನು ಕಣ್ಣೀರು ಸುರಿಸುತ್ತಾ.

ನಿಂತಿದ್ದ ಹುಡುಗರಿಗೂ ಅಳು ಬಂತು."[೨೫]

ನೀರಾನೆಯ ಜನನಾಯಕನಾದ ಮೆನೆಪ್‌ಟಾನನ್ನು ಬಂಧಿಸಿ ಕಂಬಕ್ಕೆ ಕಟ್ಟಿ ಮೈಯಲ್ಲಿ ರಕ್ತ ಬರುವ ಹಾಗೆ ಕಂದಾಯ ಅಧಿಕಾರಿಗಳು ಹೊಡೆಯುತ್ತಾರೆ. ಇದನ್ನು ನೋಡಿದ ಜನ ಅವನನ್ನು ಬಿಡಿಸಿಕೊಂಡು ಬರುವ ಪ್ರಯತ್ನ ಮಾಡುತ್ತಾರೆ. ಜನರ ಈ ಪ್ರಯತ್ನ ಕಂದಾಯ ಅಧಿಕಾರಿಯಾದ ಟೆಹುಟಿಗೆ ತಮ್ಮ ವಿರುದ್ಧ ಎದ್ದು ನಿಂತರಲ್ಲ ಎಂದು ಅವರನ್ನು ಸದೆ ಬಡೆಯುವ ನಿರ್ಧಾರ ಮಾಡುತ್ತಾನೆ. ಜನರ ಹೋರಾಟಗಳನ್ನು ತಮ್ಮ ಸೈನ್ಯದ ಬಲಪ್ರಯೋಗದ ಮೂಲಕ ಹತ್ತಿಕ್ಕುವುದು ಯಾವುದೆ ಪ್ರಭುತ್ವದ ನೀತಿಯಾಗಿರುತ್ತದೆ. ಟೆಹುಟಿ ಕೂಡ ಆ ರೀತಿಯ ಬಲ ಪ್ರಯೋಗ ಮಾಡುತ್ತಾನೆ. ಆದರೆ ಜನ ಅದಕ್ಕೆ ಹೆದರುವದಿಲ್ಲ. ಅಧಿಕಾರಿಗಳ ದಬ್ಬಾಳಿಕೆ ಜನರಲ್ಲಿ ವಿಪರೀತ ಅಸಹನೆ ಹುಟ್ಟಿಸಿರುತ್ತದೆ. ತಮ್ಮೆಲ್ಲರ ಏಳ್ಗೆಗಾಗಿ ಶ್ರಮಿಸುತ್ತಿದ್ದ ಮೆನೆಪ್‌ಟಾನನ್ನು ಬಂಧಿಸಿ ಉಗ್ರ ಶಿಕ್ಷೆ ಕೊಡುತ್ತಿರುವುದು ಜನರಲ್ಲಿ ಆಕ್ರೋಶ ಮೂಡಿಸಿತ್ತು. ಆದ್ದರಿಂದ ಜನರೆಲ್ಲ ಸೇರಿ ಕಂದಾಯ ಅಧಿಕಾರಿಗಳ ಸ್ಥಳಕ್ಕೆ ಮುತ್ತಿಗೆ ಹಾಕಿ ಮೆನೆಪ್‌ಟಾನನ್ನು ಬಿಡಿಸಿಕೊಂಡು ಬರುವ ಆಲೋಚನೆ ಮಾಡುತ್ತಿದ್ದರು. ಹೀಗಾಗಿ ಎಲ್ಲಾರು ಒಟ್ಟಾಗಿ ಟೆಹುಟಿ ಇರುವ ಸ್ಥಳಕ್ಕೆ ಹೋಗುತ್ತಾರೆ. ಆ ಜನರನ್ನು ಟೆಹುಟಿ ನಿರ್ದಯವಾಗಿ ತಮ್ಮ ಸೈನಿಕರಿಂದ ಹತ್ಯೆ ಮಾಡಿಸುತ್ತಾನೆ." ಗೋಡೆಯ ಮೇಲೆ ಭಟರು ಹೆದೆ ಏರಿಸುತ್ತಿದ್ದದನ್ನು ಕಂಡವರು 'ಹೋ!' 'ಹೋ!' ಎಂದರು. ಬಾಣಗಳು ಸುಂಯ್‌ಗುಟ್ಟಿದವು. ಯಾವುದೇ ನಿರ್ದಿಷ್ಟ ಮೃಗದ ಬೇಟೆಯಲ್ಲ. ಗೊತ್ತು ಗುರಿಯಿಲ್ಲದ ಎಸೆತ. ಒಂದು ಬಾಣ ಒಬ್ಬನ ಭುಜವನ್ನು ಇರಿಯಿತು. ಇನ್ನೊಂದು ಇನ್ನೊಬ್ಬನ ಹೊಟ್ಟೆಯನ್ನು ಹೊಕ್ಕಿತು; ಮೂರನೆಯದು ಮತ್ತೊಬ್ಬನ ತೊಡೆಯನ್ನು ತಿವಿಯಿತು. ಜನಜಂಗುಳಿಯಲ್ಲಿ ಹಾಹಾಕಾರ. ಸ್ನೊಫ್ರು ಗಾಯಗೊಂಡವರತ್ತ ದಾವಿಸಿದಂತೆ, ಮತ್ತೆ ಮೂರು ಬಾಣಗಳು ಆಹುತಿ ಬಯಸಿದವು. ಒಂದು ಸ್ನೊಫ್ರುವಿನ ಬಳಿಯಿಂದಲೇ ಹಾದು ಹೋಗಿ, ನೆಲ ಮುಟ್ಟಿತು. ಇನ್ನೊಂದು ಪುಟ್ಟ ಗಾಯಗಳಿಂದ ತೃಪ್ತಿ ಪಡಬೇಕಾಯಿತು. ಮೂರನೆಯದು ಮಾತ್ರ ಮತ್ತೊಬ್ಬನನ್ನು ಕೆಳಕ್ಕೆ ಕೆಡವಿತು."[೨೬]

ಮೆನೆಪ್‌ಟಾನ ನೇತೃತ್ವದಲ್ಲಿ ಆಗಲೇ ಜನರಲ್ಲಿ ಒಂದು ಪ್ರಜ್ಞೆ ಬೆಳೆಯುತಿತ್ತು. ಜನರು ಅವನ ಮುಂದಾಳತ್ವದಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳುವ ಯೋಚನೆ ಮಾಡುತ್ತಿದ್ದರು. ರಾಜ ಪ್ರಭುತ್ವದ ಆಧೀನ ಬದುಕಿಗಿಂತ ಸ್ವತಂತ್ರವಾಗಿ ಬದುಕುವ ಆಸೆಯನ್ನು ಹೊತ್ತಿದ್ದರು. ಅದಕ್ಕೆ ಮೆನೆಪ್‌ಟಾ

ಬುನಾದಿ ಹಾಕಿದ್ದ. ಇಡೀ ನೀರಾನೆಯ ಜನ ಮೆನೆಪ್‌ಟಾನನ್ನು ನಂಬಿದ್ದರು. ಅವನ ಆಶಯದಂತೆ ಮುನ್ನೆಡೆಯಲು ನಿರ್ಧರಿಸಿದ್ದರು. ರಾಜಪ್ರಭುತ್ವದ ದಬ್ಬಾಳಿಕೆಯಿಂದ ವಿಮುಕ್ತಿ ಹೊಂದಿ ಸಮಾನವಾಗಿ ಬಾಳುವ ಇಚ್ಚೆಯನ್ನು ಜನತೆ ಹೊಂದಿದ್ದರು. ಈಗ ಬರಗಾಲ ಬಂದಿದ್ದು ಜನರಿಗೆ ಮನೆಯಲ್ಲಿ ಕಾಳು ಕಡಿ ಇಲ್ಲದೆ ಇರುವಾಗ ತೆರಿಗೆಯನ್ನು ಕೊಡಲೇಬೇಕೆಂದು ಕೊಡದಿದ್ದವರ ಮೇಲೆ ದೈರ್ಜನ್ಯ ಮಾಡುವುದು ಜನರಲ್ಲಿ ರಾಜ ಪ್ರಭುತ್ವದ ಬಗ್ಗೆ ಜಿಗುಪ್ಸೆ ಮೂಡಿಸಿತ್ತು. ಇದಕ್ಕೆ ಸರಿಯಾಗಿ ತೆರಿಗೆ ಅಧಿಕಾರಿ ಟೆಹುಟಿ ಜನರ ಮೇಲೆ ತನ್ನ ಸೈನ್ಯಾಧಿಕಾರಿಗಳ ಮೂಲಕ ದಾಳಿ ನಡೆಸಿದ. ಜನರು ಅನೇಕ ರಿತಿಯಲ್ಲಿ ಸಾವುನೋವಿಗೆ ಒಳಗಾದರು. ತಮ್ಮ ನಾಯಕನನ್ನು ಬಂಧಿಸಿ ಶಿಕ್ಷೆ ಕೊಟ್ಟಿದ್ದು ಕೂಡ ಜನರಲ್ಲಿ ಆಕ್ರೋಶ ಮೂಡಿಸಿತ್ತು. ಇದೆಲ್ಲವೂ ಅವರು ತೆರಿಗೆ ಅಧಿಕಾರಿಗಳ ವಿರುದ್ದ ದಂಗೆ ಏಳುವಂತೆ ಮಾಡಿತು. ಮುಖ್ಯವಾಗಿ ತಮ್ಮ ನಾಯಕ ಮೆನೆಪ್‌ಟಾನನ್ನು ಬಿಡುಗಡೆಗೊಳಿಸುವುದು ಅವರಿಗೆ ಮುಖ್ಯವಾಗಿತ್ತು. ಅವರು ತೆರಿಗೆ ಅಧಿಕಾರಿಗಳು ಉಳಿದುಕೊಂಡಿದ್ದ ರಾಜಗೃಹದ ಮೇಲೆ ದಾಳಿ ಮಾಡುತ್ತಾರೆ. “ ಬಕಿಲ ಆಗಲೇ ಮೆಟ್ಟಿಲುಗಳನ್ನು ಸಮಿಪಿಸಿದ್ದ. ನೆಟ್ಟಿದ್ದ ಬಾಣವನ್ನು ಕಿತ್ತು ಬಲಗೈಯಲ್ಲಿ ಹಿಡಿದಿದ್ದ. ಕಣ್ಣಿನಿಂದ ರಕ್ತ ಧಾರಾಕಾರವಾಗಿ ಹರಿಯುತಿತ್ತು. ಹತ್ತಿಕ್ಕಿದ್ದ ರೋಷ ಕಿರುಲು ಧ್ವನಿಯಲ್ಲಿ ಗಂಟಲಿನಿಂದ ಹೊರಬೀಳಲು ಯತ್ನಿಸುತಿತ್ತು.

ಹೊರಗೆ ಜನಸ್ತೋಮ “ಹೋ!” ಎಂದಿತು. ಮೇಲಿದ್ದ ಕಾವಲು ಭಟರು ಅಂಗಳಕ್ಕೆ ಧುಮಿಕಿದ್ದರು. ಏಣಿಗಳನ್ನು ಏರಿದವರು ಅವರನ್ನು ಹಿಂಬಾಲಿಸಿದರು. ಅದಕ್ಕೆ ಸರಿಯಾಗಿ ಹೆಬ್ಬಾಗಿಲು ಮುರಿಯಿತು. ಕಟ್ಟೆಯೊಡೆದ ಜನಪ್ರವಾಹ ಒಳಗೆ ನುಗ್ಗಿತು.

ಸ್ನೂಫ್ರು, ಸೆಬೆಕ್ಕು, ಬಟಾ ಮತ್ತು ಹಲವರು ಮೆನೆಪ್‌ಟಾನನ್ನು ಕಟ್ಟಿದ್ದ ಕಂಬದೆಡೆಗೆ ಧಾವಿಸಿದರು. ಅಲ್ಲಿ ಮೆನೆಪ್‌ಟಾ ಬಳಿ ಇಪ್ಯುವರ್ ನಿಂತದ್ದ. ಆನಂದಾಶ್ರು ಸುರಿಸುತ್ತ.

ಹಗ್ಗಗಳನ್ನು ಕತ್ತರಿಸಿ ಬಿಚ್ಚಿದರು. ಕುಸಿದು ಬೀಳದಂತೆ, ಎಡಬಲಗಳಲ್ಲಿ ಒಬ್ಬೊಬ್ಬರು ಮೆನೆಪ್‌ಟಾನ ತೋಳುಗಳಿಗೆ ಆಸರೆ ನೀಡಿದರು.

ಧನುರ್ಧಾರಿ ಖ್ನೆಮ್ ಹೊಟೆಪ್ ಕಾಣಿಸಿಕೊಂಡು ಜಯಕಾರ ಮಾಡಿದ.

“ಓ ಮೆನೆಪ್‌ಟಾ!”

“ಓ ಮೆನೆಪ್‌ಟಾ!”

ಅವರ ಜತೆಗೆ ತಾನು ಜಯಕಾರ ಮಾಡಿದೆನಲ್ಲ ಎಂದು ಇಪ್ಯವರ್ ಗಾಬರಿಯಾಗಿ, ಬಾಯನ್ನು ಅಂಗೈಯಿಂದ ಮುಚ್ಚಿಕೊಂಡ. ಮರುಕ್ಷಣವೇ ಕೈ ತೆಗೆದು ಗಟ್ಟಿಯಾಗಿ ನಕ್ಕ.

“ ಆ ಬಕಿಲ ಎಲ್ಲಿದ್ದಾನೆ ಹುಡಿಕಿ”

ಖೆಮ್‌ಹೊಟೆಪ್‌ನ ಧ್ವನಿ.

“ ಆ ಅಧಿಕಾರಿ, ಗೇಬು ಎಲ್ಲಿದ್ದಾರೆ ನೋಡಿ.

–ಇನ್ನೊಬ್ಬನ ಕಂಠ

ಅವರಿರಲಿಲ್ಲ. ಕಂದಾಯ ವಸೂಲಿಗೆ ಬಂದ ಕಾವಲು ಭಟರು ಇರಲಿಲ್ಲ. ರಾಜಗೃಹದ ಭಟರೂ ಅಲ್ಲಿರಲಿಲ್ಲ. ಕುದಿಯುವ ನೀರಿಗಾಗಿ ಒಲೆಗೆ ಉರಿ ಹಾಕಲು ಯತ್ನಿಸುತ್ತಿದ್ದ ಸೇವಕರಲ್ಲೊಬ್ಬ ದಿಡ್ಡಿ ಬಾಗಿಲ ಕಡೆ ಬೊಟ್ಟು ಮಾಡಿ “ ಹೊರಟು ಹೋದ್ರು” ಅಂದ

“ ಓಡಿ ಹೋದ್ರು” ಎಂದು ಇನ್ನೊಬ್ಬ ತಿದ್ದಿದ.

ನದಿಯ ದಂಡೆಗೆ ಕಳ್ಳ ದಾರಿ. ಅಲ್ಲಿಂದ ರಾಜನಾವೆಯನ್ನೇರಿ ಮೆಂಫಿಗೆ ಪಲಾಯನ..... ”[೨೭]

ನೀರಾನೆ ಜನರು ತಮ್ಮ ನ್ಯಾಯಯುತ ಹೋರಾಟದಿಂದ ತೆರಿಗೆ ಅಧಿಕಾರಿಗಳನ್ನು ಪಲಾಯನ ಮಾಡುವಂತೆ ಮಾಡುತ್ತಾರೆ. ಅವರ ದಬ್ಬಾಳಿಕೆಗೆ ದೊಡ್ಡ ಪ್ರತಿಭಟನೆ ಒಡ್ಡುತ್ತಾರೆ. ಮೆನೆಪ್‌ಟಾ ಅಧಿಕಾರಿಗಳಿಂದ ಕ್ರೂರ ಹಿಂಸೆಗೆ ಒಳಗಾಗುತ್ತನೆ. ಹೀಗೆ ಹಿಂಸೆ ಮಾಡುವುದು ನ್ಯಾಯ ಕೇಳುವವರನ್ನು ಹತ್ತಿಕ್ಕುವುದು ರಾಜ ಪ್ರಭುತ್ವಕ್ಕೆ ಸಾಮನ್ಯ ಸಂಗತಿಯಾಗಿತ್ತು. ಜನರು ಈಗ ಎಚ್ಚೆತ್ತುಕೊಂಡಿದ್ದರಿಂದ ಅವರ ದೌರ್ಜನ್ಯವನ್ನು ಪ್ರತಿಭಟಿಸಿದರು. ನೀರಾನೆ ಪ್ರಾಂತವನ್ನು ಜನತೆ ತಮ್ಮ ಇಚ್ಚೆಯಂತೆ ಪ್ರಜಾಪ್ರಭುತ್ವ ಮಾದರಿಯಲ್ಲಿ ರೂಪಿಸುವ ಪ್ರಯತ್ನ ಮಾಡುತ್ತಾರೆ. ಅದಕ್ಕೆ ನಾಯಕನನ್ನಾಗಿ ಮೆನೆಪ್‌ಟಾ ನನ್ನು ನೇಮಕ ಮಾಡಿಕೊಳ್ಳುತ್ತಾರೆ. ಇದು ಇಡೀ ಪ್ರಭುತ್ವಕ್ಕೆ ಸವಾಲು ಹಾಕುವ ಚಳುವಳಿ ಆಗುತ್ತದೆ. ಇಂತ ಅನೇಕ ಹೋರಾಟಗಳು ಚರಿತ್ರೆಯಲ್ಲಿ ನಡೆದು ಹೋಗಿವೆ. ಆದರೆ ಅವು ಎಲ್ಲೂ ದಾಖಲೆಯ ಚರಿತ್ರೆಯಲ್ಲಿ ಗುರುತಿಸಿಕೊಳ್ಳುವುದಿಲ್ಲ. ಇದು ಕಾದಂಬರಿಯಲ್ಲಿ ಕಲ್ಪಿತವಾಗಿ ಬಂದಿರಬಹುದು. ಅದು ಹೇಳುವ ಸತ್ಯದ ವಾಸ್ತವದ ಆಯಾಮವನ್ನು ಗಮನಿಸಬೇಕಾಗುತ್ತದೆ.

ನೀರಾನೆಯ ಜನತೆ ಹೊಸ ಮಾದರಿಯಲ್ಲಿ ಆಡಳಿತವನ್ನು ಮೆನೆಪ್‌ಟಾನ ನೇತೃತ್ವದಲ್ಲಿ ತರುವ ಚಿಂತನೆ ಮಾಡುತ್ತಾರೆ. ಮೆನೆಪ್‌ಟಾನನ್ನು ತಮ್ಮ ನಾಯಕನನ್ನಾಗಿ ಒಪ್ಪಿಕೊಂಡು ಅನೇಕ ಸುಧಾರಣೆಗಳನ್ನು ಮಾಡುತ್ತಾರೆ. ಆ ಸುಧಾರಣೆಗಳು ಪ್ರಜಾಪ್ರಭುತ್ವದ ಆಶಯಗಳನ್ನು ಒಳಗೊಂಡಿರುವಂತದ್ದು. ಎಲ್ಲರೂ ಒಂದೇ ಕುಟುಂಬದಂತೆ ಇಡೀ ಪ್ರಾಂತದ ಆದಾಯವನ್ನು ಹಂಚಿಕೊಂಡು ತಿನ್ನುವ ಯೋಜನೆಯನ್ನು ಈ ಜನತೆ ರೂಪಿಸುತ್ತಾರೆ. ಪರಸ್ಪರ ಪ್ರೀತಿ ಸ್ನೇಹದಿಂದ ವ್ಯವಸ್ಥೆಯನ್ನು ಮುನ್ನೆಡೆಸುತ್ತಾರೆ. ರಾಜಪ್ರಭುತ್ವಕ್ಕಿಂತ ಭಿನ್ನವಾದ ಜನಪರವಾದ ಆಡಳಿತವನ್ನು ರೂಪಿಸುವುದು ಇವರ ಇರಾದೆಯಾಗಿದೆ. ಇದು ಆ ಸಂದರ್ಭದಲ್ಲಿ ಬಲಿಷ್ಠವಾದ ಪ್ರಭುತ್ವವನ್ನು ಎದುರು ಹಾಕಿಕೊಂಡು ಮುನ್ನೆಡೆಯುವದು ಆಗಿದೆ. ಇದು ಸುಗಮವಾದ ಹಾದಿಯಲ್ಲ. ಇದನ್ನು ಬಗ್ಗು ಬಡೆಯುವ ಎಲ್ಲಾ ತಂತ್ರಗಳನ್ನು ಪ್ರಭುತ್ವ ಮಾಡುತ್ತದೆ. ಇದನ್ನೆಲ್ಲ ಎದುರಿಸುವ ಶಕ್ತಿ ಪ್ರಾಂತದ

ಜನತೆಗೆ ಇರುವದಿಲ್ಲ. ಆದರೆ  ಪ್ರಯತ್ನ ಮಾಡುತ್ತಾರೆ. ಇಂತಹ ಸಣ್ಣ ಪ್ರಯತ್ನಗಳು ಮುಂದೆ ಜಗತ್ತಿನಲ್ಲಿ ಪ್ರಜಾಪ್ರಭುತ್ವ ನೆಲೆಯೂರಲಿಕ್ಕೆ ಕಾರಣವಾದುದನ್ನು ಕಾಣಬಹುದು.

ಹೋರಾಟದಲ್ಲಿ ಮಡಿದ ಅನ್ಪು ತೀರಿಕೊಂಡಿದ್ದ. ಅವನು ಸಾಮನ್ಯ ವರ್ಗದವನು ಅವನನ್ನು ಊಳುವುದು ಸಾಮನ್ಯ ರೀತಿಯಲ್ಲಿ. ಆದರೆ ಇವರ ನೇತೃತ್ವದಲ್ಲಿ ಸಾಮನ್ಯರನ್ನು ಕೂಡ ರಾಜಮರ್ಯಾದೆಯಿಂದ ಊಳುವ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಒಂದು ವ್ಯವಸ್ಥೆಯಲ್ಲಿ ಎಲ್ಲಾರು ಸಮಾನರು. ಅವರಲ್ಲಿ ಯಾವ ರೀತಿಯ ಭೇದಬಾವ ಇರಬಾರದು ಎಂಬುದು ಅವರ ನಿಲುವಾಗಿತ್ತು. ಅವರು ಹೆಣವನ್ನು ಊಳುವಾಗ ಪಠಿಸುವ ಪಾಠ ಎಲ್ಲಾ ಕಾಲದ ಜನರು ಅನುಸರಿಸುವ ಮೌಲ್ಯಗಳನ್ನು ಒಳಗೊಂಡಿರುವಂತದ್ದು."ಓಸೈರಿಸ್ ರಾಜ್ಯವಾದ ಪರಲೋಕದ ಹೆಬ್ಬಾಗಿಲ ಬಳಿ ಮೃತನು ನಿಂತು ಹೀಗೆ ಪ್ರಾರ್ಥಿಸುತ್ತಾನೆ. ಉಘೇ!  ಮಹಾದೇವನೆ! ಸತ್ಯದ ಪ್ರಭುವೆ, ನ್ಯಾಯದ ಪ್ರಭುವೆ, ಉಘೇ! ನನ್ನೊಡೆಯ ನಿನ್ನೆದರು ಬಂದು ನಿಂತಿದ್ದೇನೆ ನಾನು. ನಿನ್ನ ಸೌಂದರ್ಯಾತಿಶಯವನ್ನು ಕಾಣಲೆಂದು ನನ್ನನ್ನು ಇಲ್ಲಿಗೆ ಕರೆತಂದಿದ್ದಾರೆ. ನಾನು ದಿಟವಾಡುತ್ತಿದ್ದೇನೆ. ಮನುಜರಲ್ಲಿ ನಾನು ಭೇದ ಭಾವ ಎಣಿಸಿಲ್ಲ. ಬಡವರ ಸುಲಿಗೆ ಮಾಡಿಲ್ಲ ನಾನು. ಸ್ವತಂತ್ರನಾದ ಯಾವನನ್ನು ಅವನ ಇಚ್ಚೆಗಿಂತ ಹೆಚ್ಚಾಗಿ ನಾನು ದುಡಿಸಿಲ್ಲ. ಕರ್ತವ್ಯ ಲೋಪ ಎಸಗಿಲ್ಲ ನಾನು. ದೇವರಿಗೆ ಅಪ್ರಿಯವಾದುದ್ದೇನು ಮಾಡಿಲ್ಲ ನಾನು. ಯಾವ ಯಜಮಾನನು ತನ್ನ ದಾಸನೊಡನೆ ಕೆಟ್ಟದಾಗಿ ನಡೆದುಕೊಳ್ಳಲು ನಾನು ಕಾರಣನಾಗಿಲ್ಲ. ನಾನು ಯಾವುದೇ ಮನುಷ್ಯನನ್ನು ಉಪವಾಸ ಕೆಡವಿಲ್ಲ. ಯಾರು ಅಳುವಂತೆ ಮಾಡಿಲ್ಲ. ಯಾರನ್ನು ನಾನು ಕೊಲೆಗೈದಿಲ್ಲ. ನಾನೆಂದು ರಾಜದ್ರೋಹ ಎಸಗಿಲ್ಲ. ದೇವಮಂದಿರಕ್ಕೆ ಯಾವ ಸರಬರಾಜನ್ನು ನಾನು ಕಡಿಮೆ ಮಾಡಿಲ್ಲ. ದೇವರ ನೈವಧ್ಯವನೆಂದು ಕೆಡೆಸಿಲ್ಲ. ದೇವಮಂದಿರದ ಪವಿತ್ರ ಕ್ಷೇತ್ರದಲ್ಲಿ ವಿಷಯಾಸಕ್ತನಾಗಿ ವರ್ತಿಸಿಲ್ಲ. ದೇವರನ್ನು ದಿಕ್ಕರಿಸಿ ನಡೆದಿಲ್ಲ. ತಕ್ಕಡಿಯಲ್ಲಿ ಮೋಸ ಮಾಡಿಲ್ಲ. ಪಕ್ಕದ ಹೊಲಕ್ಕೆ ನೀರು ತಡೆಹಿಡಿದಿಲ್ಲ. ಎದೆಹಾಲಿನ ಮಕ್ಕಳ ಬಾಯಿಂದ ಹಾಲನ್ನು ಕಸಿದಿಲ್ಲ. ದೇವರ ಹಕ್ಕಿಗಳನ್ನು ಬಲೆಯಲ್ಲಿ ಹಿಡಿದಿಲ್ಲ. ನಾನು ಪರಿಶುದ್ಧ..... ನಾನು ಪರಿಶದ್ಧ...... ನಾನು ಪರಿಶುದ್ಧ....."[೨೮]

ಪ್ರತಿಯೊಬ್ಬರ ಸಾವಿನ ಸಂದರ್ಭದಲ್ಲಿ ಈ ರೀತಿಯ ಜನಸಮೂಹದ ಮುಂದೆ ಪಠಣವಿರುತ್ತದೆ. ಇದರಿಂದ ಮುಂದಿನವರು ಒಳ್ಳೆಯ ರೀತಿಯಲ್ಲಿ ಬದುಕುವ ಇಚ್ಚೆಯನ್ನು ಬೆಳಸಿಕೊಳ್ಳಲೆಂಬುದು ಅವರ ಇಂಗಿತವಾಗಿತ್ತು.

ನೀರಾನೆಯ ಜನತೆ ಈಗ ಹೊಸ ಮನ್ವಂತರಕ್ಕೆ ಅಣಿಯಾದರು. ತಮ್ಮದೇ ಆದ ರೀತಿಯಲ್ಲಿ ಆಡಳಿತ ಮಾಡಲು ನಿಶ್ಚಯಿಸಿದರು. ಜನರಿಗಾಗಿ ಅಡಳಿತ ಎಂಬ ತೀರ್ಮಾನಕ್ಕೆ ಬಂದರು. ಜನರಿಗೆ ಒಳ್ಳೆಯದು ಮಾಡುವುದೆ ಆಡಳಿತದ ಗುರಿಯಾಬೇಕೆಂದರು. ಅದರಂತೆ ನಡೆಯಲು ಸಿದ್ಧನಿದ್ದ

ಮೆನೆಪ್‌ಟಾನನ್ನು ತಮ್ಮ ಅಧಿನಾಯಕನನ್ನಾಗಿ ಮಾಡಿಕೊಂಡರು. ಈ ವ್ಯವಸ್ಥೆಯನ್ನು ಒಪ್ಪದಿರುವ ಒಂದು ವರ್ಗವು ನೀರಾನೆಯಲ್ಲಿ ಇತ್ತು. ಅವರನ್ನು ಮನ ಒಲಿಸಿ ಇದನ್ನು ಒಪ್ಪಿಕೊಳ್ಳುವಂತೆ ಮಾಡುವುದು ಅಷ್ಟು ಸುಲಭ ಇರಲಿಲ್ಲ. ಮುಖ್ಯವಾಗಿ ಭೂಮಾಲಿಕ ವರ್ಗವನ್ನು ತಮ್ಮ ಬೆಂಬಲಕ್ಕೆ ನಿಲ್ಲುವಂತೆ ಮಾಡುವುದು ಸಾಧ್ಯವಿರಲಿಲ್ಲ. ಇವರು ಪ್ರಭುತ್ವವನ್ನು ಕಾಪಾಡುವವರು. ಅದರ ವಿರುದ್ಧ ದಂಗೆ ಎದ್ದು ಹೊಸ ವ್ಯವಸ್ಥೆ ತರುವ ವಿದ್ಯಾಮಾನವನ್ನು ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಇವರನ್ನು ಎದುರಿಸುವುದು ಅವರಿಗೆ ಮುಖ್ಯವಾಗಿತ್ತು. ಭೂಮಾಲಿಕರು ಆರ್ಥಿಕವಾಗಿ ತುಂಬಾ ಪ್ರಬಲವಾಗಿದ್ದವರು. ಫೆರೊ ರಾಜನಿಗೆ ಹತ್ತಿರ ಇರುವವರು. ರಾಜನ ಎಲ್ಲಾ ನೀತಿಗಳನ್ನು ಒಪ್ಪಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡುವವರು. ರಾಜಪ್ರಭುತ್ವವನ್ನು ವಿರೋಧಿಸುವವರನ್ನು ಸದೆಬಡೆಯುವವರು. ಅಧಿಕಾರವೆಲ್ಲ ತಮ್ಮ ಬಳಿಯೆ ಇಟ್ಟುಕೊಂಡವರು. ಒಬ್ಬ ಸಾಮನ್ಯ ಪ್ರಜೆ ನೀರಾನೆಯ ಒಡೆತನವನ್ನು ವಹಿಸಿಕೊಳ್ಳುತ್ತಾನೆ ಎಂಬುದು ಅವರಿಗೆ ನುಂಗಲಾರದ ತುತ್ತಾಗಿತ್ತು. ಹೀಗಾಗಿ ಅವನ ಅಧಿಕಾರಕ್ಕೆ ಭೂಮಾಲಿಕರ ಸಹಕಾರ ಇರಲಿಲ್ಲ. ಈ ಅಂಶ ಮೆನೆಪ್‌ಟಾ ನಿಗೂ ಗೊತ್ತಿತ್ತು. ಅದನ್ನು ಹೇಗೆ ನಿಭಾಯಿಸಬೇಕು ಎಂಬ ಚಿಂತನೆಯು ನಡೆದಿತ್ತು."ತಾವು ಅಧಿಕಾರಕ್ಕೆ ಬರುವುದಕ್ಕೋಸ್ಕರ ಅವರನ್ನು ಓಡಿಸಿದ್ದಲ್ಲ. ಜನರಿಗೆ ಹಿತವಾಗಬೇಕು. ತರಿಗೆ ಕಂದಾಯ ಅರ್ಧಕ್ಕೆ ಇಳಿಯಬೇಕು. 'ನೀನು ರಾಜಗೃಹದಲ್ಲಿ ವಾಸಿಸ್ಬೆಕು ಮೆನೆಪ್ ಟಾ.' 'ಅದು ನನ್ನಿಂದ ಸಾಧ್ಯವಿಲ್ಲ. ದಿನವೂ ಅಲ್ಲಿಗೆ ಹೋಗಿ ಬರ್‍ತೇನೆ ವಾಸ ಇಲ್ಲೇ.' ನದಿ ದಂಡೆಯ ಕಾವಲು ಭಟರು, ಒಳನಾಡಿನ ಕಾವಲಿನವರು– ಇವರೆಲ್ಲರಿಗೂ ಮೇಲಣ ಅಧಿಕಾರಿ ಖ್ನೆಮ್ ಹೊಟೆಪ್ ದಳಪತಿ. ಮಾಡಿ ಬೇಡ ಅನ್ನೋದಿಲ್ಲ. ನನ್ನ ಅಳಿಯನಿಗೆ ಮೂಗಿನ ತುದಿಯಲ್ಲೇ ಕೋಪ. ಮರೀಬೇಡಿ. ಜವಬುದಾರಿ ಇದ್ದರೆ ಯಾರು ಸುಮ್ಮಸುಮ್ಮನೆ ಸಿಟ್ಟಾಗುವುದಿಲ್ಲ. ದೇವ ಮಂದಿರಕ್ಕೆ ಮಂದಿರದ ವೆಚ್ಚ ನಮ್ಮದು. ಅಪೆಟ್ ಚಿಂತಿಸಬೇಕಾಗಿಲ್ಲ. ಸಂಗ್ರಹದ ಕಂದಾಯ ಮಾತ್ರ ರಾಜಗೃಹದ ಕಣಜದಲ್ಲಿ. ಭೂಮಾಲಿಕರು ನಮ್ಮ ಜತೆ ಇರ್‍ತಾರೋ ಅಥವಾ ಓಡಿಹೋಗ್ತಾರೋ ನೋಡ್ಬೇಕು"[೨೯]

ಮೆನೆಪ್ ಟಾನ ನೇತೃತ್ವದಲ್ಲಿ ಹೊಸ ಸಂವಿಧಾನ ನಿರ್ಮಾಣವಾಗುತ್ತದೆ. ಜನ ಬಯಸಿದವರಿಗೆ ಅಧಿಕಾರ ಸಿಗುತ್ತದೆ. ಅಧಿಕಾರ ವಹಿಸಿಕೊಂಡವರು ವಿಲಾಸಕ್ಕಾಗಿ ಆಡಳಿತ ಮಾಡುವವರಲ್ಲ. ಜನರ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡವರು. ಅನೇಕ ಸುಧಾರಣೆಗಳನ್ನು ತರುವುದರ ಮೂಲಕ ಜನರಿಗೆ ಹಿತವನ್ನುಂಟುಮಾಡಬೇಕೆನ್ನುವ ಇಚ್ಚೆ ಅವರದಾಗಿತ್ತು. ಅವರು ಯಾರ ವಿರೋಧಿಗಳಲ್ಲ. ಜನರಿಗೆ ಒಳ್ಳೆದಾಗಬೇಕೆಂದು ಬಯಸುವವರು. ರಾಜಪರಿವಾರವನ್ನು ಬೆಂಬಲಿಸುವವರನ್ನು ಕೂಡ ಗೌರವದಿಂದ ಕಾಣುವವರು. ಭೂಮಾಲಿಕರನ್ನು ಕೂಡ ವಿಸ್ವಾಸಕ್ಕೆ ತಗೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಆದರೆ ಅವರು ಒಪ್ಪುವದಿಲ್ಲ. ಈಗಾಗಲೆ ತೆರಿಗೆಯ ಭಾರದಿಂದ ನಲಿಗಿ ಹೋಗಿದ್ದ

ಜನರ ತೆರಿಗೆ ಭಾರವನ್ನು ಇಳಿಸುತ್ತಾರೆ. ಮೊದಲು ತಾವು ಸರಳವಾಗಿ ಬದುಕುವ ಪಣ ತೊಡುತ್ತಾರೆ. ಸರಳತೆಯೆ ಆಡಳಿತದ ಸೂತ್ರವನ್ನಾಗಿ ಮಾಡುತ್ತಾರೆ. ಇದೆಲ್ಲವು ಜನರಲ್ಲಿ ಅಧಿನಾಯಕ ಮನೆಪ್‌ಟಾನ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ. ಅನೇಕ ಬದಲಾವಣೆಯನ್ನು ಮೆನೆಪ್‌ಟಾ ಅಧಿಕಾರ ವಹಿಸಿಕೊಂಡ ಕೂಡಲೆ ಜಾರಿಗೆ ತರುತ್ತಾನೆ."ಇನ್ನು ಕಂದಾಯದ ವಿಷಯ. 'ಜನ ಅದನ್ನು ಹೇಳಿ ಅದನ್ನು ಹೇಳಿ' ಅರ್ಥಕ್ಕೆ ಇಳಿಸಬೇಕಂತ ತೀರ್ಮಾನಿಸಿದ್ದೇವೆ. ಎಲ್ಲ ಸಂದಾಯವು ರಾಜ ಗೃಹದ ಕಣಜಕ್ಕೆ. ದೇವ ಮಂದಿರದ ಖರ್ಚಿಗೆ ಇಲ್ಲಿಂದಲೆ ಕೊಡ್ತೇವೆ. ಮುಖ ಕಪ್ಪಿಟ್ಟರೂ ಗಂಭೀರವಾಗಿ ಕುಳಿತ ಅಪೆಟ್. 'ಪ್ರವಾಹ ಕಮ್ಮಿ ಬಂದಾಗ ಕಂದಾಯ ವಸೂಲಿ ಮಾಡಬಾರದು' ಒಂದು ಧ್ವನಿ. ಮಾಡೋದಿಲ್ಲ. ಪ್ರತಿ ವರ್ಷ ಪ್ರವಾಹ ಬಂದ ಮೇಲೆ ಹಿರಿಯರು ಪ್ರಾಂತದಲ್ಲಿ ಸಂಚರಿಸಿ, ಫಸಲು ಅಂದಾಜು ಮಾಡಿ ಕಂದಾಯ ನಿರ್ಧರಿಸುತ್ತಾರೆ. ಕುಯಿಲು ಆದಾಗ ನಿರೀಕ್ಷೆಗಿಂತ ಕಮ್ಮಿ ಫಸಲು ಬಂದರೆ ಕಂದಾಯವನ್ನು ಕಮ್ಮಿ ಮಾಡ್ತಾರೆ. ಜಯಕಾರ: 'ಓ ಮೆನೆಪ್ ಟಾ! ಓ ನಾಯಕ ಮೆನೆಪ್ ಟಾ!' ಕಲರವ  ನಿಂತಾಗ ಒಂದು ಗಡಸು ಸ್ವರ: ಮನೆಗೆ ಹಿತ್ತಲಿಗೆ ನೀರು. ಖಂಡಿತ! ಹೂಳು ತೆಗೆದು ಕಾಲುವೆ ಆಳ ಮಾಡ್ತೇವೆ. ನಾಳೆಯಿಂದಲೆ ಕೆಲಸ ಆರಂಭ."[೩೦]

ಮೆನೆಪ್ ಟಾ ಇಡೀ ವ್ಯವಸ್ಥೆಯನ್ನು ಜನಪರವಾಗಿ ರೂಪಿಸುವ ಪ್ರಯತ್ನ ಮಾಡುತ್ತಾನೆ. ಇಂದೆ ಯಾವಾವ ರೀತಿಯಲ್ಲಿ ಜನರಿಗೆ ತೊಂದರೆಯಾಗುವ ನಿಯಮಗಳಿದ್ದವೋ ಅವುಗಳನ್ನೆಲ್ಲ ಮುರಿದು ಹೊಸ ನಿಯಮಗಳನ್ನು ರೂಪಿಸುತ್ತಾನೆ. ಈ ನಿಯಮಗಳು ಪ್ರಜಾಪ್ರಭುತ್ವ ಮಾದರಿಯಲ್ಲಿದ್ದವು. ಜನರನ್ನು ಶೋಷಣೆಗೆ ದೂಡುತ್ತಿದ್ದ ನೀತಿಗಳನ್ನೆಲ್ಲ ನಿರ್ಮೂಲನೆ ಮಾಡಿದ. ಜನ ಮತ್ತು ಆಡಳಿತದ ನಡುವಿನ ಭೇದ ಭಾವವನ್ನು ಅಳಿಸಿ ಹಾಕಿದ. ಎಲ್ಲಾರು ಒಟ್ಟಾಗಿ ದುಡಿದು ಪ್ರಾಂತವನ್ನು ಅಭಿವೃದ್ಧಿಗೊಳಿಸುವ ಮಂತ್ರವನ್ನು ಎಲ್ಲಾರು ಪಾಲಿಸುವಂತೆ ಮಾಡಿದ. ಯಾರು ಯಾರ ಮೇಲೆ ದಬ್ಬಾಳಿಕೆ ಮಾಡುವ ಹಾಗಿಲ್ಲ. ಎಲ್ಲಾರು ಘನತೆಯಿಂದ ಬದುಕುವುದು ಮುಖ್ಯವೆಂದು ನಂಬಲಾಯಿತು. ಸಾಮನ್ಯರು ಆಡಳಿಗಾರರು ಒಂದೇ ಎಂಬ ಅಭಿಪ್ರಾಯವನ್ನು ಸಾರ್ವಜನಿಕರಲ್ಲಿ ಮೂಡಿಸಿದರು. ಬಂಧನದಲ್ಲಿದ್ದ ಜನರನ್ನು ಬಿಡುಗಡೆಗೊಳಿಸಿದರು. ವಿಲಾಸದ ಜೀವನಕ್ಕೆ ಎಡೆ ಇಲ್ಲದಂತೆ ಮಾಡಿದರು. ಪಾರದರ್ಶಕವಾದ ಆಡಳಿತವನ್ನು ಜಾರಿಗೆ ತಂದರು. ಎಲ್ಲವು ಜನರ ಮುಂದೆ ಇತ್ಯರ್ಥವಾಗುವ ಕಾನೂನುಗಳನ್ನು ರೂಪಿಸಿದರು.ಆಡಳಿತ ನಡೆಸುವವರು ಕೂಡ ಸಾಮನ್ಯರೇ ಎಂಬ ಅಭಿಪ್ರಾಯವನ್ನು ಜನರಲ್ಲಿ ಮೂಡಿಸಿದರು. ಆಡಳಿತಗಾರರನ್ನು ಸೇವೆ ಮಾಡುವ ದಾಸ ದಾಸಿಯರ ವರ್ಗವನ್ನೆ ಇಲ್ಲದಂತೆ ಮಾಡಲಾಗುತ್ತದೆ. ಯಾರು ಯಾರ ಸೇವೆ ಮಾಡುವ ಹಾಗಿಲ್ಲ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಎಲ್ಲಾರು ದುಡಿದು ತಿನ್ನುವುದು ಆಡಳಿತ ಧ್ಯೇಯ ಎಂಬುದನ್ನು ಜನರಿಗೆ ಮನಗಾಣಿಸುತ್ತಾರೆ. ಜನರ ಸಾಮರ್ಥ್ಯಕ್ಕೆ ಅನುಗುಣವಾದ ಉದ್ಯೋಗಗಳನ್ನು

ಸೃಷ್ಟಿಸುತ್ತಾರೆ. ಹೀಗಾಗಿ ಜನರು ಯಾರ ಹಂಗಿಲ್ಲದೆ ಸಮೃದ್ಧ ಜೀವನ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುತ್ತಾರೆ.“ಹೊಸ ವ್ಯವಸ್ಥೆಯಲ್ಲಿ ದಾಸರಿಲ್ಲ. ದಾಸಿಯರಿಲ್ಲ. ಎಲ್ಲರೂ ಮುಕ್ತರು. ವಿಮುಕ್ತ ದುಡಿಮೆಗಾರರು. ರಾಜಗೃಹದ ಉದ್ಯೋಗಿಗಳಗೂ ಮುಂದೆ ಕೆಲಸವಿದೆ. ಆದರೆ ಭೋಜನ ಮಂದಿರದ ದಾಸಿಯರ ಅಗತ್ಯವಿಲ್ಲ. ಅವರು ಸ್ವತಂತ್ರರು ಅವರು ಹೋಗಬಹುದು.

ದಾಸಿಯರು ಆರು ಜನ ಬಿಕ್ಕಿ ಬಿಕ್ಕಿ ಅಳತೊಡಗಿದರು.

ಖ್ನೆಮ್ ಹೊಟೆಪ್ ‘ಸುಮ್ಮಿರಿ’ ಎಂದು ಗದರಿಸಿದ.

‘ಇಫ್ಯವರ್ ಅಳಬೇಡ. ನೆಪೆರುರಾ ನೀನು ಮಾತಾಡು’ ನೀನು ಮಾತಾಡು ಎಂದ.

ಮುಚ್ಚಂಜೆಯಾಗುತ್ತಾ ಬಂತು. ಸ್ತಬ್ಧತೆಯಲ್ಲಿ ದಾಸಿಯರ ಅಳು ಮಾತ್ರ ಕೇಳಿಸುತ್ತಿತ್ತು. ಅವರು ಕೈ ಬೆರಳಲ್ಲಿ ಕಣ್ಣೀರು ವರಿಸಿಕೊಂಡರು. ನೆಪೆರುರಾ ಅವರಲ್ಲಿ ಅತ್ಯಂತ ಸುಂದರಿ.

‘ ಅಣ್ಣ ಈ ದಾಸಿಯರಿಗೆ ನಾನು ಮುಖ್ಯಸ್ಥೆ. ವಿಷಯ ಇಷ್ಟೆ ಅಣ್ಣ. ಹಿರಿಯರಿಗೆ ಗೊತ್ತಿರೋ ಹಾಗೆ ಐಗುಪ್ತದ ಸ್ತ್ರೀಯರಿಗೆ ಇರೋ ಉದ್ಯೋಗಳು ನಾಲ್ಕು. ದೆವ ಸೇವಕಿಯಾಗೋದು, ಸೂಲಗಿತ್ತಿಯಾಗೋದು, ಶೋಕಸ್ತ್ರೀಯಾಗೋದು, ನರ್ತಕಿಯಾಗೋದು. ಹಂದಿಯ ಮುಸುಡಿಗೆ ಬಂಗಾರದ ಉಂಗುರ ಹಾಕಿ ಏನು ಫಲ? ವಿವೇಚನೆ ಇಲ್ಲದ ಸ್ಫುರದ್ರೂಪಿಣಿಯರ ಅವಸ್ಥೆಯೂ ಅಷ್ಟೆ. ನೀವೇ ಹೇಳಿ. ನಮಗೆ ಯಾರು ಕೆಲಸ ಕೊಡ್ತಾರೆ. ರಾಜಗೃಹದಲ್ಲೇ ಇರಲಿಕ್ಕೆ ಅವಕಾಶ ಕೊಟ್ಟರೆ......

ಮಾತು ಸುಸಂಬದ್ಧವಾಗಿರಲಿಲ್ಲ. ಅದೆ ಕಂಠ ಇಂಪಾಗತ್ತು. ಪದಗಳು ಮೋಹಕವಾಗಿ ಕುಣಿದವು. ನೀರವತೆಯನ್ನು ಮುರಿದು ಮೆಚ್ಚಿಗೆಯ ಉದ್ಗಾರಗಳು ಕೇಳಿಸಿದವು. ನೆಫೆರುರಾ ಒಳ್ಳೆಯ ಹೆಸರು ಅಂದುಕೊಂಡ ಮೆನೆಪ್ ಟಾ

ಆತನೆಂದ:

ನೆಪೆರುರಾ, ಇನ್ನೂ ರಾಗೃಹದಲ್ಲಿ ಔತಣ – ನರ್ತನ–ಹಾಡುಗಾರಿಕೆ ಇಲ್ಲ. ದಾಸಿಯರಿಗೆ ಇಲ್ಲಿ ಕೆಲಸವಿಲ್ಲ. ನೀವೀಗ ಯಾರ ಸ್ವತ್ತೂ ಅಲ್ಲ. ಸ್ವತಂತ್ರರು. ಮದುವೆಯಾಗಬಹುದು. ದುಡಿದು ಸಂಪಾದಿಸಬಹುದು. ಇಲ್ಲಿ ರುವ ಸ್ತ್ರೀಯರ ಹಾಗೆ ತಲೆ ಎತ್ತಿ ನಡೆಯಬಹುದು. ಏನಾದರೂ ಏರ್ಪಾಟು ಆಗುವವರೆಗೆ ನಿಮಗೆ ರಾಜ ಗೃಹದ ಕಣಜದಿಂದ ಧಾನ್ಯ ಮತ್ತಿತರ ಸಾಮಗ್ರಿ ಸಿಗ್ತವೆ. ಅಳೋದರ ಬದಲು ನೀವು ಸಂತೋಷ ಪಡಬೇಕು.” [೩೧]

ರಾಜಗೃಹದ ಎಲ್ಲಾ ವಿಲಾಸಗಳನ್ನು ಮೆನೆಪ್‌ಟಾ ನಿರಾಕರಿಸುತ್ತಾನೆ. ಅನಾವಶ್ಯಕವಾಗಿ ಜನರು ರಾಜ ಸೇವೆ ಮಾಡುವುದನ್ನು ನಿಲ್ಲಿಸುತ್ತಾನೆ. ಅದರಲ್ಲೂ ನೀರಾನೆ ಪ್ರಾಂತದಲ್ಲಿ ರಾಜಗೃಹಗಳಿಗೆ ದಾಸಿಯರನ್ನು ಸೇವೆಗೆ ನೇಮಿಸಿಕೊಳ್ಳುವ ಕೆಟ್ಟ ಪದ್ಧತಿ ಇತ್ತು. ದಾಸಿಯರನ್ನು ನೇಮಕ ಮಾಡಿಕೊಂಡು ರಾಜರು ಅವರನ್ನು ನಿರಂತರ ಭೋಗಿಸುತ್ತಾ ಬರುವುದು. ಇದು ಅತ್ಯಂತ ಹೇಯ

ಪದ್ಧತಿಯಾಗಿತ್ತು. ಆ ಪದ್ಧತಿಯನ್ನು ಅಧಿಕಾರಕ್ಕೆ ಬಂದ ಮೊದಲಲ್ಲೇ ನಿಲ್ಲಿಸುತ್ತಾರೆ. ಅವರಿಗೆ ಘನತೆಯ ಜೀವನವನ್ನು ತಂದು ಕೊಡುತ್ತಾರೆ. ದುಡಿಯುವ ಅವಕಾಶವನ್ನು ಕಲ್ಪಿಸುತ್ತಾರೆ. ಸಾಮಾಜಿಕ ಮರ್ಯಾದೆಯನ್ನು ತಂದುಕೊಡುತ್ತಾರೆ. ಇದೆಲ್ಲವು ಆಡಳಿತದ ಜವಬ್ದಾರಿಯಾಗಿರುತ್ತದೆ. ಇದರ ಜೊತೆಗೆ ಅನೇಕ ಜನಪರವಾದ ಸುಧಾರಣೆಗಳನ್ನು ತರಲಾಗುತ್ತದೆ.

ಮೆನೆಪ್‌ಟಾನ ನೇತೃತ್ವದಲ್ಲಿ ಜನಪರ ಸುಧಾರಣೆಗಳು ನೀರಾನೆಯಲ್ಲಿ ಜರುಗಿದವು. ರಾಜನಂತೆ ಮೆನೆಪ್‌ಟಾ ನಡೆದುಕೊಳ್ಳದೆ ಸಾಮನ್ಯರಂತೆ ಜೀವನ ಮಾಡಿದನು. ರಾಜಗೃಹವನ್ನು ಕೂಡ ಸ್ವಂತ ವಾಸಕ್ಕೆ ಬಳಿಸಲಿಲ್ಲ. ಜನರು ಯಾವ ರೀತಿ ಜೀವನ ಮಾಡುತ್ತಾರೊ ಅದೆ ರೀತಿಯ ಜೀವನವನ್ನು ರೂಢಿಸಿಕೊಂಡನು. ವಿಲಾಸಿ ಜೀವನಕ್ಕೆ ತಿಲಾಂಜಲಿ ಹಾಡಿದನು. ಜನರಿಗೆ ಹೊಸ ಆಡಳಿತದ ಬಗ್ಗೆ ಗೌರವ ಮೂಡಿತು. ಈ ಕಾದಂಬರಿಯಲ್ಲಿ ಆಡಳಿತದ ಒಂದು ಮಾದರಿಯನ್ನು ಮೆನೆಪ್‌ಟಾ ನ ಮೂಲಕ ಕಾಣಿಸುವ ಚಿಂತನೆ ಇದೆ. ಇತಿಹಾಸದಲ್ಲಿ ಈ ರೀತಿ ಆಡಳಿತ ಮಾಡಿದ ರಾಜರಿಲ್ಲ. ಎಷ್ಟೇ ಸುಧಾರಣೆ ಮಾಡಿದರು ಸಾಮನ್ಯರಂತೆ ಬದುಕಿದ ರಾಜರಿಲ್ಲ. ವಿಲಾಸದ ಜೀವನವೆ ರಾಜತ್ವ ಎಂಬ ಮನೋಭಾವ ಬೇರೂರಿದೆ. ಅದನ್ನು ಕಿತ್ತೊಗೆದು ಹೊಸ ಆಡಳಿತವನ್ನು ನೀಡಬೇಕು ಎಂಬುದು ಲೇಖಕರ ಆಶಯ. ಇಂತಹ ಆಡಳಿತ ಕೆಲವು ಪ್ರಾಂತಗಳಲ್ಲಿ ಸಂಭವಿಸಿರಬಹುದು. ಆದರೆ ಚರಿತ್ರೆಯಲ್ಲಿ ಇಂತಹ ರಾಜರನ್ನು ಕಾಣಲು ಸಾಧ್ಯವಿಲ್ಲ. ಇಂತಹ ಆಡಳಿತ ನಿಜವಾಗಿಯು ಜನರಿಗೆ ಬೇಕಾಗಿರುವುದು. ಇದನ್ನು ಆಡಳಿತ ಮಾಡುವವರು ಅರ್ಥಮಾಡಿಕೊಳ್ಳಬೇಕಾಗಿರುವದು. ಆದರೆ ಇಂತಹ ಜನಪರವಾದ ಆಡಳಿತ ಇಂದಿಗೂ ಕೂಡ ಸಾಧ್ಯವಾಗಿಲ್ಲ. ಈಗಲು ಕೂಡ ವಿಲಾಸದ ಆಡಳಿತವನ್ನೇ ನೋಡಿತ್ತಿದೇವೆ. ಕಾದಂಬರಿ ಕಟ್ಟಿಕೊಡುವ ಚರಿತ್ರೆಯ ಅಂಶಗಳು ವಾಸ್ತವನ್ನು ರೂಪಿಸಿಕೊಳ್ಳಲಿಕ್ಕೆ ಸಹಾಯ ಮಾಡುತ್ತವೆ. ಹೀಗಾಗಿ ಈ ಕಾದಂಬರಿಯಲ್ಲಿ ಪ್ರಸ್ತಾಪವಾಗುವ ಸುಧಾರಣೆಯು ಎಲ್ಲಾ ಕಾಲದ ಆಡಳಿತಗಾರರಿಗೆ ಮಾದರಿಯಾದದು.

"ನೀರಾನೆಯ ಪ್ರಾಂತದ ಹೊಸ ಜೀವನ ಕ್ರಮ ಎಲ್ಲ ಬಗೆಯ ಜನರನ್ನೂ ಆವರಿಸಿತು.

ಕಂದಾಯ ವಸೂಲಿ ಕೆಲಸಕ್ಕಾಗಿಯೆ ಹಲವರು ನೇಮಕಗೊಂಡರು. ಅವರ ತಂಡಗಳಿಗೆ ಮುಖ್ಯಸ್ಥರನ್ನು – ಕಾಪಿರುಗಳನ್ನು– ಖ್ನೇಮ್ ಹೊಟೆಪ್ ಗೊತ್ತು ಮಾಡಿದ. ಸ್ವಲ್ಪ ಹೊತ್ತು ತಾನು ಅವರ ಜೊತೆಗಿದ್ದು ವಸೂಲಿಯ ಕಾರ್ಯ ಹೇಗೆ ನಡೆಯಬೇಕೆಂಬುದನ್ನು ತೋರಿಸಿಕೊಟ್ಟ. ಪ್ರತಿ ದಿನ ಅಪರಾಹ್ನ ಕತ್ತೆಗಳ ಮೇಲೆ ಚೀಲಗಳಲ್ಲಿ ಧಾನ್ಯ ರಾಜಗೃಹಕ್ಕೆ ಬರತೊಡಗಿತು. ಕಂದಾಯ ಸಲ್ಲಿಸಿದವರ ಹೆಸರನ್ನು ದಾನ್ಯದ ಅಳತೆಯನ್ನು ಇಪ್ಯುವರ್ ಬರೆದುಕೊಟ್ಟ.

ಒಂದಡೆ ಕಂದಾಯ ವಸೂಲಿ, ಇನ್ನೊಂದೆಡೆ ಊರಿಗೆ ನೀರು ಪೂರೈಕೆಯಾಗುವ ನದೀ ದಡದ ಬಾವಿಯಿಂದಲೂ ಹೂಳೆತ್ತುವ ದುಡಿಮೆ. ಅಲ್ಲಿ ಇನ್ನೂರು ಮುನ್ನುರು ಜನ ದುಡಿದರು. ಬೆಳೆಗ್ಗೆ

ರಾಜಗೃಹಕ್ಕೆ ತೆರೆಳಿ ಇಘ್ಯುವರ್‌ಗೆ ಹೆಸರು ಕೊಟ್ಟು, ಕೆಲಸಕ್ಕೆ ಹೋಗುತ್ತಿದ್ದರು, ಈ ಜನ. ಹದಿನೆಂಟು ಇಪ್ಪತ್ತು ಜನರ ತಂಡ. ಸಂಜೆ ರಾಜಗೃಹದಲ್ಲಿ ಅವರಿಗೆ ಧಾನ್ಯ ಎಣ್ಣೆ  ವಿತರಣೆ. ಹತ್ತು ದಿನಗಳಿಗೊಮ್ಮೆ ಒಂದು ದಿನ ರಜಾ. ಮುಖ್ಯ ಬೀದಿಯ ಪಕ್ಕದಲ್ಲಿ, ಅಡ್ಡ ರಸ್ತೆಗಳ ಮಗ್ಗುಲಲ್ಲಿ, ಮನೆಮನೆಗಳ ಬಳಿ ನೀರು ಹರಿಯತೊಡಗಿದಾಗ ಜನರ ಸಂಭ್ರಮವೋ ಸಂಭ್ರಮ.

ಗ್ರಾಮಾಂತರ ಪ್ರದೇಶಗಳಲ್ಲೂ ಕಂದಾಯ ವಸೂಲಿ ನಡೆಯಿತು. ಅಲ್ಲಿ ಕೆಟ್ಟು ಹೋಗಿದ್ದ ರಸ್ತೆಗಳನ್ನು ಸರಿಪಡಿಸುವ, ಹೊಸವನ್ನು ನಿರ್ಮಿಸುವ ಕಾರ್ಯವೂ ನೆರವೇರಿತು. ಮೆನೆಪ್ ಟಾನೊಂದಿಗೆ ಅಬ್ಬು ಯಾತ್ರಿಕರಿದ್ದವರಿಗೆಲ್ಲ ಎಲ್ಲಿಲ್ಲದ ಆಸಕ್ತಿ.

‘ ನಮಗೆ ನಾವೆ ರಾಜರಾದರು ಕಂದಾಯ ತಪ್ಪಲಿಲ್ಲ.’ ಎಂದು ಕುಚೇಷ್ಟೆಯ  ಮಾತು ಆಡಿದವರು ಇದ್ದರು.

ಆದರೆ ಮೆನೆಪ್‌ಟಾನ ತನಕ ಒಂದು ದೂರು ಬರಲಿಲ್ಲ. ನಾಯಕ ದಿನಂಪ್ರತಿ ಪೂರ್ವಾಹ್ನ ರಾಜಗೃಹಕ್ಕೆ ಹೋಗಿ ಮದ್ಯಾಹ್ನದವರೆಗೆ ಅಲ್ಲಿ ಇರುತ್ತಿದ್ದ. ದಿನಬಿಟ್ಟು ದಿನ ಸ್ನೊಫ್ರು ಅಥವಾ ಸೆಬೆಕ್ಕು ಬರುತ್ತಿದ್ದರು. ತಿಂಗಳಿಗೊಮ್ಮೆ ಹಿರಿಯರ ಸಮಿತಿ ಸೇರುತಿತ್ತು.

ಹಿರಿಯರು ಪ್ರಾಂತಗಳಲ್ಲಿ ಸಂಚರಿಸಿ ಗ್ರಾಮಸಮಿತಿಗಳನ್ನು ರಚಿಸಿ ಬಂದರು.

ತನ್ನ ಪಾಲಿನ ಕಂದಾಯವನ್ನು ಮೆನೆಪ್‌ಟಾ ಸಂದಾಯ ಮಾಡಿದ.” [೩೨]

ಕಂದಾಯವನ್ನು ಎಲ್ಲಾರು ಕಟ್ಟಬೇಕೆಂದು ತೀರ್ಮಾನಿಸಿದರು. ಮೊದಲು ಮೆನೆಪ್‌ಟಾನೆ ತೆರಿಗೆಯನ್ನು ಕಟ್ಟಿದ. ತೆರಿಗೆಯಲ್ಲಿ ಯಾವುದೆ ಬೆದ ಬಾವ ಮಾಡಲಿಲ್ಲ. ಕಷ್ಟ ಇರುವವರಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಯಿತು. ಇದರಿಂದ ಜನರು ನೆಮ್ಮದಿಯಿಂದ ಜೀವನ ಮಾಡಲು ಸಾಧ್ಯವಾಯಿತು. ಕೆಲವು ಸೌಲಭ್ಯಗಳನ್ನು  ರಾಜಗೃಹದಿಂದಲೆ ಮಾಡಿದರು. ಕೃಷಿಗೆ  ಬೇಕಾದ ವಸ್ತುಗಳನ್ನು ಆಡಳಿತದವರೆ ನೀಡಿದರು. ಕೃಷಿ ಚಟುವಟಿಕೆಗಳು ಯಾವ ಸಮಸ್ಯೆಯಿಲ್ಲದೆ ಮುಂದುವರಿದವು. ಅವರಿಗೆ ಯಾವುದೆ ಸಮಸ್ಯೆ ಇದ್ದರು ನೇರವಾಗಿ ರಾಜಭವನದಲ್ಲಿ ಬಂದು ನಿವೇದನೆ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿದರು. ಜನರು ತಮ್ಮ ಸಮಸ್ಯೆಗಳನ್ನು ನೇರವಾಗಿ ಹೇಳಿಕೊಳ್ಳುವುದರಿಂದ ಮಧ್ಯವರ್ತಿಗಳ ಹಾವಳಿ ಇಲ್ಲದಂತಾಯಿತು. ಜನರ ಬವಣೆಗಳು ಸುಲಭವಾಗಿ ಬಗೆಹರಿದವು. ಎಲ್ಲಾರು ಸಮಾನವಾಗಿ ದುಡಿದು ಸಮಾನವಾಗಿ ಹಂಚಿಕೊಳ್ಳುವ ವ್ಯವಸ್ಥೆಯನ್ನು ರೂಪಿಸಿದರು. ಎಲ್ಲಾರಿಗೂ ಸಮಾನ ಶಿಕ್ಷಣ ಸಿಗಬೇಕೆಂಬ ಮಹತ್ವದ ಯೋಜನೆಯನ್ನು ರೂಪಿಸಿದನು. ಇದು ಕೆಲವರಿಗೆ ಅಪಥ್ಯವಾಯಿತು. ಮುಖ್ಯವಾಗಿ ಭೂಮಾಲಿಕರು ಈ ಹೊಸ ವ್ಯವಸ್ಥೆಯ ವಿರುದ್ಧ ಪಿತೂರಿ ನಡೆಸಲು ಪ್ರಾರಂಭಿಸಿದರು. ಒಳ ಒಳಗೆ ಈ ಆಡಳಿತದ ಬಗೆಗೆ ಹುಸಿ ನುಡಿಯಲು, ದೂರಲು ಪ್ರಯತ್ನಿಸಿದರು. ಇವರ ಆಡಳಿತವನ್ನು ದುರ್ಬಲಗೊಳಿಸಲು

ಪ್ರಯತ್ನಿಸಿದರು. ಹೆಗಾದರು ಮೆನೆಪ್ ಟಾ ನನ್ನು ಅಧಿಕಾರದಿಂದ ಕೆಳಗಿಳಿಸಿ ತಮ್ಮ ಅಸ್ತಿತ್ವವನ್ನು ಮತ್ತೆ ಸ್ಥಾಪಿಸಬೇಕೆಂದು ಸಂಚು ರೂಪಿಸಿದರು. ಇದು ಎಲ್ಲಾ ಕಾಲದಲ್ಲಿಯು ಬೆಳೆದುಕೊಂಡ ಬಂದ ಸಂಗತಿಯಾಗಿತ್ತು. ಇದನ್ನು ಕಾದಂಬರಿ ಅನಾವರಣಗೊಳಿಸುವುದರ ಮೂಲಕ ಹೊಸ ಚರಿತ್ರೆಯ ಆಯಾಮವನ್ನು ಕಟ್ಟಿಕೊಡುತ್ತದೆ.

ಮೆನೆಪ್‌ಟಾನ ಸುಧಾರಣೆಯನ್ನು ಸಹಿಸದ ಭೂಮಲಿಕ ವರ್ಗ ಅಧಿಕಾರದಿಂದ ಕೆಳಗಿಳಿಸಲು ಸರ್ವ ಪ್ರಯತ್ನ ಮಾಡಿತು. ರಾಜಗೃಹ ಇವನ ಬಗೆಗೆ ಸಲ್ಲದ ದೂರುಗಳನ್ನು ಸಲ್ಲಿಸಿತು. ಅವನ ಬಗ್ಗೆ ಕೆಟ್ಟ ಅಭಿಪ್ರಾಯ ಬರುವ ಹಾಗೆ ಚಿತ್ರಣ ನೀಡಲಾಯಿತು. ಅವನ ಮೇಲೆ ನೇರವಾಗಿ ಯುದ್ಧ ಸಾರದೆ, ಕುತಂತ್ರದಿಂದ ಸೆರೆಯಾಳಿಗಿಸಿ ಗಲ್ಲಿಗೇರಿಸುವ ಸಂಚು ರೂಪಿಸುತ್ತಾರೆ. ಇದನ್ನು ಅರಿಯದ ಮೆನೆಪ್‌ಟಾ ಸುಲಭವಾಗಿ ಅವರ ಮೋಸಕ್ಕೆ ಬಲಿಯಾಗುತ್ತಾನೆ. ಇರುವ ವ್ಯವಸ್ಥೆಯನ್ನು ಬದಲಿಸಿ ಹೊಸ ವ್ಯವಸ್ಥೆಯನ್ನು ರೂಪಿಸುವುದು ಎಂಥ ಬಿಕ್ಕಟ್ಟಿನ ಸಂಗತಿಯೆಂಬುದನ್ನು ಕಾದಂಬರಿ ನಿರೂಪಿಸುತ್ತದೆ. ಜನರ ಮೇಲೆ ಸವಾರಿ ಮಾಡುತ್ತಾ ಬಂದ ವರ್ಗ ಜನರೊಂದಿಗೆ ಸಾಮನ್ಯವಾಗಿ ಬದುಕುವುದು ರಾಜತ್ವಕ್ಕೆ ಬಗೆವ ದ್ರೋಹವೆಂದು ಬಾವಿಸಲಾಯಿತು.

ಬದಲಾವಣೆಯನ್ನು ತಂದುದೆ ಮೆನೆಪ್‌ಟಾನಿಗೆ ಸಮಸ್ಯೆಯಾಯಿತು. ವ್ಯವಸ್ಥೆಯೊಂದಿಗೆ ಹೊಂದಿಕೊಂಡು ಹೋಗುವವರಿಗೆ ಯಾವುದೆ ಸಮಸ್ಯೆಯಿರುವದಿಲ್ಲ. ಅದನ್ನು ಪ್ರಶ್ನೆ ಮಾಡಿ ಹೊಸ ವ್ಯವಸ್ಥೆ ರೋಪಿಸಲು ಹೊರಟಾಗ ಅನೇಕ ಬವಣೆಯನ್ನು ಎದುರಿಸಬೇಕಾಗುತ್ತದೆ. ಜೀವವನ್ನು ಕೊಡಬೇಕಾಗುತ್ತದೆ. ಬದಲಾವಣೆ ತರಲು ಬಯಸುವ ಮಾನವತವಾದಿಗಳು ಜೀವಕ್ಕಿಂತ ತಾವು ನಂಬಿದ ಮೌಲ್ಯಗಳಿಗೆ ಬದ್ದರಾಗಿರುತ್ತಾರೆ. ಜನರ ಉದ್ದಾರಕ್ಕೆ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಯಾವುದಕ್ಕು ಅವರು ಹೆದರುವದಿಲ್ಲ. ಮೆನೆಪ್‌ಟಾ ಕೂಡ ದುರುಳರ ಕುತಂತ್ರಕ್ಕೆ ಈಡಾದರು ಕೂಡ ಹೆದರದೆ ಗಲ್ಲಿಗೇರುತ್ತಾನೆ. ಗಲ್ಲಿಗೇರುವ ಮುಂಚೆ ಅವನ ವಿಚಾರಣೆ ನಡೆಯುತ್ತದೆ. ಆ ವಿಚಾರಣೆಯಲ್ಲಿ ಆಗುವ ಚರ್ಚೆಗಳು ಚರಿತ್ರೆಯ ಹೊಸ ನಿರುಪಣೆಯಾಗುತ್ತದೆ.

ಮೆನೆಪ್‌ಟಾನನ್ನು ಮೋಸದಿಂದ ಬಂಧಿಸಲಾಗುತ್ತದೆ. ಅರಸನಾದ ಪೆರೊನ ವಿರುದ್ಧ ಬಂಡಾಯ ಹೂಡಿದನೆಂದು ಆರೋಪ ಹೊರಿಸಲಾಗುತ್ತದೆ. ಪುರೋಹಿತರು, ಭೂಮಾಲಿಕರು ಸೇರಿ ಅವನನ್ನು ಅಪರಾಧಿಯನ್ನಾಗಿ ಮಾಡಲಾಗುತ್ತದೆ.

ಮೆನೆಪ್‌ಟಾನ ಮೇಲೆ ಹೊರಿಸುವ ಆರೋಪಗಳು ಅವನನ್ನು ವೃತಾ ಆರೋಪಿಯನ್ನಾಗಿ ಮಾಡುತ್ತವೆ. ನ್ಯಾಯಕ್ಕಾಗಿ, ಜನರ ಹಕ್ಕುಗಳ ರಕ್ಷಣೆಗಾಗಿ ಅವನು ಮಾಡಿದ ಹೋರಾಟ ರಾಜ ಪ್ರಭುತ್ವಕ್ಕೆ ದೇಶದ್ರೋಹದಂತೆ ಕಾಣುತ್ತದೆ. ರಾಜ ಪರಿವಾರವನ್ನು ರಕ್ಷಣೆ ಮಾಡುವ ಭೂಮಾಲಿಕರು, ಅಧಿಕಾರಿಗಳು ಮೆನೆಪ್‌ಟಾನನ್ನು ದೊಡ್ಡ ಅಪರಾಧಿಯೆಂದು ಬಿಂಬಿಸಲಾಗುತ್ತದೆ. ರಾಜರ

ಪರವಾಗಿರುವ ಟೆಹುಟಿ ಮಾಡುವ ಆರೋಪಗಳು ಚರಿತ್ರೆಯ ಮತ್ತೊಂದು ಮುಖವನ್ನು ತೆರೆದಿಡುತ್ತವೆ.'' ಈ ದುರುಳನ ಆಕೃತ್ಯ ಇಡೀ ಐಗುಪ್ತಕ್ಕೆ ಗೊತ್ತಿದೆ. ಆದರೂ ಸ್ಥಾನಕ್ಕೆ ಮನವರಿಕೆಯಾಗಲೆಂದು ಮತ್ತೊಮ್ಮೆ ಹೇಳುತ್ತೇನೆ. ಕಳೆದ ವರ್ಷ ಅಬ್ಬು ಉತ್ಸವದ ಮಾರನೆಯ ದಿನ ಕಂದಾಯ ವಸೂಲಿಯ ಕರ್ತವ್ಯ ಪಾಲನೆಗಾಗಿ ನಾನು ನೀರಾನೆ ಪ್ರಾಂತದ ಮುಖ್ಯ ಪಟ್ಟಣಕ್ಕೆ ಹೋದೆ. ಆ ರಾತ್ರೆ ಈ ಅಪರಾಧಿಯು ಸಂಗಡಿಗರೂ ಅಬ್ಬುವಿನಿಂದ ವಾಪಸಾದರು. ಕಂದಾಯ ಸಂಗ್ರಹವನ್ನು ಇದಿರಿಸಬೇಕು ನನ್ನನ್ನು ಸಾಯಿಸಿ ನೀಲ ನದಿಗೆ ಎಸೀಬೇಕು ಅಂತ ಫಿತೂರಿ ನಡೆಸಿದರು. ಬೆಳಗಾಗೋ ಹೊತ್ತಿಗೆ ಇಡೀ ಊರನ್ನೇ ನನ್ನ ವಿರುದ್ಧ ಎತ್ತಿಕಟ್ಟಿದರು. ರಾಜ ಗೃಹದಲ್ಲಿ ನಾನು ಊರಿನ ಪ್ರಮುಖರ ಸಭೆ ಕರೆದಾಗ, ಮನವಿ ಸಲ್ಲಿಸೋ ನೆಪದಲ್ಲಿ ಈತ ರೈತರನ್ನು, ಕುಸಲಿ ಕರ್ಮಿಗಳನ್ನು ಕರೆದುಕೊಂಡು ಆ ಸಭೆಗೆ ನುಗ್ಗಿದ. ಮಹಾಪ್ರಭು, ಮಹಾ ಅರ್ಚಕ ಮತ್ತು ಅಮಾತ್ಯ ವರ್ಯರನ್ನು ದಿಕ್ಕರಿಸಿ ಮಾತಾಡಿದ. ನನ್ನ ಮೇಲೆ ಕೈ ಮಾಡಿದ. ನನ್ನ ಭಟರ ಮುಖ್ಯಸ್ಥರ ಕಣ್ಣು ಕಿತ್ತಿದ. ಶಾಂತಿ ಸ್ಥಾಪನೆಗಾಗಿ ನಾನು ಮಾಡಿದ ಪ್ರಯತ್ನವೆಲ್ಲ ವಿಫಲವಾಯಿತು. ಪ್ರಯಾಸಪಟ್ಟು ಪ್ರಾಣ ಉಳಿಸಿಕೊಂಡೆ. ಪ್ರಾಂತಪಾಲನನ್ನು ಉಳಿಸಿದೆ. ಸೃಷ್ಟಿಕರ್ತ ರಾನ ಆಳ್ವಿಕೆಯಲ್ಲಿ ಕೆಲವು ಜನ ಸತ್‌ನ ಆರಾಧಕರಾದದ್ದು ರಾ ಅವರನ್ನು ದಂಡಿಸಿದ್ದು ನಮಗೆ ಗೊತ್ತಿದೆ. ಆದರೆ ಇಡಿಯ ಸಮಾಜದ, ದೇಶದ ವಿರುದ್ಧ ಬಂಡಾಯ ನಡೆದಿರುವುದು ಐಗುಪ್ತದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಇದೆ ಮೊದಲು. ಐಗುಪ್ತದ ನಲ್ವತ್ತು ನೂರು ಸಹಸ್ರ ಜನಸಂಖ್ಯೆಯಲ್ಲಿ ನೂರರಲ್ಲಿ ಒಂದು ಭಾಗ ಮಾತ್ರ ಬಂಡಾಯವೆದ್ದಿದ್ದಾರಂತ ಸುಮ್ಮನಿರೋಣವೆ? ಮರುಳುಗಾಡಿನ ಈ ಕಿಡಿಯನ್ನು ಕಡೆಗಣಿಸಿದರೆ ನಾಳೆ ನೀಲನದಿಗೇ ಜ್ವಾಲೇ ಅಂಟೀತು. ಐಗುಪ್ತದ ನಾಗರಿಕತೆ ನಾಶವಾದೀತು. ಭೂಮಿಯ ಮೇಲೆ ರಾನ ಪ್ರಭುತ್ವ ಮುಕ್ತಾಯವಾದೀತು. ಇಷ್ಟೇ ನನ್ನ ದೂರು ಅಷ್ಟೇ''[೩೩]

ಜನರ ಪರವಾಗಿ ಹೋರಾಡುವ ಮೆನೆಪ್ ಟಾನನ್ನು ಎಲ್ಲಾ ಪ್ರಭುತ್ವ ಶಕ್ತಿಗಳು ಹತ್ತಿಕ್ಕುವ ಪ್ರಯತ್ನ ಮಾಡುತ್ತಾರೆ. ಜನರ ನೆಮ್ಮದಿಗಾಗಿ ಚಿಂತಿಸುವ ಅದನ್ನು ಜಾರಿಗೆ ತರಲು ಯೋಚನೆ ಮಾಡುವ ಮೆನೆಪ್ ಟಾನನ್ನು ದೊಡ್ಡ ಅಪರಾಧಿಯನ್ನಾಗಿ ಬಿಂಬಿಸಲಾಗುತ್ತದೆ. ಇದೊಂದು ಚರಿತ್ರೆಯ ಬಹು ದೊಡ್ಡ ವ್ಯಂಗ್ಯ. ಮೆನೆಪ್‌ಟಾನ ಬಗ್ಗೆ ಮತ್ತೊಬ್ಬ ಭೂಮಾಲಿಕ ನೂಟ್‌ಮೋಸ್ ಹೇಳುವ ಮಾತುಗಳು ಚರಿತ್ರೆಯಲ್ಲಿ ದಾಖಲಾಗದ ಸಂಗತಿಗಳನ್ನು ತೆರೆದಿಡುತ್ತದೆ.'' ನಾನು ನೂಟ್‌ಮೋಸ್. ಮಹಾಪ್ರಭುವಿನ ಪಲ್ಲಕ್ಕಿ ಹೊತ್ತಿರುವ ಪುಣ್ಯಶಾಲಿ. ನೀರಾನೆ ಪ್ರಾಂತದ ಬಂಡಾಯಕ್ಕೆ ಮುಂಚೆ ಅಲ್ಲಿನ ಅತಿ ದೊಡ್ಡ ಭೂಮಾಲಿಕನಾಗಿದ್ದವನು. ಪ್ರಾಂತಪಾಲರ ನೇಮಕಕ್ಕೆ ಮೊದಲು ಮಹಾಪ್ರಭುವಿನ ಪ್ರತಿನಿಧಿಯಾಗಿದ್ದವನು. ಈತ ಸೆತೆಕ್ ನೆಕ್ತ್, ಈತ ಉಸರ್ಟ್– ಎಲ್ಲವನ್ನು ಕಳೆದುಕೊಂಡ ನನ್ನ ಹಾಗೆ ದೊರೆಯ ಕೃಪಾಶ್ರಯ ಪಡೆದವರು. ಮಹಾ ಅರ್ಚಕರ ಕರುಣೆ ಅಮಾತ್ಯರ ಸಹಾನುಭೂತಿ ನಮ್ಮನ್ನು

ಉಳಿಸಿವೆ. ಈ ದುಷ್ಟನ ಕೈಯಲ್ಲಿ ನಾವು ಪಟ್ಟ ಕಷ್ಟವನ್ನು ಏನಂತ ನಿವೇದಿಸಲಿ? ಒಬ್ಬ ಸಾಮನ್ಯ ಮನುಷ್ಯ ಜನರನ್ನು ಮರಳು ಮಾಡಿ, ಅವರನ್ನು ಸಾಧನವಾಗಿ ಬಳಿಸಿ ಸಮಾಜವನ್ನು ಬುಡಮೇಲು ಮಾಡಬಹುದಂತ ಯಾರು ಬಾವಿಸಿದ್ದರು? ಬಂಡಾಯ ನಡೆದ ದಿವಸ ಮಹಾಪ್ರಭುವಿನ ಜೊತೆ ಅಬ್ಬು ಯಾತ್ರೆ ಮುಗಿಸಿ ರಾಜದಾನಿಗೆ ಪ್ರಯಾಣ ಬೆಳೆಸ್ತಾ ಇದ್ದೆ... ಆ ಮೇಲೆ ನನಗೆ ತಿಳಿದು ಬಂದ ಪ್ರಕಾರ ಈತನು ಇವನ ಸಂಗಡಿಗರು ರಾಜಗೃಹದ ಪ್ರಾಕಾರವನ್ನು ಪುಡಿ ಮಾಡಿದರು. ಎಲ್ಲ ಭೂಮಲಿಕರ ಹೊಲ ಕಸಗಂಡ್ರು, ರಾಸುಗಳನ್ನು ವಶಕ್ಕೆ ತಗಂಡ್ರು. ಹೆಂಗಸರ ಮಾನಭಂಗ: ಅತ್ಯಾಚಾರ. ಅಯ್ಯೋ ಅಯ್ಯೋ... ಏನು ಹೇಳ್ಲಿ? ಪರಂಪರಗತವಾಗಿ ನಮ್ಮ ಜತೆ ಸುಖವಾಗಿದ್ದ ದಾಸ ದಾಸಿಯರನ್ನು ಬಿಡುಗಡೆ ಮಾಡಿದ್ರು. ಅವರು ಅನಾಥರಾದ್ರು. ತಮ್ಮ ಬಾಲಬಡಕ ಬಡವರ ಮಕ್ಕಳಿಗೆ ಶಾಲೆ ಲಿಪಿ ಸುರುಳಿ ಪಾಠ. ನಮ್ಮ ಮಕ್ಕಳಿಗೆ ಜೀತ. ಪ್ರಾಕಾರ ದ್ವಾರವನ್ನು ಮುರಿದ ಮರದ ದಿಮ್ಮಿ ಇವರ ಸ್ಮಾರಕ ಕಂಬ. ಅದಕ್ಕೆ ಅಲಂಕಾರ. ತಾನೇ ಮಹಾರಾಣಿ ಅನ್ನುವ ಹಾಗೆ ಈತನ ಹೆಂಡತಿಯೆ ಮೆರಿತಿದ್ದಾಳೆ. ಇನ್ನೂ ಸ್ವಲ್ಪ ಸಮಯ ಹೀಗೆ ಬಿಟ್ಟರೆ ಸಮಾಜದ ಬೆನ್ನೆಲುಬಾದ ಭೂಮಾಲಿಕ ಸಮುದಾಯವೇ ನಾಶವಾಗ್ತದೆ. ಒಂದು ಸಿಂಹವನ್ನು ಕೊಂದು ಅದರ ಒಂದು ಕಣ್ಣು ಕುಕ್ಕಿ ತೆಗೆದು, ಹೊಟ್ಟು ತುಂಬಿಸಿ ಹೊಲೆದು, ಅದಕ್ಕೆ ಬಕಿಲ ಎಂದು ಹೆಸರಿಟ್ಟು, ನಮ್ಮ ಮಾನ್ಯ ಕಂದಾಯ ಅಧಿಕಾರಿ ಟೆಹುಟಿಯವರ ಮುಖ್ಯಸ್ಥನನ್ನು ಈ ಜನ ಅವಮಾನಿಸಿದ್ದಾರೆ ಅಂತ ಕೇಳಿದ್ದೇನೆ. ಅಲ್ಲಿ ನಡೆದ ಎಲ್ಲಾ ದೌರ್ಜನಕ್ಕೆ ಈತನೆ ಮೂಲ." [೩೪]

ಧರ್ಮದ ವಾರಸುದಾರರೆಂದು ಹೇಳುವ ಪುರೋಹಿತರು ಜನರ ಹಿತವನ್ನು ಕಾಯುವದಿಲ್ಲ. ದೇವರ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಲೇ ಇರುತ್ತಾರೆ. ಅವರನ್ನು ಪ್ರಶ್ನೆ ಮಾಡುವವರಿಗೆ ಪ್ರಭುತ್ವದ ಬೆಂಬಲ ಬಳಿಸಿಕೊಂಡು ಸೆದೆ ಬಡಿಯಲು ಪ್ರಯತ್ನಿಸುತ್ತಾರೆ. ಸದಾ ರಾಜರನ್ನು ಓಲೈಸಿಕೊಂಡು ಅವರನ್ನು ದೇವರ ಅವತಾರವೆಂದು ಬಿಂಬಿಸುತ್ತಿರುತ್ತಾರೆ. ಇಂತವರು ಮೆನೆಪ್‌ಟಾನ ನೀತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವರು ಕೂಡ ಅನೇಕ ಆರೋಪಗಳನ್ನು ಅವನ ಮೇಲೆ ಮಾಡುತ್ತಾರೆ."ಇದು ಕೇಳು ಕಿವಿ ಕಿವುಡಾಗುವಷ್ಟು ಕೆಟ್ಟ ಸುದ್ದಿ; ಮಾಡಿದ ಕೈಗಳು ತಾವೇ ಕಡಿದು ಬೀಳುವಷ್ಟು ದುಷ್ಟ ಕೆಲಸ. ಬಂಡಾಯ ಹೂಡಿದ ಮಾರನೇ ದಿನವೇ ಈತ ತನ್ನ ಸಂಗಡಿಗರೊಂದಿಗೆ ದೇವಮಂದಿರಕ್ಕೆ ನುಗ್ಗಿ ದುಂಡಾವರ್ತನೆ ನಡೆಸಿದ. ನೆರೆದ ಜನರ ಎದುರಿನಲ್ಲಿ ಅರ್ಚಕ ಅಪೆಟ್‌ನನ್ನು ಥಳಿಸಿದ. ಇಲ್ಲಿರುವ ಮಾನ್ಯ ಭೂಮಾಲಿಕರು ಸೆತೆಕ್ ನಕ್ತ್ ಮತ್ತು ಸೆನ್ ಉಸರ್ಟ್ ಇದಕ್ಕೆ ಸಾಕ್ಷಿ. ಮಂದಿರದ ಮೂರ್ತಿ ದೇವರಲ್ಲ, ನಾನೆ ದೇವರು, ನನಗೆ ಪೂಜೆ ಸಲ್ಲಿಸಿ–ಎಂದ. ದೇವ ಮಂದಿರದ ಉಗ್ರಾಣವನ್ನು ಹೊಕ್ಕು ಭಕ್ತಾಧಿಗಳು ನೀಡಿದ ದವಸಧಾನ್ಯ ಮತ್ತಿತರ ಕಾಣಿಕೆಗಳನ್ನು ವಶಪಡಿಸಿಕೊಂಡ. ಬಂಗಾರದ ತಟ್ಟೆಗಳನ್ನು ದೋಚಿದ. ಶಿರಚ್ಛೇದನ ಮಾಡಿ ಸ್ಮಾರಕ ಕಂಬಕ್ಕೆ ತೂಗಿ

ಹಾಕ್ತೀನೆ ಅಂತ ಅಪೆಟ್‌ನನ್ನು ಹೆದರಿಸಿದ. ಮಹಾಪ್ರಭು–ಮಹಾಅರ್ಚಕರು–ಭೂಮಾಲಿಕರು ಒಟ್ಟಾಗಿ ಐಗುಪ್ತನನ್ನು ಹರಿದು ತಿನ್ತಿದ್ದಾರೆ–ಅಂತ ಕೂಗಾಡಿದ. ಇವನು ಮಾಡಿರುವುದು ದೇಶದ್ರೋಹ. ಈತ ಮನುಷ್ಯನಲ್ಲ–ಸಾರಿ ಸಾರಿ ಹೇಳ್ತೆನೆ ಇವನು ಸೆತ್ ಸೆತ್” [೩೫]

ಮೆನೆಪ್ ಟಾನನ್ನು ಎಲ್ಲಾರು ಸೇರಿ ಮಹಾ ಅಪರಾಧಿಯೆಂದು ತೀರ್ಮಾನಿಸುತ್ತಾರೆ. ಅವನ ನ್ಯಾಯಯುತ ವರ್ತನೆಯೆ ಆಡಳಿತದವರಿಗೆ ಅನ್ಯಾಯವಾಗಿ ಕಾಣುತ್ತದೆ. ಅವರ ವ್ಯವಸ್ಥೆಯನ್ನು ಪ್ರಶ್ನಿಸುವ ಮನೋಭಾವನ್ನು ಹತ್ತಿಕ್ಕುವುದೆ ಅವರ ಹಿತಾಸಕ್ತಿಯಾಗಿರುತ್ತದೆ. ಅದರಂತೆ ಮೆನೆಪ್‌ಟಾನನ್ನು ಗಲ್ಲಿಗೆ ಹಾಕುವ ತೀರ್ಮಾನ ಮಾಡುತ್ತಾರೆ. ಕಾನೂನು ರೂಪಿಸುವವರು ಅವರೆ ಆಗಿರುವದರಿಂದ ತೀರ್ಮಾನ ನೀಡುವವರು ಅವರೆ. ಇದರಿಂದಾಗಿ ಸಾಮನ್ಯರಿಗೆ ನ್ಯಾಯ ಸಿಗುವುದಿಲ್ಲ. ಇದು ಸಾವಿರಾರು ವರ್ಷ ಚರಿತ್ರೆಯಲ್ಲಿ ನಡೆದುಕೊಂಡು ಬಂದಿದೆ. ಇರುವ ವ್ಯವಸ್ಥೆಯನ್ನು ಬದಲಾಯಿಸಿ ಹೊಸ ವ್ಯವಸ್ಥೆಯನ್ನು ನಿರ್ಮಿಸಲು ಹೊರಟಾಗ ಉಂಟಾಗುವ ಬಿಕ್ಕಟ್ಟುಗಳನ್ನು ಮೆನೆಪ್‌ಟಾ ಎದುರಿಸಿ ಗಲ್ಲಿಗೇರಬೇಕಾಗುತ್ತದೆ. ಆದರೆ ಗಲ್ಲಿಗೇರುವ ಮುಂಚೆ ಮೆನೆಪ್ ಟಾ ಕೇಳುವ ಪ್ರಶ್ನೆಗಳು ಹೊಸ ವ್ಯವಸ್ಥೆಯ ನಿರ್ಮಾಣಕ್ಕೆ ನಾಂದಿ ಹಾಡುತ್ತವೆ.

“ನಮ್ಮ ಸಮಾಜ ವಿಸ್ತಾರ ಬುನಾದಿಯ ಮೇಲಿನ ಹತ್ತಾಳು ಎತ್ತರದ ಗೋರಿ. ಈ ಸೋಪಾನ ವ್ಯವಸ್ಥೆ ನಿಂತಿರೋದು ಸಹಸ್ರ ಸಹಸ್ರ ಶ್ರಮಜೀವಿಗಳ ಭುಜಗಳ ಮೇಲೆ. ಎತ್ತರಕ್ಕೆ ಹೋಗ್ತಾ ಅಗಲ ಕಿರಿದು. ದುಡಿಸುವ ಕಾಪಿರುಗಳು, ಭೂಮಲಿಕರು, ವರ್ತಕರು, ಸೈನ್ಯ, ಆಡಳಿತಗಾರರು–ಅರ್ಚಕರು. ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ. ನಮ್ಮ ಪ್ರಾಚೀನರ ಮಾತಿನಂತೆ ಮುಂಗೈಜೋರೊನಿಂದ ಏನನ್ನು ಸಾಧಿಸಲು ಆಗುವದಿಲ್ಲ. ಆದರೆ ನಮ್ಮ ನಡವಳಿಕೆ ಆ ಮಾತನ್ನು ಸುಳ್ಳು ಮಾಡಿದೆ. ಕಂದಾಯ ವಸೂಲಿ, ಗೋರಿ ನಿರ್ಮಾಣ, ಗಣಿಕೆಲಸ ಇವೆಲ್ಲ ಬಲಪ್ರಯೋದಿಂದಲೇ ನಡಿತವೆ. ದಾಸ ದಾಸಿಯರ ಬಲತ್ಕಾರದ ದುಡಿಮೆಯಿಂದ ನಮ್ಮಲ್ಲಿ ಸಂಪತ್ತು ಉತ್ಪನ್ನವಾಗಿದೆ. ಇದು ಸ್ವರ್ಣ ಪಿಶಾಚಿಗಳ ಸಮಾಜ. ಮನುಷ್ಯ ಜೀವಕ್ಕೆ ಇಲ್ಲಿ ಬೆಲೆ ಇಲ್ಲ. ಹೋರಾಟದಲ್ಲಿ ಸೆರೆ ಸಿಕ್ಕಿದವರು ನಮ್ಮ ವ್ಯವಸ್ಥೆಯ ಗುಲಾಮರಾಗುತ್ತಾರೆ. ಅವರನ್ನು ಕೆಡವಿದಾಗ ಅವರ ಬಲಗೈಯನ್ನೋ ಯೋನಿಯನ್ನೋ ಕತ್ತರಿಸಿ ತರುತ್ತಾರೆ ನಮ್ಮ ವೀರ ಯೋಧರು... ಅರಮನೆಯ ಲೆಕ್ಕಿಗನಿಗೆ ತೋರಿಸಿ ದಾಖಲೆ ಇಡಿಸೋದಕ್ಕೆ. ಆ ಸಾಧನೆಯ ಪ್ರಮಾಣಕ್ಕೆ ಅನುಸಾರವಾಗಿ ಬಹುಮಾನ. ಇದಲ್ಲವಾ ನಾಗರಿಕತೆ.

ಆಯಿತು ಕೊನೆ ಮಾತು. ಇಷ್ಟು ದಿನ ನಿಮ್ಮ ಚೌಕಮಣೆ ಆಟದಲ್ಲಿ ಕಾಯಿಯಾಗಿದ್ದೆ. ನೀವು ಹೀಗೆಲ್ಲ ಒಂದಾಗಿದ್ದೀರಿ. ಸದ್ಯಕ್ಕೆ ಆಟ ಮುಗಿದಿದೆ. ಕಾಯಿಯಾಗಿದ್ದ ಅಗತ್ಯ ನಿಮಗಿಲ್ಲ. ಸೋಪ್ರು, ಸೆಬೆಕ್ಪು, ನಮ್ಮ ಪ್ರಾಂತದ ಹಿರಿಯ ಸಮಿತಿ ಸದಸ್ಯರು. ಖೆಮ್ ಹೊಟೆಪ್–ಎಲ್ಲರ ದೃಷ್ಟಿಯಲ್ಲಿ ನಾನೊಬ್ಬ

ಶಾಂತ ಸ್ವಭಾವದ  ನಾಯಕ. ಬಟಾ ಕೇಳಿದ ಒಂದು ಪ್ರಶ್ನೆ ಇದು– 'ಅಣ್ಣ ನಿನಗೆ ಸಿಟ್ಟು ಬರೋದು ಯಾವತ್ತು?'( ಬಹಳ ಮೆಲ್ಲನೆ) ಯಾವತ್ತು? ಯಾವತ್ತು? (ಕ್ರಮೇಣ ಧ್ವನಿ ಏರಿಸುತ್ತಾ) ಮಹಾ ಪ್ರಭುಗಳೇ ಮಹಾ ಅರ್ಚಕರೇ ಅಮಾತ್ಯರೇ, ಪ್ರತಿಷ್ಠಿತರೇ! ಕಿವಿಗೊಟ್ಟು ಕೇಳಿ! ನಮಗೆ ಜನರಿಗೆ ಸಿಟ್ಟು ಬಂದಾಗ ಅದು ಮಹಾಪೂರವಾಗ್ತದೆ. ಅದರಲ್ಲಿ ನೀವೆಲ್ಲ ಕೊಚ್ಚಿ ಹೋಗ್ತೀರಿ! ಮಹಾಪೂರ ಇಳಿದಾಗ ಕಂಡುಬರೋ ಜಗತ್ತು ಹೊಸದು– ಹೊಚ್ಚ ಹೊಸದು! ಆ ನೂತನ ಸೃಷ್ಟಿ ನಿರಾಂತಕವಾಗಿ ಆಗಲಿ ಅಂತ.– ಇಗೋ ರಾನನ್ನು ಪ್ಟಾನನ್ನು ಅನನ್ಯಭಾದಿಂದ ಪ್ರಾರ್ಥಿಸುತ್ತೇನೆ." [೩೬]

ಇಡೀ ಕಾದಂಬರಿ ಜನತೆಯ ಭಾವನೆಗೆ ಸ್ಪಂದಿಸುವ ಒಬ್ಬ ನಾಯಕನನ್ನು ಸೃಷ್ಟಿಸಿದೆ. ಅದೇ ನಾಯಕನನ್ನು ಪ್ರಭುತ್ವ ಶಕ್ತಿಗಳು ತಮ್ಮ ಹಿತಾಸಕ್ತಿಗಾಗಿ ಹೇಗೆ ಧಮನ ಮಾಡುತ್ತವೆ ಎಂಬುದನ್ನು ಅನಾವರಣಗೊಳಿಸಲಾಗಿದೆ. ಇಂತಹ ಮನಕರಗಿಸುವ ಸಂಗತಿಗಳು ಪರಿಣಾಮಕಾರಿಯಾಗಿ ಚರಿತ್ರೆಯ ಬರವಣಿಗೆಯಲ್ಲಿ ಬರುವದಿಲ್ಲ. ಚರಿತ್ರೆಯ ಕರಾಳತೆಯನ್ನು ಅರ್ಥ ಮಾಡಿಕೊಂಡು ಮೆನೆಪ್ಟಾ ನಂತಹ ನಾಯಕನನ್ನು ನಮ್ಮ ಕಾಲ ಹೊಂದಬೇಕೆಂಬುದನ್ನು ನಾವು ಮನಗಾಣಬೇಕಿದೆ.

## ಅಡಿಟಿಪ್ಪಣಿಗಳು

೧. ಡಾ. ಸಿ.ಎನ್. ರಾಮಚಂದ್ರನ್, ನಿರಂಜನರ ಐತಿಹಾಸಿಕ ಕಾದಂಬರಿಗಳುಃ ಒಂದು ವಿಮರ್ಶೆ,ಪು. ೨೭೦, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೨. ಕೆ. ವಿ. ತಿರುಮಲೇಶ, ನೆಫರ್‌ಟೀಮ್‌ಳಿಗೊಂದು ಪತ್ರ, ಪು. ೨೫೯, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ,

೩.ಡಾ. ಸಿ.ಎನ್. ರಾಮಚಂದ್ರನ್, ನಿರಂಜನರ ಐತಿಹಾಸಿಕ ಕಾದಂಬರಿಗಳುಃ ಒಂದು ವಿಮರ್ಶೆ, ಪು. ೨೭೦, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬)

೪. ಕೆ. ವಿ. ತಿರುಮಲೇಶ, ನೆಫರ್‌ಟೀಮ್‌ಳಿಗೊಂದು ಪತ್ರ, ಪು. ೨೫೮, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ

೫. ಮೃತ್ಯುಂಜಯ, ನಿರಂಜನ, ಪು.೧, ಐಬಿಎಚ್ ಪ್ರಕಾಶನ–೧೯೭೬

೬. ಮೃತ್ಯುಂಜಯ, ನಿರಂಜನ, ಪು.೧, ಐಬಿಎಚ್ ಪ್ರಕಾಶನ–೧೯೭೬

೭. ಎಂದಿಗೂ ಹೊಸದು, ರಾಜೇಂದ್ರ ಚೆನ್ನಿ, ಪು.೧೦೪,ಅಭಿರುಚಿ ಪ್ರಕಾಶನ, ಮೈಸೂರು, ೨೦೧೪)

೮. ಡಾ. ಸಿ.ಎನ್. ರಾಮಚಂದ್ರನ್,ನಿರಮಜನರ ಈತಿಹಾಸಿಕ ಕಾದಂಬರಿಗಳುಃ ಒಂದು ವಿಮರ್ಶೆ, ಪು. ೨೭೬–೭೭, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ,

೯. ಎಂದಿಗೂ ಹೊಸದು, ರಾಜೇಂದ್ರ ಚೆನ್ನಿ, ಪು.೧೦೫, ಅಭಿರುಚಿ ಪ್ರಕಾಶನ, ಮೈಸೂರು, ೨೦೧೪

೧೦. ಎಂದಿಗೂ ಹೊಸದು, ರಾಜೇಂದ್ರ ಚೆನ್ನಿ, ಪು.೧೦೬, ಅಭಿರುಚಿ ಪ್ರಕಾಶನ, ಮೈಸೂರು, ೨೦೧೪

೧೧. ಎಂದಿಗೂ ಹೊಸದು, ರಾಜೇಂದ್ರ ಚೆನ್ನಿ, ಪು.೧೦೬,ಅಭಿರುಚಿ ಪ್ರಕಾಶನ, ಮೈಸೂರು, ೨೦೧೪

೧೨. ಕೆ. ವಿ. ತಿರುಮಲೇಶ, ನೆಫರ್‌ಟೀಮ್‌ಳಿಗೊಂದು ಪತ್ರ, ಪು. ೨೬೧, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧೩. ಕೆ. ವಿ. ತಿರುಮಲೇಶ, ನೆಫರ್‌ಟೀಮ್‌ಳಿಗೊಂದು ಪತ್ರ, ಪು. ೨೬೩, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧೪ .ಕೆ. ವಿ. ತಿರುಮಲೇಶ, ನೆಫರ್‌ಟೀಮ್‌ಳಿಗೊಂದು ಪತ್ರ, ಪು. ೨೬೪, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧೫. ಮೃತ್ಯುಂಜಯ, ನಿರಂಜನ, ಪು.೧೪, ಐಬಿಎಚ್ ಪ್ರಕಾಶನ–೧೯೭೬

೧೬. ಮೃತ್ಯುಂಜಯ, ನಿರಂಜನ, ಪು.೧೪, ಐಬಿಎಚ್ ಪ್ರಕಾಶನ–೧೯೭೬

೧೭. ಅದೇ, ಪು ೨೦

೧೮. ಅದೇ, ಪು ೨೫–೨೭

೧೯. ಅದೇ, ಪು. ೩೯–೪೦

೨೦. ಅದೇ, ಪು. ೪೦

೨೧. ಅದೇ,ಪು೪೧–೪೨

೨೨. ಅದೇ,ಪು. ೪೫–೪೬

೨೩. ಅದೇ, ಪು. ೪೮–೪೯

೨೪. ಅದೇ, ಪು. ೪೯–೫೦

೨೫. ಅದೇ, ಪು. ೫೧

೨೬. ಅದೇ, ಪು. ೭೦

೨೭. ಅದೇ ಪು. ೭೫–೭೬

೨೮. ಅದೇ ಪು.೮೧

೨೯. ಅದೇ ಪು.೮೫

೩೦. ಅದೇ ಪು. ೯೩

೩೧.ಅದೇ, ಪು.೯೪

೩೨. ಅದೇ, ಪು. ೯೯–೧೦೦

೩೩. ಅದೇ, ಪು. ೪೦೩–೪೦೪

೩೪. ಅದೇ, ಪು. ೪೦೬

೩೫. ಅದೇ, ಪು. ೪೦೭

೩೬. ಅದೇ, ಪು. ೪೧೮–೧೯

****

# ಅಧ್ಯಾಯ ಐದು: ಚಿರಸ್ಮರಣೆ ಕಾದಂಬರಿಯಲ್ಲಿ ಚರಿತ್ರೆಯ ಪರಿಕಲ್ಪನೆ

ನಿರಂಜನರ ಚಿರಸ್ಮರಣೆ ಕಾದಂಬರಿ ನೇರವಗಿ ಚರಿತ್ರೆಯನ್ನು ನಿರೂಪಿಸುವದಿಲ್ಲ. ಚರಿತ್ರೆಯ ಯಾವದೇ ಕಾಲವನ್ನು ಕೇಂದ್ರವಾಗಿಸಿಕೊಂಡಿಲ್ಲ. ಅದೊಂದು ಚಾರಿತ್ರಿಕ ಕೃತಿಯಲ್ಲ. ಆದರೆ, ಒಂದು ಕಹಿ ಘಟನೆಯನ್ನು ಕೇಂದ್ರವಾಗಿಸಿಕೊಂಡು ಎಲ್ಲಾ ಕಾಲಕ್ಕೂ ಸಲ್ಲುವ ಕಾದಂಬರಿಯನ್ನು ನಿರಂಜನರು ರಚಿಸಿದ್ದಾರೆ. ಭೂಮಾಲಿಕರ ವಿರುದ್ಧ ಬ್ರಿಟಿಷರ ವಿರುದ್ಧ ಹೋರಾಡಿದ ವ್ಯಕ್ತಿಗಳನ್ನು ಗಲ್ಲಿಗೇರಿಸಿದ ಘಟನೆಯು ಕಾದಂಬರಿಗೆ ವಸ್ತುವಾಗಿದೆ. ನಿರಂಜನರಿಗೆ ಸಾಮನ್ಯರ ಚರಿತ್ರೆ ಬರೆಯುವದು ಮುಖ್ಯ. ಸಾಮನ್ಯರ ಬವಣೆಗಳು, ಸಮಸ್ಯೆಗಳು, ಸಂಕಟಗಳು, ಅವರ ಮೇಲಾಗುವ ದಬ್ಬಾಳಿಕೆ, ಶೋಷಣೆಯನ್ನು ಮನಕರಗುವಂತೆ ಕಲಾತ್ಮಕವಾಗಿ ಕಟ್ಟಿಕೊಡುವುದು ನಿರಂಜನರ ಕಥನ ಶೈಲಿ. ಈ ರೀತಿಯ ಕಥನವು ಜನಪ್ರಿಯ ಮಾದರಿಯಲ್ಲಿ ಇರುವದಿಲ್ಲ. ಒಂದು ತಾತ್ವಿಕ ತಳಹದಿಯ ಮೇಲೆ ಇರುತ್ತದೆ. ಅದು ಚರಿತ್ರೆಯ ಭಾಗವಾಗುತ್ತದೆ. ಯಾವುದು ಚರಿತ್ರೆಯಲ್ಲಿ ಸ್ಥಾನ ಪಡೆಯದೆ ಅವಜ್ಞೆಗೆ ಒಳಗಾಗಿದೆಯೋ ಅದು ಇವರ ಕಾದಂಬರಿಯಲ್ಲಿ ಕಾಣುತ್ತೇವೆ. ಚರಿತ್ರೆಯಲ್ಲಿ ಬಡವರ, ರೈತರ, ಕೂಲಿಕಾರರ ಬದುಕಿನ ವಿನ್ಯಾಸ ಕಾಣಿಸುವದಿಲ್ಲ. ಅವರ ಚರಿತ್ರೆಯನ್ನು ಬರೆಯಲು ಕಾದಂಬರಿಯನ್ನು ಅವಲಂಬಿಸಬೇಕಾಗುತ್ತದೆ. ನಿರಂಜನರು ಸಾಮನ್ಯರ ಉದ್ದಾರಕ್ಕೆ ತಮ್ಮನ್ನು ಅರ್ಪಿಸಿಕೊಂಡವರು. ಅವರ ಜೀವನವನ್ನೇ ಕಥನ ಮಾಡಿದವರು. ಚಿರಸ್ಮರಣೆ ಕಾದಂಬರಿ ರೈತರ ಬವಣೆಗಳನ್ನು ಚಿತ್ರಿಸುವದರ ಜೊತೆಗೆ ಅವರ ಹೋರಾಟದ ದುರಂತವನ್ನು ಬಿಂಬಿಸುತ್ತದೆ.

“ಚಿರಸ್ಮರಣೆಯ ಕತೆ ಹೋರಾಟದ ಕತೆ. ಹೋರಾಟಗಾರರ ಕತೆ. ಕಾದಂಬರಿಯ ತುಂಬ ಎಡೆಬಿಡದ ಚಟುವಟಿಕೆಗಳು. ನಿರ್ದಿಷ್ಟ ಆಶಯ ಉದ್ದೇಶವನ್ನು ಹೊತ್ತ ಕೇರಳದ ರೈತರು. ಕಯ್ಯೂರಿನ ಮೂಲೆಯಲ್ಲಿ ಭಾವುಕತೆಯ ಸುಳಿಗೆ ಸಿಕ್ಕದೆ ರೈತರ ಸಂಘಟನೆ ನಡೆಯುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಬುಡುಕ ಗುತ್ತೆದಾರಿಯನ್ನು ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳ ಮೂಲಕ ಇದಿರಿಸಿದ ಚಾರಿತ್ರಿಕ ಘಟನೆಯೆ ಈ ಕಾದಂಬರಿಗೆ ಆಧಾರ. ಶೋಷಣೆಗೆ ಸಿಲುಕಿದ ಬಡ ರೈತರು ತಮ್ಮ ಹಕ್ಕುಗಳಿಗಾಗಿ ವ್ಯವಸ್ಥಿತ ಸಂಘಟನೆಯನ್ನು ರೂಪಿಸುತ್ತಾರೆ. ಸಂಘಟನೆಯನ್ನು ಹತ್ತಿಕ್ಕಲು ಸಾಮ್ರಾಜ್ಯಶಾಹಿ ಮತ್ತು ಸಾಮ್ರಾಜ್ಯಶಾಹಿ ಕೈಗೊಂಬೆಗಳು ಅವಿರತ ಪ್ರಯತ್ನ ನಡೆಸುತ್ತವೆ. ಸಾಮ್ರಾಜ್ಯಶಾಹಿ ಪ್ರಯತ್ನಗಳೆಲ್ಲವು ಸಂಘಟಿತ ರೈತ ಸಮುದಾಯದ ಇದುರಿಗೆ ಹುಸಿಗೊಳ್ಳುತ್ತವೆ. ಗುತ್ತೆದಾರಿಗಳ ಸಾಮ್ರಾಜ್ಯಶಾಹಿಗಳ ಕ್ರೌರ್ಯ ಅಮಾನುಷತೆಗಳ ಮೂಲಕ ಸತ್ಯಬದ್ದ ಹೋರಾಟಗಾರರು ತೀವ್ರ ಸ್ವರೂಪದ ಶಿಕ್ಷೆಗೆ ಗುರಿಯಾಗುತ್ತಾರೆ. ಸಾಮ್ರಾಜ್ಯಶಾಹಿ ನ್ಯಾಯಾಲಯ ಹೋರಾಟಗಾರರಿಗೆ ಗಲ್ಲು ಶಿಕ್ಷೆ ವಿಧಿಸುತ್ತದೆ. ತಮ್ಮ ಹೋರಾಟದ ಫಲ ಈ ನೆಲದಲ್ಲಿ ಸಿದ್ಧಿಸುತ್ತದೆಂಬ ಅಚಲ ನಂಬಿಕೆಯಿಂದ ಅವರು ಸಾವಿಗೆ ಗುರಿಯಾಗುತ್ತಾರೆ.”[1]

ಕಯ್ಯೂರಿನ ರೈತರು ತಮ್ಮ ಬದುಕಿನ ಭದ್ರತೆಗಾಗಿ ಹೋರಾಡಿದವರು. ಆದರೆ ಅದನ್ನು ಹತ್ತಿಕ್ಕಿದವರು ಊರಿನ ಭೂಮಾಲಿಕರು. ಭುಮಾಲಿಕರಾದ ನಂಬೂದರಿಗಳು ರೈತರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸದಾ ತಮ್ಮ ಸೇವೆಯಲ್ಲಿ ಇರಬೇಕೆಂದು ಬಯಸುವವರು. ಅವರು ಎಂದು ಸ್ವತಂತ್ರವಾಗಿ ಯೋಚನೆ ಮಾಡಿ ಸ್ವಂತ ಬದುಕನ್ನು ಕಟ್ಟಿಕೊಳ್ಳಬಾರದೆಂದು ಆಶಿಸುವವರು. ಅದಕ್ಕೆ ವಿರುದ್ಧವಾದವರನ್ನು ಅಮಾನುಷವಾಗಿ ಶಿಕ್ಷಿಸುವವರು. ಅದನ್ನು ಯಾರು ಪ್ರಶ್ನೆ ಮಾಡುವ ಹಾಗಿಲ್ಲ. ಆ ರೀತಿಯ ವಾತವರಣವನ್ನೇ ಅವರು ಬಯಸುವದಿಲ್ಲ. ಊರಿಗೆ ಪಾಠ ಮಾಡಲು ಬರುವ ಮಾಸ್ತಾರನನ್ನು ತಮ್ಮ ಮಕ್ಕಳಿಗೆ ಮಾತ್ರ ಪಾಠ ಹೇಳಿಕೊಡಲು ಒತ್ತಾಯಿಸುತ್ತಾರೆ. ಬೇರೆ ಮಕ್ಕಳು ಕಲಿತರೆ ಮುಂದೆ ತಮ್ಮನ್ನು ಪ್ರಶ್ನಿಸಬಹುದೆಂಬ ಭಯ ಅವರನ್ನು ಕಾಡುತ್ತದೆ. ಆದ್ದರಿಂದ ಅವರಿಗೆ ಯಾವದೇ ಅರಿವಿನ ವಾತವರಣ ನಿರ್ಮಾಣವಾಗುವದನ್ನು ಸಹಿಸುವದಿಲ್ಲ. ಇದಕ್ಕಾಗಿ ಹೋರಾಡುವವರು ಭೂಮಾಲಿಕರಿಂದ ಅನೇಕ ಬಗೆಯ ಹಿಂಸೆಗೆ ಒಳಗಾಗಿ ಶಿಕ್ಷೆಗೆ ಗುರಿಯಾಬೇಕಾಗುತ್ತದೆ. ಇದು ಚರಿತ್ರೆಯಲ್ಲಿ ನಡೆದುಕೊಂಡು ಬಂದ ಸಂಗತಿ.

ಕಯ್ಯೂರು ಎಂಬ ಹಳ್ಳಿಯಲ್ಲಿ ನಡೆಯುವ ಘಟನೆಗಳು ಕೇವಲ ಆ ಊರಿಗೆ ಮಾತ್ರ ಸೀಮಿತವಾದುದಲ್ಲ. ಎಲ್ಲಾ ಹಳ್ಳಿಗಳಲ್ಲಿಯು ಈ ರೀತಿಯ ಸಂದರ್ಭಗಳೇ ಇರುತ್ತವೆ. ಭೂಮಾಲಿಕರು ದುಡಿಯುವವರನ್ನು ಹೆದರಿಸಿ ಬೆದರಿಸಿ ಹಿಂಸೆ ಮಾಡಿ ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವ ಎಲ್ಲಾ ತಂತ್ರಗಳನ್ನು ಹೊಂದಿರುತ್ತಾರೆ. ರೈತರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸಾಲ ಅವರಿಗೆ ಮಹಾ ಅಸ್ತ್ರ. ಬಡ ರೈತರಲ್ಲಿ ಸ್ವಂತ ಬಂಡವಾಳ ಹಾಕಿ ಕೃಷಿ ಮಾಡುವುದು ಸಾಧ್ಯವಿರುವದಿಲ್ಲ. ಆದ್ದರಿಂದ ಅನಿವಾರ್ಯವಾಗಿ ಆ ಊರಿನ ಉಳ್ಳವರನ್ನೇ ಅವಲಂಬಿಸಬೇಕಾಗುತ್ತದೆ. ಅವರ ಅಸಾಯಕತೆಯನ್ನು ಬಳಿಸಿಕೊಂಡ ಭೂಮಾಲಿಕರು ಸಾಲದ ಶೂಲದಲ್ಲಿ ಸಿಕ್ಕಿಸಿ ತಮ್ಮ ಹಿಡಿತಲ್ಲಿಟ್ಟುಕೊಳ್ಳುತ್ತಾರೆ.

“ ಸಂಜೆಯ ಹೊತ್ತು. ಜನರ ಗುಂಪು ಜಮೀನ್ದಾರರ ಮನೆಯ ಮುಂದೆ ನೆರೆಯುತ್ತಿರುವದನ್ನು ಕಂಡು ಗೊಂಬೆಯಾಟದವರೋ ದೊಂಬರೋ ಇರಬಹುದೆಂದು, ತಮಾಷೆ ನೋಡಲು ಚಿರಕುಂಡನು ಅಲ್ಲಿಗೆ ಹೋಗಿದ್ದ. ಆದರೆ ಅಲ್ಲಿ ಅಂತಹ ಯಾವ ಆಟವೂ ಇರಲಿಲ್ಲ. ಬದಲು, ಚಾವಡಿಯ ಕುರ್ಚಿಯ ಮೇಲೆ ಕುಳಿತಿದ್ದ ವಯಸ್ಸಿನಲ್ಲಿ ತನಗಿಂತಲೂ ಚಿಕ್ಕವರಾದ ಜಮೀನದಾರರ ಎದುರು, ಮಧ್ಯ ವಯಸ್ಸಿನ ರೈತನೊಬ್ಬ ಹೊರಗೆ ಅಂಗಳದಲ್ಲಿ ಮಣ್ಣಿನ ಮೇಲೆ ಉದ್ದಂಡ ಮೈಚಾಚಿ ಕೈ ಜೋಡಿಸಿ ನಮಸ್ಕಾರ ಮಾಡಿದ್ದ. ಚಿರಕುಂಡ ಅಲ್ಲಿಗೆ ಹೋಗಿ ನೋಡಿದಾಗ ಮೌನ ನೆಲೆಸಿತ್ತು. ಮುಂದೆ ಜಮೀನ್ದಾರರು ಏನು ಹೇಳುವರೋ ಎಂದು ಆತುರಗೊಂಡು ಕಿವಿ ನಿಮಿರಿಸಿ ಎಲ್ಲರೂ ನಿಂತಿದ್ದರು.

ಜಮೀನ್ದಾರರು ಏನು ಹೇಳಲೆ ಇಲ್ಲ. ಅವರು ಒಂದೆ ಸಮನೆ ಸಿಗಿರೇಟು ಸೇದುತ್ತಾ ಹೊಗೆ ಬಿಟ್ಟರು. ಅವರ ಎಡಬಲಗಳಲ್ಲಿ ಕೈಕಟ್ಟಿ ನಿಂತ ಆಳುಗಳು ಇದ್ದರು.

ಮೌನವನ್ನು ಮುರುದು ಜಮೀನ್ದಾರರ ಸ್ವರ ಗುಡುಗಿತು.

'ಏನು ಹೇಳು'

ರೈತನಿಂದ ಉತ್ತರ ಬರಲಿಲ್ಲ.

'ಆಟ ಆಡ್ತಿದ್ದಾನೆ ಬೋಳಿಮಗ. ಬಿಗಿಯಿರೋ ಇನ್ನೆರಡು'

ಪಕ್ಕದಲ್ಲಿಯೇ ಬಾರುಕೋಲು ಹಿಡಿದುಕೊಂಡು ನಿಂತಿದ್ದ ಕಟ್ಟಾಳುವೊಬ್ಬ ಮುಂದೆ ಬಂದು ಮಲಿಗಿದ್ದವನ ಬೆನ್ನಿನ ಮೆಲೆ ಬಾರಿಸಿದ.

ಆದರೂ ರೈತ ಏಳಲಿಲ್ಲ. ಭೂಮಿತಾಯಿ ಮಡಿಲಲ್ಲಿ ಮುಖ ಇಟ್ಟವನು ಮೇಲಕ್ಕೆ ತಲೆ ಎತ್ತಲೇ ಇಲ್ಲ.

ಮತ್ತೂ ಹೊತ್ತಾದ ಮೇಲೆ ಜಮೀನ್ದಾರರೆದ್ದು, ರೈತನನ್ನು ಶಪಿಸುತ್ತಾ ಆತನ ಸುತ್ತು ಮುತ್ತು ನೆಲವನ್ನು ತುಳಿಯುತ್ತಾ ನಡೆದಾಡಿದರು.

ಚಿರಕುಂಡ ಉಸಿರು ಬಿಗಿ ಹಿಡಿದು ಮಲಗಿದವನು ಯಾರೆಂದು ನೋಡಲು ಯತ್ನಿಸಿದ. ಆದರೆ ಮುಖ ಕಾಣಲಿಲ್ಲ.

ಕೊನೆಗೆ ಜಮೀನ್ದಾರ ಆದೇಶದಂತೆ ಆಳುಗಳು ಅವನನ್ನು ಹಿಡಿದೆಬ್ಬಿಸಿದರು. ಆತ ಮುಖ ಜೋತು ಹಾಕಿ ನಿಂತುಕೊಂಡ. ಆ ಮುಖದ ತುಂಬಾ ಮಣ್ಣಿತ್ತು. ಹಣೆಯ ಗಾಯದಿಂದ ಸುರಿದ ರಕ್ತವೂ ಕಣ್ಣೀರು ಮಣ್ಣಿನೊಡನೆ ಬೆರೆತು ಅದನ್ನು ಗಾರೆಯಾಗಿ ಮಾಡಿ ಮುಖಕ್ಕೆ ಅಂಟಿಸಿದ್ದವು.

ಜಮೀನ್ದಾರರು ಸಿಗರೇಟನ್ನು ಕೆಳಕ್ಕೆಸೆದು ತುಳಿದು, ಆತನ ಬಳಿಗೆ ಹೋಗಿ ಕತ್ತು ಹಿಡಿದು ಕುಲುಕಿದರು.

'ನಾಳೆ ಸಾಯಂಕಾಲದೊಳಗೆ ಇನ್ನೂರು ರೂಪಾಯಿ ತಂದು ಒಪ್ಪಿಸದೆ ಹೋದ್ರೆ ನಿನ್ನನ್ನು ಪೋಲೀಸರಿಗೆ ಕೊಡ್ತೇನೆ!'

ಗುಂಪು ಚೆದುರಿತು. ಕೆಲವರು ಆ ರೈತನನ್ನು ಹಿಂಬಾಲಿಸಿದರು.

ಯಾಕೆ ಹೀಗಾಯಿತೆಂದು ತಿಳಿಯಲು ಬಯಸಿ, ಹತ್ತಿರದಲ್ಲಿದ್ದ ಒಬ್ಬ ಹುಡುಗನನ್ನು ಚಿರಕುಂಡ ಕೇಳಿದ. 'ಯಾಕೆ ಹೊಡೆದ್ರು ಅವನಿಗೆ'

'ಯಾಕೋ ಯಾರಿಗೊತ್ತು!' ಎಂದ ಆ ಹುಡುಗ. ಅವನೂ ತಮಾಷೆ ನೋಡಲು ಬಂದು ನಿಂತಿದ್ದನೆ ಹೊರತು, ಅದೇನೆಂದು ತಿಳಿದುಕೊಂಡಿರಲಿಲ್ಲ.

ಆದರೆ, ಜನರ ಬಾಯಿಯಿಂದ ವಿವಿಧ ಮಾತುಗಳು ಕೇಳಿಸಿದವು.

'ಅವನ್ದೆ ತಪ್ಪು. ತೋಟ ಬಿಟ್ಟಿಟ್ಟು ಯಾಕೆ ಹೋಗಬೇಕಾಗಿತ್ತು.'

‘ಹೆಂಡ್ತಿಗೆ ಕಾಯಿಲೆ ಅಂತ ಹೋದ್ನಂತೆ ಕಣಪ್ಪೋ’

‘ತೋಟ ಸೂರೆ ಮಾಡ್ದೋರು ಯಾರಂತ?’

‘ತೆಂಗಿನಕಾಯಿ, ಹಲಸಿನಕಾಯಿ, ಬಾಳೆಗೊನೆ, ತರಕಾರಿ–ಒಂದೂಬಿಟ್ಟಿಲ್ವಂತೆ ನೋಟಪ್ಪಾ’

‘ರಾತಾರಾತ್ರೆ ಪರವೂರಿಗೆ ಹ್ಯಾಗೆ ಸಾಗಿಸಿದ್ರೋ’

‘ಅವನೇ ಕದ್ದು ಮಾರ್‍ಬಿಟ್ಟು ಬಂದಿದ್ದಾನೋ ಏನೋ’

‘ಅಥವಾ ಕಳುವಿನ ಮಾಲೆಲ್ಲಾ ಜಮೀನ್ದಾರರ ಮನೆಯೊಳಗೆ ಇದೆಯೋ’

ಆ ಕೊನೆಯ ಮಾತಿಗೆ ಉತ್ತರವಾಗಿ ಮೌನ ನೆಲೆಸಿತು. ಆ ಮೌನಕ್ಕೆ ಭಂಗ ತಂದು ಯಾರೋ ಒಬ್ಬರು ಗಟ್ಟಿಯಾಗಿ ನಕ್ಕರು.

‘ಅಲ್ಲ, ನಾಳೆ ಸಾಯಂಕಾಲದೊಳಗೆ ಪರಿಹಾರ ಕೊಡೊಕ್ಕೆ ಅವನಿಗೆ ಇನ್ನೂರು ರುಪಾಯಿ ಯಾರು ಕೊಡ್ತಾರಂತ?’

‘ಸಾಲ ತಗೋಬೆಕು’

‘ಯಾರಪ್ಪ ನಮ್ಮ ಹಳ್ಳಿಲಿ ಸಾಲ ಕೊಡೋರು?’

‘ಇನ್ಯಾರು ಜಮೀನ್ದಾರರೆ!’

ಆ ಮಾತು ಕೇಳಿ ಈ ಸಲ ಇಬ್ಬರು ಮೂವರು ನಕ್ಕರು.

‘ಅಂತೂ ನಾಲ್ಕು ವರ್ಷ ಜಮೀನ್ದಾರರ ಕಾಡು ಕಡಿದು ದುಡಿದೂ ಅವನು ತೋಟ ಮಾಡಿದ. ಈಗ ಕಳ್ಳತನ ಆಯುತಂತ ಕಾರಣ ಹೇಳಿ ಅವನ್ನು ಓಡಿಸಿಬಿಡ್ತಾರೆ’[2]

ಭೂಮಾಲಿಕ ವರ್ಗ ತನ್ನ ಸ್ವಾರ್ಥಕ್ಕೆ ತನಗೆ ಬೇಕಾದ ರೀತಿಯಲ್ಲಿ ದುಡಿಯುವವರನ್ನು ಬಳಿಸಿಕೊಳ್ಳುತ್ತದೆ. ಅವರನ್ನು ದುಡಿಸಿಕೊಂಡು ಬೇಕಿಲ್ಲದಾಗ ಅಮಾನವೀಯವಾಗಿ ಹೊರದೂಡುತ್ತದೆ. ವೃತಾ ಆರೋಪಗಳನ್ನು ಮಾಡಿ ಅಪರಾಧಿಯನ್ನಾಗಿ ಮಾಡುತ್ತದೆ. ಇದನ್ನು ಪ್ರಶ್ನಿಸುವ ಗುಣ ಯಾರಲ್ಲಿ ಇರುವದಿಲ್ಲ. ಆದ್ದರಿಂದ ಅವರ ಹಿತಾಸಕ್ತಿಗೆ ಬಡವರು ಬಲಿಯಾಗುತ್ತಿರುತ್ತಾರೆ. ರೈತ ಕೂಲಿಯಾಳು ಕಾಡನ್ನು ಕಡಿದು ತೋಟ ಮಾಡಿಕೊಟ್ಟಿದ್ದಾನೆ. ದುಡಿದವನಿಗೆ ತೋಟ ಸೇರುವದಿಲ್ಲ. ಅವನನ್ನು ಸದಾ ದುಡಿಮೆದಾರನನ್ನಾಗಿ ಮಾಡಿಕೊಳ್ಳಲು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಅವನ ಮೇಲೆ ಕಳ್ಳತನದ ಆರೋಪ ಹೊರಿಸಿ, ತೋಟದಿಂದ ಹೊರಹಾಕುವ ಬೆದರಿಕೆ ಹಾಕಲಾಗುತ್ತದೆ. ಇವರ ತೊಟವನ್ನೇ ನಂಬಿದ ಕೂಲಿಯಾಳು ಅಸಹಾಯಕನಾಗುತ್ತಾನೆ. ಇದನ್ನು ಬಳಿಸಿಕೊಂಡು ಅವನಿಗೆ ತಾವೆ ಸಾಲ ನೀಡಿ ಬಡ್ಡಿಹಾಕಿ ಇನ್ನೂ ಸಾಯುವವರಿಗೆ ಅವರ ಅಡಿಯಾಳಾಗಿ ಬದುಕುವಂತೆ ಮಾಡಲಾಗುತ್ತದೆ. ಈ ತಂತ್ರವನ್ನು ಅರಿಯದ ದುಡಿಯುವವರು ಚರಿತ್ರೆಯುದ್ದಕ್ಕೂ ಬಲಿಯಾಗುತ್ತಲೇ ಬರುತ್ತಿದ್ದಾರೆ.

ಈ ಕಾದಂಬರಿಯ ಕೇಂದ್ರ ಕಯ್ಯೂರು. ಇದನ್ನು ಆಳುವವರು ಇಬ್ಬರು ಜಮಿನ್ದಾರರು. ಅವರ ಅಣತಿಯಂತೆ ಊರು ನಡೆಯಬೇಕು. ರೈತರನ್ನು ಒಗ್ಗೂಡಿಸಿ ಹೋರಾಟ ಕಟ್ಟುವುದು ಕಾದಂಬರಿಯ ಆಶಯವಾಗಿರುವದರಿಂದ ಅರಿವಿನ ಸಂಕೇತವಾದ ಮಾಸ್ತರರ ಪಾತ್ರವನ್ನು ಸೃಷ್ಟಿಸಲಾಗಿದೆ. ಮಾಸ್ತರರು ಇಡೀ ಊರನ್ನು ತಮ್ಮ ಕಾಳಜಿ ಮತ್ತು ಬದ್ದತೆಯಿಂದ ಹೋರಾಟಕ್ಕೆ ಸಜ್ಜುಗೊಳಿಸುತ್ತಾರೆ. ಯುವಕರಾದ ಚಿರಕುಂಡ ಅಪ್ಪುವನ್ನು ಜ್ಞಾನವಂತರನ್ನಾಗಿ ಮಾಡಿ ಅವರು ಚಳುವಳಿ ಹೂಡುವಂತೆ ಮಾಡುತ್ತಾರೆ. ಇದಕ್ಕಾಗಿ ಅವರು ಪಡುವ ಬವಣೆಗಳು ಚರಿತ್ರೆಯ ಇನ್ನೊಂದು ಮುಖವನ್ನು ತೆರೆದಿಡುತ್ತದೆ.

"ಆ ಊರಿನ ಪ್ರಮುಖ ಜಮೀನ್ದಾರರು ಇಬ್ಬರು. ಒಬ್ಬರು ಮಹಾಬ್ರಾಹ್ಮಣ ನಂಬೂದಿರಿ. ಅವರ ಮನೆಯ ಹೆಂಗಸರು, ಬಾಗಲಿನಿಂದ ಹೊರಕ್ಕೆ ಮುಖವಿಡುತ್ತಲೇ ಇರಲಿಲ್ಲ. ಇನ್ನೊಬ್ಬರು ನಂಬಿಯಾರ್. ಹೊಲೆಯರನ್ನಾದರೂ ಸರಿಯೇ ಮೈ ಮುಟ್ಟಿಯೋ, ಬೆನ್ನು ತಟ್ಟಿಯೋ ಮಾತಾಡಿಸುವ ಸಮರ್ಥ. ವಯಸ್ಸಿನಲ್ಲಿ ಅವರು ನಂಬೂದಿರಿಗಿಂತ ಕಿರಿಯ. ಮಾಸ್ತರು ಆ ಊರಿಗೆ ಬರುವದಕ್ಕೆ ಮುಂಚೆ ಪತ್ರಿಕೆ ಬರುತ್ತಿದ್ದದು ಅರೊಬ್ಬರ ಮನೆಯಲ್ಲಿಯೇ. ಪತ್ರಿಕೆ ತರುಸುತ್ತಿರುವ ತಾವು ಆಧುನಿಕರು ಎಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು.

ಮಾಸ್ತರು ಪತ್ರಿಕೆ ತರುಸುತ್ತಾರೆಂದು ತಿಳಿದಾಗ ನಂಬಿಯಾರರು ಭುಜ ಕುಪ್ಪಳಿಸಿದ್ದರು. ಹೋಗಲಿ ವಿದ್ಯಾವಂತ ಓದುವ ಚಟವಾದರು ಮರಿಬಾರದಲ್ಲ. ಇಲ್ದಿದ್ರೆ ಹುಡುಗರಿಗೆ ಏನು ಪಾಠ ಹೇಳಿಕೊಡ್ತಾನೆ? ಎಂದು ಸುಮ್ಮನಾಗಿದ್ದರು."[3]

ಜಮಿನ್ದಾರರಿಗೆ ಬಡವರು, ಕೂಲಿಕಾರರು ವಿದ್ಯಾಬ್ಯಾಸ ಮಾಡಬಾರದು. ಅವರು ಸದಾ ದುಡಿಯುತ್ತಿರಬೇಕೆಂದು ಬಯಸುವವರು. ಅದಕ್ಕಾಗಿ ಊರಲ್ಲಿ ಶಾಲೆಗಳನ್ನು ತೆರೆಯಲು ಬಿಡುತ್ತಿರಲಿಲ್ಲ. ಶಾಲೆ ತೆರೆದರು ಕೂಡ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಮಾತ್ರ. ಬೇರೆ ಯಾರು ವಿದ್ಯಾವಂತರಾಗುವುದು ಅವರಿಗೆ ಇಷ್ಟವಿರುವದಿಲ್ಲ. ಅದನ್ನು ಬಲವಾಗಿ ವಿರೋಧಿಸುತ್ತಿದ್ದರು.

"ನಿಮಗೊಂದು ರಹಸ್ಯ ಹೆಳ್ತೆನೆ. ನನ್ನ ಮಾವ ಇದ್ದಷ್ಟು ಕಾಲವೂ ಇಲ್ಲಿ ಶಾಲೆ ತೆರೆಯೋದನ್ನ ವಿರೋಧಿಸಿದ್ದರು. ಆಡುವವರ ಮಕ್ಕಳು ಆಡಬೇಕು. ಬೇಡುವವರ ಮಕ್ಕಳು ಬೇಡಬೇಕು ಅನ್ನೋದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಆದರೆ ಅವರ ತಲೆಮಾರು ಬೇರೆ ನಮ್ಮ ತಲೆಮಾರು ಬೇರೆ ನಾನು ಒಪ್ಪಿಲ್ಲ.'

ಮೆಚ್ಚಿಗೆ ಸೂಚಿಸಿ ಉಸಿರಾಡಲು ಒಂದು ಅವಕಾಶ ದೊರೆಯುತೆಂದು ಮಾಸ್ತಾರರೆಂದರು:

'ನಿಮ್ಮ ವಿಚಾರ ಸರಿಯಂತ ಯಾರು ಬೆಕಾದರು ಹೇಳಬಹುದು.'

ನಂಬಿಯಾರರಿಗೆ ಆ ಪ್ರಶಂಸೆ ಕೇಳಿ ಸಂತೋಷವಾಯಿತು. ಆ ಸಂತೋಷದ ಭರದಲ್ಲಿ ಗೋಪ್ಯವಾಗಿ ಮಾತನಾಡುವಂತೆ, ಸ್ವರ ತಗ್ಗಿಸಿ ಅವರೆಂದರು:

'ಆ ನಂಬೂದಿರಿಗೂ ಶಾಲೆ ತೆರೆಯುವದು ಇಷ್ಟವಿರಲಿಲ್ಲ. ನಾನು ಮತ್ತು ಆತ ಸ್ನೇಹಿತರಾದ್ರು – ನಿಮ್ಮಲ್ಲಿ ಹೇಳೋದಕ್ಕೇನಿದೆ?– ಅವನು ಮಹಾ ಖದೀಮ. ಶೂದ್ರರು ಯಾರಿಗೂ ವಿದ್ಯೆ ಅಗತ್ಯವಿಲ್ಲಾಂತ ಅವನ ಅಭಿಪ್ರಾಯ. ನನಗೆ ಗೊತ್ತಿಲ್ಲವಾ ಅದೆಲ್ಲಾ? ಹಟ ತೊಟ್ಟು ಶಾಲೆ ತೆರೆಯೋ ಹಗೆ ಮಾಡ್ದೆ. ಹೊರಗಿನಿಂದ ಅಧಿಕಾರಿಗಳು ದೊಡ್ಡವರು ಯಾರಾದರು ಬಂದಾಗ ಶಾಲೇನೆಲ್ಲ ನೋಡಿ ಕೊಂಡಾಡೋದು ಯಾರನ್ನು ಹೇಳಿ?'

ತುಟಿ ಪಿಟ್ಟೆನ್ನದಿದ್ದರು ನಮಬಿಯಾರರ ಮಾತು ನಾನು ಕೇಳುತ್ತಿದ್ದೆನೆ ಎಂಬುದಕ್ಕೆ ಸೂಚನೆಯಾಗಿ ಮಾಸ್ತರು ತಲೆಯಾಡಿಸಿದರು. ಮೈಯೆಲ್ಲ ಬೆವತು ಬೆಯ್ಯುತ್ತಿದ್ದಂತೆ ಕಂಡರೂ ಅವರು ಸ್ಥೈರ್ಯದಿಂದ ಕುಳಿತರು.

ಆದರೆ ಮಾಸ್ತರರ ಇರುವಿಕೆಯನ್ನು ಅಣುಕಿಸುವ ಹಾಗೆ ಇನ್ನೊಂದು ಮಾತು ಬಂತು.

' ಈ ರಿತಿ ಶಾಲೆಯ ಸ್ಥಾಪನೆಗೆ ನಾನೇ ಮೂಲ ಕಾರಣವಾದರು ರೈತರ ಮಕ್ಕಳಿಗೆಲ್ಲ ವಿದ್ಯೆ ಕಡೊ ವಿಷಯದಲ್ಲಿ ನನ್ನದೆ ಆದ ಅಭಿಪ್ರಾಯುಂಟು. ಈ ಜನ ಯಾರು ಕಾಲೇಜಿಗೆ ಹೋಗಬೇಕಾಗಿಲ್ಲ. ಹೈಸ್ಕೂಲು ಇವರಿಗೆ ಅಗತ್ಯವಿಲ್ಲ. ರೈತರ ಮಕ್ಕಳು ಸಹಿ ಹಾಕೋದಕ್ಕೆ ಕಲಿತರೆ ಸಾಕು. ಇಷ್ಟು ವಿದ್ಯೆಯಾದರು ಯಾಕೆ ಗೊತ್ತೆ? ಬರೇ ಹೆಬ್ಬಟ್ಟಿನ ರುಜುವೇ ಇದ್ದರೇ ಏನು ತಿಳಿದವರಿಗೆ ಮೋಸ ಮಾಡ್ತಾ ಇದ್ದಾರಂತ ಇವರು ಬಡ್ಕೋಬಹುದು. ಮುಂದೆ ಹಾಗಲ್ಲ. ಕರಾರು ಪತ್ರ ಏನಿದ್ದರು ಬರೆದದ್ದೂ ಪುರ್ತಿ ಅರ್ಥವಾಗಿದೆಂತ ಹೇಳಿ ಅವರು ಅಕ್ಷರದಲ್ಲಿಯೇ ಸಹಿ ಹಾಕಬೇಕು ಏನು ಹೇಳ್ತಿರಾ?'[4]

ಅಸಹಾಕರಾದ ಮಾಸ್ತರರು ಜಮೀನ್ದಾರರು ಹೇಳುವುದನ್ನು ಕೇಳಿಕೊಂಡು ಬರುತ್ತಾರೆ. ಆದರೆ ಅವರ ಒಳಗಿನ ಕಿಡಿ ಆರುವದಿಲ್ಲ. ಅವರೊಂದಿಗೆ ಇದ್ದು ಜನರಿಗೆ ಹೋರಾಟದ ಪ್ರಜ್ಞೆಯನ್ನು ತುಂಬುತ್ತಾ ಹೋಗುತ್ತಾರೆ. ಜಮೀನ್ದಾರರ ದಬ್ಬಾಳಿಕೆಯಲ್ಲಿ ನರಳುತ್ತಿದ್ದ ರೈತರನ್ನು ಮುಕ್ತಿಗೊಳಿಸಿ ಸ್ವತಂತ್ರ ಜೀವನವನ್ನು ಕಲ್ಪಿಸುವ ಉದ್ದೇಶ ಅವರದಾಗಿರುತ್ತದೆ. ಅದನ್ನು ಈಡೇರಿಸಿಕೊಳ್ಳುವುದು ಅಷ್ಟೊಂದು ಸುಲಭವಾಗಿರುವದಿಲ್ಲ. ಸಾವಿರಾರು ವರ್ಷಗಳಿಂದ ಬೇರು ಬಿಟ್ಟಿದ್ದ ಈ ವ್ಯವಸ್ಥೆಯನ್ನು ಸುಲಭದಲ್ಲಿ ಬದಲಾಯಿಸುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ಮಾಸ್ತರರು ನಿಧಾನಕ್ಕೆ ಜನರನ್ನು ಬಿಡುಗಡೆಗೊಳಿಸುವ ಪ್ರಯತ್ನ ಮಾಡುತ್ತಾರೆ. ಊರಲ್ಲಿ ಕೆಲವು ನಂಬಿಕಸ್ತ ವ್ಯಕ್ತಿಗಳನ್ನು ಸೇರಿಸಿಕೊಂಡು ಅವರಿಗೆ ತಿಳುವಳಿಕೆ ನೀಡುತ್ತಾ ಹೋಗುತ್ತಾರೆ. ಇವರ ಗರಡಿಯಲ್ಲಿ ಚಿರಕುಂಡ ಅಪ್ಪು ಎಂಬ ಇಬ್ಬರು ಯುವಕರು ತಯಾರಾಗುತ್ತಾರೆ. ಅವರಿಗೆ ತಮ್ಮ ಕುಟುಂಬದಲ್ಲಾಗುವ ತಲ್ಲಣಗಳೇ ಚಿಂತನೆಗೆ ಹೋರಾಟಕ್ಕೆ ದಾರಿ

ಮಾಡಿಕೊಡುತ್ತವೆ. ಅದಕ್ಕೆ ಮಾಸ್ತರರ ಸೂಕ್ತ ಮಾರ್ಗದರ್ಶನವು ಇರುತ್ತದೆ. ಉರಲ್ಲಿರುವ ಬಡವರ ಬವಣೆಯ ಜೀವನ ಕ್ರಮವು ಅವರನ್ನು ಸಂಘಟನೆ ಹೋರಾಟಕ್ಕೆ ಪ್ರೇರೇಪಸುತ್ತದೆ.

"ಮಾಸ್ತರ ವಿಷಯದಲ್ಲಿ ಅವರು ಕಲಿತವರು ಎಂಬ ಕಾರಣಕ್ಕೆ ಮೊದಲು ಅಭಿಮಾನವಿರಿಸಿದ್ದ ರೈತನಿದ್ದ. ಅವನ ಹೆಸರು ಕೋರ. ಆತನ ತಂದೆಯ ಕಾಲದಲ್ಲಿಯೇ ಹೊಲ ಕೈಬಿಟ್ಟಿತ್ತು. ಸದಾ ಕಾಯಿಲೆಯಿಂದ ನರಳುತ್ತಿದ್ದ ಹೆಂಡತಿ ಸತ್ತಿದ್ದಳು– ಪುಣುವಂತೆ! ಆತ ಒಂದು ರೀತಿಯ ಕೂಲಿಕಾರ, ಕೃಷಿ ಕೂಲಿಕಾರ. ಬಿತ್ತನೆಯ ಕೊಯ್ಲಿನ ದಿನಗಳಲ್ಲಿ ಇನ್ನೊಬ್ಬರ ಹೊಲದಲ್ಲಿ ದಿನಗೂಲಿಯಾಗಿ ದುಡಿಯುತ್ತಿದ್ದ. ಆಗೊಮ್ಮೆ ಈಗೊಮ್ಮೆ ಚರ್ಮತ್ತೂರಿನ ರೈಲು ನಿಲ್ದಾಣಕ್ಕೆ ಯಾವುದಾದರು ಸಾಮಾನು ಹೊರುವ ಕೆಲಸವಿದ್ದಾಗ, ಅದನ್ನು ಮಾಡುತ್ತಿದ್ದ. ದುಡಿಮೆ ಇಲ್ಲದ ವೇಳೆ ಹೋಟಲಿನಲ್ಲಿ ಕುಳಿತು ಕಾಲಹರಣ, ತುಂಡು ಬೀಡಿಗೋ, ಅಪು ಚ ಹಾಕ್ಕೋ ಕೈ ಒಡ್ಡುವುದು ಮೂರು ಕಾಸು ಆರು ಕಾಸು ಸಾಲ ಕೇಳುವುದು ಎಷ್ಟೋ ಸಂಜೆ ಯಾರೋ ಜತೆ ಕುಡಿದು ಹಟ್ಟಿಗೆ ಬಂದು ಮಲಗುವುದು."[5]

ಹೀಗೆ ಬದುಕುವವರ ಗುಂಪೆ ಹಳ್ಳಿಯಲ್ಲಿತ್ತು. ಇಂತವರನ್ನು ಕೂಡಿಸಿಕೊಂಡು ಅವರು ಹೋರಾಟ ಕಟ್ಟಬೇಕಿತ್ತು. ಈ ಜನತೆಗೆ ನಾವು ಯಾಕೆ ಈ ರೀತಿ ಬದುಕುತ್ತಿದ್ದೇವೆ ಎಂಬ ಪ್ರಜ್ಞೆಯೆ ಇರಲಿಲ್ಲ. ಇದರಿಂದಾಗಿ ಅವರಿಗೆ ಅರಿವು ಮೂಡಿಸಿ ಸಂಘಟನೆ ಮಾಡಬೇಕಿತ್ತು. ಅದಕ್ಕೆ ಬೇಕಾದ ತಯಾರಿಯನ್ನು ಚಿರಕುಂಡ ಅಪ್ಪು ಮಾಸ್ತರರ ಮಾರ್ಗದರ್ಶನದಲ್ಲಿ ಮಾಡಿಕೊಳ್ಳುತ್ತಾರೆ. ದಿನ ನಿತ್ಯ ಜಮಿನ್ದಾರರು ನಡೆಸುವ ದಬ್ಬಾಳಿಕೆಯನ್ನು ವಿವರಿಸುತ್ತಾರೆ. ತಾವು ದುಡಿಯುವ ಜಮೀನುಗಳು ನ್ಯಾಯಯುತವಾಗಿ ತಮಗೆ ಸೇರಬೇಕೆಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುತ್ತಾರೆ. ಅದಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಳ್ಳುತ್ತಾರೆ. ದಿನಾಲು ದೇಶದಲ್ಲಿ ಏನಾಗುತ್ತಿದೆ ಎಂಬುದನ್ನು ಒಂದೆಡೆ ಸೇರಿ ಪತ್ರಿಕೆ ಮುಖೇನ ಓದಿ ಸಮಾನ ಆಸಕ್ತರೊಂದಿಗೆ ಹಂಚಿಕೊಳ್ಳುತ್ತಾರೆ. ತಮ್ಮ ಮೇಲಾಗುವ ಅನ್ಯಾಯವನ್ನು ವಿವರಿಸುತ್ತಾರೆ. ಇದರಿಂದ ಜನರಿಗೆ ಹೊಸ ಸಂಚಲನ ಉಂಟಾಗುತ್ತದೆ. ಇವರ ಮಾತಿನಲ್ಲಿ ಸತ್ಯ ಇದೆ ಎಂದು ಅವರ ವಿಚಾರಗಳಿಗೆ ಸ್ಪಂದಿಸುತ್ತಾ ಹೋಗುತ್ತಾರೆ. ಮುಂದೆ ಎಲ್ಲಾ ಸೇರಿ ರೈತ ಸಂಘವನ್ನು ಕಟ್ಟುತ್ತಾರೆ.

ಜಮೀನ್ದಾರರು ರೈತರಿಂದ ಜಮೀನುಗಳನ್ನು ಬಲವಂತವಾಗಿ ಕಸಿದುಕೊಳ್ಳುವುದನ್ನು ಪ್ರಶ್ನೆ ಮಾಡಲು ಇವರು ಪ್ರೇರಣೆ ನೀಡಿದರು. ಊರಿನ ಜನರು ಸಾಲ ಮಾಡಿ ಅದಕ್ಕೆ ಬಡ್ಡಿ ಕಟ್ಟಲಾಗದೆ ಜಮೀನು ಮಾರುವುದು ಸಹಜವಾಗಿತ್ತು. ಚಿರಕುಂಡನ ತಂದೆಯೆ ಇಂತಹ ಕೃತ್ಯಕ್ಕೆ ಬಲಿಯಾಗಿರುತ್ತಾನೆ.

" ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕೇಳ್ದೆ, ಬೇಡ್ಕೊಂಡೆ, ಇನ್ನು ಸಮಯನಾದರೂ ಕೊಡಿ ಅಂತ. ಅವಧಿ ಕೊಟ್ಟರು ಸಾವಿರ ರೂಪಾಯಿ ಎಲ್ಲಿಂದ ತರ್ತೀಯಾ–ಅಂದ. ಅಗತ್ಯ ಬಿದ್ದರೆ ಇರುವ ಹೊಲದಲ್ಲಿ ಸ್ವಲ್ಪ ಮಾರುತೆನೆ ಅಂದೆ. ಅದು ಕೇಳಿದ ತಕ್ಷಣ ರೇಗಿ ಹಾರಾಡಿದ. ಈಗೀದೀಗಲೇ

ಸಂದಾಯ ಮಾಡ್ಬೇಕು ಇಲ್ಲಾಂದರೆ ಕೋರ್ಟ್‌ಗೆ ಎಳಿತೆನೆ ಅಂದ. ಕೋರ್ಟ್ಗೆ ಹೋಗಿ ರೈತರು ಯಾವತ್ತಾದರ ಉದ್ದಾರ ಹಾಗಿದ್ದಾರ ಹೇಳು? ಅಲ್ಲಿ ಎಷ್ಟೋ ಜನ ನಿಂತಿದ್ದರು ಜೀ ಹುಜೂರ್ ಅನ್ನೋ ಹೊಗಳು ಭಟ್ಟರು. ಬಡವ, ಕೋರ್ಟ್ಗೆಲ್ಲಾ ಎಳಿಯೋದು ಬೇಡ ಶಾಂತಿಯಿಂದಲೇ ಇತ್ಯರ್ಥ ಮಾಡೋಣ– ಅಂತ ನನ್ನ ಪರವಾಗಿ ವಾದಿಸುವ  ನಾಟಕ ಆಡಿದ್ರೂ. ಏನಪ್ಪಾ ಇಂಥಾ ಧಣಿಗಳು ಬೇರೆ ಸಿಗಲಾರರು ; ನೀನಾದರೂ ಹೊಲ ಕಳಕೊಂಡು ಯಾವೂರು ಬಿಕ್ಷೆಗೆ ಹೋಗ್ತೀಯ? ಇಲ್ಲಿ ಧಣಿಗಳ ಒಕ್ಕಲಾಗಿ ಇದ್ದುಬುಡು; ಹೊಲನ್ನೆಲ್ಲ ಅವರಿಗೆ ಬರ್ಕೊಟ್ಟು. ಗೇಣಿಗೆ ನೀನೆ ವಾಪಿಸು ತಗಂಡ್ಬುಡು–ಅಂದ್ರು... ಏನ್ಮಾಡ್ಬೇಕಂತ ನನಗೆ ತೋಚಲಿಲ್ಲ, ಕಲ್ಯಾಣಿ...ಪೊಲೀಸು ಜೈಲು ಅಂತ ಯೋಚಿಸಿ, ನಿನ್ನ ಚಿರಕುಂಡನ ನೆನಪಿಸಿಕೊಂಡು ಭಯವಾಯಿತು. ಹೊಲ ನಮ್ಮೆಸರಲ್ಲಿ ಇಲ್ದೆ ಹೋದ್ರೂ ಈ ಹಳ್ಳಿಲೇ ಈ ಹೊಲದಲ್ಲಿಯೇ ಇರಬಹುದಲ್ಲಾಂತ, ಅವರ ಹೆಸರಿಗೆ ಹೊಲ ಬರ್ಕೊಟ್ಟು, ಸಾಲ ತೀರಿಸೋಕೆ ತೀರ್ಮಾನ ಮಾಡಿದೆ.”[6]

ಈ ಬವಣೆ ಕೇವಲ ಚಿರಕುಂಡನ ಅಪ್ಪನದಲ್ಲ. ಪ್ರತಿ ಗ್ರಾಮೀಣಪ್ರದೇಶದ ರೈತರ ಬವಣೆಯಾಗಿದೆ. ರೈತರು ಅಸಹಾಯಕರಾಗಿ ಇದೆಲ್ಲವನ್ನು ಸಹಿಸಿಕೊಂಡು ಬದುಕುತ್ತಿದ್ದಾರೆ. ಇದನ್ನು ಚಿರಕುಂಡ ಅಪ್ಪು ಪ್ರಶ್ನೆ ಮಾಡುವು ದರ ಮೂಲಕ ಹೊಸ ವ್ಯವಸ್ಥೆಗೆ ನಾಂದಿ ಹಾಡುತ್ತಾರೆ. ಕಯ್ಯೂರಿನಲ್ಲಿ ರೈತಸಂಘ ಸ್ಥಾಪಿಸುವುದರ ಮೂಲಕ ಜಮೀನ್ದಾರರಿಗೆ ಭಯ ಹುಟ್ಟಿಸುತ್ತಾರೆ. ಅದನ್ನು ಸಹಿಸದ ಅವರು ಆಡಳಿತದ ಸಹಾಯವನ್ನು ಪಡೆಯುತ್ತಾರೆ. ಅವರ ಮೂಲಕ ಇವರ ಹೋರಾಟವನ್ನು ಸದೆಬಡೆಯುವ ಪ್ರಯತ್ನ ಮಾಡುತ್ತಾರೆ. ಅದರಲ್ಲಿ ಯಶಸ್ವಿಯು ಆಗುತ್ತಾರೆ. ಆದರೆ, ಇವರು ಹಾಕಿದ ಹೋರಾಟದ ಬೀಜಗಳು ಮುಂದೆ ಹೆಮ್ಮರವಾಗಿ ಭಾರತದಲ್ಲಿ ಬೆಳೆದಿವೆ. ಅದಕ್ಕಾಗಿ ಅವರು ಪಟ್ಟ ಕಷ್ಟಗಳು ಊಹೆಗೆ ನಿಲುಕದು.

ಮಾಸ್ತರರ ಪ್ರೋತ್ಸಾಹದ ಮೂಲಕ ಸಂಘಟನೆಯಲ್ಲಿ ಸೇರಿದ್ದ ಅಪ್ಪು ಮತ್ತು ಚಿರಕುಂಡ ಬೇರೆ ಬೇರೆ ಕಡೆ ನಡೆಯುತ್ತಿದ್ದ ಸಮ್ಮೇಳನಗಳಿಗೆ ಹೋಗುತ್ತಿದ್ದರು. ಅಲ್ಲಲ್ಲಿಯ ವಿಚಾರಗಳಿಗೆ ಮರಳಾಗುತ್ತಿದ್ದರು. ಅವರು ಹೇಳುತ್ತಿದ್ದದ್ದು ಸರಿ ಎನಿಸುತ್ತಿತ್ತು. ಅದರಂತೆ ನಾವು ಊರಲ್ಲಿ ಈ ದಬ್ಬಾಳಿಕೆಯಿಂದ ಹೊಬರಬೇಕೆಂದು ಯೋಚಿಸುತ್ತಿದ್ದರು. ಅದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಏನು ಅರಿಯದ ಮುಗ್ದ ರೈತರನ್ನು ಕಟ್ಟಿಕೊಂಡು ಹೋರಟ ಮಾಡುವುದು ದೊಡ್ಡ ಸವಾಲಿನ ಸಂಗತಿಯಾಗಿತ್ತು. ಪ್ರಯತ್ನಕ್ಕೆ ಫಲ ಇದ್ದೆ ಇದೆಯೆಂದು ಉರಲ್ಲಿ ಸಂಘಟನೆ ಸುರು ಮಾಡಿದರು. ರೈತರನ್ನು ಸೇರಿಸಿ ಸಭೆಗಳನ್ನು ಮಾಡಿದರು. ತಾವು ಸಮ್ಮೇಳನದಲ್ಲಿ ಕೇಳಿದ ವಿಚಾರಗಳನ್ನು ಜನರಿಗೆ ತಿಳಿಸಿದರು. ಈ ನೆಲ, ಜಲ, ಮಣ್ಣು ಸರ್ವರಿಗೂ ಸೇರಿದ್ದು. ಒಬ್ಬರ ಸ್ವತ್ತಲ್ಲ ಎಂಬಂತ ಮಾತುಗಳು ಅವರ ಮೇಲೆ ಪ್ರಭಾವ ಬೀರಿದವು. ಯಾರು ಮಣ್ಣಿನಲ್ಲಿ ದುಡಿಯುವರೋ ಅವರಿಗೆ ಭೂಮಿ

ಸೇರಬೇಕಾದ್ದು ನ್ಯಾಯ ಎಂಬ ನಿಲುವಿಗೆ ಜನರು ಬಂದರು. ಜಮೀದಾರರು ತಮ್ಮ ಮೇಲೆ ಮಾಡುತ್ತಿರುವ ದಬ್ಬಾಳಿಕೆಯನ್ನು ಸಹಿಸದಾದರು. ತಾವು ಬೆಳೆದ ಬೆಳೆ ತಮಗೆ ಸೇರಬೇಕೆಂದು ಬಯಸಿದರು. ಜಮೀನದಾರರ ಅಹಂಕಾರವನ್ನು ಪ್ರಶ್ನಿಸಿದರು. ತಮ್ಮ ಹಕ್ಕುಗಳ ಬಗೆಗೆ ಮಾತಾಡಿದರು. ಇದು ಜಮೀನದಾರರಲ್ಲಿ ಅವ್ಯಕ್ತ ಭಯ ಮೂಡಿಸಿತು. ಸಾಮನ್ಯರಿಗೆ ಹೋರಾಟದ ಪಾಠಗಳನ್ನು ಹೇಳಿದರು.

ಜನರಿಗಾಗಿ ಮಾಸ್ತಾರರು ರಾತ್ರಿ ಶಾಲೆಗಳನ್ನು ತೆರೆದರು. ಅಲ್ಲಿ ಅನೇಕ ಜನರ ಪರಿಚಯವಾಯಿತು. ಅಲ್ಲಿಯೇ ವಿಚಾರ ವಿನಿಮಯ ನಡೆಯುತ್ತಿತ್ತು."ಯುವಕ ರೈತನೊಬ್ಬನ ಪರಿಚಯ ಮಾಸ್ತರಿಗಾದುದು ಆ ಸಂದರ್ಭದಲ್ಲಿಯೇ. ಆತನ ಹೆಸರು ಕಣ್ಣ. ಅವನು ಹಳ್ಳಿಗಳ ಹೆಣ್ಣುಗಳ ಕಣ್ಣಾಲಿಯಾಗಿದ್ದ. ಸೊಗಸಾದ ಮೈಕಟ್ಟು, ಕುಡಿಯೊಡೆಯುತ್ತಿದ್ದ ಮೀಸೆ. ತೇಜಸ್ಸು ತುಂಬಿದ ಕಣ್ಣುಗಳು. ಆ ಆಕರ್ಷಕ ವ್ಯಕ್ತಿತ್ವ ತಮಗಿಲ್ಲವೆಂದು ಕರುಬುತ್ತಿರುವರೆಷ್ಟೋ ಜನ. ಸಾಲದುದಕ್ಕೆ ಅವನಿಗೆ ಅಮೋಘವಾದ ಕಂಠವಿತ್ತು. ಯಾವುದಾದರು ಪಾಡ್ದಾನವನ್ನು ತುಂಬುಸ್ವರದಿಂದ ಹಾಡಿದನೆಂದರೆ, ಜನರಷ್ಟೇ ಅಲ್ಲ ಮರ ಮರಗಳು ತಲೆದೂಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿವೆಯೇನೋ ಅನಿಸುತಿತ್ತು.

ಅವನನ್ನು ಮಾಸ್ತರರು ರಾತ್ರಿ ಶಾಲೆಗೆ ಕರೆ ತಂದರು. ಓದು ಅವನಿಗೆ ಬೇಕಾಗಿರಲಿಲ್ಲ. ಹಾಡು ಎಂದಾಗ ಮಾತ್ರ ಮುಖವರಳುತಿತ್ತು. ತರಗತಿ ಆರಂಭವಾಗುವದಕ್ಕಿಂತ ಮುಂಚೆ ಪ್ರತಿ ರಾತ್ರಿಯು ಆತ ಹಾಡಿದ. ಆಗ ಇರುಳಲ್ಲಿ ಆ ಪ್ರದೇಶವೆಲ್ಲ ನಾದಮಯವಗಿ ಮೈಮರೆಯುತಿತ್ತು. ಆತನಿಗೆ ಮಾಸ್ತರು ಕೇರಳದ ಶ್ರೇಷ್ಠ ಕವಿ ಕುಮಾರನ್ ಆಶಾನ್ ಬರೆದ ಕವಿತೆಗಳ ಪರಿಚಯ ಮಾಡಿಕೊಟ್ಟರು. ಮಹಾಕವಿ ವಲ್ಲತ್ತೋಳರ ಕವನಗಳನ್ನು ತಿಳಿಯ ಹೇಳಿದರು. ಹೀಗೆ ಆ ಮಧುರ ಕಂಠ ಹೊಸ ಚೈತನ್ಯದಿಂದ ಮೈದುಂಬಿಕೊಂಡಿತು. ಕಣ್ವ ಎಲ್ಲರ ಗೌರವಕ್ಕೂ ಪಾತ್ರನಾದ."[7]

ಇಂತಹ ಸಾಮನ್ಯರಿಗೆ ಮಾಸ್ತರರು ಜೀವ ತುಂಬಿದರು. ಇವರ ಜೀವನ ಎಲ್ಲಿಯೂ ದಾಖಲಾಗುವದಿಲ್ಲ. ನಿಜವಾಗಿಯು ಇವರು ಜನರನ್ನು ಪೊರೆಯುವವರು. ಕಾದಂಬರಿಯಲ್ಲಿ ಇಂತವರ ಚರಿತ್ರೆಯನ್ನು ಕಾಣಬಹುದು.

ರಾತ್ರಿ ಶಾಲೆಯಲ್ಲಿ ಮಾಸ್ತರರು ಜನರಿಗೆ ಕ್ರಾಂತಿಯ ಪಾಠಗಳನ್ನು ಹೇಳುತ್ತಿದ್ದರು. ಅನೇಕ ಜನ ದುಡಿಯುವವರು ಅಲ್ಲಿ ಬಂದು ಸೇರುತ್ತಿದ್ದರು. ಅವರಿಗೆ ಹೊಸಲೋಕಕ್ಕೆ ಬಂದ ಅನುಭವಾಗುತಿತ್ತು." ರೈತ–ಕೂಲಿಕಾರರ ಮೂಲಕವೇ ಕ್ರಾಂತಿಯ ಮೂಲಕವೇ ಸ್ವಾತಂತ್ರ್ಯ ಸಾಧ್ಯ! ಮಸುಕು ಮಸುಕಾದ ಅಕ್ಷರಗಳು. ಆದರೂ ಅಪ್ಪು ಮತ್ತು ಚಿರಕುಂಡ ಜತೆಯಾಗಿ ಅದನ್ನು ಓದಿದರು. ಲೇಖನದ ಮೊದಲಲ್ಲೇ ಒಂದು ಸಂಭೋದನೆ ಇತ್ತು. 'ಸಂಗಾತಿಗಳೇ! ಆ ಪದದಿಂದ ಹೊರಟುದು. ಆತ್ಮೀಯತೆಯ ಧ್ವನಿ. ಕೊನೆಯಲ್ಲೊಂದಿತ್ತು.' ಲೋಕದೆಲ್ಲಾ ದುಡಿಯುವ ಜನರೇ ಒಗ್ಗಟ್ಟಾಗಿರಿ!'

ಎಂಬ ಘೋಷ. ಆ ಸಾಲಲ್ಲೇ ರಣಘರ್ಜನೆ. 'ಸಾಮ್ರಾಜ್ಯಶಾಹಿ ನಾಶವಾಗಲಿ!' 'ಕ್ರಾಂತಿಗೆ ಜಯವಾಗಲಿ!'[8]

ಬಡವರ ಜೀವನವು ಜೀವ ಹಿಂಡುವಂತದ್ದು. ಅವರನ್ನು ಎಲ್ಲಾರು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವವರು. ಅದರಲ್ಲೂ ಒಂಟಿಯಾಗಿರುವ ಮಹಿಳೆಯರನ್ನು ಮತ್ತಷ್ಟು ಹೀನಾಯವಾಗಿ ಕಾಣುವುದರ ಜೊತೆಗೆ ತಮ್ಮ ಲೈಂಗಿಕತೆಗೆ ಬಳಿಸಿಕೊಳ್ಳಲು ನೋಡುತ್ತಾರೆ. ಏನು ಅರಿಯದ ಆ ಜೀವಗಳು ಉಳ್ಳವರ ಕಾಮ ತೃಷೆಗೆ ಬಲಿಯಾಗುತ್ತಾರೆ. ಇದು ಬಡವರ ಮೇಲೆ ನಿರಂತರ ನಡೆದುಕೊಂಡು ಬಂದ ದೊಡ್ಡ ದೌರ್ಜನ್ಯ. ಇಂತವರಿಗೆ ಸ್ಪಂದಿಸುವ ರಕ್ಷಿಸುವ ಕಾರ್ಯವನ್ನು ಕ್ರಾಂತಿಕಾರರು ಮಾಡಬೇಕೆಂದು ಮಾಸ್ತರರು ಹೇಳುತ್ತಿದ್ದರು. ಇಂತಹ ಘಟನೆಗಳು ಕಯ್ಯೂರಿನಲ್ಲಿ ನಡೆಯುತ್ತಿದ್ದವು."ಅಪ್ಪು ಕಣ್ಣನನ್ನು ಹಿಂಬಾಲಿಸಿದ. ಆತನ ಗುಡಿಸಲು ಇದ್ದದ್ದು ನದಿಯ ದಡದಲ್ಲಿ. ದೋಣಿ ನಡೆಸುತ್ತಿದ್ದ ಅಪ್ಪ ನೀರುಪಾಲಾದಾಗ ಕಣ್ಣ ಎಳೆ ಮಗು. ತಂದೆ ಸತ್ತ ಆ ಮಗುವನ್ನು ಬಡ ತಾಯಿ ಸಾಕಿ ದೊಡ್ಡವಳಾಗಿ ಮಾಡಿದ್ದಳು. ಇದ್ದ ಇಷ್ಟಗಲ ಜಾಗದಲ್ಲಿ ತರಕಾರಿ ಬೆಳಿಸಿ, ನೀಲೇಶ್ವರದ ಪೇಟೆಗೊಯ್ದು ಮಾರಿ ಮಗನ ಲಾಲನೆ ಪೋಷಣೆ ನಡೆಸಿದ್ದಳು. ಮಗ ದೊಡ್ಡವನಾದ ಮೇಲೂ – ಆ ತರಕಾರಿ ತೋಟದ ಕೆಲಸವನ್ನೆಲ್ಲ ಒಬ್ಬನೇ ಮಾಡಲೂ ಸಮರ್ಥನಾದ ಮೇಲೂ –ಆ ತಾಯಿ ದುಡಿಯುವದನ್ನು ಬಿಟ್ಟಿರಲಿಲ್ಲ. ನೆರೆಗೂದಲಿನ ಸುಕ್ಕು ಮುಖದ ಆ ಜೀವ ಕಣ್ಣನನ್ನು ಈಗಲೂ ಎಳೆಯ ಮಗುವಾಗಿಯೇ ಕಾಣುತಿತ್ತು.

ಆ ಹೊಲದ ಆ ಕೊನೆಯಲ್ಲಿ ಹಾದಿಗಳು ಕವಲೊಡೆದಿದ್ದವು. ಎಡಕ್ಕೆ ತಿರುಗಿ ನಡೆದರೆ, ಕಣ್ಣನ ಗುಡಿಸಲು. ಆದರೆ ಕಣ್ಣ ತಿರುಗದೆ ಬಲಕ್ಕೆ ನೋಡಿದ. ಅಲ್ಲೇ ಕೂಗಳತೆಯ ದೂರದಿಂದ ಒಂದು ಹೆಣ್ಣಿನ ಒಂದು ಗಂಡಿನ ಧ್ವನಿಗಳು ತೀವ್ರಗತಿಯಿಂದ ಕೇಳಿಸುತ್ತಿದ್ದವು. ಕಣ್ಣ ಆಲಿಸಿದ. ಅಪ್ಪುವೂ ಕಿವಿನಿಮಿರಿಸಿದ. ಉದ್ವೇಗದ ಜಗಳದ ನುಡಿಗಳು... ಅಸಹಾಕತೆಯಿಂದ ಕಂಪಿಸುತ್ತಿದ್ದ ಹೇಣ್ಣು ಧ್ವನಿ. ಗಂಡಿನ ಕೆಣುಕುತ್ತಿದ್ದ ಗಡಸ್ವರ.

ಕಣ್ಣ ಕಾತರಗೊಂಡು ಕೇಳಿದ.

'ಅಪ್ಪು ಕೆಳಿಸಿತಾ?'

'ಹೂಂ ಅದು ಯಾರ ಮನೆ?

'ದೇವಕಿದು'

'ದೇವಕಿ?'

'ಹೂಂ ಬಾ...'

ಕಣ್ಣ ಬಲಕ್ಕೆ ಹೊರಳಿ ಬಿರಬಿರನೆ ನಡೆದ. ಅಪ್ಪುವೂ ಅಷ್ಟೆ ಚುರುಕಾಗಿ ಅವನನ್ನು ಹಿಂಬಾಲಿಸಿದ. ಮೆದಳು ಧಿಮಿಗುಡುತ್ತಾ ಯೋಚಿಸಿತು. ದೇವಕಿ– ಯಾರು ದೇವಕಿ? ಕಳೆದ ವರ್ಷ ವಿಷಮ ಜ್ವರದಿಂದ ಸತ್ತ ಬಡ ರೈತನ ಹೆಂಡತಿ. ಎಳೆಯ ಮಗುವಿನ ತಾಯಿ. 'ನಮ್ಮಮ್ಮನ ಜತೆಲಿ ದೇವಕಿಯಂತ ಒಬ್ಬಳು ಕಾಯಿಪಲ್ಲೆ ಮಾರಲು ಹೋಗುತ್ತಾಳೆ.' ಹಾಗೆಂದು ಸ್ವಲ್ಪ ಕಾಲದ ಹಿಂದೆ ಅಪ್ಪುವಿಗೆ ಕಣ್ಣನೇ ಹೇಳಿದ್ದ. ಹಾಗಾದರೆ, ದೆವಕಿಯನ್ನು ಜರೆದು ನುಡಿಯುವ ಗಂಡಸು ಯಾರಿರಬಹುದು?.. ಒಮ್ಮೆಲೇ ಪರಸ್ಥಿತಿ ಏನಿರಬೇಕೆಂಬುದರ ಅರಿವಾಗಿ ಅಪ್ಪುವಿನ ರಕ್ತ ತಣ್ಣಗಾಯಿತು. ಆದರೆ ಮರುಕ್ಷಣವೇ ರಕ್ತ ಹಿಂದಿಗಿಂತಲೂ ಹೆಚ್ಚು ವೇಗದಿಂದ ಧುಮುಧುಮಿಸಿ ಹರಿಯಿತು.**"**[9]

ಇಂತಹ ಕಷ್ಟದಲ್ಲಿರುವವರನ್ನು ಕಾಪಾಡುವುದು ತಮ್ಮ ಧರ್ಮ ಎಂದು ಬಾವಿಸದರು. ಅಪ್ಪು ದೇವಕಿಯನ್ನು ಗೋಳಾಡಿಸುತ್ತಿದ್ದ ವ್ಯಕ್ತಿಯನ್ನು ಬಡಿದು ಕಳಿಸಿದ. ದೇವಕಿಯನ್ನು ರಕ್ಷಿಸಿದ. ಇದು ಸಾಮನ್ಯ ಘಟನೆಯಾಗಿಲಿಲ್ಲ. ಆಕೆಯನ್ನು ಪೀಡಿಸುತ್ತಿದ್ದವನು ಜಮೀನ್ದಾರರ ಕಡೆಯವನು ಆಗಿದ್ದನು. ಅದಕ್ಕಾಗಿ ಅಪ್ಪು ಹೆದರಲಿಲ್ಲ. ಒಬ್ಬ ನಿರ್ಗತಿಕ ಮಹಿಳೆಯನ್ನು ರಕ್ಷಿಸಿದ ಸಂತೋಷ ಅವನದಾಗಿತ್ತು. ಮತ್ತು ಜಮೀನ್ದಾರನನ್ನು ಪರೋಕ್ಷವಾಗಿ ಎದುರಿಸಿದಂತೆ ಆಗಿತ್ತು. ಹೊಸ ಓದು ವಿಚಾರಗಳಿಂದ ಇಂತಹ ದೈರ್ಯ ಬಂದಿತ್ತು. ಮಾಸ್ತರ ಸಂಪರ್ಕಕ್ಕೆ ಬಂದ ಎಲ್ಲರಿಗೂ ಈ ರೀತಿಯ ಧರ್ಯ ಬಂದಿತು. ಮುಂದೆ ಇದು ಹಲವು ಪ್ರಥಮಗಳಿಗೆ ನಾಂದಿ ಹಾಡಿತು.

ಜಮೀನ್ದಾರರಲ್ಲಿ ಒಕ್ಕಲಾಗಿ ದುಡಿಯುತ್ತಿದ್ದ ರೈತರು ತಮ್ಮ ಬೆಳೆಯನ್ನು ಜಮೀನ್ದಾರರಿಗೆ ಕೊಡಲು ನಿರಾಕರಿಸಿದರು. ಇದು ಸಾಮನ್ಯ ಸಂಗತಿಯಾಗಿರಲಿಲ್ಲ. ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ವ್ಯವಸ್ಥೆಯನ್ನು ಅಲ್ಲಗಳೆದಂತೆ ಆಗಿತ್ತು. ಆ ರೀತಿಯ ಬದಲಾವಣೆ ಓದಿನಿಂದ ಆಗಿತ್ತು. ಎಲ್ಲಾ ರೈತರು ಒಗ್ಗಟ್ಟಾಗಿ ಸಮಸ್ಯೆಯನ್ನು ಎದುರಿಸುವ ಪಣ ತೊಟ್ಟರು. " ಮಾರನೆಯ ಬೆಳಗ್ಗೆ ಕರಷ್ಣನ್ ನಾಯರ್‌ನ ಹೊಲದಲ್ಲಿ ಎಲ್ಲಲ್ಲು ಸಂಭ್ರಮ. ಸಹಬಾಂಧವನಿಗೆ ನೆರವಾಗಲು ರೈತರ ತಂಡವೇ ಬಂದಿತ್ತು. ತಮ್ಮ ಕುಯಿಲು ಮುಗಿದಿದ್ದ ಅಕ್ಕಪಕ್ಕದವರು ಹೊಲಕ್ಕಿಳಿದರು. ಮೇಲೇರುತ್ತಿದ್ದ ಸೂರ್ಯನೊಡನೆ ಸ್ಪರ್ಧಿಸುತ್ತಾ ಕುಡುಗೋಲು ಹಿಡಿದ ಕೈಗಳು ಫಲಭಾರದಿಂದ ಬಾಗಿದ್ದ ಭತ್ತದ ಸಸಿಗಳನ್ನು ಕರಕರನೆ ಕುಯ್ದವು. ರೈತ ಹೆಂಗಳೆಯರು ಪಾಡ್ದಾನಗಳನ್ನು ಹಾಡಿದರು. ಕಣ್ಣ ಹೊಸ ಹಾಡಿನಿಂದ ದುಡಿಯುವವರ ಉಲ್ಲಾಸ ಹೆಚ್ಚುವಂತೆ ಕೈಗಳ ಬಿರಿಸು ಇಮ್ಮಡಿಯಾಗುವಂತೆ ಮಾಡಿದ. ಮದ್ಯಾಹ್ನದ ವಿರಾಮದ ವೇಳೆಗೆ ಕುಯಿಲು ಮುಗಿದೆ ಹೋಯಿತು. ಕೃಷ್ಣನ್ ನಾಯರ್ ಮುಖ ಅರಳಿ ಮೊರದಷ್ಟು ಅಗಲವಾಯಿತು. ಇನ್ನೇನು, ಕುಯ್ದಿದನ್ನು ರಾಶಿ ಹಾಕಿ  ಕೃಷ್ಣನ್ ನಾಯರ್ ಮನೆಗೆ ಒಯ್ದು ಮುಟ್ಟಿಸುವದೊಂದೆ ಕೆಲಸ. ಅದಕ್ಕೆ ಪೂರ್ವಬಾವಿಯಾಗಿ ರೈತರೆಲ್ಲ

ದಣಿವಾರಿಸಿಕೊಳ್ಳಲೆಂದು ಕುಳಿತರು. ಅಷ್ಟರಲ್ಲಿ ಪುಷ್ಟವಾದ ಎತ್ತುಗಳನ್ನು ಹೂಡಿದ್ದ ಗಾಡಿ ಅತ್ತ ಬರತೊಡಗಿತ್ತು.

‘ ಗಾಡಿಗೆ ಹೇಳಿದ್ದೆ ಏನಪ್ಪ ಕೃಷ್ಣನ್ ನಾಯರ್? ಬರ್‍ತಾ ಇದೆಯಲ್ಲಾ ಯವುದೋ ರಥ!; ಎಂದು ಯಾರೋ ಅಂದರು.

ಇದೇನು ತಮಷೆಯೋ ವಾಸ್ತವವೋ ಎಂದು ತಿಳಿಯಲು ಎಲ್ಲರೂ ಅತ್ತ ಕತ್ತು ತಿರುಗಿಸಿ ನೋಡಿದರು.

ಕೃಷ್ಣನ್ ನಾಯರ್ ಮೊದಲು ಹೋರಿಗಳನ್ನು ಗುರುತಿಸಿ ‘ಅದು ಜಮೀನ್ದಾರರ ಗಾಡಿ’ ಎಂದ. ಹಾಗೆ ಹೇಳುತ್ತಲಿದ್ದಂತೆ ಆತನ ಮುಖ ಕಪ್ಪಿಟ್ಟಿತು.

ತನ್ನ ಸಹಾಯವು ಇರಲಿ ಅಂತ ನಂಬಿಯಾರರು ಕಳಿಸಿದ್ದಾರೆನೋ ಎಂದು ಕೆಲವರು ನಗಾಡಿದರು.

ಆದರೆ ಆ ವಾತವರಣ ಬದಲಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಕೃಷ್ಣನ್ ನಾಯರ್ ಊಹಿಸಿದ್ದಂತೆಯೆ ಆಯಿತು. ಆತನ ಪೈರನ್ನು ವಶಪಡಿಸಿಕೊಂಡು ಜಮೀನ್ದಾರರ ಮನೆಗೊಯ್ಯುವದಕ್ಕೆ ಆ ಗಾಡಿ ಬಂದಿತ್ತು. ಗಾಡಿಯ ಜತೆಯಲ್ಲಿ ಜಮೀನ್ದಾರರ ಕಡೆಯ ಕ್ರೂರಿಗಳೆಂದು ಕುಪ್ರಸಿದ್ದರಾಗಿದ್ದ ಇಬ್ಬರೂ ಆಳುಗಳು ಇದ್ದರು. ಇಷ್ಟೊಂದು ಜನರನ್ನು  ನೋಡಿ  ಆಳುಗಳು ಸ್ವಲ್ಪ ಹಿಂದೆಗೆದರು ಅವರಲ್ಲೊಬ್ಬ ಕೃಷ್ಣನ್ ನಾಯರ್‌ನ ಉದ್ದೇಶಿಸಿ ಹೇಳಿದ.

‘ಪೈರನ್ನು ಸಾಗಿಸಿಕೊಂಡು ಬರೋದಕ್ಕೆ ಜಮೀನ್ದಾರರು ಹೇಳಿದ್ದಾರೆ.’

ಅದನ್ನು ಕೇಳಿ ನಿಂದೆಯ ಮಾತುಗಳನ್ನಾಡುತ್ತಾ ಆಕ್ರೋಶ ಮಾಡಿದವಳು ಕೃಷ್ಣನ್ ನಾಯರ ಹೆಂಡತಿ. ಅಷ್ಟೊಂದು ಜನರ ಸಾಮಿಪ್ಯದಲ್ಲಿ ಆಕೆಯ ಬಡ ಗಂಟಲಿಗೆ ಎಲ್ಲಿಲ್ಲದ ಬಲ ಬಂದಿತ್ತು. ರೈತರೆಲ್ಲಾ ಗಾಡಿಯನ್ನು ಬೆದರಿದ ಎತ್ತುಗಳನ್ನು ಆ ಇಬ್ಬರನ್ನು ಸುತ್ತುವರಿದರು.”[10]

ಜನರು ಒಟ್ಟಾಗಿ ಜಮೀನ್ದಾರರನ್ನು ಎದುರಿಸುವ ಮೊದಲ ಸಾಂಘಿಕ ಯತ್ನ ಮಾಡಿದರು. ಅದು ಫಲಿಸಿತು ಕೂಡ. ಮುಂದೆ ಇದೇ ಅವರ ಸಂಘಟನೆಯ ಬಲಕ್ಕೂ ದಾರಿಯಾಗುತ್ತದೆ. ಜೊತೆಗೆ ಜಮೀನ್ಧಾರರ ಆಕ್ರೋಶಕ್ಕು ಕಾರಣವಾಗುತ್ತದೆ. ರೈತರೆಲ್ಲ ಒಗ್ಗೂಡಿದರು. ತಮ್ಮ ಸಮಸ್ಯೆಗಳನ್ನು ತಾವೆ ಬಗೆಹರಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಅದಕ್ಕೆ ರೈತ ಸಂಘವನ್ನು ಸ್ಥಾಪಸಿದರು. ಗೇಣಿ ಕೊಡುವುದನ್ನು ನಿರಾಕರಿಸಿದರು. ಇದೆಲ್ಲವು ಜಮೀನ್ದಾರರಿಗೆ ಸಹಿಸದಾಯಿತು. ತಮ್ಮ ವಿರುದ್ದವೆ ರೈತರು ಎದ್ದು ನಿಲ್ಲುತ್ತಿದ್ದಾರೆ ಎಂದು ಅರಿತರು. ಅದಕ್ಕೆ ಆಡಳಿತವನ್ನು ಬಳಿಸಿಕೊಳ್ಳುವ ದುರಾಲೋಚನೆ ಮಾಡಿದರು. ರೈತ ಸಂಘಟನೆಯನ್ನು ಕಟ್ಟಿದ ಚಿರಕುಂಡ ಅಪ್ಪುವಿನ ಮೇಲೆ ಸಲ್ಲದ ಆರೋಪ ಹೊರಿಸಿ ಜೈಲಿಗಟ್ಟುವ ತಂತ್ರವನ್ನು ರೂಪಿಸುತ್ತಾರೆ. ಪೋಲಿಸರನ್ನು ಊರಿಗೆ ಕರೆಸುತ್ತಾರೆ. ವಿಚಾರಣೆ ಮಾಡುವಾಗ ಮಾತಿಗೆ ಮಾತು ಬೆಳೆದು ಪೊಲಿಸಿನವನ ಸಾವಾಗುತ್ತೆ. ಅದೆ ನೆಪದಿಂದ

ಹೋರಾಟಗಾರರಾದ ಚಿರಕುಂಡ, ಅಪ್ಪು, ಕುಂಯಿಂಬು, ಅಬೂಬಕರ್ ಮರಣದಂಡನೆಗೆ ಗುರಿಯಾಗುತ್ತಾರೆ.

ಈ ಕಾದಂಬರಿಯು ಹೋರಾಟದ ನೆಲೆಗಳನ್ನು ಶೋಧಿಸುತ್ತದೆ. ರೈತರ ಬವಣೆಗಳನ್ನು ಅನಾವರಣ ಮಾಡುತ್ತಲೆ ಅವರ ಸಾಮರ್ಥ್ಯವನ್ನು ಬಿಂಬಿಸುತ್ತದೆ. “ಕಯ್ಯೂರಿನ ವೀರರು ಚರಿತ್ರೆಯನ್ನು ನಿರ್ಮಿಸಿದವರು. ತಮ್ಮ ಧ್ಯೇಯ ಉದ್ದೇಶಗಳಿಗೆ ಹೋರಾಟದ ಚಾಲನೆಯನ್ನು ಕೊಟ್ಟವರು. ದಿನಪತ್ರಿಕೆಯ ಓದು ಕಯ್ಯೂರಿನ ರೈತ ಸಂಘಟನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಜ್ಞಾನದ ಅನೈಸರ್ಗಿಕ ತೆರೆಯನ್ನು ಕಿತ್ತೊಗೆಯುತ್ತಾ ಅವರು ಹೋರಾಟದ ಪಥವನ್ನು ಕಲಿಯುತ್ತಾರೆ. ಕಲಿತ ಪಾಠವನ್ನು ಕ್ರಿಯೆಗೆ ತೊಡಗಿಸುತ್ತಾರೆ. ತಮಗೆ ಆಗುತ್ತಿರುವ ಅನ್ಯಾಯ ಪರಂಪರೆಗಳ ವಿರುದ್ಧ ಸಿಡಿದೇಳಲು ಕಯ್ಯೂರಿನ ರೈತರು, ಭ್ರಾಮಕ ಕಲ್ಪನೆಗಳಿಗೆ ಸಿಲುಕುವದಿಲ್ಲ. ಅವರೆಲ್ಲರೂ ಚರಿತ್ರೆಯ ಪುನರ್‌ನಿರ್ಮಾಣಕ್ಕೆ ಮಾನವೀಯ ಸಂಬಂಧಗಳ ಮೂಲಕ ಮುನ್ನಡೆಯುತ್ತಾರೆ. ಹೀಗೆ ಆರ್ಥಿಕ ದುಸ್ಥಿತಿಯಿಂದ ಮಾನವೀಯ ಸಂಬಂಧಗಳಿಗೆ ಒದಗಿಬರುವ ಸಂಚಕಾರಗಳನ್ನು ಗುರುತಿಸಿಕೊಂಡು ಬೆಳೆಯುವ ವಾತವರಣ ನಿರ್ಮಾಣ ಕಾದಂಬರಿಯ ಮಹತ್ವದ ಅಂಶಗಳಲ್ಲಿ ಒಂದು.”[೧೧]

ಸಾಮನ್ಯರು ಅರಿವಿನ ಕೊರತೆಯಿಂದ ಶೋಷಣೆಗೆ ಒಳಗಾಗುತ್ತಿರುತ್ತಾರೆ. ಅವರಿಗೆ ಸರಿಯಾದ ಅರಿವಿನ ದಾರಿಯನ್ನು ತೋರಿಸಿದರೆ ತಮ್ಮತನದಿಂದ ಬಿಡುಗಡೆಯಾಗಿ ಹೊಸ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ನಿರಂತರವಾಗಿ ಉಳ್ಳವರಿಂದ ಶೋಷಣೆಗೆ ಒಳಗಾಗುವ ಶೋಚನೀಯ ಸ್ಥಿತಿಯಿಂದ ಹೊರಬರುತ್ತಾರೆ. ಇದಕ್ಕೆ ಚಿಸ್ಮರಣೆ ಕಾದಂಬರಿಯಲ್ಲಿ ಸಾಮನ್ಯರ ಪಾತ್ರಗಳೇ ಸಾಕ್ಷಿಯಾಗಿವೆ. ಒಕ್ಕಲುಗಳಾಗಿ ದುಡಿಯುವ ರೈತರು ಜಮೀನ್ದಾರರ ಇಚ್ಚೆಯಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾರೆಯೆ ಹೊರತು, ತಮ್ಮ ಇಚ್ಚೆಯಂತೆ ಅಲ್ಲ. ಈ ಮನೋಬಾವವನ್ನು ಬದಲಿಸುವ ಸಂಗತಿಗಳು ಕಾದಂಬರಿಯಲ್ಲಿ ಜರುಗುತ್ತವೆ. ಇದು ಚರಿತ್ರೆಯ ನಿರ್ಮಾಣದ ದೃಷ್ಟಿಯಿಂದ ಮುಖ್ಯವಾದ ಸಂಗತಿ.“ಸಾಲದ ಹೊರೆ, ಭೂಮಿಯನ್ನು ಲಪಟಾಯಿಸಲು ನಡೆಸುವ ಅಮಾನುಷ ಪ್ರಯತ್ನ, ಅಜ್ಞಾನ ಮತ್ತು ಅನಕ್ಷರತೆ ಇವುಗಳ ಕಾರಣದಿಂದ ರೈತರು ತಲೆ ಎತ್ತಿ ನಿಲ್ಲಲು ಸಾಧ್ಯವಾಗದ ಕಾಲದಲ್ಲಿ ಕಯ್ಯೂರಿನ ಹೋರಾಟಗಾರರು ಸಂಘಟಿತರಾಗುತ್ತರೆ. ಸಮಾಜ ವ್ಯವಸ್ಥೆಯ ಸೂಕ್ಷ್ಮಗಳನ್ನು ತಮ್ಮ ದೈನಂದಿನ ಅನುಭವಗಳ ಮೂಲಕ ಅರಿಯುತ್ತಾರೆ. ತಮ್ಮ ಬದುಕಿನ ಗತಿಯನ್ನು ಅರ್ಥಪೂರ್ಣವನ್ನಾಗಿ ಮಾಡಿಕೊಳ್ಳುವುದೆ ಅವರ ಹೋರಾಟದ ಪ್ರಮುಖ ಉದ್ದೇಶವಾಗಿರುತ್ತದೆ. ಯಾವುದೆ ಅಸಂಬದ್ಧ ಘೋಷಣೆಗಳಿಗೆ ಮಾರುಹೋಗುವ ಪ್ರವೃತ್ತಿ ಅವರದಲ್ಲ. ರಮ್ಯ ಕಲ್ಪನೆಗಳಿಗಾಗಲಿ ಮನ ಸೋಲುವದಿಲ್ಲ. ಅಪ್ಪು, ಚಿರಕುಂಡ ಮದುವೆಯಾಗಬೇಕೆಂಬ ಆಶಯವನ್ನು ಮಾಸ್ತರರು ಮುಂದಿಡುತ್ತಾರೆ. ಸೂಕ್ಷ್ಮ ಮಾನವೀಯ ಭಾವನೆಗಳ ಮೂಲಕ ಅವರ

ಆಲೋಚನೆಗಳಿಗೆ ರೂಪು ಕೊಡುತ್ತಾರೆ. ಹೀಗೆ ಅನೇಕ ಅಂತಃಕರಣ ಸಂಬಂಧಗಳು ಒಟ್ಟಾರೆ ಗುರಿಯ ಒಂದು ಭಾಗವಾಗಿ ರೂಪುಗೊಳ್ಳುವುದರಿಂದ ಈ ಕೃತಿಯ ಸಾಮಾಜಿಕ ವಾಸ್ತವ ನಿಲುವು ಅತ್ಯಂತ ಪರಿಣಾಮಕ್ಕೆ ಕಾರಣವಾಗುತ್ತದೆ. ವಿಚಾರ ವಿವೇಚನೆಗಳಿಂದ ಬದ್ಧರಾದ ರೈತ ಹೋರಾಟಗಾರರಿಗೆ ಸಮಸ್ಯೆಗಳನ್ನು ಎದುರಿಸುವ ನೈತಿಕಶಕ್ತಿ ದೊಡ್ಡ ಅಸ್ತ್ರವಾಗಿ ಮಾರ್ಪಡುವುದು ಕಾದಂಬರಿಕಾರರ ವಸ್ತುನಿಷ್ಠ ಪ್ರಜ್ಞೆಗೆ ಸಾಕ್ಷಿಯಾಗಿದೆ.” [೧೨]

ಅಸಮಾನ ಸಮಾಜದಲ್ಲಿ ಹೋರಾಟವನ್ನು ರೂಪಿಸುವುದು ಸವಾಲಿನ ಸಂಗತಿ. ಶಿಕ್ಷಣದ ಯಾವುದೆ ತಿಳುವಳಿಕೆಯಿಲ್ಲದೆ ಅದರ ರೂಪರೇಷೆಗಳನ್ನು ಕಂಡುಕೊಳ್ಳುವುದು ಇನ್ನೂ ಕಷ್ಟದಾಯಿಕವಾದುದು. ಅನೇಕ ಸಮುದಾಯಗಳು ಒಗ್ಗೂಡುವಾಗ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಇದೆಲ್ಲವನ್ನ ನಿಭಾಯಿಸಿಕೊಂಡು ಚಳುವಳಿಯನ್ನು ಮಾಡಬೇಕಾಗುತ್ತದೆ. ಮಾನವೀಯ ಸಂಬಂಧಗಳನ್ನು ಜೋಡಿಸುತ್ತಲೆ ಹೋರಾಟದ ಹಾದಿಗೆ ಒಂದು ಒಗ್ಗೂಡುವ ಸೈದ್ಧಾಂತಿಕತೆಯನ್ನು ತರಬೇಕಾಗುತ್ತದೆ. ಇದನ್ನು ಕಯ್ಯೂರಿನ ಹೋರಾಟಗಾರರು ಸಾಧಿಸುತ್ತಾರೆ ಎಂಬುದೆ ಬಹಳ ಮುಖ್ಯವಾದ ಚಾರಿತ್ರಿಕ ಸಂಗತಿ.“ವ್ಯಕ್ತಿಗಳ ಸಂಬಂಧ ನೈಸರ್ಗಿಕವಾಗಿ ಮೂಡುವದರಿಂದ ಅಲ್ಲಿ ಭಾವುಕತೆಗಳಿಗಾಗಲಿ ವ್ಯಕ್ತಿಗಳ ಭಾವನೆಗಳಿಗಾಗಲಿ ಅಲ್ಲಿ ಅವಕಾಶವಿಲ್ಲ. ವ್ಯಕ್ತಿಗಳು ತಮ್ಮ ತಮ್ಮ ಸ್ವಭಾವಗಳಲ್ಲಿ ಮಗ್ನರಾದರೂ ಸನ್ನಿವೇಶದ ಗಾಂಭೀರ್ಯಕ್ಕೆ ಧಕ್ಕೆ ಒದಗುವದಿಲ್ಲ. ತಂದೆ, ಮಕ್ಕಳು, ಹೆಂಡಿರು, ಮಾಸ್ತರು, ವಿದ್ಯಾರ್ಥಿಗಳು, ಇವರುಗಳೆಲ್ಲ ತಮ್ಮ ಹೋರಾಟದ ನಡುವೆಯೇ ಸುಂದರ–ಅಸುಂದರದ ವ್ಯಾಖ್ಯೆಯನ್ನು ಕಂಡುಕೊಳ್ಳುತ್ತಾರೆ. ರಾಕ್ಷಸ ವಾತಾವರಣದ ಮಧ್ಯೆ ಮಾನವತೆಯ ಅರ್ಥವನ್ನು ರೂಪಿಸಿಕೊಡುವ ಮಾಸ್ತರ್ ಮನುಷ್ಯ– ಸಮಾಜ, ಭೂಮಿ–ರೈತ, ಒಡೆಯ–ಸಾಮ್ರಾಜ್ಯಶಾಹಿ ಇವುಗಳ ಸಂಬಂಧ ಸ್ವರೂಪಗಳನ್ನು ತಮ್ಮ ಸುತ್ತಣ ರೈತರಿಗೆ ಅರಿವು ಮಾಡಿಸಿಕೊಡುತ್ತಾರೆ. ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಬುಡುಕರ ವಿರುದ್ಧದ ತೀವ್ರ ಸ್ವರೂಪದ ಚಳುವಳಿಗೆ ಕಾರಣರಾಗುತ್ತರೆ. ಸಂಯಮದ ವ್ಯಕ್ತಿತ್ವ ಅವರದು. ಭಾವಪರವಸತೆಗೆ ಎಂಥ ದುರಂತದ ಸಂದರ್ಭದಲ್ಲಿಯು ತಮ್ಮನ್ನು ಒಪ್ಪಿಸಿಕೊಳ್ಳುವುದಿಲ್ಲ. ಅನೇಕ ಸಾಮಾಜಿಕ ಅರಿವನ್ನು ಪಡೆದುಕೊಂಡ ರೈತರ ಮಧ್ಯೆ ಸಂಘಟನೆಗೆ ನಿಲ್ಲುತ್ತಾರೆ. ಭೂಮಿಯ ಮೇಲಿನ ಒಡೆತನ ಮತ್ತು ಸಾಮ್ರಾಜ್ಯಶಾಹಿಯ ವಿನಾಶ ಇವುಗಳ ಆಧಾರದ ಮೇಲೆ ಹೋರಾಟಕ್ಕೆ ರೈತರನ್ನು ಸಜ್ಜುಗೊಳಸುತ್ತಾರೆ. ಸಮುದಾಯ ವಾಸ್ತವದ ಬಗೆಗೆ ಅರಿವನ್ನು ತಂದುಕೊಡುವ ನಿರ್ದಿಷ್ಟ ಧೋರಣೆಯ ಇಂಥ ಪಾತ್ರ ನಿರ್ಮಾಣದಲ್ಲಿ ಎಲ್ಲಿಯೂ ತೂಕ ತಪ್ಪಿಲ್ಲ. ತೀಕ್ಷ್ಣ ದಬ್ಬಾಳಿಕೆ ಎದುರಿಗೂ ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದ ನಿಖರತೆ ಮೃದುತ್ವ ಇವೆರಡರ ಸಮುಸ್ಥಿತಿಯಿಂದ ಹೋರಾಟಗಾರರ ಮೇಲೆ ಮಾಡುವ ಪರಿಣಾಮ ಅತ್ಯಂತ ಜೀವಂತಿಕೆಯಿಂದ ಕೂಡಿದೆ.” [೧೩]

ಮಾಸ್ತರರು  ಕಯ್ಯೂರಿನ ರೈತರ ಮೇಲೆ ಮಾಡುವ ಪರಿಣಾಮ ಅಗಾಧವಾದುದು. ಆ ರೀತಿಯ ಒಬ್ಬ ಸಂಯಮದ ಸಾತ್ವಿಕ ನಾಯಕರು ಇಂದಿನ ಹೋರಟಗಳಿಗೆ ಬೇಕಾಗಿದೆ. ವಾಸ್ತವತೆಯನ್ನು ಮತ್ತು ಮಾನವತೆಯನ್ನು ಮರೆಮಾಚದೆ ಅದರ ಸಂಬಂಧವನ್ನು ಜೋಡಿಸಿಕೊಂಡು ಧಮನಕಾರಿಶಕ್ತಿಗಳ ವಿರುದ್ಧ ಹೋರಾಟ ರೂಪಿಸುವ ಬಗೆಯನ್ನು ಕಾದಂಬರಿ ಕಟ್ಟಿಕೊಡುತ್ತದೆ.“ಚಿರಸ್ಮರಣೆ ಕಯ್ಯೂರಿನ ವೀರರ ಕಥೆಯಾದರೂ, ಈ ಹೊತ್ತಿನ ನಮ್ಮ ಸಂದರ್ಭಕ್ಕೆ ವಿಶಿಷ್ಟ ಅರ್ಥ ಮತ್ತು ಚೈತನ್ಯವನ್ನು ನೀಡುವ ಕತೆಯಾಗಿದೆ. ಸಂಘಟನೆ ಇಲ್ಲದೆ ಸಾಮ್ರಾಜ್ಯವಾದಿಯಾಗಲಿ, ಅದರ ಕೈಗೊಂಬೆಯಾದ ಗುತ್ತೇದಾರಿಯಾಗಲಿ ನಾಶವಾಗುವದಿಲ್ಲ. ಕಯ್ಯೂರ ಈ ವೀರರ ಗಾಥೆ ಹೊಸ ಜೀವನಕ್ಕೆ ಹೊಸ ಸ್ಥಿತಿಗೆ ವಾತವರಣವನ್ನು ನಿರ್ಮಿಸಿಕೊಡುತ್ತದೆ.” [೧೪]

ಇಡಿ ಕಾದಮಬರಿ ಸಾಮನ್ಯರ ಪರವಾದ ಹೋರಾಟದ ಮಾದರಿಯೊಂದನ್ನು ನಿರ್ಮಿಸುತ್ತದೆ. ಚರಿತ್ರೆಯಲ್ಲಿ ಇಂತ ಸಂಗತಿಗಳು ನಿರೂಪಣೆಗೊಂಡಿರುವದಿಲ್ಲ. ಆದ್ದರಿಂದ ಸಾಮನ್ಯರ ಚರಿತ್ರೆಯನ್ನು ಕಾದಂಬರಿಯಲ್ಲಿಯೇ ಹುಡುಕಬೇಕಾಗುತ್ತದೆ. ಆ ಪ್ರಜ್ಞೆ ಬರಹಗಾರನಿಗೂ ಇರಬೇಕಾಗುತ್ತದೆ. ಎಲ್ಲಾ ಕಾದಂಬರಿಗಳಲ್ಲಿ ಈ ಅಂಶವನ್ನು ಹುಡುಕಲಾಗುವದಿಲ್ಲ. ಲೇಖಕರ ದೃಷ್ಟಿಕೋನ ಇಲ್ಲಿ ಮುಖ್ಯವಾಗುತ್ತೆ. ಮತ್ತು ಕೃತಿಯ ಬಂಧ ಮೀರದಂತೆ ಬದುಕನ್ನು ವಿನ್ಯಾಗೊಳಿಸಬೇಕಾಗುತ್ತದೆ. ಆಗ ಕೃತಿಯು ಕಾಲಾಂತರದೊಳಗೂ ತನ್ನ ಪೊರೆಯನ್ನು ಕಳಿಚಿಕೊಂಡು ಹೊಸದನ್ನು ನೀಡುತ್ತದೆ. ಅದು ಮತ್ತೊಂದು ಚರಿತ್ರೆಗೆ ನಾಂದಿ ಹಾಡುತ್ತದೆ.

## ಅಡಿಟಿಪ್ಪಣಿಗಳು

೧.ಕಿ.ರಂ.ನಾಗರಾಜ, ಚಿರಸ್ಮರಣೆ, ಪು. ೨೫೦, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, ೧೯೮೬

೧. ಚಿರಸ್ಮರಣೆ, ನಿರಂಜನ, ಪು.69–70 ಪ್ರ. ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು–12ನೇ ಮುದ್ರಣ, 2013

೨. ಅದೇ. ಪು. 62

೩. ಅದೇ. ಪು. 65–66

೪. ಅದೇ. ಪು. 103

೫. ಅದೇ. ಪು. 74

೬. ಅದೇ. ಪು. 117–18

೭. ಅದೇ. ಪು. 119

೮. ಅದೇ. ಪು. 119

೯. ಅದೇ. ಪು. 141–42

೧೦.ಕಿ. ರಂ. ನಾಗರಾಜ, ಚಿರಸ್ಮರಣೆ, ಪು. 251, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986

೧೧.ಕಿ. ರಂ. ನಾಗರಾಜ, ಚಿರಸ್ಮರಣೆ, ಪು. 252, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986

೧೨.

೧೩.ಕಿ. ರಂ. ನಾಗರಾಜ, ಚಿರಸ್ಮರಣೆ, ಪು. 253, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986

೧೪.ಕಿ. ರಂ. ನಾಗರಾಜ, ಚಿರಸ್ಮರಣೆ, ಪು. 253, ನಿರಂಜನ ಅಭಿನಂದನ, ಸಂ. ಬೋಳಂತಕೋಡಿ ಈಶ್ವರಭಟ್ಟ, 1986

****

# ಅಧ್ಯಾಯ ಆರು: ಸಮಾರೋಪ

ಸಾಹಿತ್ಯ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳುವಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಾಹಿತ್ಯ ಕೃತಿಯನ್ನು ನಾವು ಕಲ್ಪಿತ ಮಾದರಿಯೆಂದು ಭಾವಿಸಿದ್ದೇವೆ. ಅಲ್ಲಿ ಬರುವ ವಿವರಗಳು ಲೇಖಕನ ಮನೋಭಾವದ ಪ್ರತಿಬಿಂಬಗಳು ಎಂದು ನಂಬಿದ್ದೇವೆ. ಇದರಿಂದ ಅವುಗಳನ್ನು ಸಾಕ್ಷಿಗಳೆಂದು ನಂಬಲು ಸಾಧ್ಯವಿಲ್ಲ. ಅದರಲ್ಲು ಸಂಶೋಧಕರಿಗೆ ಅದರಿಂದ ಯಾವುದೆ ಮಾಹಿತಿ ಸಿಗುವದಿಲ್ಲ. ಅಧ್ಯಯನಕ್ಕೆ ಒಳಪಡಿಸುವದೆಂದರೆ ಕೃತಿಯನ್ನು ಒಂದು ವಿಮರ್ಶೆ ಮಡುವುದು ಇಲ್ಲವೆ ವಿಶ್ಲೇಷಿಸುವುದು ಆಗುತ್ತದೆ ಎಂದು ಯೋಚಿಸಲಾಗುತ್ತದೆ.“ಸಾಹಿತ್ಯದ ಅಧ್ಯಯನ ಒಂದು ಶೈಕ್ಷಣಿಕ ವಿಷಯವಾಗಿ ಪರಿಗಣಿತವಾದ ಬಳಿಕ ಈ ಬಗೆಯ ಸಂಶೋಧನೆಗಳು ನಡೆಯುತ್ತಿವೆ. ಸಾಹಿತ್ಯ ಸಂಶೋಧನೆಗಳಲ್ಲಿ ಸಾಹಿತ್ಯ ಕೃತಿಗಳ ಬಗೆಗೆ ಮಾತ್ರವಲ್ಲದೆ ಆ ಕೃತಿಗಳಿಗೆ ಸಂಬಂಧಿಸಿದ ಇನ್ನಿತರ ಹಲವು ಸಂಗತಿಗಳನ್ನು ಕುರಿತು ಅಧ್ಯಯನ ಮಾಡಲಾಗುತ್ತಿದೆ. ಸಾಮನ್ಯವಾಗಿ ಈ ಸಂಶೋಧನಾ ಚಟುವಟಿಕೆಗಳು ವಿವರಣೆ ಮತ್ತು ವ್ಯಾಖ್ಯಾನಗಳನ್ನು ಅವಲಂಬಿಸಿರುವುದನ್ನು ಯಾರಾದರೂ ಸುಲಭವಾಗಿ ಗಮನಿಸಬಹುದು. ಈ ವರೆಗೆ ಕನ್ನಡದಲ್ಲಿ ನಡೆದಿರುವ ಸಾಹಿತ್ಯ ಸಂಶೋಧನೆಗಳು ಕೆಲವು ಮಾದರಿಗಳನ್ನು ಅನುಸರಿಸಿವೆ. ಕನ್ನಡ ಸಾಹಿತ್ಯಕ್ಕೊಂದು ಅವಿರತವಾದ ಪರಂಪರೆ ಇದೆಯೆಂದು ಸಾಬೀತು ಮಾಡುವುದು ಅಂತಹ ಒಂದು ಮಾದರಿ. ಈ ನಿಟ್ಟಿನಲ್ಲಿ ನಡೆಯುವ ಸಂಶೋಧನೆಗಳು ಪರಂಪರೆ ಎಂದರೇನು ಎಂಬುದನ್ನು ಮೊದಲು ವ್ಯಾಖಾನಿಸಿಕೊಳ್ಳಬೇಕಾಗುತ್ತದೆ. ಅಥವಾ ಆ ಸಂಶೋಧನೆಗಳು ತಳೆಯುವ ನಿರ್ಣಯಗಳಿಂದ ಅವುಗಳ ಹಿಂದಿರುವ ಪರಂಪರೆಯ ಕಲ್ಪನೆ ಏನೆಂಬುದನ್ನು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ಕಥಾವಸ್ತು, ಕಥಾವಿಧಾನ, ಸಾಹಿತ್ಯ ಪ್ರಕಾರ, ಭಾಷಾ ಬಳಿಕೆ ಇವೇ ಮುಂತಾದ ವಿಷಯಗಳನ್ನು ಕುರಿತಂತೆ ಪರಂಪರೆಯನ್ನು ಗ್ರಹಿಸುವುದು ಈ ಸಂಶೋಧನೆಗಳಲ್ಲಿ ವಾಡಿಕೆಯಾಗಿದೆ. ಅಂದರೆ ಚರಿತ್ರೆಯನ್ನು ಕುರಿತಂತೆ ಇರುವ ಕಾಲಾನುಕ್ರಮಣಿಕೆಯ ತಾತ್ತ್ವಿಕತೆ ಈ ಸಂಶೋಧನೆಯ ಹಿಂದೆ ಕೆಲಸ ಮಾಡುತ್ತಿರುತ್ತದೆ. ಇದು ಮುಖ್ಯವಾದ ಕಾಲಚಲನೆಯ ಗ್ರಹಿಕೆಯನ್ನು ಅವಲಂಬಿಸಿದೆ.”[೧]

ನಾನು ಹೆಚ್ಚಾಗಿ ನಂಬಿರುವುದು ಕೃತಿಯ ಒಳಗಡೆ ಒಂದು ಮಾನವ ಜಗತ್ತು ಇರುತ್ತದೆಂಬುದು. ಅದು ಅತ್ಯಂತ ಸೃಜನಾತ್ಮಕವಾದುದು. ಅದರ ಕೇಂದ್ರದಲ್ಲಿ ಚರಿತ್ರೆಯ ಪರಿಕಲ್ಪನೆಯನ್ನು ಶೋಧಿಸುವದು. ಈಗಾಗಲೆ ಚರಿತ್ರೆಯ ಒಂದು ಮಾದರಿ ನಮ್ಮ ಕಣ್ಣೆದುರಿಗೆ ಇದೆ. ಅದು ಹೇಳುವ ಗತದ ಸಂದರ್ಭಗಳು ಒಂದು ಒತ್ತಾಸೆಯ ಕ್ರಮದಲ್ಲಿರುವಂತವು. ಬಾಹ್ಯದ ಸಾಮಾಜಿಕ ಮತ್ತು ರಾಜಕೀಯ ಸಾಕ್ಷಿಯ ಆಕರಗಳನ್ನು ಹೆಚ್ಚಾಗಿ ಇದು ಅವಲಂಬಿಸುತ್ತದೆ. ಈ ವಿಧಾನ ಒಂದು

ನೆಲೆಯಲ್ಲಿ ಸರಿಯಾದುದು. ನನ್ನ ನಿಲುವು ಇರುವುದು ಇದಕ್ಕಿಂತಲು ಭಿನ್ನವಾದ ಚರಿತ್ರೆಯನ್ನು ಕಂಡುಕೊಳ್ಳುವುದು. ಕಥನಗಳು ಕಾಲವನ್ನು ಸೃಜನಾತ್ಮಕವಾಗಿ ಕಟ್ಟಿಕೊಡುವುದನ್ನು ಗಮನಿಸಬಹುದು. ಅವು ಕಾಲಾಂತರದೊಳಗೆ ಹೊಸ ಬಗೆಯನ್ನು ಸೃಜಿಸುತ್ತಾ ಹೋಗುತ್ತವೆ. ಹೀಗಾಗಿ ಅವು ಕಾಲಬದ್ದ ಸಾಕ್ಷಿಯಾಗಿರುವದಿಲ್ಲ. ಆದ್ದರಿಂದ ಅವುಗಳನ್ನು ಆಕರವಾಗಿ ಬಳಿಸಿಕೊಳ್ಳುವಾಗ ಸಂಶೋಧಕನ ಆಯ್ಕೆಯ ಒಂದು ರಾಜಕೀಯ ಇರುವುದನ್ನು ಗಮನಿಸಬಹುದು."ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಸಾಹಿತ್ಯ ಸಂಶೋಧನೆಯನ್ನು ಬಹುವಾಗಿ ಕಾಡುವ ತಾತ್ತ್ವಿಕತೆಯೆಂದರೆ 'ಪೊಲಟಿಕಲ್ ಕರೆಕ್ಟ್‌ನೆಸ್'. ಪ್ರಚಲಿತ ಒಪ್ಪಿತ ನೆಲೆಗಳನ್ನು ಇರುವಂತೆಯೆ ಒಪ್ಪಿ ಅದನ್ನು ಸಮರ್ಥಿಸುವ ನೆಲೆಯಲ್ಲಿ ಸಂಶೋಧನೆಯನ್ನು ನಡೆಸುವುದು ಬಹುಪಾಲು ಸಂಶೋಧಕರು ಮಾಡಿಕೊಳ್ಳುವ ಆಯ್ಕೆಯಾಗಿರುತ್ತದೆ. ಇದು ಸುಲಭದ ಮತ್ತು ನಿರುಪಾಯಕಾರಿ ಹಾದಿ. ಉದಾರಹಣೆ ಕಳೆದ ಎರಡು ಮೂರು ದಶಕಗಳಲ್ಲಿ ನಡೆದ ಕನ್ನಡ ಸಂಶೋಧನೆಯು ಸಾಹಿತ್ಯ ಕೃತಿಗಳಲ್ಲಿ ಮತ್ತು ಸಾಹಿತಿಗಳಲ್ಲಿ 'ಮಂಡಿತ'ವಾಗಿರುವ ಸಾಂಸ್ಕೃತಿಕ ನೆಲೆಗಳನ್ನು ಹುಡುಕುವದರಲ್ಲಿ ನಿರತವಾಗಿವೆ. ಇನ್ನೂ ಮುಂದುವರೆದು ಹೇಳುವುದಾದರೆ ಸಾಂಸ್ಕೃತಿಕವಾಗಿ ಹೆಚ್ಚು ಒಪ್ಪಿತವಾದ ನೆಲೆಗಳು ಕೃತಿ ಇಲ್ಲವೆ ಕೃತಿಕಾರರಲ್ಲಿ ಇವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಗುರಿಯನ್ನು ಹೊಂದಿರುತ್ತವೆ. ಈ ಪರೀಕ್ಷೆಯಲ್ಲಿ ಗೆದ್ದ ಕೃತಿ/ಕೃತಿಕಾರರು ಮನ್ನಣೆಗೆ ಪಾತ್ರರಾದರೆ, ಹಾಗೆ ಗೆಲ್ಲದೆ ಹೋದವರು ನಿರಾಕರಣೆಗೆ ಗುರಿಯಾಗುತ್ತಾರೆ. ಈ 'ಪೊಲಿಟಿಕಲ್ ಕರೆಕ್ಟ್‌ನೆಸ್'ನ ಶೋಧಕ್ಕೆ ಎಲ್ಲಾ ಸಂಶೊಧಕರು ಸೇರಿ ಹೋಗಿದ್ದಾರೆಂದು ಹೇಳ ಬರುವದಿಲ್ಲ. ಆದರೂ ಈಗಿನ ಮುಖ್ಯ ಪ್ರವೃತ್ತಿ ಈ ಮಾರ್ಗದ ಅನುಸರಣೆಯೇ ಆಗಿದೆಯೆಂದು ತಿಳಿಯಬೇಕಾಗಿದೆ."[೨]

ಇಂತಹ ಒಂದು ಸಂಶೋಧನೆಯ ನೆಲೆಯನ್ನು ರೂಪಿಸುವ ಪ್ರಯತ್ನ ನಡೆಯುತ್ತಿದೆ. ಸಂಶೋಧನೆಯ ಮೂಲಕ ತಮ್ಮ ಸಮುದಾಯಗಳ ಚರಿತ್ರೆಯನ್ನು ಪುನರುತ್ಥಾನಗೊಳಿಸುವ ಚಿಂತನೆಯು ನಡೆಯುತ್ತಿದೆ. ಅಂದರೆ ಈಗಾಗಲೆ ರಚನೆಯಾಗಿರುವ ಚರಿತ್ರೆಯಲ್ಲಿ ತಮ್ಮ ಕುರುಹುಗಳಿಲ್ಲವೆಂದು ಅವುಗಳನ್ನು ಹುಡುಕಿ ತೆಗೆಯುವದು. ಅದನ್ನು ಮರುರಚಿಸಿ ತಮ್ಮ ಅನನ್ಯತೆಯನ್ನು ಕಂಡುಕೊಳ್ಳುವುದು, ಸಂಸ್ಕೃತಿಯನ್ನು ರಚಿಸಿಕೊಳ್ಳುವುದು ಅದನ್ನು ಆಯಾ ಸಮುದಾಯ ಒಪ್ಪಿಕೊಂಡು ಜೀವನದ ಭಾಗವಾಗಿ ಮಾಡಿಕೊಳ್ಳುವುದು. ಇದು ಆಯಾ ಸಮುದಾಯಗಳಲ್ಲಿ ಯಾವ ಬದಲಾವಣೆಯುನ್ನು ತರುತ್ತದೆ ಎಂದು ಗಮನಿಸಿದರೆ ಈಗಾಗಲೆ ಸಿದ್ದವಾಗಿದ್ದ ಮಾದರಿಯನ್ನು ತಮ್ಮ ಸಮುದಾಯಗಳಲ್ಲಿ ತರುತ್ತಿದ್ದೇವೆ. ಅಲ್ಲಿಯು ಕೂಡ ಬಲವಿಲ್ಲದವರ ಅನಾದರವು ನಡೆಯುತ್ತದೆ. ವರ್ಗ ತಾರತಮ್ಯವು ಇರುತ್ತದೆ. ಇದನ್ನು ಮೀರುವ ಬಗೆ

ಯಾವುದು ಎಂಬುದು ಇಂದಿನ ಮುಖ್ಯ ಸಮಸ್ಯೆ ಎಂದು ಭಾವಿಸಲಾಗಿದೆ. ಬ್ರಿಟೀಷರು ಬಿಟ್ಟು ಹೋದ ಅನನ್ಯತೆಯ, ಕುರುಹುವಿನ ಬೆನ್ನು ಹತ್ತುವುದೆ ಮುಖ್ಯವಾಗಿಬಿಡುತ್ತದೆ.

“ಕನ್ನಡದ ಸಂದರ್ಭದಲ್ಲಿ ಸಂಸ್ಕೃತಿಯ ಅಧ್ಯಯನದ ತಾತ್ತ್ವಿಕ ನೆಲೆಗಳು ಗಂಭೀರವಾಗಿ ನಡೆದಿರುವುದು ಬಹಳ ಕಡಿಮೆ. ಚರಿತ್ರೆಯ ಗತಿ ತರ್ಕವನ್ನು ರೂಪಿಸುವ ಅಸಂಖ್ಯಾತ ಸೃಜನಾತ್ಮಕ ಪ್ರಭೇದಗಳನ್ನು ಗೌಣವಾಗಿ ಕಂಡದ್ದು ಇದಕ್ಕೆ ಮುಖ್ಯ ಕಾರಣವಾದರೆ, ಇಡೀ ಕರ್ನಾಟಕ ಸಂಸ್ಕೃತಿಯನ್ನು ಇತಿಹಾಸದ, ವೈಭವೀಕರಣದ ನೆನಪಿನ ಮಾದರಿಯ ಸ್ವರೂಪದಲ್ಲಿ ವಿವರಿಸಿದ್ದು ಇನ್ನೊಂದು ಕಾರಣ. ಒಂದಲ್ಲಾ ಒಂದು ರೀತಿಯಲ್ಲಿ ೧೮–೧೯ನೆಯ ಶತಮಾನದಲ್ಲಿ ಪೂರ್ವವನ್ನು ಕುರಿತ ಪಾಶ್ಚಿಮಾತ್ಯರ ಅಧ್ಯಯನವು ಭಾರತದ ಸಂಸ್ಕೃತಿಯನ್ನು ಅಳೆಯುವ ಮಾದಂಡವಾಗಿರುವದು ಮಾತ್ರವಲ್ಲದೆ, ಕರ್ನಾಟಕ ಸಂಸ್ಕೃತಿಯ ಸ್ವರೂಪವು ಅದರ ಒಂದು ಭಾಗವಾಗಿಯೇ ರೂಪಗೊಂಡಿತು. ಆಗಿನ ಪಶ್ಚಿಮ ಯುರೋಪಿನ ಪುನರುತ್ಥಾನ, ವಿಜ್ಞಾನ ಸಾಧನಗಳು ಮುಂತಾದವು ವಸಾಹತುಶಾಹಿ ಆಳ್ವಿಕೆಯಿಂದ ಛಿದ್ರಗೊಳ್ಳುತ್ತಿದ್ದ ಭಾರತವನ್ನು ಪುರಾತನವೆಂದು ಭಾವಿಸಿದವು. ಲೌಕಿಕವಾಗಿ ಜಡಗೊಂಡ ಭಾರತವೆಂದು ಭಾವಿಸಿದ್ದರಿಂದ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇಲ್ಲವೆಂದು ಭಾರತದ ಬದುಕು ಚಲನಶೀಲವಲ್ಲವೆಂದೂ ಇವು ನಿರ್ವಚಿಸಿದವು. ಹೀಗಾಗಿ ಇತಿಹಾಸವೇ ಇಲ್ಲದಲ್ಲಿ ಸಂಸ್ಕೃತಿ ಎಲ್ಲಿ ಬಂತು? ಈ ಪ್ರಶ್ನೆಯನ್ನು ಓರಿಯಂಟಲ್ ವಿದ್ವಾಂಸರು ಮುಂದೆ ಭಾರತೀಯ ಹಾಗು ದೇಶೀ ಸಂಸ್ಕೃತಿಯ ಕಾಲದಲ್ಲೂ ದಾಟಿಸಿಬಿಟ್ಟಿದ್ದಾರೆ. ಈ ಪ್ರಶ್ನೆಗೆ ನಮ್ಮ ವಿದ್ವಂಸರು ಉತ್ತರ ಕೊಟ್ಟುಕೊಂಡದ್ದು ಬಹಳ ಸರಳವಾಗಿದೆ. ‘ಸಂಸ್ಕೃತಿಯ’ ಚರಿತ್ರೆಯನ್ನು ಇವರು ರಾಜ ಆಳ್ವಿಕೆಯ, ಹೋರಾಟದ ವಿವರಗಳಿಗೆ ಅನ್ವಯಿಸಿದರು. ರಾಜರ ಆಶ್ರಯ ಕೊಟ್ಟ ಹಾಗು ಪ್ರಭಾವಿತರಾದ ಧರ್ಮಗಳ ವಿವರ, ಕಟ್ಟಿಸಿದ ದೇವಾಲಯ, ಬಿಟ್ಟ ದತ್ತಿ ಹೀಗೆ – ಈ ಘಟನಾವಳಿಗಳ ವಿವರಗಳನ್ನು ಗುಣವೆಂಬಂತೆ ಗ್ರಹಿಸಿದರು. ಚರಿತ್ರೆಯಲ್ಲಿ ರಾಜತ್ವದ ವೈಭವವನ್ನು ತೋರುವ ಘಟನಾವಳಿಗಳನ್ನೇ ಸಂಸ್ಕೃತಿಯ ರೂಪವನ್ನಾಗಿ ಗ್ರಹಿಸಿರುವ ವಿಧಾನವು ಬಹಳ ಮುಖ್ಯವಾದ ನೆಲೆಯ ಅಧ್ಯಯನವಾಗಿದೆ.”[೩]

ಈ ರೀತಿಯ ಅಧ್ಯಯನ ಮಾದರಿಯನ್ನು ಮತ್ತೆ ಸಮುದಾಯಗಳು ಅನುಸರಿಸಿಕೊಂಡು ಬರುತ್ತಿವೆ ಅನಿಸುತ್ತಿದೆ. ಇದರಿಂದ ಮತ್ತೊಂದು ಬಗೆಯ ವರ್ಗಹಿತಾಸಕ್ತಿಯನ್ನು ಪ್ರತಿನಿಧಿಸಿದಂತೆ ಆಗುತ್ತದೆ. ಈ ಅಪಾಯಗಳನ್ನು ಮೀರುವ ಅಗತ್ಯವಿದೆ. ಸಾಹಿತ್ಯ ಕೃತಿಯನ್ನು ಆಕರವಾಗಿ ಪರಿಗಣಿಸುವಾಗಲು ಈ ಎಚ್ಚರದ ಅಗತ್ಯವಿದೆ. ಅದನ್ನು ತಮ್ಮ ವರ್ಗದ ಸಂಬಂಧಿಯಾಗಿ ಕಾಣುವುದು ಉಚಿತವಲ್ಲ. ಈ ನೆಲೆಯನ್ನು ಈ ಅಧ್ಯಯದಲ್ಲಿ ಕಂಡುಕೊಂಡಿರುವುದು ಮುಖ್ಯವಾಗಿದೆ.

ನಿರಂಜನರನ್ನು ಇತಿಹಾಸ ರಚನೆಕಾರ ಎಂದು ಅಧ್ಯಯನ ಮಾಡಿಲ್ಲ. ಅವರು ಗ್ರಹಿಸುವ ಕಾಲಸಂದರ್ಭದ ಮಾದರಿಗಳನ್ನು ಗ್ರಹಿಸಲಾಗಿದೆ. ಸಮಾಜವಾದಿ ಸೃಜನಶೀಲ ಲೇಖಕನಿಗೆ ಕಾಣುವ ಕಾಲದ ಗತಿಯ ಸಂಘರ್ಷದ ಆಯಾಮಗಳನ್ನು, ಸಾಮನ್ಯರ ಬದುಕಿನಲ್ಲಾಗುವ ಪರಿಣಾಮಗಳನ್ನು ಕಂಡುಕೊಳ್ಳಲಾಗಿದೆ. ಚರಿತ್ರೆಯ ಗತಿಯಲ್ಲಿ ತುಳಿತಕ್ಕೊಳಗಾದವರ ಜೀವನಗತಿಯ ಮರುನಿರ್ಮಾಣದ ಸಾಧ್ಯತೆಯನ್ನು ಕಂಡುಕೊಳ್ಳಲಾಗಿದೆ. ಪ್ರಭುತ್ವಗಳು ಸೃಷ್ಟಿಸುವ ಬಿಕ್ಕಟ್ಟುಗಳು, ಅಸಮಾನ ಅಮಾನವೀತೆಯ ಹುನ್ನಾರಗಳನ್ನು ನಿರಂಜನರ ಕಾದಂಬರಿಗಳ ಮೂಲಕ ತಿಳಿಯಲು ಯತ್ನಿಸಲಾಗಿದೆ. ಇದು ಎಲ್ಲಾ ಕಾಲದ ಸಮಸ್ಯೆಯಾಗಿಯು ಕಾಣುತ್ತದೆ. ಅದರಿಂದ ಪಾರಾಗುವ ಬಗೆಯು ಕೂಡ ಮುಖ್ಯ. ಸ್ವತಃ ಹೋರಾಟಗಾರರಾದ ನಿರಂಜನರು ಈ ಅಂಶವನ್ನು ಮಂಡಿಸಿ ಸಮಾನತೆಗಾಗಿ ತುಡಿಯುತ್ತಲೆ ಬಂದಿದ್ದಾರೆ. ಮೃತ್ಯುಂಜಯ ಕಾದಂಬರಿಯ ಮೆನೆಪ್‌ಟಾನ ಹೋರಾಟದ ಹಾದಿಯನ್ನು ಈ ಹಿನ್ನಲೆಯಲ್ಲಿ ಗ್ರಹಿಸಲಾಗಿದೆ. ಚಿರಸ್ಮರಣೆಯ ಮಾಸ್ತರರು, ಚಿರಕುಂಡ, ಅಪ್ಪುವಿನ ಹೋರಾಟವು ಚರಿತ್ರೆಯ ಇನ್ನೊಂದು ಮಜಲನ್ನು ತೆರೆದಿಡುತ್ತವೆ. ಒಟ್ಟಿನಲ್ಲಿ ಜನಸಾಮನ್ಯರ ಬದುಕಿಗೆ ಮಿಡಿಯುವ ಸಮಾನತೆಯನ್ನು ತರುವ ಚರಿತ್ರೆಯ ಸಂಗತಿಗಳು ನಿರಂಜನರಿಗೆ ಮುಖ್ಯವಾಗಿದೆ. ಈ ಕಲ್ಪನೆಯನ್ನು ಮೃತ್ಯುಂಜಯ, ಚಿರಸ್ಮರಣೆ ಬಹಳ ಸಮರ್ಥವಾಗಿ ನಿಭಾಯಿಸಿವೆ. ಹೋರಾಟದ ಬದುಕಿಗೆ ಮಾದರಿಯಾಗಿವೆ. ಧಮನಿತರು ತಮ್ಮ ನೆಲೆಯನ್ನು ಮೀರಿ ಬೆಳೆಯುವ ಸಾಧ್ಯತೆಯನ್ನು ಇಲ್ಲಿ ಕಾಣಬಹುದಾಗಿದೆ.

# ಅಡಿಟಿಪ್ಪಣಿಗಳು

೧. ತೊಂಡುಮೇವು ಕಂತೆ ಒಂದು, ಕೆ.ವಿ. ನಾರಾಯಣ ಪು.೪,ಬರಹ ಪಬ್ಲಿಸಿಂಗ್ ಹೌಸ್, ಬೆಂಗಳೂರು, ೨೦೧೦

೨. ಅದೇ ಪು.೫-೬

೩. ನಕ್ಷೆ ನಕ್ಷತ್ರ, ಡಾ. ಬಸವರಾಜ ಕಲ್ಗುಡಿ, ೨೫೭, ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳುರು, ೨೦೧೦

## ಪರಾಮರ್ಶನ ಗ್ರಂಥಗಳು


ಬೋಳಂತಕೋಡಿ ಈಶ್ವರ ಭಟ್ಟ (ಸಂ): **ನಿರಂಜನ ಅಭಿನಂದನ,** (೧೯೮೬) ಕರ್ನಾಟಕ ಸಂಘ, ಪುತ್ತೂರು

ನಿರಂಜನ: **ಮೃತ್ಯುಂಜಯ** (೧೯೭೬), ಐಬಿಹೆಚ್ ಪ್ರಕಾಶನ, ಬೆಂಗಳೂರು

ನಿರಂಜನ: **ಚಿರಸ್ಮರಣೆ,** (೨೦೧೩), ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು

ಡಾ. ಬಸವರಾಜ್ ಕಲ್ಗುಡಿ: **ನಕ್ಷೆ ನಕ್ಷತ್ರ** (೨೦೧೦), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಡಾ. ಕೆ. ವಿ ನಾರಾಯಣ: **ತೊಂಡು ಮೇವು ಕಂತೆ ೧,** (೨೦೧೦), ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು

ಡಾ. ಕೆ. ವಿ ನಾರಾಯಣ: **ತೊಂಡು ಮೇವು ಕಂತೆ ೨,** (೨೦೧೦), ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು

ವಿಜಯ ಪೂಣಚ್ಚ ತಂಬಂಡ(ಸಂ): **ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ** (೨೦೧೦), ಕನ್ನಡ ವಿಶ್ವವಿದ್ಯಾನಿಲಯ ಹಂಪಿ

ಗಿರಡ್ಡಿ ಗೋವಿಂದ ರಾಜ(ಸಂ): **ಕೀರ್ತಿನಾಥ ಕುರ್ತುಕೋಟಿ ಸಮಗ್ರ ಸಾಹಿತ್ಯ ಸಂಪುಟ ೨** (೨೦೧೦), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಡಾ. ರಾಜೇಂದ್ರ ಚೆನ್ನಿ: **ಎಂದಿಗೂ ಹೊಸದು** (೨೦೧೪), ಅಭಿರುಚಿ ಪ್ರಕಾಶನ, ಮೈಸೂರು.

ಡಾ. ರಾಜೇಂದ್ರ ಚೆನ್ನಿ: **ಸದ್ಯದ ಹಂಗು** (೨೦೧೩) ಪಲ್ಲವ್ ಪ್ರಕಾಶನ, ಚನ್ನಪಟ್ಟಣ

ನಟರಾಜ್ ಹುಳಿಯಾರ್: **ಇಂತಿ ನಮಸ್ಕಾರಗಳು** (೨೦೧೪), ಪಲ್ಲವ ಪ್ರಕಾಶನ, ಚನ್ನಪಟ್ಟಣ

ಶಿವರಾಮ್ ಪಡಿಕ್ಕಲ್: **ನಾಡು ನುಡಿಯ ರೂಪಕ** (೨೦೦೧), ಮಂಗಳೂರು ವಿಶ್ವವಿದ್ಯಾನಿಲಯ

ಬಸವರಾಜ ಕಲ್ಗುಡಿ: **ಮೈಯೇ ಸೂರು ಮನವೇ ಮಾತು** (೨೦೧೩), ಅಭಿನವ ಪ್ರಕಾಶನ, ಬೆಂಗಳೂರು

ಅಗ್ರಹಾರ ಕೃಷ್ಣ ಮೂರ್ತಿ(ಸಂ): **ಸಂಸ್ಕೃತಿ ಕಥನ** (೨೦೦೬), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ನಟರಾಜ್ ಹುಳಿಯಾರ್(ಸಂ): **ತೆರೆದ ಪಠ್ಯ** (೨೦೧೨), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಕಪಟರಾಳ್ ಕೃಷ್ಣ ರಾವ್: **ಕರ್ನಾಟಕ ಸಂಸ್ಕೃತಿಯ ಸಂಶೋಧನೆ,** (೧೯೭೦), ಉಷಾ ಸಾಹಿತ್ಯ ಮಾಲೆ ಮೈಸೂರು

ಚಂದ್ರಶೇಖರ ಎಸ್ (ಸಂ): **ಕರ್ನಾಟಕ ಚರಿತ್ರೆ** (೧೯೯೮), ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಮುಗಳಿ ರಂ. ಶ್ರೀ: **ಕನ್ನಡ ಸಾಹಿತ್ಯ ಚರಿತ್ರೆ** (೧೯೯೩), ಗೀತಾ ಬುಕ್ ಹೌಸ್, ಬೆಂಗಳೂರು

ರಾಮಾನುಜಂ ಪಿ ಎಸ್ (ಸಂ): **ಕರ್ನಾಟಕ ಪರಂಪರೆ** (೧೯೯೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

ರಹಮತ್ ತರಿಕೆರೆ: **ಪ್ರತಿ ಸಂಸ್ಕೃತಿ** (೧೯೯೩), ಕನ್ನಡ ಸಂಘ, ಕ್ರೈಸ್ಟ ಕಾಲೇಜು, ಬೆಂಗಳೂರು

ರಹಮತ್ ತರಿಕೆರೆ: **ಮರದೊಳಗಣ ಕಿಚ್ಚು** (೧೯೯೬), ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಶಿವರಾಮಯ್ಯ: **ಸಾಹಿತ್ಯ ಮತ್ತು ಚರಿತ್ರೆ** (೧೯೯೩), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಡಾ. ರಾಮೇಗೌಡ: **ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು** (೧೯೯೨), ಚಿತ್ರಕೂಟ, ಕಾಳಿದಾಸ ರಸ್ತೆ, ಮೈಸೂರು

ಗಿರಡ್ಡಿ ಗೋವಿಂದ ರಾಜ: **ಸಾಹಿತ್ಯ ಮತ್ತು ಪರಂಪರೆ** (೧೯೮೧), ಅಭಿಜಾತ ಗ್ರಂಥ ಮಾಲೆ, ಬೆಂಗಳೂರು

ಡಾ. ರಾಘವೇಂದ್ರ ರಾವ್ ಎಚ್ ಎಸ್: **ನಿಲುವು** (೧೯೮೯), ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

ಜಿ. ಎಸ್ ಶಿವರುದ್ರಪ್ಪ (ಸಂ): **ಕನ್ನಡ ಸಾಹಿತ್ಯ ಸಂದರ್ಭ** (೧೯೯೦), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಎಚ್ ಎಸ್ ರಾಘವೇಂದ್ರ ರಾವ್: **ಪ್ರಗತಿಶೀಲ** (೧೯೯೦), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಕೆ.ವಿ ನಾರಾಯಣ: **ಬೇರು ಕಾಂಡ ಚಿಗುರು** (೧೯೯೯), ವಿವೇಕ ಪ್ರಕಾಶನ ಬೆಂಗಳೂರು

ಅನಂತಮೂರ್ತಿ ಯು ಆರ್: **ಪ್ರಜ್ಞೆ ಮತು ಪರಿಸರ** (೧೯೭೨), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

ಪಾಮೂರು ಜಿ ಎಸ್: **ಕನ್ನಡ ಕತನ ಸಾಹಿತ್ಯ ಕಾದಂಬರಿ** (೧೯೯೪), ಶ್ರೀ ಹರಿ ಪ್ರಕಾಶನ, ಧಾರವಾಡ

ಗಿರಡ್ಡಿ ಗೋವಿಂದ ರಾಜ: **ಸಾತತ್ಯ** (೧೯೮೦), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು

ಜವರಯ್ಯ ಮಾ. ನ: **ಪರಂಪರೆ ಹಾಗೂ ಬಂಡಾಯ** (೧೯೯೪), ಸಾಹಿತ್ಯ ಅಧ್ಯಯನ ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು

ನಾಯಕ ಜಿ.ಎಚ್: **ಸಮಕಾಲೀನ** (೧೯೭೩), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

ರಾಘವೇಂದ್ರ ರಾವ್ ಎಚ್ ಎಸ್: **ವಿಶ್ಲೇಷಣೆ** (೧೯೮೧), ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್ ಬೆಂಗಳೂರು

ರಾಘವೇಂದ್ರ ರಾವ್ ಎಚ್ ಎಸ್ (ಸಂ): **ಶತಮಾನದ ವಿಮರ್ಶೆ** (೨೦೦೧), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಶಾಂತಿನಾಥ್ ದೇಸಾಯಿ: **ಕನ್ನಡ ಕಾದಂಬರಿ ನಡೆದು ಬಂದ ರೀತಿ** (೧೯೮೯), ಪ್ರಸಾರ ರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶಿವರುದ್ರಪ್ಪ ಜಿ.ಎಸ್ (ಸಂ): **ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ** (೧೯೭೭), ಪ್ರಸಾರ ರಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

ಶಿವರುದ್ರಪ್ಪ ಜಿ ಎಸ್ (ಸಂ): **ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ** (೧೯೭೭), ಪ್ರಸಾರ ರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

****